# ಕನ್ನಡ ಭಾಷಾ ಪಠ್ಯ

# ನಿರ್ವಹಣ ಸೌರಭ – ೨

ಬಿ.ಬಿ.ಎ.

ದ್ವಿತೀಯ ಸೆಮಿಸ್ಟರ್

ಪ್ರಧಾನ ಸಂಪಾದಕರು

ಡಾ. ಪ್ರಶಾಂತ ಜಿ. ನಾಯಕ

ಸಂಪಾದಕರು

ಡಾ. ಎಸ್. ಎಲ್. ಮಂಜುನಾಥ

ಡಾ. ಶೀಲವಂತ ಸಂಜೀವಕುಮಾರ್

ಭುವನೇಶ್ವರಿ ಜಿ.

ಬೆಂಗಳೂರು ನಗರ ವಿಶ್ವವಿದ್ಯಾಲಯ

BENGALURU CITY UNIVERSITY

ಆಗು ನೀ ಅನಿಕೇತನ

BE BOUNDLESS

**KANNADA BHASHA PATYA - NIRVAHANA SOURABHA - 2:**
A Prescribed Text Book for B.B.A. Degree Course
(Second Semister);

Chief Editor: **Prof. Prashanth G. Nayak**
(Professor of Kannada & Director,
Kannada Bharathi, Kuvempu University,
Shankaraghatta, B.R. Project. Shimoga Dist.)

Edited By :
**Dr. S.L. Manjunath.,**
**Dr. Sheelwant Sanjeevkumar,**
**Bhuvaneshwari G**

Publishd by : Bengaluru City University, BENGALURU
Pp : 000 + ix
© Bengaluru City University,
First print : 2022

ಪ್ರಧಾನ ಸಂಪಾದಕರು:
**ಡಾ. ಪ್ರಶಾಂತ ಜಿ. ನಾಯಕ**

ಸಲಹಾ ಸಮಿತಿ:
**ಡಾ. ಕೆ.ವೈ. ನಾರಾಯಣಸ್ವಾಮಿ**
**ಡಾ. ಎಂ.ಎಸ್. ಆಶಾದೇವಿ**

ಸಂಯೋಜಕರು:
**ಡಾ. ಬೆಳಕೆರೆ ಲಿಂಗರಾಜಯ್ಯ**

ಬೆಲೆ: ರೂ. 00/–

ಪ್ರಕಾಶಕರು:

**ಬೆಂಗಳೂರು ನಗರ ವಿಶ್ವವಿದ್ಯಾಲಯ**

## ಕುಲಪತಿಗಳ ಆಶಯ ನುಡಿ

ಬೆಂಗಳೂರು ನಗರ ವಿಶ್ವವಿದ್ಯಾಲಯ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಅನನ್ಯತೆಯನ್ನು ಯುವಜನತೆಗೆ ಮನವರಿಕೆ ಮಾಡಿಕೊಡಲು ಸನ್ನದ್ಧವಾಗಿದೆ. ಕನ್ನಡ ಭಾಷೆಯನ್ನು ಸರ್ವಾಂಗೀಣವಾಗಿ ಆಧುನಿಕ ಬದುಕಿನ ಅಗತ್ಯಕ್ಕೆ ತಕ್ಕಂತೆ ಅಭಿವೃದ್ಧಿಪಡಿಸಬೇಕಾದ ಹೊಣೆಯನ್ನು ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳು ಹೊರಬೇಕಿದೆ. ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನದ ಗರಿಮೆ ಸಿಕ್ಕಿರುವುದು; ಕನ್ನಡ ಭಾಷೆಯ ಅಂತಸ್ಥವಾಗಿರುವ ಜ್ಞಾನಕ್ಕೆ ದೊರೆತಿರುವ ಮನ್ನಣೆಯಾಗಿದೆ. ಕನ್ನಡ ಭಾಷೆಯಲ್ಲಿ ಉಪಲಬ್ಧವಿರುವ ಶ್ರೇಷ್ಠ ಸಾಹಿತ್ಯ ಕೃತಿಗಳು, ಅಪರೂಪದ ಶಾಸನಗಳು, ಜಾನಪದ ವಿವಿಧ ವಾಙ್ಮಯಗಳು ಮತ್ತು ಶಾಸ್ತ್ರ ಗ್ರಂಥಗಳು ಕನ್ನಡವನ್ನು ಜ್ಞಾನದ ಭಾಷೆಯಾಗಿ ರೂಪಿಸಲು ಸಹಾಯ ಮಾಡಿವೆ. ಕಳೆದ ಎರಡು ದಶಕಗಳಿಂದ ಕನ್ನಡಭಾಷೆಯನ್ನು ತಂತ್ರಜ್ಞಾನದ ಭಾಷೆಯಾಗಿಸುವ ಕಾರ್ಯವೂ ಯಶಸ್ವಿಯಾಗಿ ನಡೆಯುತ್ತಿದೆ. ಬದುಕಿನ ಎಲ್ಲಾ ವಲಯಗಳ ಅವಶ್ಯಕತೆಗೆ ತಕ್ಕಂತೆ ಕನ್ನಡವನ್ನು ಅಂತರಾಷ್ಟ್ರೀಯ ವ್ಯವಹಾರದ ಭಾಷೆಯಾಗಿ ಆಧುನಿಕ ವಿಜ್ಞಾನದ ಸಂಶೋಧನೆಗಳನ್ನು ನಿರ್ವಹಿಸುವ ವಿಜ್ಞಾನಭಾಷೆಯಾಗಿ ವಿಸ್ತರಿಸಲು ನಾವು ಬದ್ಧತೆಯಿಂದ ಕೆಲಸಮಾಡುವ ಅಗತ್ಯವಿದೆ. ಕುವೆಂಪು ಅವರ ಮಾತಿನಲ್ಲಿ ಹೇಳುವುದಾದರೆ ‘ಕನ್ನಡ ಭಾವೋಪಯೋಗಿ ಭಾಷೆಯಾದರೆ ಮಾತ್ರ ಸಾಲದು ಅದು ಲೋಕೋಪಯೋಗಿ ಭಾಷೆಯಾಗಿ ಬಳಸುವ ಅವಶ್ಯಕತೆ ಇದೆ. ಇಂಗ್ಲಿಷ್ ಹಾಗೂ ಹಿಂದಿ ಭಾಷೆಗಳ ಜೊತೆಗೆ ಸೆಣೆಸುತ್ತಲೆ ಕನ್ನಡಭಾಷೆಯು ಕನ್ನಡಿಗರ ಆತ್ಮಸಂಗಾತ ಭಾಷೆಯಾಗಿ ಬಾಳಬೇಕಿದೆ’.

ಕರ್ನಾಟಕ ರಾಜ್ಯವು ದೇಶದಲ್ಲಿ ಹೊಸಶಿಕ್ಷಣ ನೀತಿಯನ್ನು ಮೊತ್ತ ಮೊದಲಿಗೆ ಜಾರಿಗೆ ತಂದಿರುವ ರಾಜ್ಯವಾಗಿದೆ. ಪ್ರಸ್ತುತ ಕರ್ನಾಟಕ ಸರ್ಕಾರವು 2020–2021ರ ವರ್ಷವನ್ನು ಕನ್ನಡ ಕಾಯಕವರ್ಷವೆಂದು ಘೋಷಿಸಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಪ್ರಸರಣಕ್ಕೆ ಅಗತ್ಯವಿರುವ ಕಾರ್ಯಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಿದೆ. ಕಳೆದ ಎಪ್ಪತ್ತೈದು ವರ್ಷಗಳಿಂದಲೂ

ಶಿಕ್ಷಣ ಕ್ಷೇತ್ರದಲ್ಲಿ ಅನೇಕ ಬದಲಾವಣೆಗಳು ನಡೆಯುತ್ತಾ ಬಂದಿದ್ದರೂ ಕಲಿಕಾಪ್ರಕ್ರಿಯೆ ವಿದ್ಯಾರ್ಥಿ ಸ್ನೇಹಿಯಾಗಿರಲಿಲ್ಲ ಎಂಬ ಆಪಾದನೆ ಇತ್ತು. ಈಗ ಅನುಷ್ಠಾನಗೊಳ್ಳುತ್ತಿರುವ ಹೊಸ ಶಿಕ್ಷಣ ನೀತಿಯು ಈವರೆಗೆ ಕಲಿಕೆಯಲ್ಲಿ ಇದ್ದ ಜಡತ್ವವನ್ನು ತೆಗೆದು ಹಾಕಿದೆ. ವಿದ್ಯಾರ್ಥಿಗಳಿಗೆ ತಮ್ಮ ಇಷ್ಟದ ವಿಷಯಗಳನ್ನು ವಿನ್ಯಾಸಗೊಳಿಸಿಕೊಳ್ಳುವ ಅವಕಾಶ ಮತ್ತು ಕಲಿಕಾ ಸ್ವಾತಂತ್ರ್ಯವನ್ನು ಕಲ್ಪಿಸಿದೆ. ಆಧುನಿಕ ಜ್ಞಾನವನ್ನು ಮತ್ತು ತಂತ್ರಜ್ಞಾನವನ್ನು ಪ್ರಾದೇಶಿಕ ಭಾಷೆಗಳಲ್ಲಿ ಕಲಿಸುವುದರ ಮೂಲಕ ಪ್ರಕ್ರಿಯಾತ್ಮಕವಾದ ಶೈಕ್ಷಣಿಕ ವಾತಾವರಣವನ್ನು ನಿರ್ಮಿಸಲು ಶಿಕ್ಷಣ ನೀತಿ ಮುಂದಾಗಿರುವುದು ಸ್ವಾಗತಾರ್ಹ.

ಈ ಹಿನ್ನೆಲೆಯಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾಲಯ ರಾಜ್ಯ ಉನ್ನತ ಶಿಕ್ಷಣ ಪರಿಷತ್ ನೀಡಿರುವ ಮಾದರಿ ಪಠ್ಯವಿನ್ಯಾಸವನ್ನು ಅನುಸರಿಸಿ ಕನ್ನಡ ಭಾಷೆಯ ಪಠ್ಯಪುಸ್ತಕಗಳನ್ನು ರೂಪಿಸಿದೆ. ಪಠ್ಯಗಳು ವಿದ್ಯಾರ್ಥಿಸ್ನೇಹಿಯಾಗಿ ಸಂವಾದ ಸ್ವರೂಪದಲ್ಲಿವೆ ಹಾಗೂ ಕನ್ನಡಭಾಷೆಯನ್ನು ಕಲಿಯುವ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸಕ್ಕೂ ಮಾರ್ಗದರ್ಶಿಯಾಗಿವೆ. ಈ ಪಠ್ಯಗಳನ್ನು ಪ್ರೀತಿಯಿಂದ ರೂಪಿಸಿದ ಕನ್ನಡ ಅಧ್ಯಯನ ಮಂಡಳಿಯ ಸದಸ್ಯರಿಗೂ, ಎಲ್ಲಾ ಸಂಪಾದಕರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಪ್ರೊ. ಲಿಂಗರಾಜಗಾಂಧಿ
ಕುಲಪತಿಗಳು
ಬೆಂಗಳೂರು ನಗರ ವಿಶ್ವವಿದ್ಯಾಲಯ

## ಪ್ರಧಾನ ಸಂಪಾದಕರ ಮಾತು

ಆಧುನಿಕತೆ ಎನ್ನುವ ಮಾತು ಎಲ್ಲವನ್ನು ತನ್ನ ತೆಕ್ಕೆಗೆ ತೆಗೆದುಕೊಂಡಂತೆ ಬದಲಾವಣೆ ಎನ್ನುವುದನ್ನು ಬಹುಪಾಲು ಎಲ್ಲಾ ನೆಲೆಯಲ್ಲಿಯೂ ಅನಿವಾರ್ಯ ವೆನ್ನುವಂತಾಗಿಸುತ್ತಿರುವುದು ನಮ್ಮ ನಡುವಿನ ಸರಳವೂ ಸಹಜವೂ ಆದ ಅರಿವಿನಂತಿದೆ. ಸೃಜನಶೀಲತೆ ಮತ್ತು ಕ್ರಿಯಾಶೀಲತೆಗಳ ಅರ್ಥವೂ ಹೀಗೆ ಹೊಸತನ್ನು ನಿರಂತರವಾಗಿ ಕೇಂದ್ರೀಕರಿಸಿ ಕೊಂಡಿರುತ್ತದೆ. ಇದು ಕಲಿಕೆಯ ಹೊತ್ತಿಗೂ ಪರಸ್ಪರ ಕಲಿಯುವವರ ಮತ್ತು ಕಲಿಸುವವರ ನಡುವಿನ ಅನುಸಂಧಾನದ ಪ್ರಕ್ರಿಯೆಯೂ ಹೌದು. ಇದರ ಜೊತೆಗೆ ನಿರಂತರವಾದ ಎಚ್ಚರವೂ ಅತ್ಯಗತ್ಯ. ಕನ್ನಡ ಭಾಷೆ ಮತ್ತು ಸಾಹಿತ್ಯವೆನ್ನುವುದು ಹೀಗೆ ಸದಾ ತನ್ನನ್ನು ಸವಾಲಿಗೆ ತೆರೆದುಕೊಂಡಂತೆ ಹೊಸತನಕ್ಕೆ ನಿರಂತರವಾಗಿ ಎದುರಾಗುತ್ತಲೇ ಬಂದಿರುವುದು ಗಮನಾರ್ಹವಾದುದು.

ಹೊಸ ಶಿಕ್ಷಣ ನೀತಿ ನಮ್ಮ ಉನ್ನತ ಶಿಕ್ಷಣದ ಹಲವು ಬಗೆಯ ಬದಲಾವಣೆಗೆ ಕಾರಣವಾಗುತ್ತಿರುವ ಸಂದರ್ಭದಲ್ಲಿ ಪದವಿಯ ವಿದ್ಯಾರ್ಥಿಗಳಿಗೆ ಭಾಷೆ ಮತ್ತು ಸಾಹಿತ್ಯದ ಪಠ್ಯವನ್ನು ವಿಶಿಷ್ಟವಾಗಿ ರೂಪಿಸುವ ಜವಾಬ್ದಾರಿಯೊಂದು ಕನ್ನಡತನವನ್ನು ನಮ್ಮತನ ಎಂದುಕೊಂಡ ನಮ್ಮೆಲ್ಲರ ಮೇಲಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಕನ್ನಡ ಅಧ್ಯಾಪಕ ಬಂಧುಗಳು ಮೊದಲ ದಿನದಿಂದಲೂ ಅತ್ಯಂತ ಉತ್ಸಾಹ, ಶ್ರಮ ಮತ್ತು ಬದ್ಧತೆಯಿಂದ ಕಾರ್ಯ ನಿರ್ವಹಿಸಿದ್ದಾರೆ. ಅದರ ಫಲಿತವಾಗಿ ಉತ್ತಮ ಪಠ್ಯಗಳು ವಿದ್ಯಾರ್ಥಿಗಳ ಕೈಸೇರುವಂತಾಗುತ್ತಿದೆ. ಇದಕ್ಕಾಗಿ ಬೆಂಗಳೂರು ನಗರ ವಿಶ್ವವಿದ್ಯಾಲಯದ ಅಧ್ಯಯನ ಮಂಡಳಿಯ ಸದಸ್ಯರಿಗೆ ಹೃದಯ ಪೂರ್ವಕ ಅಭಿನಂದನೆಗಳು. ಪಠ್ಯಗಳನ್ನು ರೂಪಿಸುವಲ್ಲಿ ಶ್ರಮ ವಹಿಸಿದ ಎಲ್ಲಾ ಪಠ್ಯಗಳ ಸಂಪಾದಕರಿಗೂ ಆತ್ಮೀಯ ಕೃತಜ್ಞತೆಗಳು. ನಿರಂತರವಾಗಿ ಸಂಯೋಜನೆಯ ಕಾರ್ಯ ನಿರ್ವಹಿಸಿದ ಅತ್ಮೀಯರಾದ ಡಾ. ಲಿಂಗರಾಜಯ್ಯ ನವರ ಶ್ರಮವನ್ನು ಸ್ಮರಿಸಲೇ ಬೇಕು.

ಅಧ್ಯಯನ ಮಂಡಳಿಯ ಅಧ್ಯಕ್ಷನನ್ನಾಗಿ ನನಗೆ ಜವಾಬ್ದಾರಿ ನೀಡಿದ ಬೆಂಗಳೂರು ನಗರ ವಿಶ್ವವಿದ್ಯಾಲಯದ ಸನ್ಮಾನ್ಯ ಕುಲಪತಿಗಳಾದ ಪ್ರೊ. ಲಿಂಗರಾಜ ಗಾಂಧಿ ಅವರಿಗೆ ಕೃತಜ್ಞತೆಗಳು. ಪ್ರತೀ ಹಂತದಲ್ಲಿಯೂ ನಮ್ಮೊಂದಿಗಿದ್ದು ಸಹಕಾರ ನೀಡಿದ ಪ್ರೊ. ರಮೇಶ್. ಬಿ ಮಾನ್ಯ ಕುಲ ಸಚಿವರು ಪರಿಕ್ಷಾಂಗ ಇವರಿಗೆ ನಮ್ಮ ಧನ್ಯವಾದಗಳು ಮತ್ತು ಶ್ರೀಯುತ ಶ್ರೀಧರ್ ಸಿ.ಎಸ್ ಮಾನ್ಯ ಕುಲ ಸಚಿವರು ಇವರಿಗೆ ನಮ್ಮ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಡಾ. ಪ್ರಶಾಂತ ಜಿ. ನಾಯಕ

ಪ್ರಾಧ್ಯಾಪಕರು

**ಬೆಂಗಳೂರು ನಗರ ವಿಶ್ವವಿದ್ಯಾಲಯ**
**ದ್ವಿತೀಯ ಸೆಮಿಸ್ಟರ್ ಬಿ.ಬಿ.ಎ. ಕನ್ನಡ ಭಾಷಾ ಪತ್ರ**

# ನಿರ್ವಹಣ ಸೌರಭ – ೨


**ಘಟಕ I. ಕಾಯಕ :**

| | | | |
|---|---|---|---|
| 1.1 | ಕಟ್ಟಡದ ಕೆಲಸಗಾರರು (ಕವಿತೆ) | : ಎಚ್.ಎಸ್. ಶಿವಪ್ರಕಾಶ್ | 003 |
| 1.2 | ಭಜನೆಯ ಬುಡೇನ್‌ಸಾಬಿ (ಕಥೆ) | : ಬೆಳಗೆರೆ ಕೃಷ್ಣಶಾಸ್ತ್ರಿ | 005 |
| 1.3 | ನೇಕಾರರ ಸಾಂಸ್ಕೃತಿಕ ಹಿನ್ನೆಲೆ (ಲೇಖನ) | : ಕೆ.ಜಿ. ನಾಗರಾಜಪ್ಪ | 012 |
| 1.4 | ಶರೀರ ಶ್ರಮ (ಅನ್ನಕಾಯಕ) (ಲೇಖನ) | : ನೀಲತ್ತಹಳ್ಳಿ ಕಸ್ತೂರಿ | 020 |

**ಘಟಕ II. ಸಾಮರಸ್ಯ :**

| | | | |
|---|---|---|---|
| 2.1 | ನನ್ನ ನಿನ್ನ ನಡುವೆ (ಕವಿತೆ) | : ಜಿ.ಎಸ್. ಶಿವರುದ್ರಪ್ಪ | 028 |
| 2.2 | ಗೋಳಿಬಾರ್ (ಕಥೆ) | : ಬಿ.ಜಿ. ಸತ್ಯಮೂರ್ತಿ | 030 |
| 2.3 | ಹೊತ್ತು ಮಾರುವವರು (ಲೇಖನ) | : ಡಾ. ಎಲ್. ಸಿ. ಸುಮಿತ್ರ | 041 |
| 2.4 | ಓದುಪತ್ಯ : ತಾಯಿ–ಮಗ | : ಎಂ.ವಿ. ಸೀತಾರಾಮಯ್ಯ | 048 |

**ಘಟಕ III. ಅಂತಃಕರಣ :**

| | | | |
|---|---|---|---|
| 3.1 | ಕರ್ಣರಾಗ (ಕವಿತೆ) | : ಎಲ್. ಹನುಮಂತಯ್ಯ | 061 |
| 3.2 | ಕಣ್ಣಪ್ಪನ ಅಂತಿಮ ದಿನಗಳು (ಕಥೆ) | : ಪಿ. ಲಂಕೇಶ್ | 063 |
| 3.3 | ಕೋಡುಗಲ್ಲ ಬಸವ (ಶಾಂತಲಾ) (ಕಾದಂಬರಿ) | : ಕೆ.ವಿ. ಅಯ್ಯರ್ | 071 |
| 3.4 | ಓದುಪತ್ಯ : ಅನುಕಂಪದ ಹತ್ತು ಮುಖಗಳು (ಲೇಖನ) | : ಮಾಲವಿಕಾ ಕಪೂರ್ | 079 |

**ಘಟಕ IV. ಸಂಕೀರ್ಣ :**

| | | | |
|---|---|---|---|
| 4.1 | ನೂಲಲ್ಯಾಕ ಚನ್ನೀ! (ಕವಿತೆ) | : ಜಾನಪದ | 090 |
| 4.2 | ಹುಲಿಯ ಸವಾರಿ (ಕಥೆ) | : ವಿವೇಕ ಶಾನಭಾಗ | 093 |
| 4.3 | ಜಾಪಾನಿನ ಅಪೂರ್ವ ಕಲೆ ಚಾನೂಯು (ಲೇಖನ) | ಜಿ.ಎಸ್. ಆಮೂರ | 105 |
| 4.4 | ಓದು ಪತ್ಯ : ಬುರ್ಖಾ (ಕಥೆ) | : ಫಕೀರ್ ಮಹಮ್ಮದ್ ಕಟ್ಪಾಡಿ | 112 |

**ಮಾದರಿ ಪ್ರಶ್ನೆ ಪತ್ರಿಕೆ** 124

# 1. ಕಾಯಕ


| | | | |
|---|---|---|---|
| 1.1 | ಕಟ್ಟಡದ ಕೆಲಸಗಾರರು | : ಎಚ್.ಎಸ್. ಶಿವಪ್ರಕಾಶ್ | 003 |
| 1.2 | ಭಜನೆಯ ಬುಡೇನ್‌ಸಾಬಿ | : ಬೆಳಗೆರೆ ಕೃಷ್ಣಶಾಸ್ತ್ರಿ | 005 |
| 1.3 | ನೇಕಾರರ ಸಾಂಸ್ಕೃತಿಕ ಹಿನ್ನೆಲೆ | : ಕೆ.ಜಿ. ನಾಗರಾಜಪ್ಪ | 012 |
| 1.4 | ಓದು ಪಠ್ಯ: ಶರೀರ ಶ್ರಮ (ಅನ್ನಕಾಯಕ) | : ನೀಲತ್ತಹಳ್ಳಿ ಕಸ್ತೂರಿ | 020 |

# 1. ಕಾಯಕ

## ಆಶಯ

ತನ್ನ ದುಡಿಮೆಯ ಫಲವನ್ನು ತನ್ನ ಸ್ವಾರ್ಥಕ್ಕೆ ಉಪಯೋಗಿಸಿಕೊಳ್ಳದೆ ತನಗೆಷ್ಟು ಬೇಕೊ ಅಷ್ಟನ್ನು ಇಟ್ಟುಕೊಂಡು ಉಳಿದುದನ್ನು ಲೋಕಸಂಸಾರಕ್ಕೆ ಉಪಯೋಗಿಸಿದಾಗ ದುಡಿಮೆ ಕಾಯಕವಾಗುತ್ತದೆ. ಬಸವಣ್ಣನವರು ಬಿಜ್ಜಳನ ಮಂತ್ರಿಯಾಗಿ ದುಡಿದರು. 'ಹೊತ್ತಾರೆ ಎದ್ದು ಕಣ್ಣ ಹೊಸವುತ್ತ, ಎನ್ನೊಡಲಿಂಗೆ, ಎನ್ನೊಡವೆಗೆ, ಎನ್ನ ಮಡದಿ ಮಕ್ಕಳಿಗೆಂದು ಕುದಿದೆನಾದೊಡೆ ಎನ್ನ ಮನಕ್ಕೆ ಮನವೇ ಸಾಕ್ಷಿ' ಎಂದವರು ತಮ್ಮ ಕಾಯಕದ ಬಗ್ಗೆ ಉದ್ಗಾರವೆತ್ತಿದ್ದಾರೆ.

ಇನ್ನೊಬ್ಬರ ಹಂಗಿನಲ್ಲಿ ಬಾಳುವ ಜೀವನವನ್ನು ಬಸವಣ್ಣನವರು ನಿಷ್ಠುರವಾಗಿ ಖಂಡಿಸಿದ್ದಾರೆ. 'ಅನ್ಯರ ಮನೆಗೆ ಹೋಗಿ ತನ್ನುದರವ ಹೊರೆಯದ ಅಚ್ಚಶರಣರ ಕಂಡರೆ ನಿಶ್ಚಯವಾಗಿ ಕೂಡಲ ಸಂಗಯ್ಯನೆಂಬೆ'. ಭಕ್ತನಾಗಲಿ, ಗುರುವಾಗಲಿ, ಜಂಗಮನಾಗಲಿ ಎಲ್ಲರೂ ತಮ್ಮ ತಮ್ಮ ಕಾಯಕದಲ್ಲಿ ನಿರತರಾಗಿರಬೇಕು. ಅದೇ ಶರಣರ ದೃಷ್ಟಿಯಾಗಿತ್ತು. ನುಲಿಯ ಚಂದಯ್ಯನ ಒಂದು ವಚನದಿಂದ ಈ ಮಾತಿನ ಅರ್ಥಕ್ಕೆ ಪುಷ್ಟಿಯೊದಗುತ್ತದೆ.

ಗುರುವಾದಡೂ ಕಾಯಕದಿಂದಲೇ ಜೀವನ್ಮುಕ್ತಿ
ಲಿಂಗವಾದಡೂ ಕಾಯಕದಿಂದಲೇ ಶಿಲೆಯ ಕುಲ ಹರಿವುದು
ಜಂಗಮವಾದಡೂ ಕಾಯಕದಿಂದಲೇ ವೇಷಪಾಶ ಹರಿವುದು
ಇದು ಚನ್ನಬಸವಣ್ಣ ಪ್ರಿಯ ಚಂದೇಶ್ವರ ಲಿಂಗದ ಅರಿವು.

ಈತ ಹಗ್ಗ ಹೊಸೆಯುವ ಕಾಯಕ ಕೈಗೊಂಡವ. ಅದನ್ನು ನಡೆಸುತ್ತಲೇ ಸಾಧನೆ ಮುಂದುವರಿಸಿದ. ಇವನಂತೆಯೇ 12ನೆಯ ಶತಮಾನದಲ್ಲಿ ಅನೇಕ ಶರಣರು ವೃತ್ತಿಯಲ್ಲಿ ಬೇರೆಯಾದರೂ ಮೋಕ್ಷಸಾಧನೆಯ ಮಾರ್ಗದಲ್ಲಿ ಒಂದೇ ಆಗಿದ್ದರು. ಅವರಲ್ಲಿ ಮುಖ್ಯರು ಮಡಿವಾಳ ಮಾಚಯ್ಯ, ಮೇದರ ಕೇತಯ್ಯ, ಹಡಪದ ಅಪ್ಪಣ್ಣ, ಅಂಬಿಗರ ಚೌಡಯ್ಯ, ತುರುಗಾಹಿ ರಾಮಣ್ಣ, ಸುಂಕದ ಬಂಕಣ್ಣ, ತಳವಾರ ಕಾಮಿದೇವ, ಗಾಣದ ಕನ್ನಪ್ಪ, ವೈದ್ಯ ಸಂಗಣ್ಣ, ಸೂಜಿಕಾಯಕದ ರಾಮಿತಂದೆ, ಬಾಚಿಕಾಯಕದ ಬಸಪ್ಪ, ಕೊಟ್ಟಣದ ರೇಮವ್ವೆ, ಮೋಳಿಗೆ ಮಾರಯ್ಯ ಮುಂತಾದವರು. ಅವರ ಹೆಸರಿನ ಹಿಂದಿರುವ ಮಾತುಗಳೇ ಅವರು ಕೈಗೊಂಡಿದ್ದ ಕಾಯಕವನ್ನು ಸೂಚಿಸುತ್ತವೆ. ಇವರೆಲ್ಲ ಅನುಭವ ಮಂಟಪದ ಶರಣಗೋಷ್ಠಿಗೆ ಬಂದಾಗ ಮಂತ್ರಿ ಬಸವಣ್ಣನವರ ಸರಿಸಮರಾಗಿ ಕುಳಿತು ಆಧ್ಯಾತ್ಮ ಚರ್ಚೆಯಲ್ಲಿ ಭಾಗವಹಿಸುತ್ತಿದ್ದರು.

ವೈದಿಕ ಯುಗದ, ಅನಂತರ ವೀರಶೈವ ಧರ್ಮದ ಕಾಯಕದ ಕಲ್ಪನೆ ಆಧುನಿಕ ಯುಗಕ್ಕೂ ಮಾರ್ಗದರ್ಶಕವಾಗಿದೆ.

## 1.1 ಕಟ್ಟಡದ ಕೆಲಸಗಾರರು

**–ಎಚ್.ಎಸ್. ಶಿವಪ್ರಕಾಶ್**

ಸ್ಮಶಾನದ ಬೂದಿ ಮಿಶ್ರಿತ ಮಣ್ಣು
ಹೆಜ್ಜೆ ಕಲ್ಲುಗಳ ದಾಟುತ್ತಾ
ಅರೆಬೆಂದ ಕೊರಡುಗಳ ಎಡವುತ್ತ
ಬಂದೆ ಬಯಲಿಗೆ
ಒಂದು ಸಲವಾದರೂ
ಬೆಚ್ಚನೆಯ ಗಾಳಿ ತುಂಬಿಕೊಳ್ಳಲು ಪುಪ್ಪುಸದೊಳಕ್ಕೆ.
ಮಣ್ಣ ತಿಮಿಂಗಲ ಎದ್ದು ನಿಂತಂತೆ ದೂರದಲ್ಲಿನ್ನೂ
ಸುಣ್ಣ ಬಳಿಯದ ಮಹಲು:
ಅದರ ಭುಜದ ಮೇಲಿನ ಕೂಲಿಕಾರರ ಬಣ್ಣ ಬಣ್ಣದ ಸಾಲು:
ಮಣ್ಣು ಇಟ್ಟಿಗೆಯಾಗಿ ಬಳಿಕ ಕಟ್ಟಡವಾಗಲು
ಇಷ್ಟಿಷ್ಟೆ ಏರಿದ ಎತ್ತರದ ಜೀವಂತ ಸೀಮಾರೇಖೆ.
ಕೈಯಿಂದ ಕೈಗೆ ಹಾರುವ ಬಾಣಲಿಯೊಂದು
ರೆಕ್ಕೆ ಮೂಡದ ಮಣ್ಣು ತುಂಬಿದ ಲೋಹದ ಹಕ್ಕಿ.
ತೊನೆಯುವ ತೋಳುಗಳ ಹಿಂದೆ
ಬಗಲ ಕಿಂಡಿಗಳಲ್ಲಿ
ನೀಲಿ ಹೊತ್ತಿ ಉರಿದರೆ ಏನು?
ಮೋಡಗಳು ಬೂದಿ ಎಷ್ಟು ಕಟ್ಟಿದರೇನು?
ಬುಡದಿಂದ ಅಡಿಅಡಿ ಬೆಳೆದು ಬೆವರುಂಡು ನಿಲ್ಲುವ
ಸುತ್ತಹಬ್ಬುವ ಮಜಲು ಮಹಲು.

ಬಾವಿಗಾಲಿಗಳ ಸಿಡಿಮಿಡಿಯ
ಕೂಗುಗಳ ಕರೆಗಳ ಮಧ್ಯ
ಸುಡು ಮರಳರಾಶಿಯ ಹರುಹರುಕು ನೆರಳಲ್ಲಿ
ಅರೆತೆರೆದ ಕಣ್ಣುಗಳ ಕಂದನಿಗೆ
ಹಾಲನೂಡುವ ಅಮ್ಮ

ನಿನ್ನ ಗರ್ಭದ ಗುಪ್ತ ಸಾಮ್ರಾಜ್ಯಗಳಲ್ಲಿ
ನಗರನಾಡುಗಳೆಷ್ಟು ಹೊರಳುತ್ತಿವೆ?

***ಆಕರ: 'ಶತಮಾನದ ಕಾವ್ಯ' ಸಂ: ಎಚ್.ಎಸ್. ವೆಂಕಟೇಶ ಮೂರ್ತಿ***

**ಎಚ್.ಎಸ್. ಶಿವಪ್ರಕಾಶ್:**

ಕವಿ, ಸಾಹಿತಿ, ಲೇಖಕ ಎಚ್.ಎಸ್.ಶಿವಪ್ರಕಾಶ್ ಬೆಂಗಳೂರಿನಲ್ಲಿ 15–06–1954ರಂದು ಜನಿಸಿದರು. ತಂದೆ ಪ್ರಸಿದ್ಧ ಸಾಹಿತಿಗಳು ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಆಗಿದ್ದ ಶಿವಮೂರ್ತಿ ಶಾಸ್ತ್ರಿಗಳು. ನವದೆಹಲಿಯ ಜೆ.ಎನ್.ಯು ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಆರ್ಟ್ಸ್ ಅಂಡ್ ಈಸ್ತೆಟಿ–ಕ್ಸ್ ನಲ್ಲಿ ಪ್ರೋಫೆಸರ್ ಆಗಿ ಕಾರ್ಯ ನಿರ್ವಹಿಸಿ ನಿವೃತ್ತರಾಗಿದ್ದಾರೆ. ಕಾವ್ಯ, ನಾಟಕ, ಅನುವಾದ ಹೀಗೆ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಕೃಷಿ ಮಾಡಿರುವ ಅವರ ಪ್ರಮುಖ ನಾಟಕಗಳು– ಮಹಾಚೈತ್ರ, ಸುಲ್ತಾನ್ ಟಿಪ್ಪು, ಮಂಟೇಸ್ವಾಮಿ, ಮಾದಾರಿ ಮಾದಯ್ಯ, ಮದುವೆ ಹೆಣ್ಣು. ಶಿವಪ್ರಕಾಶರ ಕವನ ಸಂಕಲನಗಳು– ಮಳೆ ಬಿದ್ದ ನೆಲದಲ್ಲಿ, ಮಿಲರೆಪಾ, ಅಣುಕ್ಷಣ ಚರಿತೆ, ಸೂರ್ಯಜಲ, ಮಳೆಯೇ ಮಂಟಪ. ಅವರ ಅನುವಾದಿತ ಕೃತಿ– ಕಿಂಗ್ ಲಿಯರ್ ಸೇರಿದಂತೆ ಹಲವಾರು ಕೃತಿಗಳನ್ನು ರಚಿಸಿದ್ದಾರೆ.

ಅವರ ಕೃತಿಗಳು ಇಂಗ್ಲಿಷ್, ಫ್ರೆಂಚ್, ಇಟಾಲಿಯನ್, ಸ್ಪ್ಯಾನಿಶ್, ಜರ್ಮನ್, ಪೋಲಿಷ್, ಹಿಂದಿ, ಮಲಯಾಳಂ, ಮರಾಠಿ, ತಮಿಳು ಮತ್ತು ತೆಲುಗು ಭಾಷೆಗಳಲ್ಲಿ ವ್ಯಾಪಕವಾಗಿ ಅನುವಾದಗೊಂಡಿದೆ. ಅವರ ನಾಟಕಗಳನ್ನು ಕನ್ನಡ, ಹಿಂದಿ, ಮೈಥಿ, ರಭಾ, ಅಸ್ಸಾಮಿ, ಬೋಡೋ, ತಮಿಳು ಮತ್ತು ಮಲಯಾಳಂ ಭಾಷೆಗಳಲ್ಲಿ ಪ್ರದರ್ಶಿಸಲಾಗಿದೆ. ವಚನ ಸಾಹಿತ್ಯ, ಭಾರತದ ಭಕ್ತಿ ಚಳುವಳಿಗಳು, ಹಾಗೂ ಸೂಫಿ ಮತ್ತು ಇತರ ಅತೀಂದ್ರಿಯ ಸಂಪ್ರದಾಯಗಳ ಬಗ್ಗೆ ಶಿವಪ್ರಕಾಶ್ ಅಧ್ಯಯನ ನಡೆಸಿದ್ದಾರೆ.

## 1.2 ಭಜನೆಯ ಬುಡೇನ್‌ಸಾಬಿ

**–ಬೆಳಗೆರೆ ಕೃಷ್ಣಶಾಸ್ತ್ರಿ**

ಹೆಗ್ಗರೆಯಲ್ಲಿ ನಾನು ಎರಡು ಸಲ ಕೆಲಸ ಮಾಡಿದ್ದೇನೆ. ಮೊದಲು ನಾಲ್ಕು ವರ್ಷ ಆಮೇಲೆ ಐದು ವರ್ಷ ಒಟ್ಟು ಒಂಬತ್ತು–ಹತ್ತು ವರ್ಷ ಅಲ್ಲಿದ್ದೆ. ಆ ಊರಿನಲ್ಲಿದ್ದ ಒಬ್ಬ ವ್ಯಕ್ತಿ ತುಂಬಾ ಪರಿಚಯವಾದ. ಆತ ಅಂಗಡಿ ಬುಡೇನ್ ಸಾಬಿ, ಆ ಊರಿನಲ್ಲಿ ಸಣ್ಣದೊಂದು ಅಂಗಡಿ ಇಟ್ಟುಕೊಂಡಿದ್ದ. ನನಗೆ ಬೇಕಾದ ಸಾಮಾನುಗಳನ್ನು – ಸಕ್ಕರೆ, ಕಾಫಿಪುಡಿ ಮುಂತಾದವನ್ನು ಮನೆಗೆ ಕಳುಹಿಸಿಕೊಡುತ್ತಿದ್ದ. ಸಾತ್ವಿಕ ಸ್ವಭಾವದ ವ್ಯಕ್ತಿ, ತಮಾಷೆ ಮಾಡಿಕೊಂಡು ಖುಷಿಯಾಗಿ ಓಡಾಡಿಕೊಂಡಿದ್ದ.

ಆಗ ನಾವು ಬಿಲ್ಡಿಂಗ್ ಕಟ್ಟಲು ಧನಸಹಾಯಕ್ಕೆ ನಾಟಕಗಳನ್ನು ಮಾಡುತ್ತಿದ್ದೇವು 'ಪಾಶುಪತಾಸ್ತ್ರ' ನಾಟಕದಲ್ಲಿ ಬುಡೇನ್‌ಸಾಬಿ ಭೀಷ್ಮನ ಪಾತ್ರ ಮಾಡುತ್ತಿದ್ದ. (ಕೊನೆಯ ದಿನಗಳವರೆವಿಗೂ ಬುಡೇನ್‌ಸಾಬಿ ಆ ಪಾತ್ರದ ಹಾಡು, ಮಾತುಗಳನ್ನು ಹೇಳುತ್ತಲಿದ್ದ), ಬಹಳ ಸ್ಪಷ್ಟವಾದ, ಸ್ಫುಟವಾದ ಉಚ್ಚಾರ, ನಿರರ್ಗಳವಾದ ಧ್ವನಿ, ಭೀಷ್ಮನ ಪಾತ್ರಕ್ಕೆ ಒಪ್ಪುವಂತಹ ದೇಹ, ಅವನನ್ನು ಅಂಗಡಿ ಬುಡೇನ್‌ಸಾಬಿ ಎಂತಲೂ ಭಜನೆ ಬುಡೇನ್‌ಸಾಬಿ ಎಂತಲೂ ಕರೆಯುತ್ತಿದ್ದರು. ಯಾಕೆಂದರೆ ಊರಿನಲ್ಲಿ ಯಾವುದೇ ಕಾರ್ಯಕ್ರಮವಾಗಲಿ ಅದು ರಾಮನವಮಿಯಾಗಲಿ, ಶಿವರಾತ್ರಿಯಾಗಲಿ, ದೇವರ ಉತ್ಸವವಿರಲಿ ಅಲ್ಲಿ ಬುಡೇನ್‌ಸಾಬಿ ಹದಿನೈದು–ಇಪ್ಪತ್ತು ಜನರೊಂದಿಗೆ ಬಂದು ಭಜನೆ ಮಾಡುತ್ತಿದ್ದ. ಭಜನೆಗೆ ಆತನೇ ಮುಖಂಡ. ಶಿವರಾತ್ರಿ, ರಾಮನವಮಿಗಳಲ್ಲಂತೂ ಡಪ್ಪಿ ಬಾರಿಸಿಕೊಂಡು, ಅಥವ ತಾಳ ಹಾಕಿಕೊಂಡು ರಾತ್ರಿಯೆಲ್ಲ ಊರಲ್ಲಿ ಭಜನೆ ಮಾಡುತ್ತಿದ್ದ. ಪುರಂದರದಾಸರು, ಕನಕದಾಸರು, ಶಿಶುನಾಳ ಶರೀಫರು ಹೀಗೆ ಅನೇಕರ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದ. ರಾತ್ರಿ ಇಡೀ ಹಾಡಿದರೂ ಒಮ್ಮೆ ಹಾಡಿದ ಹಾಡನ್ನು ಮತ್ತೊಮ್ಮೆ ಹಾಡುತ್ತಿರಲಿಲ್ಲ. ಹಾಡಿನ ಸಾಹಿತ್ಯ ಮತ್ತು ಗತ್ತುಗಾರಿಕೆ ಎರಡೂ ಆತನಲ್ಲಿದ್ದು, ಯಾರೇ ಆಗಲಿ ಈತ ಭಜನೆ ಮಾಡುತ್ತಿದ್ದರೆ ಕುಳಿತು ಕೇಳಬೇಕಪ್ಪ ಎನ್ನುವಷ್ಟು ತನ್ಮಯತೆಯನ್ನು ಮೂಡಿಸುತ್ತಿತ್ತು.

ನಮ್ಮ ಊರಿನ ಸಮೀಪ ಮದ್ದಿಗೆರೆ ಎಂಬ ಊರಿನಲ್ಲಿ ಗೋಪಿನಾಥ ರಾಯರು ಎಂಬುವರಿದ್ದರು. ಅವರ ಮನೆಗೊಬ್ಬರು ದೊಡ್ಡ ಆಧ್ಯಾತ್ಮಿಗಳು ಬಂದಿದ್ದರು. ಶೇಷಗಿರಿರಾವ್ ಪದಕಿ ಎಂದು ಅವರೇ ನನ್ನನ್ನು ಬರಲು ಹೇಳಿ ಕಳುಹಿಸಿದ್ದರು. ಆ ದಿನ ಹೋದಾಗ 'ಸಂಜೆ ಹೊತ್ತು ಸಮಯ ಕಳೆಯಲಿಕ್ಕೆ

ಯಾರಾದರೂ ಭಜನೆಯವರು ಸಿಕ್ಕರೆ ಚೆನ್ನಾಗಿರುತ್ತೆ' ಎಂದರು. ತಕ್ಷಣಕ್ಕೆ ಬುಡೇನ್‌ಸಾಬಿ ನೆನಪಾದ. ಊರಿಗೆ ಬಂದವನೇ ಬುಡೇನ್‌ಸಾಬಿಯನ್ನು ಕರೆದುಕೊಂಡು ಹೋದೆ. ಒಂದು ವಾರ ಪದಕಿಯವರು ಆ ಊರಿನಲ್ಲಿದ್ದರು. ಅಷ್ಟು ದಿವಸವೂ ಬುಡೇನ್ ಸಾಬಿ ಭಜನೆ ಮಾಡುತ್ತಿದ್ದ. ಯಾರೂ ಇರಲಿಲ್ಲ ಆತ ಒಬ್ಬನೇ ಹಾಡುತ್ತಿದ್ದ, 'ಪಕ್ಕವಾದ್ಯವೆಂದು ಬೇರೆ ಇರಲಿಲ್ಲ. ತಾನೇ ಚಿಕ್ಕದೊಂದು ಕೋಲಿಟ್ಟುಕೊಂಡು ಟಕ್ ಟಕ್ ಟಕ್ ಎಂದು ಬಡಿಯುತ್ತಲೇ ಹಿತ್ತಾಳೆ ತಂಬಿಗೆಯನ್ನು ಇಟ್ಟುಕೊಂಡು ಟಕ್ ಟಕ್ ಎಂದು ಬಾರಿಸುತ್ತಲೋ ಭಜನೆ ಮಾಡುತ್ತಿದ್ದ. ಪದಕಿಯವರಿಗಂತೂ ಎಲ್ಲಿಲ್ಲದ ಸಂತೋಷ ಮತ್ತು ಈತನ ಬಗೆಗೆ ಕುತೂಹಲ, ಒಂದು ವಾರ ಪೂರ್ತಿ ಹಾಡಿದ. ಒಂದು ಹಾಡನ್ನು ರಿಪೀಟ್ ಮಾಡಲಿಲ್ಲ ಎಂದರೆ ಆತನ ನೆನಪಿನಲ್ಲಿದ್ದ ಹಾಡುಗಳಷ್ಟು? ಆಶ್ಚರ್ಯವಾಗುತ್ತದೆ! ಜೊತೆಗೆ ಪದಕಿಯವರು ಮಾತನಾಡುವಾಗ ಬೇರೆ ಭಾಷೆಯವರು ಕನ್ನಡವನ್ನು ಮಾತನಾಡಿದರೆ ತಮಿಳನವರೋ ಮುಸ್ಲಿಮರೊ ಇತ್ಯಾದಿ ಸ್ಪಷ್ಟವಾಗಿ ಗೊತ್ತಾಗಿಬಿಡುತ್ತದೆ, ಈತ ಆ ಉಚ್ಚಾರಗಳು ಕನ್ನಡದ್ದವೇ ಎನ್ನುವಂತೆ ಮಾತನಾಡುತ್ತಾನಲ್ಲಾ! ಆತ ಸಾಹೇಬ ಎನ್ನುವುದು ಕೂಡ ಗೊತ್ತಾಗುತ್ತಿರಲಿಲ್ಲ. ಆತನ ಬಾಯಲ್ಲಿ ಅಪಸ್ವರವಾಗಲಿ, ಅಪ ಉಚ್ಚಾರ, ಅಲ್ಪಪ್ರಾಣ –ಮಹಾಪ್ರಾಣ ಯಾವುದರಲ್ಲೂ ಅಷ್ಟೆ, ಭಾಷಾ ಪಾಂಡಿತ್ಯ ಇದ್ದ ವರಿಗೂ ಸಾಧ್ಯವಿಲ್ಲವೆನ್ನುವಷ್ಟು ಬುಡೇನ್‌ಸಾಬಿ ಹೆಸರುವಾಸಿಯಾಗಿದ್ದ.

* * *

ನಾನು ಬೆಳಗೆರೆಗೆ ಬಂದ ನಂತರದಲ್ಲಿ ಒಂದು ದಿನ ಸಂಜೆ ಬುಡೇನ್ ಸಾಬಿ ಬಂದ. ಸಾಕಷ್ಟು ಹೊತ್ತು ಮಾತನಾಡಿದೆವು. ತನ್ನ ಕಷ್ಟದ ಬಗೆಗೆಲ್ಲ ಹೇಳಿದ. 'ಯಾಕಿಷ್ಟು ಕಷ್ಟ' ಎಂದು ಕೇಳಿದ್ದಕ್ಕೆ 'ನಮ್ಮ ಜಮೀನಿತ್ತಲ್ಲ ಅದನ್ನ ತಮ್ಮಂದ್ರೆಲ್ಲ ಭಾಗ ಕೊಟ್ಬಿಡು ಅಂದ್ರು. ನಮ್ಮ ತಂದೆ ತಾಯಿ ಕೂಡ ಅವ್ರವ್ರ ಜಮೀನ್ನ ಪಾಲು ಮಾಡಿಕೊಡು ಅಂದ್ರು. ಹಂಚಿಕೊಟ್ಬಿಟ್ಟೆ, ಜೊತೆಗೆ ಸಾಲ ಇತ್ತು – ಸುಮಾರು ಮೂರ‍್ನಾಲ್ಕು ಸಾವಿರ ರೂಪಾಯಿ, ಆ ಹುಡುಗ್ರು ಚಿಕ್ಕೋರು. ಅವೇನೂ ಮಾಡಕ್ಕಾಗಲ್ಲ ನೀನೇ ನಮ್ಮನ ನಡಸ್ಕೊಂಡು ಬಂದಿರೋನು, ನಿನ್ಕಾಲದಲ್ಲೇ ಸಾಲ ಆಗಿರೋದು. ನೀನೇ ತೀರಿಸ್ಬೇಕು ಸಾಲನ ಅಂದ್ರು. ಸರಿ ಆ ಸಾಲ ತಿರ್ಸೋ ಪ್ರಸಂಗ ನಂಗೇ ಬಂತು. ಆಗ ಸಾಲ ಕೊಟ್ಟೋರು: ನೀವೀಗ ಭಾಗ ಆಗಿದೀರಿ. ನಮ್ಮ ಸಾಲ ನಮ್ಗೆ ಕೊಟ್ಬಿಡಿ ಅಂದ್ರು. ನೀವು ಒಟ್ಟು ಕುಟುಂಬದಲಿದ್ರಿ ಅಂತ ನಾವೂ ಸುಮ್ನೆ ಇದ್ವಿ, ಈಗ ನಮ್ಮ ದುಡ್ಡು ನಮಗೆ ಕೊಟ್ಬಿಡಿ ಎಂದು

ಒತ್ತಾಯ ಮಾಡಿದ್ರು. ಅವ್ರಿಗೆ ನನ್ನ ಪಾಲಿನ ಜಮೀನ್ ಕೊಟ್ಬಿಟ್ಟೆ. ನನ್ನತ್ರ ಈಗ ಏನೂ ಇಲ್ಲ. ಅಂಗಡಿ ಕೂಡ ನಡೆಯೋದು ನಿಂತೋಗಿದೆ. ಮೊದಲಂಗಿಲ್ಲ, ಬರಿಕೈ ಆಗಿಬಟ್ಟಿದೀನಿ' ಎಂದ. ಬುಡೇನ್‌ಸಾಬಿಗೆ ಮೂರುಜನ ಹೆಣ್ಣುಮಕ್ಕಳು, ಒಬ್ಬನೇ ಮಗ. ಹೆಂಡತಿ ಸಾತ್ವಿಕ ಸ್ವಭಾವದವಳು. ಇಂತಹ ಸಜ್ಜನರಿಗೆ ನಾನು ಏನಾದರೂ ಸಹಾಯ ಮಾಡೋಣ ಎಂದರೆ ಆಗ ನನ್ನ ಕೈ ನಡೆಯುತ್ತಿರಲಿಲ್ಲ. ಆಗಿನ್ನೂ ಮೇಷ್ಟ್ರಾಗಿದ್ದ. ಸ್ಕೂಲಿನ ಖರ್ಚು, ಹಾಸ್ಟೆಲ್ ಖರ್ಚು ನನ್ನ ಮೈಮೇಲಿತ್ತು. ಇಷ್ಟೆಲ್ಲದರ ಮಧ್ಯೆ ಕೈ ನಿಂತುಹೋಗಿದೆ ಸಹಾಯಮಾಡಿ ಎಂದು ಕಣ್ಣೀರಿಟ್ಟ ಬುಡೇನ್‌ಸಾಬಿಗೆ ಏನಾದರೂ ಮಾಡಬೇಕಲ್ಲ ಎಂದು ಯೋಚಿಸಿದೆ. ಏನೂ ತೋಚುತ್ತಿಲ್ಲ, ರಾತ್ರಿ ಊಟ ಮಾಡಿ ಮಲಗಿದೆವು. ಬೆಳಗ್ಗೆ ಎದ್ದು ಆತ, 'ನಾ ಹೋಗಿ ಬರ್ತೀನಿ' ಎಂದ. 'ಬುಡೇನ್‌ಸಾಬಿ ಇರು ಒಂದರ್ಧ ಗಂಟೇಲಿ ಬತ್ತೇನೆ' ಎಂದು ಪಕ್ಕದ ಹಳ್ಳಿ ನಾರಾಯಣಪುರಕ್ಕೆ ಹೋಗಿ ಅಲ್ಲಿನ ಗೆಳೆಯರೊಬ್ಬರಿಂದ ನೂರು ರೂಪಾಯಿ ಕೇಳಿ ತಂದು ಬುಡೇನ್‌ಸಾಬಿಯ ಕೈಗಿಟ್ಟೆ. 'ಬುಡೇನ್‌ಸಾಬಿ ಮುಚ್ಚುಮರೆ ಇಲ್ಲದೆ ಹೇಳ್ತಿನಿ, ಏನೂ ಮಾಡಿಲ್ಲ ಅಂದ್ಕೋಬೇಡ. ಈ ನೂರು ರೂಪಾಯಿ ನಿನಗೆ ಯಾವ ರೀತಿಲೂ ಉಪಯೋಗ ಆಗಲ್ಲ. ಆದ್ರೆ ಇದಕ್ಕಿಂತ ಹೆಚ್ಚಿಗೆ ನಾನೇನೂ ಮಾಡ್ಲಿಕ್ಕೆ ಆಗ್ತಿಲ್ಲ. ಇದನ್ನು ಬೇಡ ಅನ್ನದೆ ದಯವಿಟ್ಟು ತಗೋ' ಎಂದೆ. ಆತ ಎರಡೂ ಕೈ ಒಡ್ಡಿ ಆ ನೂರು ರೂಪಾಯಿಯನ್ನು ತಗೊಂಡ, ಕಾಲಿಗೆ ನಮಸ್ಕಾರ ಮಾಡಲು ಬಂದ, ಬೇಡವೆಂದು ತಡೆದೆ. ಅದಕ್ಕಾತ 'ಸ್ವಾಮಿ ನನಗೆ ಇವತ್ತು ಪ್ರಸಾದ ಸಿಕ್ಕಿದೆ. ನನಗೆ ಇಷ್ಟು ಸಾಕು. ನಿಮ್ಮ ಆಶೀರ್ವಾದ ಅಷ್ಟೆ ಸಾಕು. ಮೇಲೆ ದೇವ್ರಿದಾನೆ' ಎಂದು ಹೊರಟು ಹೋದ.

* * *

ಎಷ್ಟೋ ದಿವಸದ ನಂತರ ಹಿರಿಯೂರಿನಲ್ಲಿ ಬುಡೇನ್‌ಸಾಬಿ ಸಿಕ್ಕ, 'ಏನ್ ಬುಡೇನ್ ಸಾಬಿ ಚೆನ್ನಾಗಿದ್ದೀಯಾ?' ಎಂದೆ. ಆತ ಹಿಂದೆ ನಮ್ಮ ಮನೆಗೆ ಬಂದಾಗ ಖಿನ್ನನಾಗಿದ್ದಂತಿರಲಿಲ್ಲ. ಗೆಲುವಿತ್ತು ಮುಖದಲ್ಲಿ. 'ಏನಪ್ಪಾ ಏನ್ಮಾಡ್ತಿದೀಯಾ ಈಗ' ಎಂದೆ. 'ಚೆನ್ನಾಗಿದ್ದೀನಿ ಸ್ವಾಮಿ. ಹಿರಿ ಮಗಳ ಮದುವೆ ಮಾಡ್ದೆ, ಇನ್ನೆರಡು ಜವಾಬ್ದಾರಿ ಇದೆ ಅದನ್ನ ಮುಗಿಸಿದ್ರೆ ನಾನು ಗೆದ್ದೆ. ಧನ್ಯನಾಗ್ತಿನಿ. ಹಿರೀ ಮಗಳನ್ನೇನೋ ಸರ್ಕಾರಿ ಕೆಲ್ಸದಲ್ಲಿರೋನಿಗೆ ಕೊಟ್ಟಿದೀನಿ. ಮುಂದೆ ಆ ದೇವ್ರಿದಾನೆ' ಎಂದ. ನನಗೆ ಆಶ್ಚರ್ಯವಾಯ್ತು. ನನ್ನ ಕೈ ನಡೆಯೋಲ್ಲ ಎಂದು ಬಂದವನು ಹೇಗಿದೆಲ್ಲ ಮಾಡಿದೆ? ಮದುವೆ? ಸಂಸಾರ? ಹೇಗೆ?' ಎನಿಸಿತು. 'ಹಣ ಹೇಗೆ ಜೋಡಿಸಿದೆ?' ಎಂದು ಕೇಳಿದ್ದಕ್ಕೆ

ನೀವು ಅವತ್ತು ನೂರ್ ರೂಪಾಯಿ ಕೊಟ್ಟಿದ್ರಲ್ಲ ಅದನ್ನ ತಗೊಂಡ್ಬಂದು. ಆ ಸ್ಕೂಲ್ ಇದೆಯಲ್ಲಾ (ಗಿರೀಶ್ ಪ್ರೌಢಶಾಲೆ) ಅಲ್ಲೊಂದು ಸಿನಿಮಾ ಟೆಂಟ್ ಇದೆ. ಆ ಟೆಂಟ್ ಕಾಂಪೌಂಡಿನಲ್ಲಿ ನಾನು ಸಂಜೆ ಮೆಣಸಿನಕಾಯಿ ಬೊಂಡಾ, ಮಂಡಕ್ಕಿ ಮಾಡ್ತಿದ್ದೆ. ನೀವು ಕೊಟ್ಟಿದ್ದ ನೂರು ರೂಪಾಯಿ ಬಂಡವಾಳ, ಹಿಟ್ಟು, ಎಣ್ಣೆ ಅಷ್ಟೇ ಕೊಂಡದ್ದು. ಮನೇಲಿದ್ದ ಬಾಂಡಲಿಯನ್ನ ಉಪಯೋಗಿಸ್ದೆ, ಅದನ್ನ ಸಿನಿಮಾ ನೋಡಲಿಕ್ಕೆ ಬಂದ ಜನಕ್ಕೆ ಕೊಡುತ್ತಿದ್ದೆ. ಹೀಗೆ ಒಂದಷ್ಟು ದಿನ ನಡೆಯಿತು. ಹಣವೂ ಶೇಖರಣೆಯಾಯಿತು. ಅಂಗಡಿಯವರೂ ಕೂಡ ನಂಬಿಕಸ್ತರಾಗಿ ಸಾಕಷ್ಟು ಹಿಟ್ಟು, ಎಣ್ಣೆ ಮುಂತಾದವನ್ನು ಸಾಲದ ರೂಪದಲ್ಲಿ ಕೊಡಲಿಕ್ಕೆ ಬಂದರು. ಎಷ್ಟೋ ಸಲ ಅವರಿಗೆ ವಾರ ಕಳೆದು ಹಣ ಕೊಡುತ್ತಿದ್ದೆ. ಹೀಗೆ ಬೊಂಡಾ ಮಂಡಕ್ಕಿ ವ್ಯಾಪಾರ ವಿಸ್ತಾರವಾಯ್ತು.

(ಎಕ್ಸಟೆನ್‌ಷನ್ ಏರಿಯಾದ) 'ಗೋಪಾಲಪುರದಲ್ಲಿ ಒಂದು ಗುಡಿಸಲು ಹಾಕಿದೆ. ಅಲ್ಲೇ ಬೆಳಗ್ಗೆಯಿಂದ ಸಂಜೆವರ್ಗೂ ಬೊಂಡಾ ಮಂಡಕ್ಕಿ ಮಾರುವುದು, ಸಂಜೆ ಟೆಂಟ್ ಹತ್ತಿರ ಬರುವುದು. ಆಗ ನನ್ಹೆಂಡ್ತಿ ಮನೆಯಲ್ಲಿ ವ್ಯಾಪಾರ ಮಾಡ್ತಿದ್ದಳು. ಹೀಗಾಗಿ ನನ್ನ ವರಮಾನ ಹೆಚ್ಚಾಗ್ತಾ ಬಂತು. ಹೀಗೆ ಒಂದು ದಿನ ನನ್ನ ಮಗಳಿಗೂ ಮದುವೆ ಮಾಡ್ದೆ. ಈಗಂತೂ ನಮ್ಮದಿಯಾಗಿದ್ದೇನೆ'.

ಬುಡೇನ್‌ಸಾಬಿಯ ಮಾತಿನ ಲವಲವಿಕೆಯಲ್ಲಿಯೇ ಉತ್ಸಾಹದಲ್ಲಿಯೇ ಆತನ ಪರಿಸ್ಥಿತಿ ಅರ್ಥವಾಗುತ್ತಿತ್ತು. ಆತನೇ ಗುಡಿಸಲಿಗೆ ಒತ್ತಾಯ ಮಾಡಿ ಕರೆದುಕೊಂಡು ಹೋಗಿ ಬೋಂಡ, ಮಂಡಕ್ಕಿ ಕೊಟ್ಟ. ತಿಂದು ಕಾಫಿ ಕುಡಿದು ಮಕ್ಕಳನ್ನೆಲ್ಲ ಮಾತನಾಡಿಸಿಕೊಂಡು ಬಂದೆ. ನನಗಂತೂ ಬಹಳ ಸಂತೋಷವಾಯ್ತು. ಬುಡೇನ್‌ಸಾಬಿ ತನ್ನ ಕಾಲಮೇಲೆ ತಾನು ನಿಂತು ಕೊಂಡಿದ್ದಾನಲ್ಲ ಎಂಬ ಸಮಾಧಾನದಿಂದ.

ಇದಾದ ಎಷ್ಟೋ ವರ್ಷಗಳ ಮೇಲೆ ಯಾವುದೋ ಕಾರಣಕ್ಕೆ ಸ್ನೇಹಿತರನ್ನು ನೋಡಲು ಹಿರಿಯೂರಿಗೆ ಹೋಗುವ ಪ್ರಸಂಗ ಬಂತು. ಗೋಪಾಲಪುರದ ಹತ್ತಿರವೆ. ಆ ರಸ್ತೆಯಲ್ಲೇ ಬರುತ್ತಿರಬೇಕಾದರೆ – ಹಿಂದೆ ನೋಡಿದ್ದ ಗುಡಿಸಲುಗಳ ಮಧ್ಯೆ ಒಂದು ವ್ಯವಸ್ಥಿತವಾದ ರಸ್ತೆ ಆಗಿತ್ತು. ಸರಿಸುಮಾರಾದ ಒಂದು ಅಂಗಡಿಯಿಂದ 'ಸ್ವಾಮಿ ನಮಸ್ಕಾರ' ಎಂದು ಕೂಗಿದ ಹಾಗಾಯ್ತು. ನೋಡಿದರೆ ಬುಡೇನ್‌ಸಾಬಿ, 'ಏನ್ ಬುಡೇನ್‌ಸಾಬಿ ಇಲ್ಲಿದೀಯಾ?' ಎಂದು ಕೇಳಿದ್ದಕ್ಕೆ– 'ಇದು ನಮ್ಮ ಅಂಗಡಿ ಬನ್ನಿ ಸ್ವಾಮಿ' ಎಂದು ಒಳಗೆ ಕರೆದುಕೊಂಡು ಹೋದ. ಆ ಪ್ರದೇಶಕ್ಕೆ ಅದು ದೊಡ್ಡ ಅಂಗಡಿಯೇ. ದೊಡ್ಡ ದೊಡ್ಡ ಡಬ್ಬಗಳಲ್ಲಿ ಅಕ್ಕಿ, ಬೇಳೆ ಮುಂತಾದವುಗಳನ್ನೆಲ್ಲ ತುಂಬಿಸಿ ಇಟ್ಟಿದ್ದ, 'ಏನಿದು ದೊಡ್ಡ ಅಂಗಡಿ

ಮಾಡಿದಂಗಿದೆ' ಎಂದದ್ದಕ್ಕೆ

'ಹೂಂ ಸ್ವಾಮಿ ಸ್ವಲ್ಪ ದೊಡ್ಡದು ಮಾಡಿದಿನಿ ಒಳಕ್ಕೆ ಬನ್ನಿ' ಎಂದು ಮನೆಗೆ ಮೆಟ್ಟಿಲು ಹತ್ತಿ ಮಹಡಿ ಮನೆಗೆ ಕರೆದುಕೊಂಡು ಹೋದ. ಹಜಾರದಲ್ಲಿ ಹೆಂಡತಿ ಮಕ್ಕಳು, ಮಗಳ ಮಗ (ಅಷ್ಟು ಹೊತ್ತಿಗೆ ಸಾಕಷ್ಟು ದೊಡ್ಡವನಾಗಿದ್ದ ಮಗನನ್ನು ಅಂಗಡಿಯಲ್ಲಿ ಕೂರಿಸಿದ್ದ. 'ಬುಡೇನ್‌ಸಾಬಿ ಯಾರ್ದಿದು ಮನೆ ಚೆನ್ನಾಗಿದೆಯಲ್ಲಾ' ಎಂದು ಕೇಳಿದೆ – ನನ್ನ ಅಂದಾಜು ಈ ಮನೆಯನ್ನು ಆತ ಬಾಡಿಗೆಗೂ ಭೋಗ್ಯಕ್ಕೂ ಪಡೆದಿರಬೇಕು ಎಂದುಕೊಂಡಿದ್ದೆ. ಯಾರ್ದಿದು ಮನೆ? ಬಾಡಿಗೆಗಿದ್ದೀಯಾ ಎಂದದ್ದಕ್ಕೆ 'ಬಾಡಿಗೆ ಯಾಕ್ ಸ್ವಾಮಿ ಇದು ನಮ್ದೆ ಅಲ್ಲವೆ ಮನೆ' ಎಂದ. 'ಏಯ್ ಏನ್ಮಾತಾಡ್ತಿಯಬಿಡು' ಎಂದು ಗದರಿದೆ, 'ನೀವು ಕೊಟ್ರಲ್ಲ ನೂರ್ ರೂಪಾಯಿ ಅದ್ರಲ್ಲೇ ನಾನು ಬೆಳ್ದು ಹಿಂಗಿದೀನಿ ನೋಡಿ' ಎಂದ. ಮಾತಿನಲ್ಲಿ ಸೌಜನ್ಯ, ವಿನಯವಂತಿಕೆ ಎದ್ದು ಕಾಣುತ್ತಿತ್ತು. ಸ್ವಂತದ್ದೆ ಮನೆ, ಮುನ್ಸಿಪಾಲ್ಟಿಯವರನ್ನು ಕೇಳ್ದೆ. ಜಾಗಕೊಟ್ರು. ಕೆಳಗಡೆಗೊಂದು ಅಂಗ್ಡಿ ಕಟ್ಕೊಂಡೆ, ಮಾರನೇ ವರ್ಷ ಮೆಟ್ಟಿಲು ಕಟ್ಟಿ ಅದಾದ ಮೂರನೇ ವರ್ಷ ಮೇಲೆ ಮನೆ ಕಟ್ಟಿಸಿಕೊಂಡೆ. ಈಗ ನಮ್ಮದಿಯಾಗಿದೀನಿ. ನನ್ನೆಂಡ್ತಿ ತುಂಬಾ ದಿನದಿಂದ ಹೇಳಿದ್ದಳು ಕರಕೊಂಡ್ ಬನ್ನಿ ಎಂದು. ನೀವಾಗೇ ಬಂದಿದ್ರಲ್ಲ'! ಎಂದ. ಸಂಜೆಯವರೆಗೂ ಬಿಡಲೇ ಇಲ್ಲ ಚೆನ್ನಾಗಿ ನೋಡಿಕೊಂಡ. ಹೀಗೆ ನಾನು ಯಾವಾಗಲಾದರೂ ಹಿರಿಯೂರಿಗೆ ಹೋದಾಗ ಆತನೆ 'ಸಿಕ್ಕಿ ಮಾತನಾಡಿಸುತ್ತಿದ್ದ ಅಥವಾ ನಾನೇ ಆತನನ್ನು ಕಂಡು ಬರುತ್ತಿದೆ. ಈಗ ಎರಡು ಮೂರು ವರ್ಷಗಳ ಹಿಂದೆ. ಆ ಬೀದಿಯಲ್ಲೇ ಹೋಗುತ್ತಿದ್ದ. ತುಂಬಾ ದಿನಗಳಾದ ಮೇಲೆ ಹೋಗಿದ್ದರಿಂದ ಅಂಗಡಿ ಅದೋ ಏನೋ ಎಂಬ ಅನುಮಾನ ಬಂತು, ಅಂಗಡಿ ಸಾಕಷ್ಟು ದೊಡ್ಡದಾಗಿತ್ತು. ಒಬ್ಬ ಹುಡುಗ ಕೂತಿದ್ದ. 'ಬುಡೇನ್ ಸಾಬಿಯವರ ಅಂಗಡಿಯೇನಪ್ಪಾ ಇದು' ಕೇಳಿದೆ.

'ಹೌದು ಬನ್ನಿ' ಎಂದ.

'ನಿಮ್ಮಪ್ಪ ಎಲ್ಲಿ' ಎಂದು ಕೇಳಿದ್ದಕ್ಕೆ ನನ್ನನ್ನು ಮೇಲಕ್ಕೆ ಕರೆದುಕೊಂಡು ಹೋದ. ಆ ಹೊತ್ತಿಗಾಗಲೇ ಇಬ್ಬರು ಹೆಣ್ಣುಮಕ್ಕಳ ಮದುವೆಯೂ ಆಗಿತ್ತು. ಮೊದಲ ಮಗಳ ಮಗನೂ ಸ್ವಲ್ಪ ದೊಡ್ಡವನಾಗಿದ್ದ. ಎಲ್ಲರೂ ಆ ಹೊತ್ತಿಗೆ ಮನೆಗೆ ಬಂದಿದ್ದರು. ಬುಡೇನ್‌ಸಾಬಿ ಸ್ವಲ್ಪ ಇಳಿದು ಹೋಗಿದ್ದ. ನಿಲ್ಲುವ ತ್ರಾಣ ಕೂಡ ಇರಲಿಲ್ಲ. ಗೋಡೆಯನ್ನು ಒಂದು ಕೈಯಲ್ಲೂ ಮಗನ ಕೈಯನ್ನು ಇನ್ನೊಂದು ಕೈಲೂ ಹಿಡಿದುಕೊಂಡು ಬಂದು ನನ್ನನ್ನು ನೋಡಿದ್ದೆ ಗಟ್ಟಿಯಾಗಿ ಅತ್ತುಬಿಟ್ಟ, ಕಷ್ಟಪಟ್ಟು ಬಂದು ನನ್ನ ಕಾಲುಮುಟ್ಟಿ ನಮಸ್ಕಾರ ಮಾಡಿದ. ಇದರ

ಅಗತ್ಯ ಏನಿದೆ?' ಎಂದು ಬೈಯ್ದೆ. "ಇಲ್ಲ ಇಲ್ಲ ನೀವು ಸುಮ್ಮಿರಬೇಕು. ಸುಮ್ಮ ನಿಂತ್ಕಬೇಕು ನೀವು ಅ0ದ ಮಕ್ಕಳೆಲ್ಲ 'ಯಾಕಪ್ಪ ಅಳ್ತಿದೀಯ' ಎಂದು ಕೇಳಿದ್ದಕ್ಕೆ 'ನಾನು ದುಃಖಕ್ಕೆ ಅಲಮ್ಮ. ನಂಗೆ ಸಂತೋಷವಾಗಿ ಕಣ್ಣೀರು ಬರ್ತಾ ಇದ್ಯಮ್ಮ ಎಂದು ಹೇಳುವಾಗ ಎಲ್ಲರಿಗೂ ಕಣ್ಣಿನಲ್ಲಿ ನೀರು ಬಂತು (ಈ ಹೊತ್ತಿಗೂ ಆ ಘಟನೆಯನ್ನು ನೆನಸಿಕೊಂಡರೆ ಕಣ್ಣಿನಲ್ಲಿ ನೀರು ಬರುತ್ತದೆ), 'ಯಾಕೆ ಬುಡೇನ್‌ಸಾಬಿ ಹೀಗಾದೆ?' ಎಂದು ಕೇಳಿದ್ದಕ್ಕೆ ಆತ 'ಯಾಕಾದ್ನೋಗೊತ್ತಿಲ್ಲ. ನನ್ನ ಕೊನೇ ದಿನಗಳು ಸಮೀಪಿಸುತ್ತಿವೆ ಅಂತ ಮನಸ್ಸಿಗನ್ನಿಸಿದೆ. ನೀವಿವತ್ತು ಬಂದ್ರಿ. ನಂಗೆ ಇನ್ಯಾವ ಆಸೆಗಳೂ ಇಲ್ಲ. ಒಂದಾಸೆ ಇತ್ತು..... ನೀವು ನಮ್ಮನೇಗೆ ಬರೇಕು ಅಂತ. ನನ್ಮಗನ ಹತ್ರನೂ ಹೇಳಿದ್ದೆ, ಕರ್ಕೊಂಬಾ ಅಂತ. ನೀವೇ ಬಂದ್ಬಿಟ್ಟಿದ್ದೀರಿ. ಕೊನೇ ಕಾಲದಲ್ಲೂ ನಾನು ನಿಶ್ಚಿಂತೆಯಾಗಿ ಹೋಗ್ತಿದೀನಿ' ಎಂದ. ಒಂದರ್ಧ ಗಂಟೆ ಕೂತಿದ್ದು ಕಾಫಿ ತಿಂಡಿ ಮುಗಿಸಿ ಬಂದೆ, ಕೂತುಕೊಳ್ಳಲು ತಾಣವಿಲ್ಲದಿದ್ದರೂ ಕಷ್ಟಪಟ್ಟು ಅಷ್ಟು ಹೊತ್ತೂ ಕೂತಿದ್ದ. ಸ್ವಲ್ಪ ಹೊತ್ತಾದ ಮೇಲೆ ಒಳಗಿನ ರೂಮಿನ ಮಂಚದಲ್ಲಿ ಮಲಗಿಸಿದರು.

ಇದಾದ ಕೆಲ ದಿವಸಗಳ ಮೇಲೆ ನನಗೆ ವರ್ತಮಾನ ಬಂತು 'ಬುಡೇನ್‌ಸಾಬಿ ತೀರ್ಕೊಂಡ ಎಂದು. ಹಾಗೆ ತೀರ್ಕೊಳ್ಳುವಾಗ ಬಂದಿದ್ದ ನೆಂಟರಿಷ್ಟರಿಗೆಲ್ಲ ಭಜನೆ ಮಾಡಿ ಎಂದು ಹೇಳಿದನಂತೆ. ಹಾಗೆ ಭಜನೆ ಮಾಡುತ್ತಿದ್ದಾಗಲೇ ಕೊನೇ ಉಸಿರುಬಿಟ್ಟನಂತೆ. ಇದೊಂದು ಮರೆಯಲಾಗದ ಪ್ರಸಂಗ. ಈ ವಿಷಯಗಳನ್ನೆಲ್ಲ ಈ ಹೊತ್ತು ನೆನಪಿಸಿಕೊಳ್ಳುವಾಗ ನಾವು ಮನುಷ್ಯನಲ್ಲಿರುವ ಜಾತಿಯನ್ನು ಲೆಕ್ಕಕ್ಕೆ ತೆಗೆದುಕೊಳ್ಳದೇ ನೀತಿಯನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕಲ್ಲವೇ? ಎನಿಸುತ್ತದೆ. ಬುಡೇನ್‌ಸಾಬಿ ವಿಷಯದಲ್ಲಿಯಂತೂ ಈ ವಿಷಯ ತುಂಬಾ ಕಾಡುತ್ತದೆ. ನನಗಿಂತ ಆತ ಎಷ್ಟು ದೊಡ್ಡವನೋ, ಯಾವ ಸ್ಥಾನದಲ್ಲಿದ್ದನೋ ಎಂಬ ವಿಷಯ ನೆನೆದಾಗ ಈ ತರಹದ ಪ್ರಸಂಗಗಳಲ್ಲಿ ಎಷ್ಟು ಜನಕ್ಕೆ ಈ ಪುಣ್ಯ ಲಭ್ಯ ಎನಿಸುತ್ತದೆ. ಕೆಲವೇ ಪ್ರಸಂಗಗಳಲ್ಲಿ ಈ ಪ್ರಸಂಗ ಅಪರೂಪದ್ದು, ಮುಖ್ಯವಾದದ್ದು.

*ಆಕರ: ಮರೆಯಲಾದೀತೆ?, ಬೆಳಗೆರೆ ಕೃಷ್ಣಶಾಸ್ತ್ರಿ.*

**ಬೆಳಗೆರೆ ಕೃಷ್ಣಶಾಸ್ತ್ರಿ:**

ಸರಳ ಹಾಗೂ ಸಾದಾ ವ್ಯಕ್ತಿತ್ವಕ್ಕೆ ಮತ್ತೊಂದು ಹೆಸರಾಗಿದ್ದವರು ಬೆಳಗೆರೆ ಕೃಷ್ಣಶಾಸ್ತ್ರಿಗಳು. ಸದಾ ತನ್ನ ಸುತ್ತಲಿನ ಪರಿಸರದ ಬಗ್ಗೆ ಅತೀವ ಕಾಳಜಿ ವಹಿಸುತ್ತಿದ್ದರು. ಅವರು ಬರೆದದ್ದು ಇರಬೇಕಾದ ಆದರ್ಶದ ಬದುಕನ್ನಲ್ಲ,

ಬದುಕೇ ಆದರ್ಶವಾಗುವ ಬಗೆಯನ್ನು. ಅವರ ಬರವಣಿಗೆಯಲ್ಲಿ ಸಂಕೇತಗಳು, ಪ್ರತಿಮೆಗಳಾಗಿ, ಪ್ರತಿಮೆಗಳು ಸಂಕೇತಗಳಾಗಿ, ಕೆಲವೊಮ್ಮೆ ಎರಡನ್ನೂ ಮೀರಿದ ಶಕ್ತಿಯಾಗುವುದನ್ನು ಜೀವಾಕ್ಷರವಾಗುವುದನ್ನು ಕಾಣುತ್ತೇವೆ.

ಗಾಂಧೀ, ವಿನೋಬಾ, ರಮಣಮಹರ್ಷಿ, ಪರಮಹಂಸ, ಜೆ.ಕೆ. ಮುಂತಾದವರಿಂದ ಪ್ರಭಾವಿತರಾಗಿದ್ದ ಕೃಷ್ಣಶಾಸ್ತ್ರಿಗಳು ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲೂಕಿನ ಹಳ್ಳಿಯೊಂದರಲ್ಲಿ ತಮ್ಮಷ್ಟಕ್ಕೆ ತಾವೇ ಸಮಾಜಸೇವೆ ಮಾಡಿಕೊಂಡಿದ್ದರು.

ಯೇಗ್ದಾಗೆಲ್ಲಾ ಐತೆ(ಶ್ರೀ ಮುಕುಂದೂರು ಸ್ವಾಮಿಗಳನ್ನು ಕುರಿತ ನೆನಪು), ತುಂಬಿ (ಕವನ ಸಂಕಲನ), ಹಳ್ಳಿಚಿತ್ರ, ಹಳ್ಳಿಮೇಷ್ಟ್ರು, ಪಾಶುಪತಾಸ್ತ್ರ(ನಾಟಕಗಳು), ಸಾಹಿತಿಗಳ ಸ್ಮೃತಿ , ಮರೆಯಲಾದೀತೆ, ಎಲೆಯಮರೆಯ ಅಲರು (ನೆನಪುಗಳು), ಇವು ಕೃಷ್ಣಶಾಸ್ತ್ರಿಗಳ ಕೆಲವು ಪ್ರಕಟಿತ ಕೃತಿಗಳು.

ಸ್ವಾತಂತ್ರಪೂರ್ವ ಕಾಲದ ಎಲ್ಲಾ ಆದರ್ಶಗಳನ್ನು ಮೈಗೂಡಿಸಿಕೊಂಡು ಸಾರ್ಥಕ ಜೀವನ ನಡೆಸಿದ ಕೃಷ್ಣಶಾಸ್ತ್ರೀಗಳು ನಿಸ್ಸಂದೇಹವಾಗಿಯೂ ನಮ್ಮ ನಡುವಿದ್ದ ಅಪರೂಪದ ವ್ಯಕ್ತಿ.

ರಾಜ್ಯ ಮತ್ತು ಕೇಂದ್ರ ಸರ್ಕಾರದ ಶ್ರೇಷ್ಠ ಶಿಕ್ಷಕ ಪ್ರಶಸ್ತಿ. ಕೇಂದ್ರ ಸಂಗೀತ ಮತ್ತು ನಾಟಕ ಅಕಾಡೆಮಿ ಬಹುಮಾನ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕುವೆಂಪು ವಿವಿಯ ಗೌರವ ಡಾಕ್ಟರೇಟ್ ಸೇರಿದಂತೆ ಹಲವು ಗೌರವಗಳಿಗೆ ಪಾತ್ರರಾಗಿದ್ದರು.

## 1.3 ನೇಕಾರರ ಸಾಂಸ್ಕೃತಿಕ ಹಿನ್ನೆಲೆ

**–ಕೆ.ಜಿ. ನಾಗರಾಜಪ್ಪ**

ನೇಕಾರಿಕೆ ಅತ್ಯಂತ ಪ್ರಾಚೀನವೃತ್ತಿ. ಅದು ಇತಿಹಾಸ ಪೂರ್ವದಿಂದ ನಾಗರಿಕತೆ ಮತ್ತು ಸಂಸ್ಕೃತಿಯೊಂದಿಗೆ ತಳಕು ಹಾಕಿಕೊಂಡು, ಸಾಮಾಜಿಕ ಜೀವನಕ್ಕೆ ಭದ್ರತೆ ಒದಗಿಸಿದೆ. ನೇಯ್ಗೆ ಪ್ರಕ್ರಿಯೆ ಸೃಷ್ಟಿಕ್ರಿಯೆಯ ಪ್ರತಿಮೆಯಾಗಿ ಬಳಕೆಯಾಗಿದೆ. ದೇವರು ಆಕಾಶ ಮತ್ತು ಭೂಮಿಯನ್ನು ಮಗ್ಗ ಮಾಡಿ, ಸೂರ್ಯ –ಚಂದ್ರರನ್ನು ಹಾಸು–ಹೊಕ್ಕನ್ನಾಗಿ ಸೃಷ್ಟಿಯನ್ನು ನೇಯ್ದಿದ್ದಾನೆ ಎಂಬ ನಂಬಿಕೆ ಇದೆ. ಕವಿಗಳು ಸಹ ನೇಕಾರಿಕೆ ವಿವಿಧ ಕ್ರಿಯೆಗಳನ್ನು ಪ್ರತಿಮೆಗಳಾಗಿ, ರೂಪಕಗಳಾಗಿ ಬಳಸಿರುವುದು ಕಂಡುಬರುತ್ತದೆ. ಸ್ಥಿತ್ಯಂತರದ ಚಾರಿತ್ರಿಕ ಘಟ್ಟಗಳಲ್ಲಿ ನೇಕಾರರ ಬದುಕು ಏರಿಳಿತಗಳನ್ನು ಕಂಡಿದೆ. ಕೃಷಿ ಮತ್ತು ನೇಕಾ–ರಿಕೆ ಮಾನವನ ಅವಶ್ಯಕವಾದ ಮೂಲ ವೃತ್ತಿಗಳು. ನೇಕಾರಿಕೆ ಕೃಷಿಯನ್ನೇ ಅವಲಂಬಿಸಿದೆ. ದೇಶ ಮತ್ತು ಭಾಷೆಗಳಿಗನುಗುಣವಾಗಿ ನೇಕಾರರ ಸಂಸ್ಕೃತಿ, ಬಹುಸಂಸ್ಕೃತಿಯ ಸ್ವರೂಪ ಪಡೆದಿದ್ದರೂ, ವೃತ್ತಿಗೇ ಮೀಸಲಾದ ಕೆಲವು ಸಾಂಸ್ಕೃತಿಕ ಲಕ್ಷಣಗಳು. ನೇಕಾರರಲ್ಲಿನ ಏಕಸ್ವರೂಪದ ಮೂಲ ಸಂಸ್ಕೃತಿಯನ್ನು ಇಂದಿಗೂ, ಅದರ ಆಚಾರ–ವಿಚಾರಗಳಲ್ಲಿ ಗುರುತಿಸಬಹುದು. ಭಾರತದ ಅಸಲಿ ಸಂಸ್ಕೃತಿಯಲ್ಲಿ, ನೇಕಾರರದ್ದೂ ಒಂದು ಪಾಲಿದೆ. ಅಸಂಘಟಿತವಾದ ನೇಕಾರ ಜನಾಂಗ ಏಕಕಾಲದಲ್ಲಿ ಸಾಂಸ್ಕೃತಿಕ ಸಂಪತ್ತು ಮತ್ತು ಆರ್ಥಿಕ ಬಡತನ ಸಿಕ್ಕಿ ಅಸಡ್ಡೆಗೆ ಒಳಗಾಗಿ ಕುಗ್ಗಿ ಹೋಗಿದ್ದಾರೆ. ಅನ್ಯರ ಮಾನರಕ್ಷಣೆ ಹೊತ್ತ ನೇಕಾರ ಜನಾಂಗ ತಾವು ಮಾತ್ರ ಅಪಮಾನದಿಂದ ಬದುಕುವ ದುಃಸ್ಥಿತಿಗೆ ಸಿಕ್ಕಿರುವುದು ದುರಂತವೇ ಸರಿ.

ಪ್ರಾಚ್ಯ ಸಂಶೋಧನೆಗಳು, ಕಾವ್ಯಗಳು, ಶಾಸನಗಳು, ಶಿಲ್ಪ, ಚಿತ್ರಗಳು, ಜಾನಪದ, ಶಾಸ್ತ್ರ ಗ್ರಂಥಗಳು, ಪ್ರವಾಸಿಗರ ದಾಖಲೆಗಳು ಮತ್ತಿತರ ಮೂಲಗಳಿಂದ ನೇಕಾರ ಜನಾಂಗದ ಸಂಸ್ಕೃತಿ ಮತ್ತು ವೃತ್ತಿಯ ಇತಿ ಹಾಸವನ್ನು ರಚಿಸಬಹುದು. ಹತ್ತಿ ಮತ್ತು ರೇಷ್ಮೆಯ ಗುಣಮಟ್ಟದ ಜವಳಿ, ಸ್ಥಳೀಯ ಬೇಡಿಕೆಗಳನ್ನು ಪೂರೈಸಿ, ಹೊರದೇಶಗಳಿಗೆ ರಫ್ತಾಗುತ್ತಿದ್ದ ವಿಷಯ ದಾಖಲೆಗಳಿಂದ ತಿಳಿದುಬರುತ್ತದೆ. ದಕ್ಷಿಣದಲ್ಲಿ ಪ್ರಾಚೀನ ಕಾಲದಿಂದಲೂ ತಮಿಳುನಾಡು, ಕರ್ನಾಟಕ ಮತ್ತು ಆಂಧ್ರ ಪ್ರಾಂತ್ಯಗಳು ಜವಳಿ ಉತ್ಪಾದನೆಯ ಮುಖ್ಯ ಕೇಂದ್ರಗಳು. ಸಂಗಂ ಕಾಲದ ಶಿಲಪ್ಪದಿಕಾರಂ, ಮಣಿಮೇಗಲೆ ಮುಂತಾದ

ಪ್ರಾಚೀನ ಕಾವ್ಯಗಳು ನೇಕಾರ ವೃತ್ತಿಯ ಬದುಕನ್ನು ಕಟ್ಟಿಕೊಡುತ್ತವೆ. ಅರಿಕ ಮೇಡು ಸಂಶೋಧನೆ ಬಟ್ಟೆಯ ಉತ್ಪಾದನೆಯ ಮೇಲೆ ಬೆಳಕು ಚೆಲ್ಲುತ್ತದೆ. ಈ ವಿವರಗಳಿಂದ ನೇಕಾರರ ಬೀದಿಗಳಿದ್ದು, ಅರಿವೆ ವಣಿಗರ ಬೀದಿಗಳಲ್ಲಿ ಹತ್ತಿ, ರೇಷ್ಮೆ ನೂಲು ಮತ್ತು ಬಟ್ಟೆಯನ್ನು ಮಾರುತ್ತಿದ್ದ ವಿಷಯ ತಿಳಿದುಬರುತ್ತದೆ. ಅರಮನೆ, ದೇವಾಲಯ ಮತ್ತು ವಿದೇಶಗಳು ನೇಕಾರರ ಪ್ರಮುಖ ಗ್ರಾಹಕರು ಮತ್ತು ಗುಣಮಟ್ಟದ ಹೆಚ್ಚು ಬೆಲೆಬಾಳುವ ಬಟ್ಟೆಗಳ ಗಿರಾಕಿಗಳು. ಶಿಲ್ಪ ಮತ್ತು ಚಿತ್ರಗಳಿಂದ ಸಾಮಾನ್ಯರು, ಸೈನಿಕರು, ಕಾರ್ಮಿಕರು, ಅರಮನೆ ಕೆಲಸಗಾರರು, ಸಂಗೀತಗಾರರು, ನೃತ್ಯಕಾರ್ತಿಯರು, ರಾಜ–ರಾಣಿಯರು, ಶ್ರೀಮಂತರ ಉಡಿಗೆ ತೊಡಿಗೆಗಳು ನೇಕಾರರ ಕರಕುಶಲತೆಗೆ ಸಾಕ್ಷಿಯಾಗಿವೆ. ಬಟ್ಟೆಗಳ ಮೇಲೆ ನೇಯುತ್ತಿದ್ದ ರಾಮಾಯಣ, ಮಹಾಭಾರತ, ಭಾಗವತ, ಮರಗಿಡಗಳು, ಪ್ರಾಣಿಪಕ್ಷಿಗಳ ಚಿತ್ರಣಗಳು ನೇಕಾರರ ಪ್ರತಿಭೆಗೆ ಧ್ಯೋತಕವಾಗಿವೆ. ಹಾವಿನಂತೆ ನವುರು ಮತ್ತು ಹೊಗೆಯಂತೆ ತೆಳುವಾದ ಬಟ್ಟೆಗಳನ್ನು ನೇಯುತ್ತಿದ್ದರು. ಮಧ್ಯಯುಗ ನೇಕಾರರು ಕಂಡ ಸುವರ್ಣಯುಗ.

ಚೋಳರು ಮತ್ತು ವಿಜಯನಗರದ ಅರಸರ ಕಾಲದಲ್ಲಿ ಪ್ರಚೋದನೆ ಮತ್ತು ಪ್ರೋತ್ಸಾಹ ದೊರಕಿತು. ಮಧ್ಯಯುಗದಲ್ಲಿ ಅರಮನೆ ಮತ್ತು ದೇವಾಲಯಗಳು ನೇಕಾರ ವೃತ್ತಿಗೆ ಬೆನ್ನೆಲುಬಾಗಿ ನಿಂತವು. ನೇಕಾರಿಕೆ ಉತ್ಪಾದನೆ ರಾಜ್ಯಗಳ ಪ್ರಮುಖ ಸಂಪನ್ಮೂಲವೂ ಆಗಿದ್ದಿತು. ನೇಕಾರರು ಆರ್ಥಿಕವಾಗಿ ಗರಿಗಟ್ಟಿ ಕೊಂಡರು. ಅದು ಅವರ ಸಾಮಾಜಿಕ ಬದಲಾವಣೆಗೆ ದಾರಿಯಾಯಿತು. ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ನೇಕಾರ ಜನಾಂಗದ ಊರ್ಧ್ವ ಮುಖ ಸಾಮಾಜಿಕ ಬದಲಾವಣೆಗೆ ಅವಕಾಶ ಮಾಡಿಕೊಟ್ಟಿತು.

ನೇಕಾರರು ಆರ್ಥಿಕವಾಗಿ ಗರಿಗಟ್ಟಿಕೊಂಡು ಭೂಮಿಯನ್ನು ಕೊಂಡು ಭೂ ಒಡೆಯರೂ ಆದರು. ಮನೆಯಲ್ಲಿ ಮಗ್ಗಗಳಲ್ಲಿ ಕೂತು ಲಾಳಿ ಹಿಡಿದವರು, ಹೊಲಗಳಲ್ಲಿ ನೇಗಿಲು ಹಿಡಿದರು. ಇದರಿಂದ ಕೆಳವರ್ಗಗಳಲ್ಲಿ ಮಧ್ಯಮವರ್ಗದವರಾದರು. ಅಷ್ಟೇ ಅಲ್ಲ ಸೈನ್ಯದಲ್ಲಿ ಸೇರಿ ಯುದ್ಧ ಮಾಡಿ ಸೈನಿಕರು ಆದರು. ಶಾಂತಿಕಾಲದಲ್ಲಿ ನೇಯ್ಗೆ, ಯುದ್ಧಕಾಲದಲ್ಲಿ ಸೈನಿಕ ವೃತ್ತಿಯಲ್ಲಿಯೂ ತೊಡಗಿದರು. ತಮಿಳು ನಾಡಿನ ನೇಕಾರರಾದ ಸಾಲೀಯರು ಮತ್ತು ಕೈಕ್ಕೊಳರ್ ನಂಬಿಕಾರ್ಹ ಚೊಳರ (ಚೋಳೀಯ) ಸೈನಿಕರು, 'ಚೋಳೀಯ ಸಾಲೀಯರು' ಎಂದೇ ಹೆಸರಾಗಿದ್ದರು. ಕೈಕ್ಕೊಳರು ಬಲಿಷ್ಠರಾದ ಮೇಲೆ ಸಾಲೀಯರ ಪ್ರಾಬಲ್ಯ ಕುಗ್ಗಿತು. ಕೈಕ್ಕೊಳರು ರಾಜರ ಅಂಗರಕ್ಷಕರು. ಹೀಗಾಗಿ ನೇಕಾರರ ಅನೇಕ ಒಳಪಂಗಡಗಳಲ್ಲಿ ನೇಕಾರ ವೃತ್ತಿ ಮತ್ತು ಸೈನಿಕ ವೃತ್ತಿ

ಸಾಮಾನ್ಯವಾಗಿತ್ತು. ನೇಕಾರರು ಪುರಾಣಗಳ ವೀರರ ವಂಶಸ್ಥರ ಮೂಲವನ್ನೇ ಗುರುತಿಸಿಕೊಳ್ಳುತ್ತಾರೆ. ಕೈಕ್ಕೊಳರು ದೇವತೆಗಳ ಸೇನಾಧಿಪತಿ ಕಾರ್ತಿಕೇಯನ ವಂಶಸ್ಥರೆಂದೂ, ತೊಗಟವೀರರು ಏಕಾಂಗವೀರರು, ದೇವಾಂಗದವರು ಚೌಡೇಶ್ವರಿಯ ಸೈನ್ಯದವರು. ಹೀಗೆ ನೇಕಾರರ ಸಮುದಾಯಗಳು ವೀರ ಮೂಲವನ್ನು ಗುರುತಿಸಿಕೊಳ್ಳುತ್ತಾರೆ. ವೀರಗಾರಿಕೆ ನೇಕಾರರ ಒಂದು ಸಂಸ್ಕೃತಿಯೂ ಹೌದು. ಇಂದಿಗೂ ದೇವತೆಗಳ ಉತ್ಸವದಲ್ಲಿ ವೀರ ಕುಮಾರರು ಕತ್ತಿ ಹಿಡಿದು ವೀರಗಾರಿಕೆ ಸೇವೆ ಸಲ್ಲಿಸುವುದು. ಅದರಲ್ಲಿಯೂ ಗಂಡುಗತ್ತರಿ ಹಾಕಿ ಸೇವೆ ಸಲ್ಲಿಸುವುದಂತೂ, ನೇಕಾರರ ವೀರತ್ವದ ಆರ್ಷೇಯ ಸಂಸ್ಕೃತಿಯೇಸರಿ.

ಆರ್ಥಿಕವಾಗಿ ಬಲಗೊಂಡ ನೇಕಾರರಿಗೆ ದೇವಾಲಯಗಳಲ್ಲಿ ಸ್ಥಾನಮಾನ ದೊರಕುವಂತಾಯಿತು. ನೇಕಾರರು ಧರ್ಮದರ್ಶಿಗಳಾದರು. ಲೆಕ್ಕ ಪತ್ರಗಳ ದಾಖಲೆಗಳನ್ನಿಡುವ ಲೆಕ್ಕಿಗರಾದರು, ದೇವಾಲಯಗಳಲ್ಲಿ ಆಡಳಿತಗಾರರೂ ಆದರು. ಭೂದಾನ, ಹಣದಾನ ಮತ್ತು ಇತರ ದೇವಾಲಯದ ಸೇವೆಗಳಿಂದ, ದೇವಾಲಯದ ಗೌರವದ ಅನುಶ್ರೇಣಿಯಲ್ಲಿ ನೇಕಾರರಿಗೂ ಸ್ಥಾನ ದೊರೆಯಿತು. ಇದರಿಂದ ಅವರು ಕೆಲವು ಸೌಲಭ್ಯಗಳನ್ನು ಪಡೆದು, ದೇವಾಲಯದ ಕಂಬಗಳಿಗೆ 'ಧ್ವಜ ಪತ್ರ' ಮತ್ತು ಶಿಖರಗಳಿಗೆ ಪಾವಡ ನೇಯ್ದು ಒದಗಿಸುವ ಹಕ್ಕುದಾರರಾದರು. ಇದೂ ಅಲ್ಲದೆ ದೇವಾಲಯದ ದೇವ–ದೇವತೆಗಳಿಗೆ ಬೆಲೆ ಬಾಳುವ ವೈವಿಧ್ಯದ ಉಡಿಗೆ ತೊಡಿಗೆಗಳನ್ನು ನೇಯ್ದು ಒದಗಿಸಬೇಕಾಗಿತ್ತು. ಇದರಿಂದಾಗಿ ನೇಕಾರ ರಿಗೆ ದೇವಾಲಯದ ವಲಯದಲ್ಲಿ ವಾಸಿಸುವ ಅವಕಾಶವೂ ಒದಗಿತು. ಮಗ್ಗ ತೆರಿಗೆಗಳಲ್ಲಿ ವಿನಾಯತಿ ದೊರೆಯಿತು. ರಾಜ್ಯಗಳಲ್ಲಿ ನೆಲೆನಿಲ್ಲಲು ನೇಕಾರ ಕುಟುಂಬಗಳಿಗೆ ರಾಜರು ಸಕಲ ಸೌಲಭ್ಯಗಳನ್ನು ಕಲ್ಪಿಸುತ್ತಿದ್ದರು. ಸಾಮಾನ್ಯವಾಗಿ ನೇಕಾರರು ಬಂದರು ಮತ್ತು ನಗರಗಳಲ್ಲಿ ನೆಲೆ ನಿಲ್ಲುತ್ತಿದ್ದರು. ಬರಗಾಲ ಅಥವಾ ಹೆಚ್ಚು ಲಾಭ ಗಳಿಸುವ ಸಂದರ್ಭಗಳಲ್ಲಿ ನೇಕಾರರು ಸಾಮಾನ್ಯವಾಗಿ ವಲಸೆ ಹೋಗುತ್ತಿದ್ದರು. ಸ್ಥಳೀಯರ, ಭಾಷೆ, ಸಂಸ್ಕೃತಿ ಆಚಾರ ವಿಚಾರಗಳಿಗೆ ಹೊಂದಿಕೊಳ್ಳುವುದು ಅನಿವಾರ್ಯವಾಗಿ, ನೇಕಾರರಲ್ಲಿ ಅನೇಕ ಒಳಪಂಗಡಗಳು ಹುಟ್ಟಿಕೊಂಡವು. ಎಲ್ಲಾ ಕಾಲದಲ್ಲಿಯೂ, ಎಲ್ಲಾ ಪ್ರಾಂತ್ಯಗಳಲ್ಲಿಯೂ ಸೌಲಭ್ಯಗಳು ಸಿಕ್ಕುತ್ತಿರಲಿಲ್ಲ. ಪಾಳೆಯಗಾರರಿಂದ ಅಪರಾಧಗಳಿಗೆ ಕಠಿಣ ಶಿಕ್ಷೆಯೂ ಆಗುತ್ತಿತ್ತು. ಸಾಮಾನ್ಯವಾಗಿ ನೇಕಾರರಲ್ಲಿ ಕೊಲೆ, ಸುಲಿಗೆ ಮುಂತಾದ ಸಮಾಜ ದ್ರೋಹಿ ಅಪರಾಧಗಳು ಇಲ್ಲದ ಸಂಸ್ಕೃತಿಯ ಸಮಾಜ, ದುಡಿದು ತಿನ್ನುವ ಆತ್ಮವಿಶ್ವಾಸದ ಶ್ರಮ ಸಂಸ್ಕೃತಿ ಅವರದ್ದು.

ನೇಕಾರ ಸಂಘಗಳು(ghild), ದೇವಾಲಯಕ್ಕೆ ಕೊಡುವ ದಾನ ಮತ್ತು

ಹಬ್ಬ, ಜಾತ್ರೆ ಮತ್ತಿತರ ವಿಶೇಷ ಸಂದರ್ಭದಲ್ಲಿನ ನೇಕಾರರ ಸೇವೆಗಳು, ಕುಟುಂಬ ಹಾಗೂ ಸಾಮೂಹಿಕವಾಗಿ ಹೊಂದಿದ್ದ ಭೂ ಒಡೆತನ ಮತ್ತು ಹೊಂದಿದ್ದ ಸೌಲಭ್ಯಗಳು ಸಮಾಜದಲ್ಲಿ ಅವರ ಮುಖ್ಯ ಸ್ಥಾನಮಾನವನ್ನು ನಿರ್ಣಯಿಸುತ್ತಿದ್ದವು. ನೇಕಾರ ವೃತ್ತಿ ಕೇವಲ ದುಡಿಮೆಯ ವೃತ್ತಿಯಾಗದೆ, ಕರಕುಶಲತೆಯ ಸೌಂದರ್ಯಾರಾಧಕ ವೃತ್ತಿಯೂ ಆಗಿದ್ದು, ಗ್ರಾಮೀಣ ನಿತ್ಯೋಪಯೋಗಿ ವೃತ್ತಿಗಳಿಗಿಂತ ಭಿನ್ನವಾಗಿದ್ದು, ಇತರ ಆಯಗಾರರಿ ಗಿಂತ ಭಿನ್ನವಾಗಿತ್ತು. ನೇಕಾರರ ಮನೆಗಳಲ್ಲಿ ಇಂದಿಗೂ ಕಾಮಶಾಸ್ತ್ರ, ಜ್ಯೋತಿಷ್ಯಶಾಸ್ತ್ರ, ಔಷಧಿಗ್ರಂಥ ಗಳು, ಪುರಾಣಗಳು ಮತ್ತಿತರ ತಾಳೆಗರಿಯ ಹಸ್ತ ಪ್ರತಿಗಳು ದೊರಕುತ್ತಿರುವುದೇ ನೇಕಾರರ ಮಧ್ಯಯುಗದ ವಿವಿಧ ಅಭಿರುಚಿಗೆ ಸಾಕ್ಷಿಯಾಗಿದ್ದು, ನೇಕಾರರದ್ದು ವೃತ್ತಿ ಜೀವನದ ಜೊತೆಗೆ, ಅವರ ಬದುಕು ಬಹುಮುಖಿಯಾದದ್ದು ಎಂಬುದು ಸ್ಪಷ್ಟವಾಗುತ್ತದೆ. ನೇಕಾರರಿಗೆ ಧರ್ಮ ಬದುಕಿಗಿಂತ (ವೃತ್ತಿ) ಭಿನ್ನವಾಗಿರದೆ, ಅವರ ವೃತ್ತಿ ಧರ್ಮವೇ ಧರ್ಮಸಾಧನೆಯೂ ಆಗಿತ್ತು. ಹೀಗಾಗಿ ನೇಕಾರರಲ್ಲಿ ಭುಕ್ತಿ ಮತ್ತು ಮುಕ್ತಿ ಸಾಮರಸ್ಯಗೊಂಡು, ಲೌಕಿಕ ಜೀವನವನ್ನು ನಿರಾಕರಿಸದೆ, ಭ್ರಮೆಯೆಂದು ಭಾವಿಸದೆ, ಬದುಕಿನಲ್ಲಿ ಸಹಜತೆ ಯನ್ನು ಒಪ್ಪಿಕೊಂಡ ಪರ್ಯಾಯ ಸಂಸ್ಕೃತಿಯ ಸಾಧಕ ಜೀವನಕ್ಕೆ ನೇಕಾರರ ಕೊಡುಗೆ ಅಪಾರವಾದು. ನೇಕಾರರ ಮೂಲ ಸಂಸ್ಕೃತಿಯನ್ನು ಗುರುತಿಸುವುದು ಅಷ್ಟು ಕಷ್ಟವಲ್ಲ. ನೇಕಾರರ ಮೂಲ ನೆಲ ಸಂಸ್ಕೃತಿಯ ಅಸಲಿತನ ಮಾತೃ ಸಂಸ್ಕೃತಿಯಲ್ಲಿ ಬೇರುಗಳಿರುವುದು ಕಂಡುಬರುತ್ತದೆ. ನೇಕಾರರ ಒಳಪಂಗಡಗಳಲ್ಲಿಯೇ ಇಂದಿಗೂ ಮಾತೃಸಂಸ್ಕೃತಿಯ ಆಚರಣೆಗಳು ರೂಢಿಯಲ್ಲಿವೆ. ಆದರೆ ಅವು ಪಿತೃಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿ, ಆಸ್ತಿ ಮತ್ತು ಸಂಪತ್ತಿನ ಅಂಶಗಳಲ್ಲಿ ಪಿತೃ ಸಂಸ್ಕೃತಿಯ ಅಂಶಗಳನ್ನೇ ಸ್ವಾರ್ಥದಿಂದ ಮಾತೃ ಸಂಸ್ಕೃತಿಯನ್ನೇ ಅಳವಡಿಸಿ ಕೊಂಡಿದ್ದಾರೆ. ಸಾಮಾನ್ಯವಾಗಿ ನೇಕಾರರ ಎಲ್ಲಾ ಒಳಪಂಗಡಗಳಿಗೂ ಇಂದಿಗೂ ಹೆಣ್ಣು ದೇವತೆಯೇ ಕುಲದೇವತೆ. ಆದರೆ ಪಿತೃ ಸಂಸ್ಕೃತಿಯ ಅನುಕರಣೆಯಿಂದ ಸಾಮಾಜಿಕ ಜೀವನದಲ್ಲಿ, ಹೆಣ್ಣನ್ನು ಕೀಳಾಗಿ ಕಂಡರೂ, ದೇವರ ದಾಸಿಮಯ್ಯ ಸ್ತ್ರೀಯರ ಸ್ಥಾನಮಾನವನ್ನು ಎತ್ತಿ ಹಿಡಿದಿರುವುದು, ಅವರ ವಚನಗಳಲ್ಲಿ ಕಂಡು ಬರುತ್ತದೆ. ನೇಕಾರರ ಮಂಗಳ–ಅಮಂಗಳ ಧಾರ್ಮಿಕ ವಿಧಿಗಳಲ್ಲಿ 'ಕಳಸಪೂಜೆಯೋ' ಮುಂದಾಗಿರುವುದು ಹೆಣ್ಣಿಗೆ ಕೊಟ್ಟಿರುವ ಪ್ರಧಾನ್ಯತೆಗೆ ಸಾಕ್ಷಿಯಾಗಿದೆ. ಕಳಸ ಹೆಣ್ಣಿನ ಗರ್ಭದ ಸಂಕೇತ ಮತ್ತು ಫಲವಂತಿಕೆಯನ್ನು ಸೂಚಿಸುತ್ತದೆ. ನೇಕಾರರಿಗೆ ಮಾರ್ಕಡೇಯ ಪುರಾಣವೇ ಮೂಲವಾದುದು. ನೇಕಾರರು ಶಿವ ಸಂಸ್ಕೃತಿಯ ಆರಾಧಕರು. ಹೀಗಾಗಿ ಶಿವ–ಶಕ್ತಿಯ ಸಂಸ್ಕೃತಿ ನೇಕಾರರಿಗೆ ರಕ್ತಗತವಾಗಿದೆ. ಅತ್ಯಂತ

ಪ್ರಾಚೀನ ಕಾಲದಲ್ಲಿದ್ದ ಶಿವ–ಶಕ್ತಿಯ ಸಂಘರ್ಷ ಕ್ರಮೇಣ ಸಾಮರಸ್ಯಗೊಂಡು 'ಶಕ್ತಿ ಹೀನನಾದ ಶಿವ ಶವ' ಎಂದು ರೂಢಿಯಾಯಿತು. ಶಿವ ಸಂಸ್ಕೃತಿ ಏಕ ಸಂಸ್ಕೃತಿಯಲ್ಲ, ಬಹುಸಂಸ್ಕೃತಿ, ನೇಕಾರರಲ್ಲಿ ಒಳಪಂಗಡಗಳಲ್ಲಿ ಶಿವಸಂಸ್ಕೃತಿಯ ಬಹುಸಂಸ್ಕೃತಿ ಕಂಡುಬರುತ್ತದೆ. ಅದು ಸಂಘರ್ಷದ್ದಲ್ಲ, ಸಾಮರಸ್ಯದ್ದು.

ನೇಕಾರರ ಊರ್ಧ್ವಮುಖ ಆರ್ಥಿಕ ಬದಲಾವಣೆ ಅನೇಕ ಸ್ವರೂಪವನ್ನು ಹೊಂದಿತ್ತು. ಮುಸ್ಲಿಮರ ಕಾಲದಲ್ಲಿ ನೇಕಾರರ ಉತ್ಪಾದನೆಗೆ ಬೇಡಿಕೆ ಹೆಚ್ಚಿದರೂ. ರಾಜಕೀಯ ಅಸ್ಥಿರದಿಂದ, ಅದು ಬಹಕಾಲ ಉಳಿಯಲಿಲ್ಲ. ಬ್ರಿಟಿಷರ ಕಾಲದಲ್ಲಂತೂ ನೇಕಾರರ ಬದುಕು ದುರಂತವಾಯಿತು. ಬ್ರಿಟಿಷರು ಬಂದದ್ದು ಮೂಲತಃ. ವ್ಯಾಪಾರಗಾರರಾಗಿ, ಅದರಲ್ಲಿ ಕಂಪನಿಗಳಂತೂ ನೇಕಾರ ವೃತ್ತಿಯನ್ನು ಸಂಪೂರ್ಣವಾಗಿ ತುಳಿದವು. ನೇಕಾರರು ಮುಂಗಡ ಪಡೆದು ಕಂಪನಿಗೆ ದುಡಿಯುವ ಕೂಲಿ ಕಾರರಾದರು, ಯಜಮಾನ ನೇಕಾರರು ಕಂಪನಿಗಳ ದಳ್ಳಾಳಿಗಳಾದರು. ಕಾರ್ಖಾನೆಗಳ ಜವಳಿಯ ಉತ್ಪಾದನೆ, ನೇಕಾರರ ಕಲಾತ್ಮಕ ಕಸುಬಿನ ಪ್ರತಿಭೆಯನ್ನೇ ನಾಶ ಮಾಡಿದವು. ನೇಕಾರ ಕಸುಬು ನೇಕಾರರ ಕೈಯಿಂದ ಜಾರಿತು. ಮ್ಯಾಂಚೆಸ್ಟರ್ ಮತ್ತು ಲಾಂಕ್ ಪೈರ್ ಗಳಿಂದ, ಹಡಗುಗಳು ಹೊತ್ತು ತಂದ ಜವಳಿ ಬಂದು ಭಾರತದ ಮಾರ್ಕೆಟ್ಟುಗಳನ್ನು ತುಂಬಿದವು. ನೇಕಾರರಿಗೆ ಸೌಲಭ್ಯಗಳು ಸಂಪೂರ್ಣವಾಗಿ ನಿಂತು ಹೋದವು. ಬ್ರಿಟಿಷರ ಕಂಪನಿಗಳೇ ಏಕೈಕ ಜವಳಿ ಉತ್ಪಾದನೆಯ ಸರ್ವಾಧಿಕಾರಿಗಳಾದವು. ನೇಕಾರರಿಗೆ ಕಚ್ಚಾ ವಸ್ತುವಾಗಲಿ, ಕೂಲಿಯಾಗಲಿ, ಸೂಕ್ತ ಮಾರ್ಕೆಟ್ಟಾಗಲಿ ಸಿಗದ ದಿವಾಳಿಯಾದರು. ಲಂಡನ್ನಿನ ಕೈಗಾರಿಕಾ ಕ್ರಾಂತಿ, ಭಾರತದ ನೇಕಾರ ರಿಗೆ ಶಾಪವಾಯಿತು. ನೇಕಾರರಿಗೆ ಬಡತನ ಮತ್ತು ನಿರುದ್ಯೋಗ ಅಂದಿನಿಂದ ಶಾಶ್ವತವಾಯಿತು. ಯಂತ್ರಚಾಲಿತ ಮಗ್ಗಗಳು, ಮತ್ತು ಖಾದಿ ಚಳುವಳಿಗಳಂತೂ, ನೇಕಾರರ ಕೈ ಮಗ್ಗಗಳು ನೆಲ ಕಚ್ಚುವಂತಾಯಿತು. ಸರ್ಕಾರದ ಜವಳಿಯ ಹೊಸ ಹೊಸ ಯೋಜನೆಗಳು ಮತ್ತು ರೀತಿ ನೀತಿಯ ಸಿದ್ಧಾಂತಗಳಿಂದ, ಈಗಾಗಲೇ ನೆಲ ಕಚ್ಚಿದ್ದ ಕೈ ಮಗ್ಗಳ ಜೊತೆಗೆ, ಯಂತ್ರಚಾಲಿತ ಮಗ್ಗಗಳು ತುಕ್ಕು ಹಿಡಿದು, ಹಳೆಯ ಕಬ್ಬಿಣದ ಅಂಗಡಿಗಳಿಗೆ ಬಿಕರಿಯಾದವು. ಚೋಳ ಮತ್ತು ವಿಜಯನಗರದ ಕಾಲದಲ್ಲಿ ನೇಕಾರರು ಕಂಡ ಸುವರ್ಣಯುಗ ಮಾತ್ರ ಒಂದು ಸವಿ ನೆನಪು. ಹತ್ತಿ ಮತ್ತು ರೇಷ್ಮೆಯಂಥ ನವುರಾದ ಎಳೆಗಳೊಂದಿಗೆ ಕೆಲಸ ಮಾಡುತ್ತಿದ್ದ ನೇಕಾರರ ಮೃದುವಾದ ಕೈಗಳು, ಇಂದು ಕಬ್ಬಿಣದ ಅದು ರಿನ ಗಣಿಗಳಲ್ಲಿ ರಸ್ತೆಯ ಟಾರು ಹಾಕುವ ಕೆಲಸಗಳಲ್ಲಿ ಒರಟಾಗಿ ಬಿರುಕು ಬಿಡುತ್ತಿವೆ. ನೇಕಾರರ ರಕ್ತ ಹೀಗೆ ಭಾರತದ ಬದುಕನ್ನು ಬ್ಲೀಚ್ ಮಾಡುತ್ತಿದೆ. ಹೀಗೆ ಧಾರ್ಮಿಕ, ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯಕ್ಕೆ ಅಪೂರ್ವ

ಕಾಣಿಕೆ ಕೊಟ್ಟ ನೇಕಾರರ ಬದುಕು ಕತ್ತಲುಗಟ್ಟಿತು. ನೇಕಾರವರ್ಗ ಅಂದು ಜವಳಿ ಉತ್ಪಾದಕರಾಗಿ, ಸೈನಿಕರಾಗಿ, ಭಕ್ತಿ ಪಂಥದ ಪ್ರಚಾರಕ್ಕಾಗಿ ಬದುಕನ್ನು ಬಲಿ ಕೊಟ್ಟುಕೊಂಡು, ಇಂದು ಕೇವಲ ಮತ ಬ್ಯಾಂಕುಗಳಾಗಿ ಅನಾಥರಾಗಿರುವುದು ನೇಕಾರರ ದುರಂತ ಇತಿಹಾಸವೇ ಸರಿ.

ಕರ್ನಾಟಕದ ಶಾಸನಗಳು ನೇಕಾರ ವೃತ್ತಿ ಮತ್ತು ಬದುಕಿಗೆ ಸಂಬಂಧಿಸಿದಂತೆ ಕೆಲವು ಚಿತ್ರಗಳನ್ನು ಕಟ್ಟಿ ಕೊಡುತ್ತವೆ. ಅವು ಎಷ್ಟರ ಮಟ್ಟಿಗೆ ಇಡೀ ಜನಾಂಗದ ಸಂಸ್ಕೃತಿಯನ್ನು ಪ್ರತಿನಿಧಿಸುತ್ತವೆ ಎಂಬುದನ್ನು ಮತ್ತೊಮ್ಮೆ ವಿಶ್ಲೇಷಿಸಬೇಕಿದೆ ಮತ್ತು ಮರು ಮೌಲ್ಯಗೊಳ್ಳಬೇಕಿದೆ. ಕುತೂಹಲಕ್ಕೆ ಶಾಸನಗಳಲ್ಲಿ ಸೂಚಿತವಾಗಿರುವ ನೇಕಾರ ವೃತ್ತಿಗೆ ಸಂಬಂಧಿಸಿದ ಮಗ್ಗಗಳ ಬೆಳವಣಿಗೆ, ಬಣ್ಣಗಾರಿಕೆ ಮತ್ತು ನೇಕಾರಿಕೆಯ ಕೆಲವು ಕೇಂದ್ರಗಳನ್ನು ಪ್ರಸ್ತಾಪಿಸಲಾಗಿದೆ. ದಕ್ಷಿಣ ಭಾರತದಲ್ಲಿ ಹತ್ತಿ ಬೆಳೆಗೆ ನೆಲ ಸೂಕ್ತವಾಗಿ ಕಪ್ಪು ಮಣ್ಣಿನ ಪ್ರದೇಶಗಳಾದ ಬೆಳಗಾಂ, ಧಾರವಾಡ, ಬಿಜಾಪುರ, ರಾಯಚೂರು, ಗುಲ್ಬರ್ಗಗಳು, ಬಂದರುಗಳಿಗೆ ಹತ್ತಿರವಾಗಿವೆ. ಬಿಜಾಪುರದ ಮಾಣಿಕ್ಯವಳ್ಳಿ, ಬಾಗೇವಾಡಿ, ಬೆಳಗಾವಿಯ ಹೂಲಿ, ಧಾರವಾಡದ ರೋಣ, ಮುಲಗುಂದ, ಲಕ್ಷ್ಮೇಶ್ವರ, ರಾಯಚೂರಿನ ಚಿನ್ಮಲಿ, ಚಿತ್ರದುರ್ಗದ ಚಳ್ಳಕೆರೆ, ದೇವಸಮುದ್ರ, ಬಳ್ಳಾರಿಯ ಕುರವತ್ತಿ, ಹಾಸನದ ಕಣಕಟ್ಟೆ, ಹಳೆಬೀಡು, ಬೇಲೂರು, ಅರಸೀಕೆರೆ, ತುಮಕೂರಿನ ಕೊರಟಗೆರೆ, ಮಂಡ್ಯದ ಬೆಳ್ಳೂರು, ಮೈಸೂರಿನ ಸೋಮನಾಥಪುರ, ಕಡಲಗೆರೆ, ಶಾಸನೋಕ್ತವಾದ ಪ್ರಮುಖ ನೇಕಾರ ಕೇಂದ್ರಗಳಾಗಿದ್ದವು. ಶಿವಮೊಗ್ಗದ ಶಾಸನ ಬಟ್ಟೆಯ ಮುದ್ರಣ ಕಲೆಯ ಮತ್ತು ಬಣ್ಣ ಹಾಕುವ ಬಟ್ಟೆಯ ಕುಸುಂಟೆ, ನೀಲ, ಮಂಜಿಷ್ಟ ಬಣ್ಣಗಳ ವಿವರಗಳಿವೆ. ಬೇಲೂರಿನ ಒಂದು ಶಾಸನ ಇಪ್ಪತ್ತೇಳು ಸಂತೆಗಳ ವಿವರ ಕೊಡುತ್ತದೆ. ವೀರ ಬಲ್ಲಾಳನ ಕಾಲದ ಶಾಸನವೊಂದು ಮಗ್ಗಗಳ ತಂತ್ರಗಾರಿಕೆ ಯನ್ನು ವಿವರಿಸುತ್ತದೆ. ಲಂಬ ಮಗ್ಗಗಳು (Vertical Looms) ಅತ್ಯಂತ ಪ್ರಾಚೀನವಾದವು. ಅನಂತರ ಕುಣಿ ಮಗ್ಗಗಳು (Horizontal looms) ಸೆಟಲ್ ಮಗ್ಗಗಳು, ಝುಕಾರ್ಡ್ ಮಗ್ಗಗಳು ರೂಢಿಗೆ ಬಂದವು. ಬೀಜಾಪುರದ ಐಹೊಳೆ ಅತ್ಯಂತ ದೊಡ್ಡ ವ್ಯಾಪಾರ ಕೇಂದ್ರ. ಅಲ್ಲಿ ಅನೇಕ ಸಂಘಗಳ (Guilds) ವರ್ತಕ ಶ್ರೇಣಿಗಳು ಇದ್ದವು. ನೇಕಾರ ಸಂಘಗಳು (Guilds) ನೇಕಾರ ವೃತ್ತಿಯ ಹಿತವನ್ನು ರಕ್ಷಿಸುತ್ತಿದ್ದವು. ಸಂಘಗಳ ಸದಸ್ಯತ್ವ ವಂಶ ಪಾರಂಪರ್ಯವಾಗಿತ್ತು. ಕಸುಬಿನ ರಹಸ್ಯವನ್ನು ವಂಶಪಾರಂಪರ್ಯವಾಗಿ ರಕ್ಷಿಸಲಾಗುತ್ತಿತ್ತು. ಚೈನಾದಿಂದ ರೇಷ್ಮೆ ತಮಿಳುನಾಡಿಗೆ ಬರುತ್ತಿತ್ತು. ಚೈನಾದಿಂದ ಹೈದ್ರಾಬಾದ್ ಮೂಲಕ ತಮಿಳು ನಾಡಿಗೆ ಇದ್ದ ರಸ್ತೆಯನ್ನು 'ಸಿಲ್ಕ್ ರೂಟ್' ಎಂದೇ ಕರೆಯಲಾಗುತ್ತಿತ್ತು. ಉತ್ಪನ್ನವಾದ ಜವಳಿ ಕಾವೇರಿಪಟ್ಟಣದ ಬಟ್ಕಲ್,

ಬಾರಕೂರು ಮುಂತಾದ ಬಂದರುಗಳಿಂದ ಹೊರದೇಶಕ್ಕೆ ಹೋಗುತ್ತಿತ್ತು. ಮದುರೆ, ಕಂಚಿ, ತಿರುವನಂತಪುರಗಳೂ ನೇಕಾರ ಕೇಂದ್ರಗಳಾಗಿದ್ದುವು. ನೇಕಾರ ವೃತ್ತಿ ನಗರ ಕೇಂದ್ರಿತವಾದುದು. ರಾಷ್ಟ್ರೀಯ ರಸ್ತೆಗಳ ಪಕ್ಕದಲ್ಲಿಯೇ ನೇಕಾರ ಕೇಂದ್ರಗಳಿರುತ್ತಿದ್ದವು.

ಹಲವು ಸವಾಲುಗಳು ಮತ್ತು ಹೊಡೆತಗಳ ನಡುವೆಯೂ, ಗ್ರಾಮಾಂತರಗಳಲ್ಲಿ ಅಲ್ಲೊಂದು ಇಲ್ಲೊಂದು ಕೈ ಮಗ್ಗಗಳ ಸದ್ದನ್ನು ಕೇಳಬಹುದು. ಅವು ಸ್ಥಳೀಯರ ಕೈಮಗ್ಗ ಉತ್ಪನ್ನಗಳ ಮೋಹವನ್ನು ಪೂರೈಸುತ್ತಿವೆ. ಜನರಲ್ಲಿ ಸಿಂಥಿಟಿಕ್ ಬಟ್ಟೆಗಳ ಹುಚ್ಚು ಕಡಿಮೆಯಾಗಿ ಸ್ಥಳೀಯ ರೇಷ್ಮೆ ಸೀರೆಗಳ ಬೇಡಿಕೆ ಹೆಚ್ಚುತ್ತಿದೆ. ಇದಕ್ಕೆ ಕಂಚಿ ಮತ್ತು ಮೊಳಕಾಲ್ಮೂರಿನ ಸೀರೆಗಳ ಬೇಡಿಕೆ ಹೆಚ್ಚುತ್ತಿರುವುದೇ ಸಾಕ್ಷಿ. ಆದರೆ ನೇಯ್ಗೆ ಕೆಲಸಕ್ಕೆ ನೇಕಾರರದೇ ಸಿಕ್ಕುತ್ತಿಲ್ಲ. ಗ್ರಾಹಕರ ಬೇಡಿಕೆಯನ್ನು ಈಡೇರಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ನೇಕಾರರು ವೃತ್ತಿ ಪಲ್ಲಟಗೊಂಡಿದ್ದಾರೆ. ಅವರ ಮಗ್ಗದ ಗುಣಿಗಳು. ನೇಕಾರರ ಬದುಕಿಗೆ ಗುಣಿಗಾಳಾದುದ್ದೇ ಮೂಲ ಕಾರಣ. ನೇಕಾರದ ಆಧ್ಯಾತ್ಮಿಕ ಸಾಧನೆಗೂ ನೇಯ್ಗೆ ವೃತ್ತಿಯ ಕರಕುಶಲಗಾರಿಕೆ ಕಣ್ಮರೆಯಾಯಿತು. ಅದು ದೇಶದ ಆರ್ಥಿಕ ಮತ್ತು ನೈತಿಕ ಪತನವೇ ಸರಿ. ನೇಕಾರರಿಗೆ ಇಂಥ ವೃತ್ತಿಯ ಅನುಭವ ಇಂದು ಸಾಧ್ಯವೆ?

ಉಂಕಿಯ ನಿಗುಚಿ, ಸರಿಗೆಯ ಸಮಗೊಳಿಸಿ
ಸಮಗಾಲನಿಕ್ಕಿ ಅಣಿಯೊಳೆರಡರ ಮೆಟ್ಟಿದೆ
ಹಿಡಿದ ಲಾಳಿಯ ಮುಳ್ಳು ಕಂಡಿಕೆಯ ನುಂಗಿತ್ತು
ಈ ಸೀರೆಯ ನೆಯ್ದವ ನಾನೊ ನೀನೋ ರಾಮನಾಥ

–ದೇವರ ದಾಸಿಮಯ್ಯ

ನಾತಿರುಹುವ ರಾಟಿಯ ಕುಲಜಾತಿಯ ಕೇಳಿರಣ್ಣ
ಅಡಿಯ ಹಲಗೆ ಬ್ರಹ್ಮ, ತೋರಣ ವಿಷ್ಣು
ನಿಂದ ಬೊಂಬೆ ಮಹಾರುದ್ರ
ರುದ್ರನ ಬೆಂಬಳಿಯವೆರಡು ಸೂತ್ರದ ಕರ್ಣ
ಅರಿವೆಂಬ ಕದಿರು, ಭಕ್ತಿಯೆಂಬ ಕೈಯಲ್ಲಿ ತಿರುಹಲಾಗಿ
ಸುತ್ತಿತ್ತು ನೂಲು, ಕದಿರು ತುಂಬಿತ್ತು

–ಕದಿರೆರೆಮ್ಮವ್ವೆ

* * *

**ಕೆ.ಜಿ. ನಾಗರಾಜಪ್ಪ:**

ಕೆ. ಜಿ. ನಾಗರಾಜಪ್ಪ ಅವರು ಜನಿಸಿದ್ದು ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕು ಕಲ್ಲೂರಿನಲ್ಲಿ 1934ರ ಜನೆವರಿ 9ರಂದು. ಕಲ್ಲೂರು, ಕಡಬ, ತುಮಕೂರು, ಮೈಸೂರುಗಳಲ್ಲಿ ವಿದ್ಯಾಭ್ಯಾಸ, ಸಾಗರ, ಮೈಸೂರು, ತುಮಕೂರುಗಳಲ್ಲಿ ಅಧ್ಯಾಪಕರಾಗಿ, ರೀಡರ್ ಆಗಿ, ಪ್ರಾಧ್ಯಾಪಕರಾಗಿ ಸೇವೆ. ದೊಡ್ಡಸಂಕಣ್ಣ (ಐತಿಹಾಸಿಕ ಕಾದಂಬರಿ–1962), ದೇವಾಂಗ ಸಂಸ್ಕೃತಿ (ಅಧ್ಯಯನ–1983), ಮರುಚಿಂತನೆ (ವಿಮರ್ಶೆ–1985), ಇಕ್ಕಟ್ಟು ಬಿಕ್ಕಟ್ಟು (ವಿಮರ್ಶೆ–1998) ಪ್ರಕಟಿತ ಕೃತಿಗಳು. ಅನ್ವೇಷಕ (1998) ಅಭಿನಂದನಾ ಕೃತಿ. ಕರ್ನಾಟಕ ಸಾಹಿತ್ಯ ಅಕಾಡೆಮಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ನಾಡೋಜ ಗೌರವ ಸೇರಿದಂತೆ ಹಲವು ಪ್ರಶಸ್ತಿಗಳು ಸಂದಿವೆ. ಬೆಂಗಳೂರಿನಲ್ಲಿ ತಮ್ಮ ಪತ್ನಿಯೊಂದಿಗೆ ನೆಲೆಸಿದ್ದಾರೆ. ವೈಚಾರಿಕ ಮತ್ತು ವಿಶ್ಲೇಷಣಾತ್ಮಕವಾಗಿ ಸಂಸ್ಕೃತಿ ಚಿಂತನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಅನುಶ್ರೇಣಿ –ಯಜಮಾನಿಕೆ ಕೃತಿಗೆ 2018 ನೇ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಂದಿದೆ.

## 1.4 ಓದು ಪಠ್ಯ: ಶರೀರ ಶ್ರಮ (ಅನ್ನಕಾಯಕ)

**–ನೀಲತ್ತಹಳ್ಳಿ ಕಸ್ತೂರಿ**

ಶ್ರಮದ ಬಗ್ಗೆ ನಮಗಿರುವ ಭಾವನೆ ಬದಲಾಗಬೇಕು. ಪಾರಂಪರಿಕವಾಗಿ ನಮ್ಮಲ್ಲಿ ದೇಹಶ್ರಮಕ್ಕೆ ಎರಡನೆಯ ಸ್ಥಾನ. ಬುದ್ಧಿಶಕ್ತಿಗೆ ಮೊದಲ ಮಣೆ. ಶ್ರಮ ಎಂದರೆ ತಾತ್ಸಾರವೇ. ದೇಹ ಶ್ರಮ ಮಾಡುವವರನ್ನು ನಾವು ಕೀಳಾಗಿಯೇ ಕಾಣುತ್ತ ಬಂದಿದ್ದೇವೆ. ಆತನ ಕೆಲಸ, ಆತನ ಸೇವೆ ಸಮಾಜಕ್ಕೆ ಅತ್ಯವಶ್ಯಕ, ಅನಿವಾರ್ಯ, ಆದರೆ ಅದಕ್ಕೆ ಸಮಾಜ ತೋರುವುದು ನಿರ್ಲಕ್ಷ್ಯವನ್ನು, “Dignity of Labour” ಪರಿಶ್ರಮದ ಘನತೆ, ನಮ್ಮಲ್ಲಿ ಇಲ್ಲ. ಮಾನವನ ದೇಹದಲ್ಲಿ ತಲೆಯನ್ನು ಉತ್ತಮಾಂಗ ಎಂದರು. ಅಂದರೆ ಉಳಿದ ಅಂಗ ಹೀನವೇ? ಆ ಅಂಗಗಳಿಲ್ಲದೆ ಈ ‘ಉತ್ತಮಾಂಗ’ ಹೇಗೆ ಇರಬಲ್ಲದು? ನಿಜ, ಬುದ್ಧಿಗೆ ಪ್ರಾಧಾನ್ಯ ಸಲ್ಲ ಬೇಕು. ಹಾಗೆಂದು ದೇಹವನ್ನು ಕಡೆಗಣಿಸಬಹುದೇ? ಹನ್ನೆರಡನೆಯ ಶತಮಾನದಲ್ಲಿ ಕನ್ನಡದ ಬಸವಣ್ಣ ಕಾಯಕ ತತ್ವವನ್ನು ಪ್ರತಿಪಾದಿಸಿದ. ಆತನ ದೂರದೃಷ್ಟಿ ಅನುಪಮ. ‘ಕಾಯಕವೇ ಕೈಲಾಸ’ ಎಂದ. ತನ್ನ ಅನುಭವ ಮಂಟಪದಲ್ಲಿ ಎಲ್ಲ ಬಗೆಯ ಶ್ರಮಿಕರಿಗೂ ಸ್ಥಾನವಿತ್ತ. ಕುಂಬಾರ, ಚಮ್ಮಾರ, ಅಂಬಿಗ ಎಲ್ಲರಿಗೂ ಸ್ಥಾನವಿತ್ತ, ಇದೊಂದು ಕ್ರಾಂತಿಕಾರಕ ಹೆಜ್ಜೆ. ತಲೆ ಮತ್ತು ದೇಹಗಳ ನಡುವೆ ಭೇದ ಸಲ್ಲದು. ಆ ಭೇದವನ್ನು ತೊಲಗಿಸಬೇಕು. ಆ ಭೇದವೇ ಸಮಾಜದಲ್ಲಿ ಮೇಲುಕೀಳು, ವರ್ಣದ್ವೇಷ ಇತ್ಯಾದಿಗಳಿಗೆ ಕಾರಣ. ಸಮಾಜದ ಬಹುಪಾಲು ಜನ ಸಮಾಜಕ್ಕೆ ಅನಿವಾರ್ಯವಾದ ಸೇವೆ ಮಾಡುವ ಜನ ನಿರ್ಲ ಕ್ಷ್ಯಕ್ಕೆ ಒಳಗಾಗಿ, ದಾರೆ. ಜ್ಞಾನದಿಂದ, ಸಂಸ್ಕೃತಿಯಿಂದ ದೂರವಾಗಿದ್ದಾರೆ. ಪ್ರಜಾಪ್ರಭುತ್ವದ ಈ ಯುಗದಲ್ಲಿ, ಸಂಖ್ಯೆಯ ಆಧಾರದ ಮೇಲೆ ಆಳುವ ಜನ ಆಯ್ಕೆಯಾಗುತ್ತಾರೆ. ಆಯ್ಕೆಯಾಗಿ ಬರುವ ಬಹುಜನ ಶ್ರಮಿಕ ವರ್ಗದವರು. ಅವರಿಗೆ ಸಂಸ್ಕೃತಿ, ಸಂಯಮಗಳ ಹಿನ್ನೆಲೆ ಇಲ್ಲ. ಅಂತೆಯೇ ಇಂದು ನಾವು ಆಡಳಿತದಲ್ಲಿ ಆ ಸಂಸ್ಕೃತಿಯನ್ನು, ಕುಸಂಸ್ಕೃತಿಯನ್ನು ಕಾಣುತ್ತೇವೆ. ಭ್ರಷ್ಟತೆ ಅನಾಚಾರಗಳನ್ನು ಕಾಣುತ್ತೇವೆ. ಇದೆಲ್ಲ ಶ್ರಮಿಕವರ್ಗವನ್ನು ದೂರವಿಟ್ಟುದರ ಸಂಚಿತ ಫಲ.

ಗಾಂಧೀಜಿ ಈ ಶ್ರಮಗೌರವವನ್ನು ಅತ್ಯಂತ ಪ್ರಬಲವಾಗಿ ಪ್ರತಿಪಾದಿಸಿದರು.

“ಮನುಷ್ಯ ತನ್ನ ಅನ್ನಕ್ಕಾಗಿ ದುಡಿಯಲಿ ಎಂದು ದೇವರು ಅವನನ್ನು ಸೃಷ್ಟಿಸಿದ. ದುಡಿಯದೆ ತಿನ್ನುವವರು ಕಳ್ಳರು ಎಂದ”, “ದೇಹ ಪೋಷಣೆ ದೇಹ ಪರಿಶ್ರಮದಿಂದ ಆಗಬೇಕು. ಬೌದ್ಧಿಕ ಪರಿಶ್ರಮ ಮನಸ್ಸಿನ ಸಂಸ್ಕೃತಿಗೆ ಅಗತ್ಯ. ಶ್ರಮ ವಿಭಜನೆ ಬೌದ್ಧಿಕ ಶ್ರಮ, ದೈಹಿಕ ಶ್ರಮ ಎಂದು ಆಗಬಾರದು”

"ಪ್ರತಿಯೊಬ್ಬ ಬೆವರು ಸುರಿಸು ದುಡಿದರೆ ಭೂಮಿ ಸ್ವರ್ಗವೇ ಆದೀತು." "ಅಮೆರಿಕದ ಕೋಟ್ಯಾಧೀಶರು ಬಂದು, ನಿಮಗೆ ಬೇಕಾದ ಆಹಾರವನ್ನೆಲ್ಲ ಕಳಿಸುತ್ತೇವೆ, ನೀವು ಕೆಲಸ ಮಾಡಬೇಡಿ, ನಮ್ಮ ಔದಾರ್ಯಕ್ಕೆ ದಾರಿ ಮಾಡಿಕೊಡಿ ಎಂದೇನಾದರೂ ಹೇಳಿದರೆ, ಅದನ್ನು ನಾನು ಖಂಡ ತುಂಡವಾಗಿ ನಿರಾಕ-ರಿಸಲೇಬೇಕು."

"ಎಲ್ಲರೂ ತಮ್ಮ ಅನ್ನಕ್ಕಾಗಿ ಮಾತ್ರ ದುಡಿಯುವುದಾದರೆ, ಆಗ ಎಲ್ಲರಿಗೂ ಸಾಕಾಗುವಷ್ಟು ಅನ್ನ ಇರುತ್ತದೆ, ವಿರಾಮವೂ ಇರುತ್ತದೆ. ....ಆಗ ಧನಿಕ ದರಿದ್ರ, ಮೇಲು ಕೀಳು, ಸ್ಪ್ರಶ್ಯ ಅಸ್ಪ್ರಶ್ಯ ಯಾರೂ ಇರುವುದಿಲ್ಲ."

ವಾಸ್ತವವಾಗಿ ಈ ಪರಿಶ್ರಮದ ಘನತೆ ನಮ್ಮಲ್ಲಿ ಇಲ್ಲದ್ದೇ ಅಸ್ಪ್ರಶ್ಯತೆಗೆ ಒಂದು ಕಾರಣ ಎನ್ನಬಹುದು. ಕೆಲಸ ಕೀಳು, ಅದನ್ನು ಮಾಡುವವ ಕೀಳು, ದೂರ ಇಡಬೇಕು ಎನ್ನುವ ಭಾವನೆ. ಅದರ ಬುಡಕ್ಕೆ ಏಟು ಹಾಕಿದರು ಗಾಂಧೀಜಿ, ಸಮಾಜಕ್ಕೆ ಬೇಕಾದ ಯಾವ ಕೆಲಸವೂ ಕೀಳಲ್ಲ. ಎಲ್ಲರೂ ಮಾಡಬೇಕಾದ್ದು ಗೌರವಿಸಬೇಕಾದ್ದೇ ಎಂದರು. ಅದಕ್ಕಾಗಿ ಬುದ್ಧಿವಂತರು ಎನ್ನಿಸಿಕೊಂಡವರು, ಮೇಲು ವರ್ಗದವರು ಪೊರಕೆ ಹಿಡಿಯಬೇಕು ಎಂದರು. ತಾವೇ ಹಿಡಿದು ತೋರಿಸಿದರು. ತಲೆಗೂ ಕೈಕಾಲುಗಳಿಗೂ ಇದ್ದ ಭೇದವನ್ನು ತೊಡೆದು ಹಾಕಲು ಶ್ರಮಿಸಿದರು. ಭಾರತದ ಶ್ರಮಿಕ ವರ್ಗಕ್ಕೆ ಒಂದು ಗೌರವವನ್ನು ಘನತೆಯನ್ನು ಉಂಟು ಮಾಡಲು ಯತ್ನಿಸಿದರು.

'ಬುದ್ಧಿ-ದೇಹಶ್ರಮಗಳಿಗೆ ಸಂಬಂಧ ತಪ್ಪಿದ್ದರ ಫಲ ನಮ್ಮ ಹಳ್ಳಿಗಳ ಬಗ್ಗೆ ನಮಗೆ ಬಂದಿರುವ ಅಸಡ್ಡೆಯ ಘರಾಪರಾಧ. ಇದು ಗ್ರಾಮದ ಕೆಳಕಿಗೂ ಕಾರಣ",

'ಶರೀರ ಶ್ರಮ'ವನ್ನು ಗಾಂಧೀಜಿ ತಮ್ಮ ಏಕಾದಶ ವ್ರತದಲ್ಲಿ ಸೇರಿಸಿದರು. ಅನ್ನಕಾಯಕದ ಬಗ್ಗೆ ಅವರು ಹೇಳಿದರು.

"ಶರೀರ ಶ್ರಮ ಮನುಷ್ಯನಿಗೆ ಅನಿವಾರ್ಯ ಎಂಬ ಮಾತು ನನಗೆ ಮೊಟ್ಟ ಮೊದಲು ಹೊಳೆದುದು ಟಾಲ್‌ಸ್ಟಾಯಿಯ 'ಅನ್ನ ಕಾಯಕ' (Bread la-bour) ಎಂಬ ಪ್ರಬಂಧವನ್ನೋದಿದಾಗ, ಶರೀರ ಶ್ರಮ ಇಂಗ್ಲಿಷಿನ Bread labourur ಅನುವಾದ. ಅನ್ನಕ್ಕಾಗಿ ಪ್ರತಿಯೊಬ್ಬರೂ ಕಾಯಕ ಅಥವಾ ಶರೀರಶ್ರಮ ಮಾಡಬೇಕು, ಕೈಕಾಲು ಆಡಿಸಬೇಕು, ಎಂಬುದು ಈಶ್ವರ ನಿಯಮ. ಇದನ್ನು ಮೊದಲು ಅರಿತುಕೊಂಡವನು ರಷ್ಯಾದ ಒಬ್ಬ ಅಪರಿಚಿತ ಲೇಖಕ ಬುನೈಥ್, ಆತನ ವಿಚಾರವನ್ನು ಟಾಲ್‌ಸ್ಟಾಯಿ ಪ್ರಚಾರ ಮಾಡಿದ. ಭಗವದ್ಗೀತೆಯ ಮೂರನೆಯ ಅಧ್ಯಾಯದಲ್ಲಿ ಇದೇ ತತ್ವ ನನ್ನ ಕಣ್ಣಿಗೆ

ಕಾಣುತ್ತಿದೆ. ಯಜ್ಞ ಮಾಡದೆ ತಿನ್ನುವವನು ಕಳ್ಳ ಅನ್ನವನ್ನು ತಿನ್ನುತ್ತಾನೆ (ಭುಜಂತೇತ್ಯಘಂ ಪಾಪಂ). ....ಯಜ್ಞ ಎಂದರೆ ಶರೀರಶ್ರಮ ಅಥವಾ ಅನ್ನದ ಕಾಯಕ ಎಂಬುದೇ ಶೋಭಿಸುತ್ತದೆ .

"ಶರೀರಶ್ರಮ ಮಾಡದವನಿಗೆ ತಿನ್ನಲು ಏನು ಅಧಿಕಾರ?" "ನಿನ್ನ ಬೆವರು ಸುರಿಸಿ ಹಿಟ್ಟು ತಿನ್ನು" ಎನ್ನುತ್ತದೆ ಬೈಬಲ್ (Eat thy bread by the sweat of thy brow), ಎಂಥ ಕೋಟ್ಯಾಧೀಶನೇ ಆಗಲಿ ತನ್ನ ಹಾಸಿಗೆಯ ಮೇಲೆಯ ಬಿದ್ದಿದ್ದು ಯಾರಾದರೂ ತನ್ನ ಬಾಯೊಳಗೇ ಅನ್ನ ಹಾಕುವಂತೆ ಏರ್ಪಾಟು ಮಾಡಿಕೊಂಡರೆ, ಹಾಗೆ ಬಹಳ ದಿನ ತಿನ್ನಲಾರ. ಅವನಿಗೆ ಆನಂದವೇ ಇರದು. ಆದುದರಿಂದ ವ್ಯಾಯಾಮಾದಿಗಳನ್ನು ಮಾಡಿ ಹಸಿವಾಗುವಂತೆ ಮಾಡಿಕೊಳ್ಳುತ್ತಾನೆ. ಆಗಲೂ ತನ್ನ ಕೈಬಾಯಿಂದಲೇ ತಾನೇ ಊಟಮಾಡಬೇಕು. ಬಡವನಾಗಲಿ ಬಲ್ಲಿದನಾಗಲಿ ಹೀಗೆ ಶರೀರ ವ್ಯಾಯಾಮ ಮಾಡಬೇಕಾಗಿದ್ದರೆ, ಅನ್ನಕ್ಕಾಗಿ ಶರೀರಶ್ರಮ ಏಕೆ ಮಾಡಬಾರದು. ಅನ್ನದ ಕಾಯಕ ಮಾಡಬಾರದೇಕೆ? .....ಶರೀರಶ್ರಮದ ಈ ನಿರಪವಾದ ನಿಯಮವನ್ನು ಎಲ್ಲರೂ ಒಪ್ಪಿದರೆ ಉಚ್ಚನೀಚದ ಭೇದ ಮಾಯವಾದೀತು".

"ಅಹಿಂಸೆಯ ಪಾಲನೆಗೆ ಸತ್ಯಾರಾಧನೆಗೆ ಬ್ರಹ್ಮಚರವನ್ನು ಸಹಜವಾಗಿ ಮಾಡಿಕೊಳ್ಳ ಬೇಕೆಂಬ ಪ್ರಯತ್ನಕ್ಕೆ ಶರೀರಶ್ರಮ ರಾಮಬಾಣದಂಥ ಸಹಾಯ. ನಿಜವಾಗಿ ನೋಡಿದರೆ, ಈ ಕಾಯಕ ಕೃಷಿಗೆ ಸಂಬಂಧಿಸಿದುದು. ಈಗಿನ ಸ್ಥಿತಿಯಲ್ಲಿ ಎಲ್ಲರೂ ವ್ಯವಸಾಯ ಮಾಡುವಂತಿಲ್ಲ. ಆದುದರಿಂದ ವ್ಯವಸಾಯವನ್ನು ಆದರ್ಶವಾಗಿ ಎಣಿಸಿ, ಅದರ ಬದಲು ನೂಲಬಹುದು, ನೇಯಬಹುದು, ಮರಗೆಲಸ, ಕಬ್ಬಿಣ ಕೆಲಸ ಮಾಡಬಹುದು. ಪ್ರತಿಯೊಬ್ಬನೂ ತನಗೆ ತಾನೇ ಭಂಗಿಯಾಗಬೇಕು. ಉಂಡವನು ಶೌಚಕ್ಕೆ ಹೋಗಲೇಬೇಕು. ತನ್ನ ಶೌಚವನ್ನು ಬಳಿದೂ, ಎತ್ತಿಯೂ ಹಾಕುವ ವ್ಯವಸ್ಥೆಯೆ ಉತ್ತಮ ವ್ಯವಸ್ಥೆ. ಇದು ಸಾಧ್ಯವಲ್ಲವಾದರೆ ಪ್ರತಿಯೊಂದು ಕುಟುಂಬವೂ ತನ್ನ ಶೌಚದ ವ್ಯವಸ್ಥೆ ತಾನೇ ಮಾಡಿಕೊಳ್ಳಬೇಕು. ಭಂಗಿಗಳದ್ದೇ ಒಂದು ಗುಂಪಾಗಿ ಅದನ್ನು ಒಂದು ವ್ಯಕ್ತಿಯಾಗಿ ಮಾಡಿದ ಸಮಾಜದಲ್ಲಿ ಏನೋ ಒಂದು ಮಹಾದೋಷವಿದೆ ಎಂದು ನನಗೆ ಕೆಲವು ವರ್ಷಗಳಿಂದ ಅನಿಸುತ್ತದೆ. ನಾವೆಲ್ಲರೂ ಭಂಗಿಗಳು ಎಂಬ ಭಾವನೆ ಚಿಕ್ಕಂದಿನಿಂದಲೂ ಬೇರೂರಬೇಕು". (ಮೂಲಭೂತ ಕೃತಿಗಳು 162–163)

"ಬುದ್ಧಿಯುಕ್ತ ಅನ್ನಕಾಯಕ ಯಾವತ್ತೂ ಅತ್ಯುತ್ತಮ ರೀತಿಯ ಸಮಾಜ

ಸೇವೆ, "ಕಾಯಕಕ್ಕೆ ಬುದ್ಧಿಯುಕ್ತ ಎಂಬ ಗುಣವಾಚಕವನ್ನು ಸೇರಿಸಲಾಗಿದೆ. ಇದರ ಉದ್ದೇಶ ಸಮಾಜಸೇವೆ ಆಗಬೇಕಾದಲ್ಲಿ, ಅದರ ಹಿಂದೆ ಆ ನಿರ್ದಿಷ್ಟ ಉದ್ದೇಶ ಇರಬೇಕು. ಅನ್ನಕಾಯಕವೂ ಸಮಾಜ ಸೇವೆಯೆ".

"ಅನ್ನಕಾಯಕದ ತತ್ವಕ್ಕೆ ಬಲಾತ್ಕಾರದ ನಿಷ್ಠೆಯಿದ್ದಾಗ ಬಡತನ, ಬೇನೆ, ಬಳಲಿಕೆ, ಅತೃಪ್ತಿ ಹುಟ್ಟುತ್ತವೆ. ಅದೊಂದು ಗುಲಾಮಗಿರಿ. ಅದಕ್ಕೆ ಇಚ್ಛಾಪೂರ್ವಕ ನಿಷ್ಠೆಯಿಂದ ತೃಪ್ತಿ ಆರೋಗ್ಯ ಲಭಿಸುತ್ತದೆ. ಆರೋಗ್ಯವೇ ನಿಜವಾದ ಭಾಗ್ಯ, ಬೆಳ್ಳಿ ಬಂಗಾರದ ತುಣುಕುಗಳಲ್ಲ". (ಸ.ವಾ. 240–241)

ವಾಸ್ತವವಾಗಿ ಶೌಚದ ವಿಷಯವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿದ್ದು ಗಾಂಧಿ ಯವರೇ. ನಮ್ಮ ಹಳ್ಳಿಗಳಲ್ಲಿ ನೈರ್ಮಲ್ಯ ಗೊತ್ತೇ ಇಲ್ಲ ಎನ್ನುವ ಪರಿಸ್ಥಿತಿ. ಶೌಚಾಲಯ ಸಂಡಾಸುಗಳು ಅಪರೂಪ. ಅಂತೆಯೇ ಹಳ್ಳಿಗಳು ತಿಪ್ಪೆಯ ಗುಂಡಿಗಳು. ಊರು ದುರ್ಗಂಧ ಮಯ. ನಾವು ಮಾಡಿದ ಕೊಳೆಯನ್ನು, ನಾವು ವಿಸರ್ಜಿಸುವ ಮಲಮೂತ್ರಗಳನ್ನು ಸೂಕ್ತವಾಗಿ ವಿಲೇವಾರಿ ಮಾಡಬೇಕು. ಅದು ವಾತಾವರಣವನ್ನು ಕೆಡಿಸುವಂತೆ ಆಗಬಾರದು. ಅದರ ಹೊಣೆ ನಮ್ಮದು ಎನ್ನುವ ನಾಗರಿಕ ಪ್ರಜ್ಞೆ ನಮ್ಮಲ್ಲಿ ಇಲ್ಲವೇ ಇಲ್ಲ. ಆಫ್ರಿಕದ ದೇಶಗಳಂಥ ಹಿಂದುಳಿದ; ನಾವು ಅನಾಗರಿಕ ಎನ್ನುವ ದೇಶಗಳಲ್ಲಿಯೂ ಯಾರೂ ಬೀದಿಗಳಲ್ಲಿ ಬಹಿರಂಗವಾಗಿ ದೇಹಬಾಧೆ ತೀರಿಸಿಕೊಳ್ಳುವುದಿಲ್ಲ ಎಂಬುದು ಅಲ್ಲಿಗೆ ಹೋಗಿ ಬಂದವರ ಅನುಭವ. ಏಕೊಏನೊ, ಲಾಗಾಯ್ತಿನಿಂದಲೂ ನಮ್ಮ ದೇಶ ಹೊಲಸು ನಿರ್ವಹಣೆಯ ವಿಚಾರವೇ ಯಾರನ್ನೂ ಕಾಡಿದಂತಿಲ್ಲ. ಗಾಂಧೀಜಿ ಈ ಬಗ್ಗೆ ತುಂಬ ಗಮನವಿತ್ತರು. ಹಳ್ಳಿಗಳಿಗೆ ಸೂಕ್ತವಾದ, ಅಗ್ಗವಾದ ಸಂಡಾಸುಗಳನ್ನು ರೂಪಿಸಲು ಪ್ರಯತ್ನಿಸಿದರು. ಅವರ ವೃದ್ಧಾಆಶ್ರಮದಲ್ಲಿ, ಗ್ರಾಮೀಣ ಪಾಕೀಜು ಸಂಡಾಸುಗಳ ಬಗ್ಗೆ ಪ್ರತ್ಯೇಕ ಪ್ರಯೋಗಾಲಯವೇ ಇತ್ತು. ಈಗಲೂ ಇದೆ. ಹಳ್ಳಿಗಳಲ್ಲಿ ಕಡುಬಡವರಿಗೂ ಸಾಧ್ಯವಾಗುವಂತೆ ಸಂಡಾಸುಗಳನ್ನು ರೂಪಿಸಲಾಯಿತು. ಮಲಮೂತ್ರಗಳು ವಾತಾವರಣವನ್ನು ಕೆಡಿಸಬಾರದು, ಅವು ಅಮೂಲ್ಯ ಗೊಬ್ಬರವಾಗಿ ಪರಿವರ್ತಿತವಾಗಬೇಕು ಈ ಪರಿಗಣನೆಗಳಿಗೆ ಅನುಸಾರವಾಗಿ ಸಂಡಾಸುಗಳನ್ನು ರೂಪಿಸಲಾಯಿತು. ಗಾಂಧೀಜಿ ತಮ್ಮನ್ನು ತಾವೇ 'ಭಂಗಿ' ಎಂದೂ ಹೇಳಿಕೊಂಡುದುಂಟು. ನಾಗರಿಕ ನೈರ್ಮಲ್ಯ, ಶ್ರಮಗೌರವ, ಕಾಯಕತತ್ವ, ಅಸ್ಪ್ರಶ್ಯತೆಯ ನಿರ್ಮೂಲನ ಎಲ್ಲವನ್ನು ಸಾಧಿಸಬಹುದಾದಂಥ ಪ್ರಯೋಗವನ್ನು ಗಾಂಧೀಜಿ ಮಾಡಿದರು. ಅವರ ಜೊತೆಗೆ ವಿನೋಬಾ ಸಹ ಈ ವಿಷಯದಲ್ಲಿ ಕೈಜೋಡಿಸಿದರು. ಪ್ರಕಾಂಡ ಪಂಡಿತರು, ಜ್ಞಾನಿ ವಿನೋಬಾ ಬುದ್ಧಿಮತ್ತೆಗೂ ದೇಹ ಪರಿಶ್ರಮಕ್ಕೂ ಇದ್ದ

ಭೇದವನ್ನು ತೊಡೆದುಹಾಕುವುದನ್ನೇ ಒಂದು ವ್ರತದಂತೆ ನಡೆಸಿದರು.

***ಆಕರ : ಗಾಂಧಿ ತತ್ವ ಚಿಂತನೆ –ನೀಲತ್ತಹಳ್ಳಿ ಕಸ್ತೂರಿ,***
***ಪ್ರಕಟನೆ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.***

**ನೀಲತ್ತಹಳ್ಳಿ ಕಸ್ತೂರಿ:**

ನೀಲತ್ತಹಳ್ಳಿ ಕಸ್ತೂರಿ ಅವರ ತಂದೆ ವೆಂಕಟಾಚಾರ್ಯರು ಸರ್ಕಾರಿ ಶಾಲೆಯ ಉಪಾಧ್ಯಾಯ ವೃತ್ತಿಯಲ್ಲಿದ್ದು ಊರಿಂದ ಊರಿಗೆ ವರ್ಗವಾಗುತ್ತಿತ್ತು. ಹೀಗಾಗಿ ನೀಲತ್ತಹಳ್ಳಿ ಕಸ್ತೂರಿ ಅವರ ಪ್ರಾಥಮಿಕ ವಿದ್ಯಾಭ್ಯಾಸ ನಾನಾ ಕಡೆಗಳಲ್ಲಿ ನಡೆಯಿತು. ಮುಂದೆ ತಂದೆಯವರಿಗೆ ಬೆಂಗಳೂರಿನ ಮಲ್ಲೇಶ್ವರದ 5ನೇ ಅಡ್ಡ ರಸ್ತೆಯಲ್ಲಿದ್ದ ಸರ್ಕಾರಿ ಪ್ರಾಥಮಿಕ ಶಾಲೆಗೆ ವರ್ಗವಾಯಿತು. ಕಸ್ತೂರಿಯವರು ತಮ್ಮ ಪ್ರೌಢಶಾಲಾ ಶಿಕ್ಷಣವನ್ನು ಮಲ್ಲೇಶ್ವರದ 18ನೇ ಕ್ರಾಸಿನಲ್ಲಿದ್ದ ಸರ್ಕಾರಿ ಶಾಲೆಯಲ್ಲಿ ಎಸ್. ಎಸ್. ಎಲ್. ಸಿ. ತೇರ್ಗಡೆ ಆದರು. ಬಸಪ್ಪ ಇಂಟರ್‌ಮೀಡಿಯೆಟ್ ಕಾಲೇಜಿನಲ್ಲಿ (ಇಂದಿನ ಶ್ರೀ ಜಗದ್ಗುರು ರೇಣುಕಾಚಾರ್ಯ ಕಾಲೇಜಿನಲ್ಲಿ) ಇಂಟರ್ ಮೀಡಿಯೇಟ್ ಮುಗಿಸಿ ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎ.(ಆನರ್ಸ್) ಅಧ್ಯಯನ ಮಾಡಿದರು. ಆ ಸಂದರ್ಭದಲ್ಲಿ ಅವರಿಗೆ ವಿ. ಸೀತಾರಾಮಯ್ಯ ಮತ್ತು ಜಿ.ಪಿ. ರಾಜರತ್ನಂ ಅಂತಹ ಮಹನೀಯರ ಪಾಠಕೇಳುವ ಸುವರ್ಣಾವಕಾಶ ದೊರೆತು ಸಾಹಿತ್ಯಾಸಕ್ತಿ ಮೂಡಿತು.

1948ರಲ್ಲಿ ಗಾಂಧೀ ಸಾಹಿತ್ಯ ಸಂಘವನ್ನು ಸೇರಿದ ಕಸ್ತೂರಿ ಅವರು ಆಕಾಶವಾಣಿ ಮತ್ತು ದೂರದರ್ಶನಗಳಲ್ಲಿ ಚಿಂತನ, ನಾಟಕ, ರೂಪಕಗಳು, ಕಾವ್ಯ ವ್ಯಾಖ್ಯಾನ, ಗಾಂಧೀ ಕುರಿತ ವೈಚಾರಿಕ ವಿಷಯ ಮುಂತಾದ ಹಲವಾರು ರೂಪದ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. 1952ರಲ್ಲಿ ಅಂಚೆ ಇಲಾಖೆಯಲ್ಲಿ ಉದ್ಯೋಗಕ್ಕೆ ಸೇರಿದರು. ಕನ್ನಡ ವಾತಾವರಣ ಇಲ್ಲದಿದ್ದ ಅಂದಿನ ಅಂಚೆ ಕಚೇರಿಯಲ್ಲಿ ಕನ್ನಡಪರ ಅನೇಕ ಚಟುವಟಿಕೆಗಳನ್ನು ಮೂಡಿಸಿದರು. ಇದೇ ರೀತಿ ಲೇಖಕ–ಲೇಖಕಿಯರ ಸಂಘದ ಸ್ಥಾಪನೆಗೂ ಶ್ರಮಿಸಿದರು.

ಬರಹಗಾರರಾಗಿ ನೀಲತ್ತಹಳ್ಳಿ ಕಸ್ತೂರಿ ಜಿ.ಪಿ. ರಾಜರತ್ನಂ ಅವರನ್ನು ಕುರಿತು ಬರೆದಿರುವ ಜೀವನ ಚರಿತ್ರೆ 'ಆರದ ಬೆಳಕು', ನ್ಯಾಷನಲ್ ಬುಕ್ ಟ್ರಸ್ಟ್ ಗಾಗಿ ಬರೆದಿರುವ 'ಡಿ.ವಿ ಗುಂಡಪ್ಪ– ಜೀವನ ಮತ್ತು ಸಾಧನೆ' , ಖಲೀಲ್ ಗಿಬ್ರಾನ್' ಮಕ್ಕಳಿಗೆಂದು ಬರೆದಿರುವ ಕೃತಿ, ಕಸ್ತೂರಬಾ, ಸಿದ್ಧವನಹಳ್ಳಿ

ಕೃಷ್ಣಶರ್ಮ, ಸರ್. ಎಂ. ವಿಶ್ವೇಶ್ವರಯ್ಯ(ಅನುವಾದ), ರಾಜೇಂದ್ರ ಪ್ರಸಾದ್ ಮತ್ತು ರಾಮಾನುಜಾಚಾರ್ಯರ ಜೀವನ ಚರಿತ್ರೆಗಳು ಪ್ರಸಿದ್ಧವಾಗಿವೆ. ನಮ್ರತೆಯ ಪ್ರಾಮುಖ್ಯತೆಯನ್ನು ಗಾಂಧೀಜಿಯವರ ಜೀವನದ ಹಿನ್ನೆಲೆಯಲ್ಲಿ ಪರಿಣಾಮಕಾರಿಯಾಗಿ ವಿವರಿಸಿದ್ದಾರೆ. 'ದೀಪ ದಾನ', 'ಇದು ಭಾರತದ ದಾರಿ' ಹಾಗೂ 'ಬೇಬಿ ನಾಚ್ಚಿಯಾರ್' ಇವು ಅವರು ಬರೆದಿರುವ ನಾಟಕಗಳು. ಕಸ್ತೂರಿ ಅವರು ಭಾರತ ಭಾರತಿ ಪುಸ್ತಕಮಾಲೆಗೆ ಆರು ಮಕ್ಕಳ ಪುಸ್ತಕಗಳನ್ನು ರಚಿಸಿಕೊಟ್ಟಿದ್ದಾರೆ. ಮನುಷ್ಯನ ಪೂರ್ವೋತ್ತರ ಇತಿಹಾಸದ 'ನಮ್ಮ ಕಥೆ' ಅವರ ಮತ್ತೊಂದು ಅಮೂಲ್ಯ ಕೃತಿ.

ತೆರೆಯಮರೆಯ ಸಾಧಕರೆಂದೇ ಹೆಸರಾಗಿದ್ದ ನೀಲತ್ತಹಳ್ಳಿ ಕಸ್ತೂರಿ ಅವರಿಗೆ ಕರ್ನಾಟಕ ಅಕಾಡಮಿ ಪ್ರಶಸ್ತಿ, ಅಳಸಿಂಗಪೆರುಮಾಳ್ ಪ್ರಶಸ್ತಿ, ಕರ್ನಾಟಕ ಸಂಗೀತ ನೃತ್ಯ ಅಕಾಡಮಿಯ 'ಕರ್ನಾಟಕ ಕಲಾಶ್ರೀ ಪ್ರಶಸ್ತಿ, ಭಾರತೀಯ ವಿದ್ಯಾಭವನದಿಂದ ಮಹಾತ್ಮ ಗಾಂಧೀ ಕೃತಿ ಸಂಚಯಕ್ಕಾಗಿ ಸನ್ಮಾನ ಮುಂತಾದ ಅನೇಕ ಗೌರವಗಳು ಸಂದಿವೆ.

ನೀಲತ್ತಹಳ್ಳಿ ಕಸ್ತೂರಿ ಅವರು ಈಗ ನಮ್ಮ ಮಧ್ಯ ಇಲ್ಲದಿರಬಹುದು; ಆದರೆ ಮಲ್ಲೇಶ್ವರ, ಅಲ್ಲಿನ ಗಾಂಧೀ ಸಾಹಿತ್ಯ ಸಂಘ, ಮಲ್ಲೇಶ್ವರದ ಸಾಂಸ್ಕೃತಿಕ ಪರಿಸರ ಇವೆಲ್ಲವುಗಳನ್ನೂ, ಬೆಂಗಳೂರು ಕನ್ನಡಿಗರ ಬದುಕಿನ ಅಮೂಲ್ಯ ಸವಿನೆನಪುಗಳನ್ನಾಗಿ ಇರಿಸಿರುವವರಲ್ಲಿ ನೀಲತ್ತಹಳ್ಳಿ ಅವರ ಕೊಡುಗೆ ಅಸಾಮಾನ್ಯವಾದುದು.

# 2. ಸಾಮರಸ್ಯ


| | | | |
|---|---|---|---|
| 2.1 | ಮುರಿದ ಒಲುಮೆಗೆ | : ಜಿ.ಎಸ್. ಶಿವರುದ್ರಪ್ಪ | 028 |
| 2.2 | ಗೋಳಿಬಾರ್ | : ಬಿ.ಜಿ. ಸತ್ಯಮೂರ್ತಿ | 030 |
| 2.3 | ಹೊತ್ತು ಮಾರುವವರು | : ಡಾ. ಎಲ್. ಸುಮಿತ್ರ | 041 |
| 2.4 | ಓದುಪತ್ಯ : ತಾಯಿ–ಮಗ (ಕಥೆ) | : ಎಂ.ವಿ. ಸೀತಾರಾಮಯ್ಯ | 048 |

# 2. ಸಾಮರಸ್ಯ

**ಆಶಯ:**

ಲೆಬನಾನಿನ ಸುಪ್ರಸಿದ್ಧ ಕವಿ ಖಲೀಲ್ ಗಿಬ್ರಾನ್‌ನ ಒಂದು ಪದ್ಯ ಹೀಗೆ ಹೇಳುತ್ತೆ.

"ನಂಬಿಕೆಗಳು ತುಂಬಿ ಧರ್ಮ ಬರಡಾದ ದೇಶವನು
ನನ್ನ ಗೆಳೆಯರೆ ಹಾಗೂ ಸಹ ಪಯಣಿಗರೆ
ಮರುಕದಿ ನೋಡಿ" ....
"ಯಾವ ದೇಶ ಹಲವು ಭಾಗಗಳಾಗಿ ವಿಭಜನೆಗೊಂಡು
ಪ್ರತಿಯೊಂದು ತಾನೇ ಒಂದು ದೇಶವೆಂದು ತಿಳಿಯುವುದೋ
ಅಂಥ ದೇಶವನ್ನು ಕನಿಕರಿಸಿ."

ಈ ಪದ್ಯದ ಸಾಲುಗಳ ಆಶಯ ಸಾಮರಸ್ಯದ ಮಹತ್ವವನ್ನು ಒತ್ತಿ ಒತ್ತಿ ಹೇಳುತ್ತಿದೆ. ಸಾಮರಸ್ಯ ಎಂದರೇನು? ಅರ್ಥಕೋಶದಲ್ಲಿ ಹೊಂದಾಣಿಕೆ, ಸಹೋದರತೆ, ಸಮರಸ, ಹಿತ, ಸಾಂಗತ್ಯ, ಐಕ್ಯಮತ, ಸಹಬಾಳ್ವೆ, ಸಮಾನತೆ ಎಂದಿದೆ. ಎಲ್ಲವನ್ನು ಎಲ್ಲರಿಗೂ ಹಂಚುವುದು ಅಥವಾ ಎಲ್ಲರನ್ನೂ ಸಮಾನವಾಗಿ ನೋಡುವುದು ಅಥವಾ ಎಲ್ಲ ಧರ್ಮಗಳನ್ನು ಸಮಾನ ಅಂತರದಲ್ಲಿಟ್ಟು ನೋಡುವುದು ಸಮಾನತೆಯಾಗುತ್ತದೆ. ಸಮಾನತೆ ಎನ್ನುವುದು ಸಾಮರಸ್ಯ ಸಾಧಿಸದೆ ಸಾಧ್ಯವಾಗದು.

ಸಂವಿಧಾನವನ್ನು ದೇಶಕ್ಕೆ ಸಮರ್ಪಿಸಿ ಬಾಬಾ ಸಾಹೇಬರು ಹೇಳುತ್ತಾರೆ. ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ಸಮಾನತೆಯನ್ನು ತರದಿದ್ದರೆ ರಾಜಕೀಯ ಪ್ರಜಾಪ್ರಭುತ್ವಕ್ಕೆ ಗಂಡಾಂತರ ಬಂದೊದಗಲಿದೆ. ಈ ಸಮಾನತೆ ತರಲು ದೇಶದ ಸಮಸ್ತ ಜನಸ್ತೋಮ ಭ್ರಾತೃತ್ವ, ಸಾಮರಸ್ಯ ಮತ್ತು ವ್ಯಕ್ತಿಗೌರವವನ್ನ ಮೈಗೂಡಿಸಿಕೊಳ್ಳಬೇಕು.

ಸಾಮರಸ್ಯ ಎಂದರೆ ಬಸವಣ್ಣ 12ನೇ ಶತಮಾನದಲ್ಲಿ ಕೂಡಿಬಾಳುವ ಮಹತ್ವ ಸಾರುತ್ತಾರೆ, ಸಹೋದರತೆಯ ಕನಸ ಬಿತ್ತುತ್ತಾರೆ, ಸಾಮರಸ್ಯದ ಬದುಕು ಕಟ್ಟಲು ಹೀಗೆ ಹೇಳುತ್ತಾರೆ.

ಅಪ್ಪನು ನಮ್ಮ ಮಾದಾರ ಚನ್ನಯ್ಯ
ಬೊಪ್ಪನು ನಮ್ಮ ಡೋಹಾರ ಕಕ್ಕಯ್ಯ
ಚಿಕ್ಕಯ್ಯ ನಮ್ಮಯ್ಯ ಕಾಣಯ್ಯ
ಅಣ್ಣನು ನಮ್ಮ ಕಿನ್ನರಿ ಬೊಮ್ಮಯ್ಯ
ಎನ್ನನೇಂತ ಕರೆಯುವಿರಿ ಕೂಡಲ ಸಂಗಯ್ಯ.

ಭಾರತ ಜಗತ್ತಿನ ಏಕಮಾತ್ರ ಸಾಂಸ್ಕೃತಿಕ ವೈವಿಧ್ಯತೆಯನ್ನು ತುಂಬಿಕೊಂಡಿರುವ ನೆಲ. ಲಕ್ಷಾಂತರ ಜಾತಿ, ಸಾವಿರಾರು ಭಾಷೆ, ನೂರಾರು ಪಂಗಡ, ಹತ್ತಾರು ಧರ್ಮಗಳ, ಚಿಂತನೆಗಳ ನಂದನವನ. ಸರ್ವ ಧರ್ಮ ಸಮನ್ವಯದಿಂದ ಉದಿಸಿದ ದೇಶ ಇದು, ರಾಮ–ರಹೀಮರ ಭಜನೆ ಏಕ ಸ್ವರದಲ್ಲಿ ಮೊಳಗುತ್ತದೆ. ಕಾಳಿದಾಸನ ಕಾವ್ಯ ಗಾಲೀಬರ ಶಾಯರಿಯಲ್ಲಿ ಧ್ವನಿಸುತ್ತದೆ. ಜಾತ್ಯಾತೀತತೆ ಮತ್ತು ಧರ್ಮ ನಿರಪೇಕ್ಷತೆ ಒಂದೇ ಈ ನೆಲದಲ್ಲಿ ಬದುಕಲು ಸಾಧ್ಯ. ಇದನ್ನೇ ವಿವೇಕಾನಂದ ಪ್ರತಿಪಾದಿಸಿದ್ದು ಮತ್ತು ಚಿಕಾಗೊದಲ್ಲಿ ಭಾಷಣ ಮಾಡಿದ್ದು.

## 2.1 ನನ್ನ ನಿನ್ನ ನಡುವೆ

**–ಜಿ.ಎಸ್. ಶಿವರುದ್ರಪ್ಪ**

ಸದಾ ಹೊಯ್ಯುವ ಮಳೆ, ಸುಯ್ಯುವ ಗಾಳಿ ನನ್ನ ನಿನ್ನ ನಡುವೆ
ಉರಿಯುವ ಬೇಸಗೆ, ಕೆಂಡದ ಹಾಸುಗೆ ನನ್ನ ನಿನ್ನ ನಡುವೆ
ಉದುರುವ ಎಲೆ, ಉರಿಯುವ ಚಿತೆ ನನ್ನ ನಿನ್ನ ನಡುವೆ
ಹದ್ದಿನ ರೆಕ್ಕೆಯ ನೆರಳೂ, ಬೇಟೆ ನಾಯಿಗಳ ಬೊಗಳೂ ನನ್ನ ನಿನ್ನ ನಡುವೆ.

ಸಾವಿರ ಮನೆ ದೀಪಗಳುರಿದಿವೆ ಝಗ ಝಗ ನನ್ನ ನಿನ್ನ ನಡುವೆ
ತಲೆಯಿಕ್ಕಲು ನೆಲೆಯಿಲ್ಲವೆ ನಮಗೀ ತುಂಬಿದೂರಿನೊಳಗೆ,
ಲಕ್ಷಾಂತರ ಜನ ಬದುಕುವ–ಸಾಯುವ ಈ ಭೂಮಂಡಲದೊಳಗೆ
ನಾನೂ ನೀನೂ ಯಾವ ಲೆಕ್ಕವೆ? ಆದರು ಈ ನಾಲ್ಕು ಜನದ ಭಯವೆ?

ನನ್ನ ಸುತ್ತ ಆ ನಾಲ್ಕು ಜನ, ನಿನ್ನ ಸುತ್ತ ಈ ನಾಲ್ಕು ಜನ
ಹೊತ್ತು ಸಾಗಿಸಲು ಹೊಂಚುತ್ತಾರೆ, ಹುಡುಕುತ್ತಾರೆ ದಿನಾ ದಿನಾ
ಕೊಂಚ ಸಿಕ್ಕಿತೋ ಏನಾದರು, ಸರಿ, ಕುತಂತ್ರದ ಚಿತೆಯನ್ನೊಟ್ಟಿ
ಸುಟ್ಟು ಬಿಡುತ್ತಾರೆ ಜೀವಸಹಿತ ಈ ಬಾಳಿಗೆ ಬೆಂಕಿಯ ಹಚ್ಚಿ.

ಎದ್ದರೆ ಕಾಲಿಗೆ ಬೀಳುತ್ತದೆ, ಬಿದ್ದರೆ ಕಚಪಿಚ ತುಳಿಯುತ್ತದೆ ಈ ಲೋಕ
ಹೇಗೋ ಏನೋ ಮೇಲೆದ್ದವನದ ಗದ್ದುಗೆ, ಅವನದೆ ಎಲ್ಲ ಪ್ರತಾಪ
ಸುಮ್ಮನಿದ್ದವನ ಹಾಗೇ ತಳ್ಳಿ ಕೊರಳಿಗೆ ಬಕರಾ ಬ್ರಾಂಡು,
ಆಮೇಲೇನಿದೆ ? ಗೆದ್ದವನಿಗೆ ಬಾಜಾ ಬಜಂತ್ರಿ ಬ್ಯಾಂಡು!

ಇವರದೆ ಮೆರವಣಿಗೆ, ಇವರದೆ ಆರ್ಭಟ ನನ್ನ ನಿನ್ನ ನಡುವೆ.
ಕಾಲಿಗೆ ಬಿದ್ದಲ್ಲದೆ ಕರುಣಿಸಲೊಲ್ಲದ ಈ ಕೃಪಾನಂದರ ತಂತ್ರಕ್ಕೆ
ಬೇಸರವಾಗಿದೆ; ಹೋಗುವ ನಡೆ ತಲೆಬಾಗದೆ ನಿಲ್ಲುವ ದೂರಕ್ಕೆ
ತಣ್ಣಗೆ ಉರಿದೂ ಕಿಡಿಗಣ್ಣಿಲ್ಲದ ದೀಪಾವಳಿಗಳ ತೀರಕ್ಕೆ

*ಆಕರ : "ಸಮಗ್ರ ಕಾವ್ಯ": ಜಿ.ಎಸ್. ಶಿವರುದ್ರಪ್ಪ*

**ಜಿ.ಎಸ್. ಶಿವರುದ್ರಪ್ಪ :**

ಆಧುನಿಕ ಕನ್ನಡದ ಪ್ರಸಿದ್ಧ ಕವಿ, ವಿಮರ್ಶಕರಾದ ಜಿ.ಎಸ್.ಶಿವರುದ್ರಪ್ಪನವರು ಹುಟ್ಟಿದ್ದು 1926 ರಲ್ಲಿ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದಲ್ಲಿ. ಮೈಸೂರು ವಿಶ್ವವಿದ್ಯಾಲಯದಲ್ಲಿ ಎಂ.ಎ ಮತ್ತು ಪಿ.ಎಚ್.ಡಿ ಪದವಿಗಳನ್ನು ಪಡೆದ ಇವರು ವಿವಿಧ ಕಾಲೇಜುಗಳಲ್ಲಿ ಅಧ್ಯಾಪಕರಾಗಿದ್ದರು. ಅನಂತರದಲ್ಲಿ (1966) ಬೆಂಗಳೂರು ವಿಶ್ವವಿದ್ಯಾಲಯ ಸೇರಿ, 1970 ರಿಂದ ಕನ್ನಡ ಅಧ್ಯಯನ ಕೇಂದ್ರದ ಮುಖ್ಯಸ್ಥರಾಗಿದ್ದರು, ಕವನ ಸಂಕಲನಗಳು: ಸಾಮಗಾನ, ಚೆಲುವು–ಒಲವು, ಕಾರ್ತಿಕ, ದೇವರಶಿಲ್ಪ, ದೀಪದ ಹೆಜ್ಜೆ, ಅನಾವರಣ, ಪ್ರೀತಿ ಇಲ್ಲದ ಮೇಲೆ, ತೀರ್ಥವಾಣಿ. ಕನ್ನಡ ಅಧ್ಯಯನ ಕೇಂದ್ರ(ಬೆಂಗಳೂರು ವಿಶ್ವವಿದ್ಯಾಲಯ) ದಲ್ಲಿ ಎರಡು ದಶಕಗಳ ಕಾಲ ಜಿ.ಎಸ್.ಎಸ್ ಪಾಠ ಹೇಳಿದರು. ಹಲವು ವಿಮರ್ಶಾ ಲೇಖನಗಳ ಚೌಕಟ್ಟುಗಳು ಆಕಾರ ಪಡೆದದ್ದು ಈ ತರಗತಿಗಳಲ್ಲಿಯೆ. ಪರಿಶೀಲನ, ಗತಿಬಿಂಬ, ನವೋದಯ, ಅನುರಣನ, ಪ್ರತಿಕ್ರಿಯೆ, ಬೆಡಗು– ಇವರ ವಿಮರ್ಶಾಗ್ರಂಥಗಳು. ಸೌಂದರ್ಯ ಸಮೀಕ್ಷೆ, ಪಿ.ಎಚ್.ಡಿ ಪದವಿಗಾಗಿ ಬರೆದ ಮಹಾಪ್ರಬಂಧ. ತಾತ್ವಿಕವಾಗಿ ಕನ್ನಡ ಕಾವ್ಯವನ್ನು ವ್ಯಾಖ್ಯಾನಿಸುವ ಇವರ ಇನ್ನೆರಡು ಕೃತಿಗಳು ಕನ್ನಡ ಸಾಹಿತ್ಯ ಸಮೀಕ್ಷೆ, ಮತ್ತು ಕನ್ನಡ ಕವಿಗಳ ಕಾವ್ಯಕಲ್ಪನೆ. ಸಾಹಿತ್ಯ ಮೀಮಾಂಸೆಯ ಕ್ಷೇತ್ರದಲ್ಲಿ ಜಿ.ಎಸ್.ಎಸ್. ತೌಲನಿಕ ಅಧ್ಯಯನದ ಮಾದರಿಗಳನ್ನು ಬಳಸಿದರು. ಮಹಾಕಾವ್ಯ ಸಮೀಕ್ಷೆ, ವಿಮರ್ಶೆಯ ಪೂರ್ವ–ಪಶ್ಚಿಮ, ಕಾವ್ಯಾರ್ಥ ಚಿಂತನ, ಈ ಬಗೆಯ ಕೃತಿಗಳಾಗಿವೆ. ಕಾವ್ಯಾರ್ಥ ಚಿಂತನವು ಜಿ.ಎಸ್.ಎಸ್. ಅವರಿಗೆ ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿಯನ್ನು ತಂದುಕೊಟ್ಟ ಕೃತಿ.

## 2.2 ಗೋಳಿಬಾರ್

**–ಬಿ.ಜಿ. ಸತ್ಯಮೂರ್ತಿ**

ಪ್ರಾಂಶುಪಾಲ ಶ್ರೀನಿವಾಸಮೂರ್ತಿಗಳು ಮಾತಾಡಿಕೊಂಡು ಆ ಕಡೆ ಹೋಗುತ್ತಲೆ ದೇಶಭಕ್ತಿ ಪಟ್ಟಾಭಿರಾಮಯ್ಯ ನಿಧಾನವಾಗಿ ಎದ್ದು ಒಳಗೆ ಬಂದರು. ದೇ.ಭ. ಪಟ್ಟಾಭಿಯವರಿಗೆ ತೊಂಬತ್ತು ವರ್ಷ. ಯೋಗ, ವ್ಯಾಯಾಮ ಮಾಡಿದ್ದ ದೇಹವಾದ್ದರಿಂದ ಇನ್ನೂ ಗಟ್ಟಿಮುಟ್ಟಾಗಿ ತಮ್ಮ ಕೆಲಸ ತಾವು ಮಾಡಿಕೊಂಡು ಹೋಗುವ ಮಟ್ಟಿಗೆ ಶಕ್ತರಾಗಿದ್ದಾರೆ. ಶುಭ್ರ ಶ್ವೇತವಸನಧಾರಿ.

ಖಾದಿ ವಸ್ತ್ರವನ್ನಲ್ಲದೆ ಬೇರೆ ಬಟ್ಟೆಯನ್ನು ಕೈಯಿಂದಲೂ ಮುಟ್ಟರು. ಕಟ್ಟಾ ಗಾಂಧೀವಾದಿ. ಮೇಜಿನ ಮೇಲಿದ್ದ ಅಂದಿನ ಪತ್ರಿಕೆಯನ್ನು ಕೈಗೆತ್ತಿಕೊಂಡು ಹೆಡ್ಡಿಂಗುಗಳ ಮೇಲೆ ಕಣ್ಣಾಡಿಸಿದರು. ಅಂದು ಆಗಸ್ಟ್ 15. ಪತ್ರಿಕೆ ತುಂಬ ಸ್ವಾತಂತ್ರ್ಯ ದಿನಾಚರಣೆಯ ಸುದ್ದಿಗಳೇ. ಅವುಗಳನ್ನು ಓದುತ್ತಿರುವ ಹಾಗೆ ಕೆಮ್ಮು ಬಂತು. ಕೆಮ್ಮಿದರು. ಗಂಡ ಕೆಮ್ಮಿದ ಶಬ್ದ ಕೇಳಿ ಹೆಂಡತಿ ಶಾರದಮ್ಮ ಓಡಿ ಬಂದು ಗಾಬರಿಯಿಂದ "ಯಾಕೇಂದ್ರೆ ಏನಾಯ್ತು?" ಎಂದರು. "ಏನಿಲ್ಲ. ನೀನು ಗಾಬರಿ ಆಗಬೇಡಾ, ಹೋಗು. ಸ್ವಲ್ಪ ನೀರು ತಂದು ಕೊಡು" ಎಂದರು. ನೀರು ಕುಡಿದಾಕ್ಷಣ ಕೆಮ್ಮು ಸ್ತಿಮಿತಕ್ಕೆ ಬಂತು. ಶಾರದಮ್ಮ ಒಳಗೆ ಹೋದರು. ಅವರಿಗೆ ಸದಾ ಗಂಡನದೇ ಚಿಂತೆ, ಅದೂ ಹಣ್ಣಾದ ಜೀವ.

ದೇ.ಭ. ಪಟ್ಟಾಭಿಯವರಿಗೆ ಕೆಮ್ಮು ಬಂದ ಕಾರಣವೇ ಬೇರೆ. ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಸುದ್ದಿಗಳನ್ನು ಓದುತ್ತಿರುವ ಹಾಗೇ ಅವರು ಟೆನ್‌ಶನ್ನಿಗೆ ಒಳಗಾದರು. ಆ ದಿನ ಅವರ ಊರಿನಲ್ಲೂ ಸ್ವಾತಂತ್ರ್ಯ ದಿನಾಚರಣೆಯನ್ನು ಮುನಿಸಿಪಲ್ ಆಫೀಸಿನ ಎದುರುಗಡೆಯ ಬಯಲಲ್ಲಿ ಆಚರಿಸುತ್ತಿದ್ದರು. ಮಾಜಿ ಮಂತ್ರಿಗಳೊಬ್ಬರು ಧ್ವಜಾರೋಹಣ ಮಾಡುತ್ತಾರೆ. ದೇ.ಭ. ಪಟ್ಟಾಭಿಯವರು ಮುಖ್ಯ ಅತಿಥಿಗಳು, ಮುನಿಸಿಪಲ್ ಆಫೀಸಿನ ಆವರಣದಲ್ಲಿ ಆಚರಿಸುತ್ತಿರುವ ಸ್ವಾತಂತ್ರ್ಯ ದಿನಾಚರಣೆಯ ಸಮಾರಂಭಕ್ಕೆ ವೇಮಗಲ್ಲಿನಲ್ಲಿರುವ ಎಲ್ಲ ಶಾಲಾ ಕಾಲೇಜು ವಿದ್ಯಾರ್ಥಿಗಳೂ, ಊರ ಪ್ರಮುಖರ ಹಾಗೂ ಪ್ರಜೆಗಳೂ ಜಮಾಯಿಸುತ್ತಾರೆ.

ಸ್ಥಳೀಯ ಜಿಲ್ಲಾ ಪತ್ರಿಕೆ 'ಕೋಲಾರ ವಾಣಿ' ಸುದ್ದಿಯನ್ನು ದಪ್ಪ ಅಕ್ಷರಗಳಲ್ಲಿ ಪ್ರಕಟಿಸಿತ್ತು. ಮಾಜಿಮಂತ್ರಿ ಸಿದ್ದೇಗೌಡನ ಹೆಸರು ಓದಿದಾಗಲೇ ಪಟ್ಟಾಭಿ ಯವರಿಗೆ ಟೆನ್‌ಶನ್ ಶುರುವಾದದ್ದು. ಸಿದ್ದೇಗೌಡ ವೇಮಗಲ್ ಕ್ಷೇತ್ರದ

ಪ್ರಭಾವಿತ ರಾಜಕಾರಣಿ, ಅವನು ಕಾಂಗ್ರೆಸ್ಸಿನಿಂದ ಪಕ್ಷಾಂತರಗೊಂಡಿದ್ದ. ಕಳೆದ ಬಾರಿ ಚುನಾವಣೆಗೆ ನಿಂತು ದಯನೀಯ ಸೋಲು ಅನುಭವಿಸಿದ್ದ. ಠೇವಣಿಯ ಹಣವೂ ಬರಲಿಲ್ಲ. ತನ್ನ ಸೋಲಿಗೆ ದೇ.ಭ. ಪಟ್ಟಾಭಿಯವರೇ ಕಾರಣವೆನ್ನುವುದು ಸಿದ್ದೇಗೌಡನ ಊಹೆ. ಗೌಡ ಪಟ್ಟಾಭಿಯವರನ್ನು ತನ್ನ ಪಕ್ಷಕ್ಕೆ ಎಳೆಯಲು ಹರಸಾಹಸ ಮಾಡಿ ಸೋತ. ಕ್ಷೇತ್ರದ ಜನರೆಲ್ಲ ದೇ.ಭ. ಪಟ್ಟಾಭಿಯವರ ಪಕ್ಷಕ್ಕೆ ನಿಷ್ಠೆ ತೋರಿಸುತ್ತಿದ್ದರು. ಹಾಗಂತ ಪಟ್ಟಾಭಿಯವರು ಈಗ ರಾಜಕೀಯದಲ್ಲಿಲ್ಲ. ಅವರು ರಾಜಕೀಯದಿಂದ ನಿವೃತ್ತರಾಗಿ ಎಷ್ಟೋ ವರ್ಷಗಳೇ ಆಗಿಹೋಗಿವೆ. ಈಚೆಗೆ ಅವರು ಸಭೆ – ಸಮಾರಂಭಗಳಿಗೂ ಹೋಗುತ್ತಿಲ್ಲ. ಅವರಿಂದ ಹೆಚ್ಚು ನಡೆಯಲಿಕ್ಕೂ ಆಗುತ್ತಿರಲಿಲ್ಲ. ಯಾರಾದರೂ ಹಿಡಕೊಂಡು ನಡೆಸಬೇಕಾಗಿತ್ತು. ಪ್ರಾಂಶುಪಾಲ ಶ್ರೀನಿವಾಸ ಮೂರ್ತಿ ಹಾಗೂ ಮುನಿಸಿಪಲ್ ಪ್ರೆಸಿಡೆಂಟ್ ಶಿವಪ್ಪನವರ ಒತ್ತಾಯಕ್ಕೆ ಕಟ್ಟುಬಿದ್ದು ಅದೂ ಸ್ವಾತಂತ್ರ್ಯ ದಿನಾಚರಣೆಯ ಸಮಾರಂಭಕ್ಕೆ ಎಂದದ್ದರಿಂದ ಭಾಷಣ ಮಾಡಲು ಒಪ್ಪಿಕೊಂಡಿದ್ದರು.

ದೇ.ಭ. ಪಟ್ಟಾಭಿಯವರನ್ನು ಎರಡು – ಮೂರು ದಿನಗಳಿಂದ ಸ್ವಾತಂತ್ರ್ಯ ದಿನಾಚರಣೆಯ ವಿಷಯವೇ ಬಲವಾಗಿ ಕಾಡುತ್ತಿತ್ತು. ಎಲ್ಲ ಹೋಗಿ ಆ ಮಾಜಿಮಂತ್ರಿ ಸಿದ್ದೇಗೌಡನಿಂದ ಧ್ವಜಾರೋಹಣವೇ! ಇದರಿಂದ ಪಟ್ಟಾಭಿ ಯವರಿಗೂ ತುಂಬ ಆಘಾತವಾಗಿತ್ತು. ಸಿದ್ದೇಗೌಡನ ರಾಜಕೀಯ ಪ್ರವರವೆಲ್ಲ ಪಟ್ಟಾಭಿಯವರಿಗೆ ಗೊತ್ತಿತ್ತು. ಏನು ಮಾಡಲಿಕ್ಕೆ ಸಾಧ್ಯ! ಇಂದು ದೇಶದಲ್ಲಿರುವ ಯಾವ ರಾಜಕಾರಣಿ ಸಿದ್ದೇಗೌಡನಿಗಿಂತ ಬೇರೆಯಾಗಿದ್ದಾನೆ. ಎಲ್ಲರದೂ ಅದೇ ಗೋತ್ರ! ಅದೇ ಪ್ರವರ.

'ದೇಶಭಕ್ತಿ' ಎಂದು ಇಂದು ಜನ ಪಟ್ಟಾಭಿಯವರನ್ನು ಕರೆಯಬೇಕಾದರೆ ಆ ನಾಲ್ಕು ಅಕ್ಷರದ ಶಬ್ದದ ಹಿಂದಿರುವ ತ್ಯಾಗ, ಬಲಿದಾನಗಳನ್ನು ಇಂದಿನವರು ಊಹಿಸಲಿಕ್ಕೂ ಸಾಧ್ಯವಿಲ್ಲ. ಪ್ರತಿವರ್ಷ ಸ್ವಾತಂತ್ರ್ಯ ದಿನಾಚರಣೆ ಬಂದರೆ ಸಾಕು, ಅದರ ಹಿಂದಿನ ಚಿತ್ರಣಗಳ ನೆನಪೆಲ್ಲ ಬಂದು ಕಾಡುತ್ತವೆ. ಇದರಿಂದ ದೇ.ಭ. ಪಟ್ಟಾಭಿಯವರ ಮನಸ್ಸು ಭಾರವಾಗುತ್ತದೆ. ಒಣಗಲಿಕ್ಕೆ ಬಂದ ಹುಣ್ಣು ಮತ್ತೆ ಕೆರೆದು ವ್ರಣವಾಗಿ ರಕ್ತ ಸುರಿಯತೊಡಗಿದರೆ, ಸಿದ್ದೇಗೌಡನಂತಹ ರಾಜ ಕಾರಣಿಗಳ ನೆನಪಾಗಿ ಹುಣ್ಣಿನ ಮೇಲಿಷ್ಟು ಉಪ್ಪು ಸುರಿದ ಹಾಗಾಗುತ್ತದೆ. ಇದೆಲ್ಲ ಮರೆಯುವವರೆಗೆ ಆ ಯಾತನೆಯನ್ನು ಪಟ್ಟಾಭಿಯವರು ಏಕಾಕಿ ಯಾಗಿ ಅನುಭವಿಸುತ್ತಿದ್ದರು.

ಈವತ್ತು ಧ್ವಜಾರೋಹಣ ಮಾಡಲು ಬರುತ್ತಿರುವ ಮಾಜಿ ಮಂತ್ರಿ

ಸಿದ್ದೇಗೌಡ ಹಲವಾರು ವರ್ಷಗಳ ಹಿಂದೆ ಇದೇ ವೇಮಗಲ್ ಹೈಸ್ಕೂಲಿನಲ್ಲಿಯೇ ಓದಿದ್ದ. ಅವನೂ ಪ್ರಾಂಶುಪಾಲ ಶ್ರೀನಿವಾಸಮೂರ್ತಿಗಳ ಹಳೇ ವಿದ್ಯಾರ್ಥಿ, ಪಟ್ಟಾಭಿಯವರ ನೆಚ್ಚಿನ ಬಂಟನಾಗಿದ್ದ. ಯಾವಾಗ ಓದು ಬಿಟ್ಟು ರಾಜಕೀಯಕ್ಕೆ ಪ್ರವೇಶಿಸಿದನೋ ಅದೇ ಅವನಪಾಲಿಗೆ ದೊಡ್ಡ ಮುಳುವಾಯಿತು. ಪಕ್ಷದ ರಾಜಕಾರಣಗಳಲ್ಲಿ, ಸಮಾರಂಭಗಳಲ್ಲಿ ಭಾಗವಹಿಸಿ, ದೇ.ಭ.ಪಟ್ಟಾಭಿಯವರ ವಿರೋಧ ಪಕ್ಷ ಸೇರಿ ದೊಡ್ಡ ಭಾಷಣಗಾರನೆಂಬ ಪ್ರಸಿದ್ಧಿ ಪಡೆದು ಪಟ್ಟಾಭಿಯವರು ಬೋಧಿಸಿದ ಆದರ್ಶಗಳನ್ನೆಲ್ಲ ಗಾಳಿಗೆ ತೂರಿದ. ಆದರೂ ಪಟ್ಟಾಭಿಯವರಿಗೆ ಬೇಸರವಾಗಲಿಲ್ಲ. ಯಾವಾಗ ಸಿದ್ದೇಗೌಡ ರಾಷ್ಟ್ರ ವಿರೋಧಿ ಕೆಲಸಗಳಲ್ಲಿತೊಡಗಿದನೊ ಅಂದಿನಿಂದ ಅವರು ಅವನನ್ನು ದೂರಮಾಡಿಬಿಟ್ಟರು.

ಬ್ರಿಟಿಷರನ್ನು ಇಂಡಿಯಾ ಬಿಟ್ಟು ತೊಲಗಿಸುವ ಚಳುವಳಿಯಲ್ಲಿ ಪಟ್ಟಾಭಿ ಭಾಗವಹಿಸಿ ಬ್ರಿಟಿಷರ ಲಾಟಿಯಿಂದ ಏಟು ತಿಂದಿದ್ದರು. 1942ರ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಎರವಾಡ ಜೈಲಿನಲ್ಲಿ ಎರಡು –ಎರಡೂವರೆ ವರ್ಷ ಬ್ರಿಟಿಷರಿಂದ ಪಡಬಾರದ ಕಷ್ಟ ಅನುಭವಿಸಿದ್ದರು. ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿತು, ಯಾವ ಪುರುಷಾರ್ಥಕ್ಕೆ? ರಾಷ್ಟ್ರದ್ರೋಹಿಗಳಿಂದ ರಾಮರಾಜ್ಯ ಕಟ್ಟಲು ಸಾಧ್ಯವೇ?

ಸ್ವತಂತ್ರ ಭಾರತದಲ್ಲಿ ರಾಷ್ಟ್ರಹಿತಕ್ಕಾಗಿ ದುಡಿಯುವುದು ಯಾರಿಗೆ ಬೇಕಾಗಿದೆ? ಪ್ರತಿಯೊಬ್ಬರೂ ತಮ್ಮ ತಮ್ಮ ಕುರ್ಚಿ ಭದ್ರಮಾಡಿಕೊಳ್ಳಲು ಬೇಕಾದ ಕೀಳು ರಾಜಕೀಯದಲ್ಲಿ ತೊಡಗಿದ್ದಾರೆ. ಸಮಾಜ ಸುಧಾರಣೆಯ ಮಣಿಸರ ಹಿಡಿದು ಜಪಮಾಡುತ್ತಾ ಕೋಮು ಸೌಹಾರ್ದದ ಮಂತ್ರ ಜಪಿಸುತ್ತಾ ಉಗ್ರವಾದಿಗಳು ಮಾಡುವ ವಿಧ್ವಂಸಕ ಕೃತ್ಯಗಳನ್ನು ಈ ರಾಜಕಾರಣಿಗಳೇ ಮಾಡುತ್ತಿದ್ದಾರೆಂದರೆ, ಇನ್ನು ಇದಕ್ಕಿಂತ ದುರಂತ ಬೇಕೇ! ನಾಗರಿಕರು ಸದಾ ಭಯ, ಆತಂಕಗಳಿಂದ ಜೀವನ ಸಾಗಿಸಬೇಕಾಗಿದೆ. ಬ್ರಿಟಿಷರಿಗಿಂತ ಅಪಾಯಕಾರಿಯಾದ ಸ್ವತಂತ್ರ ದೇಶದ ಈ ಸ್ವದೇಶಿ ರಾಜಕಾರಣಿಗಳ ದೇಶದಾದ್ಯಂತದ ಸರಣಿ ಬಾಂಬ್ ಸ್ಫೋಟಗಳಂತಹ ಭಯೋತ್ಪಾದಕ ಚಟುವಟಿಕೆಗಳಿಂದ ಪ್ರಜೆಗಳು ತಲ್ಲಣಗೊಂಡಿದ್ದಾರೆ.

ಅಂದು ಯಾವ ವಿದ್ಯಾರ್ಥಿಗಳು ರಾಷ್ಟ್ರದ ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿ ಬ್ರಿಟಿಷರೊಂದಿಗೆ ಹೋರಾಡಿ ಅವರ ಬಯೋನೆಟ್‌ಗಳಿಂದ ತಿವಿಸಿಕೊಂಡು ಹೃದಯ ವಿದ್ರಾವಕವಾಗಿ ನರಳಿ ಪ್ರಾಣಬಿಟ್ಟು ಹುತಾತ್ಮರಾದರೋ; ಅದೇ ವಿದ್ಯಾರ್ಥಿಗಳಿಂದು ಭ್ರಷ್ಟ ರಾಜಕಾರಣಿಗಳ ಕೈಗೊಂಬೆಗಳಾಗಿ ಅವರಿಂದ ತರಬೇತಿ ಪಡೆದು ಚರ್ಚು, ಮಸೀದಿ, ದೇವಸ್ಥಾನಗಳ ಮೇಲೆ ಪ್ರಾಯೋಗಿಕ ಬಾಂಬ್ ದಾಳಿ ಮಾಡಿಸಿ ಆಡಳಿತ ಪಕ್ಷಗಳ ಮೇಲೆ ಸುಳ್ಳು ಆರೋಪ ಅಪವಾದ

ಹೊರಿಸಿ ದೇಶದ ಶಾಂತಿ ಕದಡುತ್ತಿದ್ದಾರೆ. ದೇಶದ ಪ್ರಜೆಗಳು ಉಗ್ರರ ದಾಳಿಯ ಭೀತಿಯಲ್ಲಿ ಉಸಿರು ಹಿಡಿದು ಕೂರುವಂತಾಗಿದೆ.

ಯಾವ ನೆಲದಲ್ಲಿ ಗಾಂಧಿ ಹುಟ್ಟಿ ಅಹಿಂಸಾ ತತ್ವ ಬೋಧಿಸಿದರೋ ಅದೇ ನೆಲದಲ್ಲಿಂದು ಭಯೋತ್ಪಾದಕ ರಾಜಕಾರಣಿಗಳು, ನಡೆಸುತ್ತಿರುವ ಹಿಂಸಾಚಾರಗಳಿಂದ ಜನ ತತ್ತರಿಸಿ ಹೋಗುತ್ತಿದ್ದಾರೆ. ಪ್ರಜಾಪ್ರಭುತ್ವದ ಆಳರಸರು ದುಂಡಾವರ್ತನೆಯಿಂದ, ಅಮಾನುಷವಾಗಿ, ಬ್ರಿಟಿಷರಿಗಿಂತ ಹೇಯವಾಗಿ, ಹೀನಾಯವಾಗಿ ಸ್ವತಂತ್ರ ಭಾರತದ ಪ್ರಜೆಗಳನ್ನು ನಡೆಸಿಕೊಳ್ಳುವ ರೀತಿಯನ್ನು ಕಂಡು ದೇ.ಭ. ಪಟ್ಟಾಭಿಯವರು ಮಮ್ಮಲಮರುಗಿದ್ದಾರೆ.

ಅಂದು ಬ್ರಿಟಿಷರು ತಮ್ಮ ಜನಾಂಗೀಯ ವೈಭವೀಕರಣಕ್ಕಾಗಿ ಸ್ವದೇಶೀ ವಸ್ತುಗಳನ್ನೆಲ್ಲ ಮುಟ್ಟುಗೋಲು ಹಾಕಿಕೊಂಡರು. ವ್ಯವಸಾಯ, ಗ್ರಾಮೋದ್ಯೋಗಗಳನ್ನೆಲ್ಲ ಸದೆಬಡಿದರು. ಶಿಕ್ಷಣ ಕಾನೂನುಗಳೆಲ್ಲಾ ಆಂಗ್ಲಮಯವಾಯಿತು. ಕಾನೂನು ಉಲ್ಲಂಘಿಸಿದವರನ್ನು ತೋಪಿನ ಬಾಯಿಗೆ ಕೊಟ್ಟರು. ಬೂಟು ಕಾಲುಗಳಿಂದ ಅಸಹಾಯಕ ನಿಃಶಸ್ತ್ರ ಭಾರತೀಯರನ್ನು ಹೊಸಕಿ ಹಾಕಿದರು. ದೇಶಕ್ಕೆ ಸ್ವಾತಂತ್ರ್ಯ ಬಂದು ಅರವತ್ತನಾಲ್ಕು ವರ್ಷಗಳಾಯಿತು. ಅಂದಿನಿಂದಲೂ ಈ ದೇಶ ಆಳುತ್ತಿರುವ ಈ ನರಾಧಮ ರಾಜಕಾರಣಿಗಳು ಮಾಡಿರುವ ಉದ್ಧಾರವಾದರೂ ಏನು?

ಅಧಿಕಾರ ಯಾವ ಪಕ್ಷಕ್ಕೆ ಬರಲಿ ಆಶ್ವಾಸನೆಗಳ ಮಳೆ ಸುರಿಸುತ್ತಾರೆ. ಹೇಳಿದ್ದರಲ್ಲಿ ನೂರರಲ್ಲಿ ಐದಂಶವನ್ನೂ ಕಾರ್ಯಗತಗೊಳಿಸುವುದಿಲ್ಲ.

ಸ್ವಾರ್ಥಿಗಳ ಸಂಖ್ಯೆ ಬೆಳೆಯುತ್ತಿದೆ. ಅವರಿಗೆ ಕುರ್ಚಿ ಮುಖ್ಯ. ಸ್ಥಾನ ಭದ್ರತೆಗಾಗಿ ದೇಶದ ಹಿತವನ್ನು ಗಾಳಿಗೆ ತೂರಿ, ಆಶ್ವಾಸನೆಗಳ ಸಮಾಧಿಮಾಡಿ, ಹಾಂಕಾಂಗ್ – ಸ್ವಿಸ್ ಬ್ಯಾಂಕುಗಳಲ್ಲಿ ಠೇವಣಿ ಇಡಲು ಬೇಕಾದ ಸಹಸ್ರಾರು ಕೋಟಿ ಹಣಗಳಿಸಲಿಕ್ಕೆ ಬೇಕಾದ ಎಲ್ಲ ಹಗರಣ, ಗಲಭೆಗಳು, ದೊಂಬಿ, ಲೂಟಿಗಳನ್ನು ಮಾಡಿಸಿ ಭ್ರಷ್ಟ ಸಾಮ್ರಾಜ್ಯದ ಅರಣ್ಯ ಬೆಳೆಯಲು ಅಗತ್ಯವಾದ ಸಸಿ ನೆಡುತ್ತಿದ್ದಾರೆ. ವಿರೋಧ ಪಕ್ಷದವರ ಬಾಯಿ ಮುಚ್ಚಿಸಲು ಆಯೋಗ ರಚಿಸುವ ತಂತ್ರಹೂಡಿ ಬೀಸುವ ದೊಣ್ಣೆ ತಪ್ಪಿಸಿಕೊಳ್ಳುತ್ತಾರೆ. ಅಂದಿನ ಗಾಂಧಿಯುಗದ ಕಲ್ಪನೆಯಾದರೂ ಇಂದಿನ ರಾಜಕಾರಣಿಗಳಿಗಿದೆಯೇ? ಹೋಗಲಿ.

ಪಟ್ಟಾಭಿರಾಮಯ್ಯ ನಂತಹ ದೇಶಭಕ್ತರು ಹೇಳಿದರೆ ಕೇಳುವ ಮನಸ್ಸಾದರೂ ಇವರಿಗಿದೆಯೇ? ದೇಶಕ್ಕಾಗಿ ಜೀವತೆತ್ತ ಅಂದಿನ ದೇಶಪ್ರೇಮಿಗಳೆಲ್ಲಿ? ಅಂದಿನ ತ್ಯಾಗ, ಬಲಿದಾನ, ರಾಷ್ಟ್ರಪ್ರೇಮ, ರಾಷ್ಟ್ರಭಕ್ತಿ, ಸಹೋದರ ಭಾವಗಳೆಲ್ಲ ಎಲ್ಲಿ ಹೋದವು? ಬಹುಶಃ ಅವನ್ನೆಲ್ಲ ಬ್ರಿಟಿಷರೊಂದಿಗೇ ಇಂಗ್ಲೆಂಡಿಗೆ

ಕಳುಹಿಸಿಬಿಟ್ಟಿರಬೇಕು. ಅಂದಿನ ಜನರ ನೈತಿಕತೆ ಇಂದಿನ ಯಾವ ರಾಜ ಕಾರಣಿಯಲ್ಲಿ ಉಳಿದಿದೆ? ಇಂದಿನ ಅಧಿಕಾರರೂಢ ರಾಜಕಾರಣಿಗಳಲ್ಲಿ ಎಷ್ಟು ಜನರಿಗೆ 'ಸ್ವರಾಜ್ಯ' ಕಲ್ಪನೆ ಇದೆ. ರಾಜಕೀಯ, ಸಾಮಾಜಿಕ, ಶೈಕ್ಷಣಿಕ, ಹಾಗೂ ಆರ್ಥಿಕ ಸ್ವಾವಲಂಬನೆ ಬಗ್ಗೆಯಾದರೂ ಆಲೋಚಿಸುವವರು ಇದ್ದಾರೆಯೇ? ಇಲ್ಲ. ಅಷ್ಟೇ ಅಲ್ಲ, ಸ್ವರಾಜ್ಯ ಪರಿಕಲ್ಪನೆಯನ್ನೇ ವಿಕೃತಗೊಳಿಸಿ ದೇಶವನ್ನು ಮತ್ತೆ ಬಹುರಾಷ್ಟ್ರೀಯ ಕಂಪೆನಿಗಳಿಗೆ ಒತ್ತೆ ಇಡುವ ಹುನ್ನಾರ ನಡೆಸಿದ್ದಾರೆ. ಪ್ರತಿಯೊಬ್ಬ ಭ್ರಷ್ಟ ರಾಜಕಾರಣಿಗೂ ಸಾಮ್ರಾಜ್ಯ ದಾಹ, ತಾನೇ ಪ್ರಧಾನ ಮಂತ್ರಿ, ರಾಷ್ಟ್ರಪತಿ ಆಗುವ ಕನಸು.

ಕುರ್ಚಿಯನ್ನು ಉಳಿಸಿಕೊಳ್ಳಲಿಕ್ಕಾಗಿ ಪಕ್ಷ ಕಟ್ಟುತ್ತಾರೆ. ಸಮಯಸಾಧಕರಾಗಿ ಚುನಾವಣೆಯಲ್ಲಿ ಗೆಲುವು ಸಾಧಿಸಲಿಕ್ಕಾಗಿ ಎಂತಹ ಕುಕೃತ್ಯ ಎಸಗಲೂ ಸಿದ್ಧವಾಗುತ್ತಾರೆ. ಅಭಿವೃದ್ಧಿ ಕಾಮಗಾರಿಗಳಿಗೆ ಕೈ ಹಾಕುವ ಸೋಗು ಹಾಕುತ್ತಾರೆ.

ಇದೆಲ್ಲ ಕೋಟಿಗಟ್ಟಲೆಯ ವ್ಯವಹಾರಗಳು. ಆದರೆ ಮಾಡುವುದೆಲ್ಲ ಕಳಪೆ ಕಾಮಗಾರಿ, ನಿರುದ್ಯೋಗ, ನೀರಿನ ಸಮಸ್ಯೆ, ವಿದ್ಯುತ್ ಅಭಾವಗಳ ಕಾರಣ ಮುಂದಿಟ್ಟುಕೊಂಡು ಗಣಿ ದೊರೆ, ಭೂಮಾಫಿಯಾ, ಕಂಟ್ರಾಕ್ಟರುಗಳು ಮುಂತಾದ ಹಗಲು ದರೋಡೆಕೋರರಿಂದ ಹಣ ಪಡೆದು ದೇಶದಲ್ಲಿ ಭ್ರಷ್ಟಾಚಾರ ವಿಶ್ವರೂಪ ತಾಳಲು ಬೇಕಾದ ಆರ್ಥಿಕ ವ್ಯವಸ್ಥೆಯನ್ನೆಲ್ಲ ಬುಡಮೇಲು ಮಾಡಿ ಹಣ ದೋಚುತ್ತಾರೆ.

ಮಳೆ ಇಲ್ಲದೆ ರೈತ ಬೆಳೆ ಬೆಳೆಯುತ್ತಿಲ್ಲ. ದೇಶದ ತುಂಬ ನಿರುದ್ಯೋಗದ ಸಮಸ್ಯೆ ತಾಂಡವವಾಡುತ್ತಿದೆ. ಮತಾಂತರ ಹಾವಳಿ ವಿನಾಶದ ಹಾದಿ ಹಿಡಿಸಿದೆ. ಇದೆಲ್ಲ ವಿರೋಧ ಪಕ್ಷದವರಿಗೆ ಅನುಕೂಲ ಉಂಟು ಮಾಡುವ ವಾತಾವರಣ, ಆಡಳಿತ ಪಕ್ಷವನ್ನು ಕೆಳಗಿಳಿಸಲು ಬೇಕಾದ ಎಲ್ಲ ಷಡ್ಯಂತ್ರದ ಪ್ರಾರಂಭ.

ಸಾಲ ಮೇಳದ ಭರವಸೆಕೊಟ್ಟು ವಿರೋಧ ಪಕ್ಷದವರು ರೈತನ ಆತ್ಮಹತ್ಯೆಗೆ ಪ್ರೇರಣೆ ನೀಡುತ್ತಾರೆ. ಸತ್ತ ರೈತನ ಹೆಣ ಮುಂದಿಟ್ಟುಕೊಂಡು ಆಡಳಿತ ಪಕ್ಷವನ್ನು ಕುರ್ಚಿಯಿಂದ ಇಳಿಸಲು ರಾಜಿನಾಮೆಗೆ ಆಗ್ರಹಿಸುತ್ತಾರೆ.

ಇದು ಇಂದಿನ ರಾಜಕಾರಣಿಗಳ ರಾಮರಾಜ್ಯದ ವೈಖರಿ! ಬೆಳಗಾದರೆ ದೇಶದ ತುಂಬೆಲ್ಲ ಮುಷ್ಕರ, ಬಂದ್, ಸತ್ಯಾಗ್ರಹ, ಚಳುವಳಿ, ಸಾರ್ವಜನಿಕ ಆಸ್ತಿ –ಪಾಸ್ತಿ ಧ್ವಂಸ, ರೈಲು ಬಸ್ಸುಗಳು ಬೆಂಕಿಗಾಹುತಿ! ಇದರಿಂದ ಬಾಡಿಗೆ ಪುಂಡು ಪೋಕರಿಗಳು, ರೌಡಿಗಳಂತಹ ಸಮಾಜ ಘಾತಕ ಶಕ್ತಿಗಳು ನಾಯಿಕೊಡೆಗಳಂತೆ ಬೆಳೆಯಲು ಕಾರಣವಾಗಿದೆ. ಈ ಸಮಾಜಘಾತುಕ ವ್ಯಕ್ತಿಗಳಿಗೆ ರಾಜಕಾರಣಿಗಳು, ಸಾರಾಯಿಗೆ, ಹಿಟ್ಟಿಗೆ ಹಣ ಕೊಡದಿದ್ದರೆ, ಅವರು ಮಾರಕಾಸ್ತ್ರಗಳನ್ನು ಹಿಡಿದು

ವಿನಾಕಾರಣ ಗಲಾಟೆ, ದೊಂಬಿ ಎಬ್ಬಿಸಿ ಮಾರಾಮಾರಿಗೆ ಇಳಿದು ಹಗರಣ ಮಾಡುತ್ತಾರೆ. ರಾತ್ರಿ ಹೊತ್ತು ಮನೆಗಳಿಗೆ ನುಗ್ಗಿ ಒಡವೆ ವಸ್ತ್ರ, ಹಣ ದೋಚಿ ಅಡ್ಡ ಬಂದವರನ್ನು ದಾರುಣವಾಗಿ ಹತ್ಯೆ ಮಾಡುತ್ತಾರೆ.

ಪತ್ರಿಕೆಗಳಲ್ಲಿ ಇಂತಹ ಸುದ್ದಿಗಳನ್ನು ಓದಿದ ದೇ.ಭ. ಪಟ್ಟಾಭಿಯವರಿಗೆ ಈ ದೇಶಕ್ಕೆ ಸ್ವಾತಂತ್ರ್ಯ ಬಂದಿದೆಯೋ ಇಲ್ಲ ಇನ್ನೂ ಬ್ರಿಟೀಷರೇ ಈ ದೇಶ ಆಳುತ್ತಿದ್ದಾರೋ ಎನ್ನುವ ಸಂಶಯ ಉಂಟಾಗುತ್ತದೆ.

ದೇಶದ ಹದಗೆಟ್ಟ ಪರಿಸ್ಥಿತಿಯನ್ನು ನೋಡಿದಾಗ ದೇ.ಭ. ಪಟ್ಟಾಭಿಯವರಿಗೆ ಅಂದಿಗೂ ಇಂದಿಗೂ ಏನು ವ್ಯತ್ಯಾಸವೆಂದೇ ತಿಳಿಯುತ್ತಿಲ್ಲ.

ಬ್ರಿಟಿಷರು ಆಳುತ್ತಿದ್ದ ದೇಶದ ಜನ ಅವರು ಈ ದೇಶಕ್ಕೆ ಕಾಲಿಡುವ ಮುನ್ನ ಪೀಡೆ ಪಿಶಾಚಿಗಳಿಗೆ ಹೆದರುತ್ತಿದ್ದರು. ಅವರು ಬಂದ ಮೇಲೆ ಅವರ ಬೂಟುಕಾಲಿನ ಒದೆತಕ್ಕೆ, ಅವರ ಬಂದೂಕುಗಳ ಬಯೋನೆಟ್ಟಿಗೆ ಹೆದರುತ್ತಿದ್ದರು.

ಇಂದು ದೇಶ ಸ್ವತಂತ್ರವಾಗಿದೆ! ನಾಮಕಾವಸ್ತೆಗೆ!

ಆದರೆ ಭ್ರಷ್ಟ ರಾಜಕಾರಣಿಗಳ ಶೋಷಣೆಯ ಭೀತಿ ಆರ್ಥಿಕವಾಗಿ, ಶೈಕ್ಷಣಿಕವಾಗಿ, ಧಾರ್ಮಿಕವಾಗಿ, ಸಾಮಾಜಿಕವಾಗಿಯೂ ಪ್ರಜೆಗಳನ್ನು ಕಿತ್ತು ತಿನ್ನುತ್ತಿದೆ.

ಚುನಾವಣೆಗೆ ಮುಂಚೆ ಭ್ರಷ್ಟ ಹಾಗೂ ರೈತ ವಿರೋಧಿ ಸರ್ಕಾರವನ್ನು ರೈತರೇ ಕಿತ್ತೊಗೆಯಬೇಕೆಂದು ಪ್ರಚಾರ ಮಾಡುವ ಪಕ್ಷವೇ ಅಧಿಕಾರಕ್ಕೆ ಬಂದರೆ ಕಡಿಮೆ ಬಡ್ಡಿ, ಸಾಲ ಮನ್ನಾ ಯಶಸ್ವೀ ಯೋಜನೆಗಳ ಬೆಕ್ಕಿನ ಮೂಗಿಗೆ ತುಪ್ಪ ಸವರಿದ ನಾಟಕವಾಡಿ ಬಚಾವ್ ಆಗುತ್ತಾರೆ. ಯಾವ ಪಕ್ಷದ ಸರ್ಕಾರದ ಬಗ್ಗೆಯೂ ರೈತರಿಗಾಗಲೀ ಜನರಿಗಾಲೀ ವಿಶ್ವಾಸವಿಲ್ಲ.

ಮಾಜಿಮಂತ್ರಿ ಸಿದ್ದೇಗೌಡನ ಜಾಗಕ್ಕೆ ಈಗ ಆರಿಸಿ ಬಂದಿರುವ ಪಟ್ಟಾಭಿರಾಮಯ್ಯನವರ ಶಿಷ್ಯ ಮುನಿಯಪ್ಪನ ಜತೆ ಆಗ ಇನ್ನೂ ಅದೇ ಪಕ್ಷದಲ್ಲೇ ಇದ್ದ ಸಿದ್ದೇಗೌಡ ಕೂಡ ಪಟ್ಟಾಭಿರಾಮಯ್ಯನವರ ಮನೆಗೆ ಒಮ್ಮೆ ಕಡೇ ಬಾರಿ ಬಂದು ಹೋಗಿದ್ದ. ಆಗಷ್ಟೇ ಕೆಲವು ದಿನಗಳ ಹಿಂದೆ ರಸಗೊಬ್ಬರ ಪ್ರತಿಭಟನೆ ಮಾಡಿ, ಪೋಲಿಸರು ಗೋಲೀಬಾರ್ ಮಾಡಿದಾಗ ಒಬ್ಬ ರೈತ ಸತ್ತು ಹತ್ತಾರು ಮಂದಿಗೆ ಗಾಯವಾದ ಘಟನೆ ನಡೆದಿತ್ತು.

ಪರಿಹಾರಕ್ಕಾಗಿ ರೈತರು ಆಕ್ರೋಶ ಮಾಡಿದರು. ಮಾಡಿದರು ಅನ್ನುವುದಕ್ಕಿಂತ ಈ ಘಟನೆಗೆ ಕಾರಣರಾಗಿ ಹಿನ್ನೆಲೆಯಲ್ಲಿದ್ದವರು ಮಾಡಿಸಿದ್ದರು. ಮುಖ್ಯಮಂತ್ರಿಗಳು ಸಾಂತ್ವನ ಹೇಳಿ ಮೃತನ ಕುಟುಂಬಕ್ಕೆ ಪರಿಹಾರ ಘೋಷಿಸಿದರು.

**ಸರ್ವಪಕ್ಷಗಳ ಸಭೆ ನಡೆಯಿತು.**

ಇದು ರಾಜಕೀಯ ಪಿತೂರಿ ಎಂದು ಖಂಡಿಸಿದ್ದೂ ಆಯಿತು. ಈ ಬಗ್ಗೆ ದೇ.ಭ. ಪಟ್ಟಾಭಿರಾಮಯ್ಯನವರ ಸಲಹೆ ಕೇಳಲು ಬಂದಿದ್ದ ಶಿಷ್ಯ ಮುನಿಯಪ್ಪ ಸಿದ್ದೇಗೌಡನೊಂದಿಗೆ,

"ಅಲ್ಲಯ್ಯಾ ಮುನಿಯಪ್ಪಾ! ಈ ರಸಗೊಬ್ಬರ ಬಿತ್ತನೆ ಬೀಜದ ಕೊರತೆ ಹೊಸ ಮಂತ್ರಿಮಂಡಲ ರಚನೆಯಾದ ಮಾರನೇ ದಿನವೇ ಕಾಣಿಸಿಕೊಂಡಿತೇ? ಯಾಕೆ ಇದಕ್ಕೂ ಮುಂಚೆ ಇದು ಯಾರ ಗಮನಕ್ಕೂ ಬರಲಿಲ್ಲವೇ? ಪ್ರತಿ ವರ್ಷ ಮುಂಗಾರು ಬರುತ್ತದೆ. ಬರುವ ಮೊದಲೇ ರಸಗೊಬ್ಬರ ಶೇಖರಣೆಯ ಬಗ್ಗೆ ಯಾಕೆ ತಾಲ್ಲೂಕು, ಜಿಲ್ಲಾ ಅಧಿಕಾರಿಗಳು, ಸಂಬಂಧಪಟ್ಟ ಇಲಾಖೆ ಮುನ್ನೆಚ್ಚರಿಕೆ ವಹಿಸಿ ಸಕಾಲಕ್ಕೆ ಸಾಕಷ್ಟು ರಸಗೊಬ್ಬರ, ಬಿತ್ತನೆ ಬೀಜದ ದಾಸ್ತಾನು ಮಾಡುವ ಬಗ್ಗೆ ಕ್ರಮ ಕೈಗೊಳ್ಳದೆ ಕೈಕಟ್ಟಿ ಕುಳಿತಿರುತ್ತಾರೆ". ಆಗ ಇದೇ ಪ್ರತಿಭಟನಾಕಾರರು, ಈ ರೈತರು, ಈ ಗೂಂಡಾ ಪುಢಾರಿಗಳು, ಭ್ರಷ್ಟ ರಾಜಕಾರಣಿಗಳೆಲ್ಲಾ ಎಲ್ಲಿಗೆ ಹೋಗಿದ್ದರು. ಇವರ ಸೊಲ್ಲೆಲ್ಲ ಅಡಗಿ ಕುಳಿತಿತ್ತೇಕೆ? ಇಷ್ಟು ಸಾಲದೇ ಇದೆಲ್ಲ ತಮಗೆ ಅಧಿಕಾರ ಸಿಗದ ವಿರೋಧ ಪಕ್ಷಗಳ ಕುತಂತ್ರವೆಂದು ಸಾಬೀತು ಮಾಡಲಿಕ್ಕೆ? ಎಲ್ಲಾ ರಾಜಕಾರಿಣಿಗಳೂ ಅವರಿಗೆ 'ಆತ್ಮ' ಅಂತ ಒಂದಿದ್ದರೆ ಆ 'ಆತ್ಮಸಾಕ್ಷಿ'ಯಾಗಿ ಹೇಳಲಿ, ಇದು ಯಾರ ನಿರ್ಲಕ್ಷದ ಪ್ರತಿಫಲ? ಸಾಕಷ್ಟು ರಸಗೊಬ್ಬರದ ಪೂರೈಕೆಗಾಗಿ ರಾಜ್ಯ ಸರ್ಕಾರಗಳು, ಕೇಂದ್ರ ಸರ್ಕಾರಕ್ಕೆ ಜನವರಿ ತಿಂಗಳಲ್ಲೇ ಬೇಡಿಕೆ ಸಲ್ಲಿಸಲಿಲ್ಲವೇಕೆ?

ಈ ಗಲಾಟೆ, ದೊಂಬಿ, ಲೂಟಿ, ದರೋಡೆ, ಸಾರ್ವಜನಿಕ ಆಸ್ತಿಪಾಸ್ತಿಗೆ ಹಾನಿ ಉಂಟು ಮಾಡುತ್ತಿರುವ ಈ ದೇಶದ್ರೋಹಿಗಳು ಆಗ ಎಲ್ಲಿ ಹೋಗಿದ್ದರು. ಆಡಳಿತ ನಡೆಸುತ್ತಿರುವ ಸರ್ಕಾರವನ್ನು ಇಕ್ಕಟ್ಟಿಗೆ ಸಿಕ್ಕಿಸಿ ಬಿಕ್ಕಟ್ಟುಂಟು 'ಮಾಡುತ್ತಿರುವ ಇದೇ ವಿರೋಧ ಪಕ್ಷ ಅಧಿಕಾರದಲ್ಲಿದ್ದಾಗ ಎಷ್ಟು ಮುಂಜಾಗ್ರತೆ ಕ್ರಮಗಳನ್ನು ಕೈಗೊಂಡಿತ್ತು? ಇವರಷ್ಟು ಸಾಚಾ? ಇದು ವಿರೋಧ ಪಕ್ಷದಲ್ಲಿರುವ ರಾಜಕಾರಣಿಗಳ ನಿರಂತರ ಅಧಿಕಾರದ ಯಮದಾಹ, ಅಷ್ಟೇ ಆಗಲಿ, ಯಾರು ಅಧಿಕಾರದಲ್ಲಿದ್ದರೂ ಮಾಡುವುದೊಂದೇ, ಯಾವ ಪಕ್ಷದ ರಾಜಕಾರಣಿಗೂ ಇಂದು ದೇಶದ ಬಗ್ಗೆಯಾಗಲೀ ರೈತರ ಬಗ್ಗೆಯಾಗಲೀ, ಶೋಷಿತವರ್ಗದ ಬಗ್ಗೆಯಾಗಲೀ ಕಾಳಜಿ ಇಲ್ಲ. ಅವರು ಸಕಾಲದಲ್ಲಿ ರಸಗೊಬ್ಬರ – ಬಿತ್ತನೆ ಬೀಜ ಸರಬರಾಜು ಮಾಡುವ ಬಗ್ಗೆ ಚಿಂತಿಸುವುದೂ ಇಲ್ಲ.

ಅವರ ಚಿಂತೆಯೇ ಬೇರೆ. ಹೀಗೆ ಕೃತಕ ಅಭಾವದ ಸನ್ನಿವೇಶ ನಿರ್ಮಾಣ ಮಾಡುವುದರಿಂದ ರಸಗೊಬ್ಬರ ಕಂಪೆನಿಗಳಿಗೆ ಕೋಟ್ಯಾನುಕೋಟಿ

ಲಾಭ ಮಾಡಿಕೊಡುವುದು, ಅವರ ಆದಾಯ ಹೆಚ್ಚಿಸಿ ಅವರಿಂದ ಲಂಚ ಗಿಟ್ಟಿಸಿಕೊಳ್ಳುವುದು. ಇದೇ ತಾನೇ ರಾಜಕಾರಣಿಗಳ ರಾಮರಾಜ್ಯ ಸ್ಥಾಪನೆಯ ಒಳಗುಟ್ಟು?

ಈ ದೇಶದಲ್ಲಿ ಯಾವ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದರೂ ಇದೇ ಹಣೇಬರಹವೇ. ಸರ್ಕಾರವನ್ನು ಆರೋಪಿಸುವ ಸಂಚು ರೂಪಿಸುವ ವಿರೋಧ ಪಕ್ಷಗಳ ನಿಜ ಬಣ್ಣ ಬಯಲು ಮಾಡಿ, ಕೀಳು ಮಟ್ಟದ ಕೊಳಕು ರಾಜ-ಕೀಯ ಮಾಡುವುದನ್ನು ರಾಜಕಾರಣಿಗಳು ಮೊದಲು ಬಿಡಬೇಕು. ಅಂತಹ ಮುಂಡರನ್ನು ಹಿಡಿದು – ಉಗ್ರವಾಗಿ ಶಿಕ್ಷಿಸುವಂತಾಗಬೇಕು. ದೇಶದಲ್ಲಾಗುವ ಚಳುವಳಿ – ಮುಷ್ಕರಗಳಿಂದ ಉಂಟಾಗುವ ಸಾರ್ವಜನಿಕ ಆಸ್ತಿಪಾಸ್ತಿ ನಷ್ಟಗಳಿಗೆ ಈ ವಿಧ್ವಂಸಕರನ್ನು ಹೊಣೆಗಾರರನ್ನಾಗಿ ಮಾಡಬೇಕು. ಇಂತಹವರಿಗೆ ರಾಜ-ಕೀಯ ಕ್ಷೇತ್ರದಿಂದ ಬಹಿಷ್ಕಾರ ಹಾಕಬೇಕು.

ಭ್ರಷ್ಟ ರಾಜಕಾರಣಿಗಳು ಅಧಿಕಾರದಲ್ಲಿರುವಾಗ ದೋಚಿದ ಬಡಪ್ರಜೆಗಳ ಕೋಟಿ, ಕೋಟಿ ಶತಕೋಟಿ ಹಣವನ್ನು ವಸೂಲು ಮಾಡಲು ಇವರ ಮನೆ, ಮಠ ಆಸ್ತಿಗಳನ್ನೆಲ್ಲಾ ಮುಟ್ಟುಗೋಲು ಹಾಕಿಕೊಳ್ಳಬೇಕು. ಇವರನ್ನು ಬರಿಗೈಯಲ್ಲಿ ಬೀದಿಗೆ ಹಾಕಬೇಕು.

ಈ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಾ ಬ್ರಿಟಿಷರ ಬಂದೂಕುಗಳ ಗೋಳಿಬಾರಿಗೆ ಸಿಕ್ಕಿ ಸತ್ತ ಆ ವೀರ ಮರಣವೆಲ್ಲಿ? ಕ್ಷುದ್ರ, ಕ್ಷುಲ್ಲಕ, ಕುತಂತ್ರಿ, ನೀಚ ರಾಜಕಾರಣಿಗಳ ಮಾತು ಕೇಳಿ, ದೇಶವನ್ನು ಅರಾಜಕೀಯ, ಆತಂತ್ರಗೊಳಿಸುವ ಪ್ರತಿಭಟನೆಗಳ ಹೆಸರಿನಲ್ಲಿ ಪಾಲ್ಗೊಂಡು ಪೋಲಿಸರ ಗೋಳೀಬಾರಿಗೆ ಸಿಕ್ಕಿ ಸಾಯುವ ಹೇಡಿ ಸಾವೆಲ್ಲಿ?

**ಇಲ್ಲಿ ಗೋಳಿಬಾರ್‌ಗೆ ಆದೇಶ ಇತ್ತವರು ಯಾರು?**

ಯಾರೇ ಆಗಿರಲಿ, ಈಗಿನ ಸಮಸ್ಯೆ ಗೋಳೀಬಾರಿನದಲ್ಲ. ಈ ಗೋಳಿಬಾರ್ ಮಾಡಲಿಕ್ಕೆ ಕಾರಣರಾರು? ಗೋಳೀಬಾರ್‌ನಿಂದಾಗಿ ಸತ್ತದ್ದು ಓರ್ವ ವ್ಯಕ್ತಿ. ಆದರೆ ಇದರಿಂದಾದ ಸಾರ್ವಜನಿಕ ಆಸ್ತಿಪಾಸ್ತಿಯ ನಷ್ಟ ಎಷ್ಟು? ಅದರ ಬೆಲೆ ಕಟ್ಟುವವರು ಯಾರು? ಮತ್ತೆ ಈ ನಷ್ಟವೆಲ್ಲಾ ಸಾರ್ವಜನಿಕರ ಕಿಸೆಯ ಹಣದಿಂದಲೇ ಭರ್ತಿಯಾಗಬೇಕು. ಅಂದರೆ ಈ ನಷ್ಟ ಅಂತಿಮವಾಗಿ ಆದದ್ದು ಯಾರಿಗೆ?

ಎಷ್ಟು ವಾಹನಗಳು ಬೂದಿ ಆದುವು? ಎಷ್ಟು ಸರ್ಕಾರಿ ಕಛೇರಿಗಳ ಕಿಟಕಿ, ಬಾಗಿಲು, ಪೀಠೋಪಕರಣಗಳು, ವಿದ್ಯುತ್ ಉಪಕರಣಗಳು ಒಡೆದು ಚೂರಾದುವು? ಕೋಟ್ಯಾಂತರ ರೂಪಾಯಿ ಆಸ್ತಿ ನಷ್ಟ ಈ ಮೂರ್ಖತನದ

ಪರಮಾವಧಿಗೆ ಕೈ ಹಾಕುವ ದೇಶದ್ರೋಹಿಗಳು ಕಿಂಚಿತ್ತಾದರೂ ಆಲೋಚನೆ ಮಾಡಿ ಸ್ವತಂತ್ರ ಭಾರತದ ಸ್ವಹಿತ ಅನ್ಯಹಿತಗಳನ್ನು ಯೋಚಿಸಿ ಕಾರ್ಯ ಪ್ರವೃತ್ತರಾಗಬಾರದೇಕೆ?

ರಸಗೊಬ್ಬರ ಸಕಾಲಕ್ಕೆ ಬಾರದಿರುವ ಕಾರಣವೇನು? ಅಕ್ರಮ ದಾಸ್ತಾನಿಗೆ ಕಾರಣರಾರು? ಇದರ ಹಿಂದಿರುವ ಭ್ರಷ್ಟ ರಾಜಕಾರಣಿಗಳು ಯಾರು? ಎನ್ನುವ ಶೋಧ ನಡೆಸಬಾರದೇ? ಪ್ರತಿ ವರುಷವೂ ಆಗುತ್ತಿರುವ ಈ ಅನಾಹುತವನ್ನು ತಪ್ಪಿಸಲು ಪರ್ಯಾಯ ಕ್ರಮಗಳನ್ನಾದರೂ ಕೈಗೊಳ್ಳಬೇಕು, ರಸಗೊಬ್ಬರ ಬಳಕೆ ಕಡಿಮೆ ಮಾಡಬೇಕು. ನಮ್ಮ ಹಿಂದಿನ ರೈತರು ಇಷ್ಟು ದಿನವೂ ಈ ರಸಗೊಬ್ಬರ ಬಳಸಿಯೇ ಬೆಳೆ ಬೆಳೆಯುತ್ತಿದ್ದರೆ? ರಸಗೊಬ್ಬರವನ್ನು ಅವಲಂಬಿಸದೆ, ಕೊಟ್ಟಿಗೆ ಗೊಬ್ಬರ, ಹಸಿರೆಲೆ ಗೊಬ್ಬರ ಇತ್ಯಾದಿ ಸಾವಯವ ಗೊಬ್ಬರಗಳ ಬಳಕೆಯನ್ನು ಹೆಚ್ಚಿಸಿ ರೈತ ಸ್ವಾವಲಂಬಿಯಾಗುವಂತೆ ಮಾಡಬಾರದೇಕೆ?

ನಾನು 'ಪ್ರತಿಭಟನೆ' ಬೇಡವೆನ್ನುವುದಿಲ್ಲ. ಪ್ರತಿಭಟಿಸಲಿ, ಅದರಲ್ಲಿ ಹಿಂಸಾಚಾರವೇಕೆ? ಕಿಡಿಗೇಡಿಗಳ ಪುಂಡಾಟವೇಕೆ? ಹಿಂಸಾಕೃತ್ಯಗಳೇಕೆ? ಇದು ರಾಜಕೀಯ ಪ್ರೇರಿತವೆಂದು ಹೇಳಲು ಬೇರೆ ಸಾಕ್ಷಿ ಪುರಾವೆಗಳು ಬೇಕೆ? ಈ ಸಮಾಜಘಾತುಕ ರಾಜಕಾರಣಿಗಳು ಬ್ರಿಟಿಷ್ ಮಾಸ್ಕ'ನ್ನು ಕಳಚಿಟ್ಟು ಸ್ವತಂತ್ರ ಭಾರತೀಯ ಪ್ರಜೆಗಳಾಗಬೇಕು. 'ಸ್ವರಾಜ್ಯ' ಬಂಧುಗಳಾಗಬೇಕು. ರಾಜಕಾರಣಿಗಳ ಹಾಗೇ ಮಾರಕಾಸ್ತ್ರಗಳಾಗಿರುವ ಚಳುವಳಿ, ಸತ್ಯಾಗ್ರಹ, ಮುಷ್ಕರಗಳನ್ನು ನಿಲ್ಲಿಸಬೇಕು. ಚುನಾವಣೆಗಳಲ್ಲಿ ಓಟುಗಿಟ್ಟಿಸಲು ರಾಜ-ಕಾರಣಿಗಳು ಮಾಡಿಕೊಂಡಿರುವ 'ರೈತರ ಆತ್ಮಹತ್ಯಾ ಪ್ರಕರಣ' ದ ಪ್ರಬಲ ಅಸ್ತ್ರವನ್ನು ತ್ಯಜಿಸಿ, ರೈತನ ಶ್ರೇಯಸ್ಸನ್ನು ಬಯಸಬೇಕು.

ರೈತನ ಬದುಕಿನ ಕಡೆ, ಅವನ ಒಳಿತಿಗಾಗಿ ಹೆಚ್ಚು ಗಮನ ಕೊಡಬೇಕು. ದೇಶ ಉಳಿಯುವುದು ರೈತನಿಂದ, ಅಳಿಯುವುದು ಬಹುರಾಷ್ಟ್ರೀಯ ಕಂಪೆನಿಗಳಿಂದ, ರೈತರು ನಗರಗಳಿಗೆ ವಲಸೆ ಬರುವುದನ್ನು ತಪ್ಪಿಸಬೇಕು. ಕೃಷಿಕರ ಸಂಖ್ಯೆ ಹೆಚ್ಚಿಸಬೇಕು. ಹಳ್ಳಿಗಳಲ್ಲಿ ರೈತರಿಗೆ ಕನಿಷ್ಠ ಸೌಲಭ್ಯಗಳನ್ನು ಒದಗಿಸಬೇಕು. ನೀರಿಲ್ಲದೆ ಬೆಳೆಯಿಲ್ಲ. ಜಲ ಬತ್ತಿದ ಬಾವಿಗಳು, ಬೋರ್‌ಗಳು, ಮಳೆಯಿಲ್ಲದೆ ಒಣಗಿದ ಕೆರೆ – ಕುಂಟೆಗಳು, ಬೇಡದ ಅಭಿವೃದ್ಧಿ ಕಾರ್ಯಗಳಿಗೆ ಸಹಸ್ರಾರು ಕೋಟಿ ಸುರಿಯುವ ಸರ್ಕಾರ (ವ್ಯರ್ಥವಾಗಿ ಸಮುದ್ರ ಸೇರುವ ನದೀ ನೀರಿನ ಸದ್ಬಳಕೆಯಾಗಬೇಕಾದರೆ) ನದಿಗಳನ್ನು ಸೇರಿಸುವ ಯೋಜನೆಯನ್ನು ರೂಪಿಸಲಿ, ಅದರಿಂದ ಸಾಕಷ್ಟು ನೀರು ಸಿಗುವಂತಾಗುತ್ತದೆ. ರೈತ ಆತ್ಮಹತ್ಯೆಯಾಕೆ ಮಾಡಿಕೊಳ್ಳುತ್ತಾನೆ? ಈ ಪ್ರಾಥಮಿಕ ಪರಿಜ್ಞಾನವೂ ಇಲ್ಲದ ರಾಜಕಾರಣಿಗಳು

ರಾಮರಾಜ್ಯವನ್ನೇನು ಕಟ್ಟಿಯಾರು?

ನದಿ ಜೋಡಣೆಗಳ ವಿಚಾರ ಯಾರಿಗೂ ಬೇಕಾಗಿಲ್ಲ. ಇದರಿಂದ ಲಕ್ಷಾಂತರ ಎಕರೆ ನೀರಾವರಿಗೆ ಬೆಳೆ ಬೆಳೆಯಬಹುದು. ಜಲಾಶಯ ನಿರ್ಮಾಣ, ಕಾಲುವೆಗಳ ನಿರ್ಮಾಣ, ಕೆರೆಗಳ ಅಭಿವೃದ್ಧಿ ಕಾರ್ಯಗಳ ಬಗ್ಗೆ ಯಾಕೆ ಯಾವ ರಾಜಕಾರಣಿಗಳೂ ಗಮನ ಕೊಡುತ್ತಿಲ್ಲ? ಆದರೆ ಜಲಸಂಪನ್ಮೂಲ ಅಭಿವೃದ್ಧಿ ಯೋಜನೆಗಳ ಸಾವಿರಾರು ಕೋಟಿ ಬಜೆಟ್‌ನಲ್ಲಿ ತೋರಿಸಿ ರಾಜಕಾರಣಿಗಳ ಬ್ಯಾಂಕ್ ಖಾತೆಗಳಿಗೆ ಜಮೆಯಾಗುತ್ತಿರುವುದು ನಿಂತೇ ಇಲ್ಲ. ಯೋಜನೆಗಳ ಸಾಕ್ಷಾತ್ ಅನುಷ್ಠಾನ ಶೂನ್ಯ"

ಪಟ್ಟಾಭಿಯವರು ಹೇಳಿ ಮುಗಿಸಿದ್ದರು.

* * *

ಮುನಿಸಿಪಲ್ ಕಚೇರಿಯ ಆವರಣದ ಬಯಲಲ್ಲಿ ಸಹಸ್ರಾರು ಜನ ಸೇರಿದ್ದಾರೆ. ಧ್ವಜಾರೋಹಣ ಆಯಿತು. ದೇ.ಭ,ಪಟ್ಟಾಭಿರಾಮಯ್ಯನವರ ಭಾಷಣ ಇನ್ನೇನು ಕೊನೆಗೊಳ್ಳುವಷ್ಟರಲ್ಲಿ ಗಲಾಟೆ, ದೊಂಬಿ,ಕೂಗಾಟ, ಚೀರಾಟ ಶುರುವಾಯಿತು. ನೆರೆದ ಜನ ಚೆಲ್ಲಾಪಿಲ್ಲಿಯಾಯಿತು. ಕೆಲವೇ ಪೊಲೀಸರಿಂದ ಗಲಭೆಯನ್ನು ನಿಯಂತ್ರಿಸಲಾಗಲಿಲ್ಲ. ಟಿಯರ್ ಗ್ಯಾಸ್‌ಗೂ ಜನ ಬಗ್ಗಲಿಲ್ಲ. ಕಡೆಗೆ ಗೋಳಿಬಾರ್ ಮಾಡಿದರು. ಅದಕ್ಕೆ ಬಲಿಯಾದವರು ದೇ,ಭ, ಪಟ್ಟಾಭಿರಾಮಯ್ಯ!

ದೂರದಲ್ಲೆಲ್ಲಿಂದಲೋ 'ಸಾರೇಜಹಾನ್ಸೆ ಅಚ್ಚಾ' ಗೀತೆಯದನಿ ಸಣ್ಣದಾಗಿ ಕೇಳಿಬರುತ್ತಿತ್ತು.

* * *

***ಆಕರ : "ಸ್ಥಿತಿಗತಿ" 2003. ಸಂ: ಡಾ. ಎನ್ ಭಾಸ್ಕರ ಆಚಾರ್ಯ***

**ಜಿ.ಬಿ. ಸತ್ಯಮೂರ್ತಿ:**

ಕೋಲಾರ ಜಿಲ್ಲೆಯ ಚಿಂತಾಮಣಿಯವರು. (ಜನನ: 10-09-1937) ತಂದೆ ಬಿ.ಕೆ. ಗುರುರಾವ್, ತಾಯಿ ಕೃಷ್ಣವೇಣಿ ಬಾಯಿ. ಚಿನ್ನದಗಣಿಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ, ಮಾಧ್ಯಮಿಕ ಶಾಲೆ ವೇಮಗಲ್, ಮತ್ತು ಕೋಲಾರದಲ್ಲಿ ಪ್ರೌಢಶಾಲೆಯ ನಂತರ ಮೈಸೂರು ಮುಕ್ತವಿಶ್ವವಿದ್ಯಾಲಯದಿಂದ ಎಂ.ಎ. (ಜಾನಪದ ಐಚ್ಛಿಕ) ಪದವಿ. ಕುಂದಾಪುರದಲ್ಲಿ ಕೃಷಿ ಇಲಾಖೆಯಲ್ಲಿ ಉದ್ಯೋಗ. ಸದ್ಯ ನಿವೃತ್ತಿ. ಇವರ ಲೇಖನಗಳು ವಿವಿಧ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ.

ಹಲವಾರು ತೆಲುಗು ಕತೆಗಳನ್ನೂ ಅನುವಾದಿಸಿದ್ದಾರೆ. ಕಥೆಗಳು ಆಕಾಶವಾಣಿ, ದೂರದರ್ಶನ ಜಾಲಗಳಲ್ಲಿಯೂ ಪ್ರಸಾರವಾಗಿವೆ. ಮಯೂರ ಪ್ರಕಾಶನ ಆರಂಬಿಸಿದ್ದು, ನಂತರ ಸಮಾನ ಮನಸ್ಕರೊಡನೆ ಕಲಾಮಯೂರಿ ಪ್ರಕಾಶನ ನಡೆಸಿದರು.

ಪ್ರೇಮದ ಬಾಳು, ಒಲವಿನ ಒಸರು, ಹೃದಯವೀಣೆ, ದೇವರಿಲ್ಲದ ಗುಡಿ, ವಸಂತ ದಹನ, ನಿಯತ್ತಿನ ನೇಣು, ಶರಶಯ್ಯೆ, ಪ್ರೇಮಪತಂಗ, ಸೀಮಂತ, ತಾಳಮೇಳ, ಕಥಾನಾಯಕಿ, ಗುಮ್ಮನ ಕರೆಯದಿರೆ–ಇವು ಕಾದಂಬರಿಗಳು.

ಕಥಾಸಂಕಲನಗಳು–ಲವ್ ಇನ್ ನಂದಿ, ಬುದ್ಧನದೇ ಚಿಂತೆ, ಶೈಲಾ ಟೀಚರ್, ಮುನಿಯನ ಮನವಿ, ಭೂಕಂಪ ಇತ್ಯಾದಿ, ಯಜ್ಞಪಶು, ಆಹುತಿ, ಮುಗಿಯದ ನಾಟಕ, ಅಪಹೃತ, ಹೆಳವನ ಹೆಗಲೇರಿದ ಕುರುಡ –ಇವು ನಾಟಕಗಳು. ಶ್ರೀರಾಘವೇಂದ್ರ ಸ್ವಾಮಿಗಳನ್ನೂ ಕುರಿತು ಬರೆದ 'ಗುರುದಕ್ಷಿಣೆ' ಮತ್ತು ಮಹಾಭಾರತದ ವಸ್ತುನಿಷ್ಠ ಅಧ್ಯಯನದ ಕೃತಿ 'ಸರಳಭಾರತ'. ಇವ ರಿಗೆ ರತ್ನಪ್ರಶಸ್ತಿ, ವಿಶ್ವೇಶ್ವರಯ್ಯ ಸಾಹಿತ್ಯ ಪ್ರಶಸ್ತಿ, ಅತಿಮಬ್ಬೆ ಪ್ರತಿಷ್ಠಾನ ಪ್ರಶಸ್ತಿ, ರಾಜಕುಮಾರ್ ಅಭಿಮಾನಿಗಳ ಸಂಘ, ಅಂಬರೀಶ್ ಅಭಿಮಾನಿಗಳ ಸಂಘ, ಕೃಷಿ ಇಲಾಖೆ ಇವರುಗಳಿಂದ ಸನ್ಮಾನಗಳು ಲಭಿಸಿವೆ.

## 2.3 ಹೊತ್ತು ಮಾರುವವರು

**–ಡಾ. ಎಲ್. ಸಿ. ಸುಮಿತ್ರಾ**

ಅಂಗಳದಲ್ಲಿ ಕುಳಿತು ಕುಳಿತು ವಾಟೆಕಾಯಿ ಹೆಚ್ಚುತ್ತಿದ್ದ ಚೆನ್ನಿ ಮತ್ತು ಅಮ್ಮ ಇಬ್ಬರೂ ಮೌನವಾಗಿ ತಮ್ಮ ಕೆಲಸ ಮಾಡುತ್ತಿದ್ದರು. ಬೇಸಿಗೆಯ ಮಧ್ಯಾಹ್ನದ ಮೌನ ತಾನೆತಾನಾಗಿತ್ತು. ಬೇಲಿಯ ಮೇಲೆ ಕುಕಿಲುತ್ತಿದ್ದ ಪಿಕಳಾರಗಳ ಮಧುರಮಾತು, ದಾಸವಾಳ ಪೊದೆಯ ಮೇಲೆ ಒಂದನ್ನೊಂದು ಅಟ್ಟಾಡಿಸುತ್ತಿದ್ದ ಹೂಹಕ್ಕಿಗಳ ಕಿಚಪಿಚ ಬಿಟ್ಟರೆ ಬೇರೆ ಸದ್ದಿಲ್ಲ. ಟಿ ವಿ, ಮೊಬೈಲ್ ಯಾವುದೂ ಇಲ್ಲದೆ ಕೆಲಸ ಮಾಡಲು ಬೇಕಷ್ಟು ಸಮಯವಿತ್ತು. ಪ್ರತಿಮೆಯಂತೆ ಕುಳಿತಿದ್ದ ಚೆನ್ನಿ ಮೌನ ಮುರಿದು, 'ಬುಟ್ಟಿ ತುಂಬಿತಲ್ಲ ಚಪ್ಪರದಲ್ಲಿಹರಡಿ ಬತ್ತೀನ್ರ' ಅಂದು ತೆಳ್ಳಗೆ ಬಿಲ್ಲೆಯಂತೆ ಹೆಚ್ಚಿದ ವಾಟೆಕಾಯಿಯನ್ನು ಬುಟ್ಟಿಯಲ್ಲಿ ತುಂಬಿಕೊಂಡು ಹುಷಾರಾಗಿ ಅಡಿಕೆ ಚಪ್ಪರ ಹತ್ತಿದಳು. ಅಡಿಕೆ ಕೊಯಿಲು ಮುಗಿದಿದ್ದರಿಂದ ಅಲ್ಲಿ ಮೂಲೆಯ ತಟ್ಟಿಯಲ್ಲಿದ್ದ ಸ್ವಲ್ಪ ಗೋಟಡಿಕೆ ಬಿಟ್ಟರೆ ಉಳಿದದ್ದೆಲ್ಲ ಒಣಗಲು ಹಾಕಿದ್ದ ಕಾಳು ಮೆಣಸು, ಯಾಲಕ್ಕಿ, ಕಾಫಿಬೀಜ, ಜೀರಕನ ಹುಳಿ ಹೀಗೆ ಅಡಿಕೆಯೊಂದನ್ನು ಬಿಟ್ಟು ಬೇರೆಲ್ಲ ಇತ್ತು. ಖಾಲಿಯಿದ್ದ ತಟ್ಟಿಯಲ್ಲಿ ವಾಟೆಹುಳಿಯನ್ನು ಅವಳು ಬಿಡಿಸಿ ಬಿಡಿಸಿ ಒಣಗಲು ಹರಡಿ ಮತ್ತೆ ಬಂದು ವಾಟೆಕಾಯಿ ಹೆಚ್ಚತೊಡಗಿದಳು.

ಮೆಟ್ಟುಕತ್ತಿಯ ಮೇಲೆ ಕುಳಿತಿದ್ದ ಅಮ್ಮ ಕಾಯಿಗಳನ್ನು ಒಂದೇ ಗಾತ್ರದಲ್ಲಿ ಹೆಚ್ಚುತ್ತ ಮಧ್ಯೆ ಮಧ್ಯೆ ಅಡಿಕೆ ಹಾಳೆಯ ಬೀಸಣಿಗೆಯಿಂದ ಗಾಳಿ ಬೀಸಿಕೊಳ್ಳುತ್ತಿದ್ದರು. ಒಳಗಡೆಯಿಂದ ಬಂದ ಅಜ್ಜಿ ಬೆಲ್ಲ, ಹೆಸರುಬೇಳೆಯ ಪಾನಕ ತಂದುಕೊಟ್ಟರು.

ಗೇಟಿನ ಬಳಿ ಟೈಗರ್ ಬೊಗಳಿದ ಸದ್ದು ಕೇಳಿ ಎಲ್ಲರು ಕತ್ತು ಚಾಚಿ ನೋಡಿದರು.

ಇದಕ್ಕೇನು ಬುದ್ದಿಯಿಲ್ದ, ನಾನಲ್ದ ಅಂತ ಟೈಗರ್‌ನ ಸಮಾಧಾನ ಮಾಡ ಬಂದವಳು ಬಳೆಗಾರ್ತಿ ಪದ್ದು. ಇನ್ನೂ ಬೊಗಳುತ್ತಿದ್ದ ಜೂಲುನಾಯಿ ಬೆಳ್ಳಿಯನ್ನು ನೋಡಿ ಅಲ್ಲೆ ನಿಂತಳು, 'ಅದನ್ನು ಕಟ್ಟಿಹಾಕಿದಾರೆ ಬಾ ಮಾರಾಯ್ತಿ' ಅಂದಾಗಲೇ ಹುಷಾರಾಗಿ ಹೆಗಲ ಮೇಲಿದ್ದ ಬಳೆಚೀಲವನ್ನು ಇಳಿಸಿ ಕೆಂಪು ಸಿಮೆಂಟ್ ನೆಲದ ಮೇಲಿಟ್ಟು ತಾನೂ ಕುಳಿತು ಸೆರಗಿನಿಂದ ಗಾಳಿ ಬೀಸಿಕೊಂಡು ಸುಧಾರಿಸಿಕೊಂಡು ಸುತ್ತಲೂ ನೋಡಿ 'ಸ್ವಲ್ಪ ನೀರು ಕೊಡಿ ಅಮ್ಮ' ಅಂದಳು, ನೀರಿನ ಜತೆಗೆ ಪಾನಕವೂ ಬಂತು. ಕುಡಿದು ಸುಧಾರಿಸಿದ ಮೇಲೆ 'ಓ ಸ್ಯಣಮ್ಮಂಗ್ ರಜ ಇವತ್ತು ಭಾನುವಾರ ಹೇಳ್ತಾ ನಿಧಾನವಾಗಿ ಬಳೆ ಚೀಲ ತೆರೆದಳು, ಮೆಟ್ಟುಗತ್ತಿ ಮಡಚಿಟ್ಟು ಮೊದಲು ಬಂದವಳು ಚೆನ್ನಿ, ಆಮೇಲೆ ಅಂಗಳ

ಗುಡಿಸುವುದನ್ನು ನಿಲ್ಲಿಸಿ ಅಕ್ಕಣಿ ಬಂದು ಚೆನ್ನಿಯ ಪಕ್ಕ ಕುಳಿತುಕೊಳ್ಳುವಾಗ ಇನ್ನೊಂದು ದಿಕ್ಕಿನಲ್ಲಿ ಅಜ್ಜಿ ಆಮೇಲೆ ಅಮ್ಮ ಬಂದು ಕುಳಿತರು. ಆದರೆ ಪದ್ದು ಮೊದಲು ಕೇಳಿದ್ದು, ಸಣ್ಣಮ್ಮನಿಗೆ ಯಾವ ಬಳೆ? ವರ್ಕಿಂದಾ? ಸಾದಾವ? ಹಸಿರು, ನೀಲಿ, ಕೆಂಪು ಸಾಣಿ ಬಳೆಗಳು, ಚುಕ್ಕಿ ಬಳೆಗಳು ದಪ್ಪ ಪ್ಲಾಸ್ಟಿಕ್ ಬಳೆಗಳು. ಯಾವುದು?" "ನನಗೆ ನೀಲಿ ಬಣ್ಣದ್ದು ಇರಲಿ." ಅವಳು ಕೈಗೆ ನೀಲಿ ಬಣ್ಣದ ಬಳೆ ತೊಡಿಸಲು ಬಂದಳು. ನಾನು ಆಮೇಲೆ ಇಟ್ಟುಕೊಳ್ಳುತ್ತೇನೆ ಕೈಲಿ ಕೊಡು."

"ಆಯಿತು ತಕ್ಕಣಿ ಎರಡು ಜಾಸ್ತಿ ತೆಕ್ಕಣಿ, ಇದ್ದಾಗ ಒಡೀಬಹುದು". ಅಮ್ಮನ ಕೈಗೂ ಅಜ್ಜಿ ಕೈಗೂ, ಕೆಂಪು, ಹಸಿರು ಬಳೆ ಆದ ಮೇಲೆ ಅಕ್ಕಣಿ ತೊಟ್ಟುಕೊಂಡಳು. ಚೆನ್ನಿ ಬಳೆ ಇಡುವಂತಿಲ್ಲ. ಎಲ್ಲ ಆದಮೇಲೆ ಬಳಗಾರ್ತಿ ಅಪ್ಪನ ಬಳಿ ದುಡ್ಡು ತೆಗೆದುಕೊಂಡು, ಅಜ್ಜಿ ಕೊಟ್ಟ ಎಲಡಿಕೆಯನ್ನು ಹಾಕಿಕೊಂಡು ಅಮ್ಮನ ಹತ್ತಿರ ಸ್ವಲ್ಪ ಬಸಳೆಸೊಪ್ಪು ಕೇಳಿ ತೆಗೆದುಕೊಂಡು ಹೊರಟಳು. ಅವಳು ಮೆಟ್ಟಿಲಿಳಿದಳೊ ಇಲ್ಲವೋ ಕೊರಗರ ಸೇಸಿಯ ಆಗಮನವಾಯಿತು. ಟೈಗರ್ ಸೇಸಿಯ ಬುಟ್ಟಿಯ ಕಡೆಗೊಮ್ಮೆ, ಗೇಟಿನಾಚೆಗೆ ಹೋಗುತ್ತಿದ್ದ ಪದ್ದುವಿನ ಕಡೆಗೊಮ್ಮೆ ನೋಡುತ್ತ ಲಯಬದ್ಧವಾಗಿ ಬೊಗಳುತ್ತಿತ್ತು. ಗದರಿದಾಗ ಸುಮ್ಮನಾಯಿತು. ನಾಯಿ ಕಟ್ಟಿರುವುದನ್ನು ಖಚಿತ ಪಡಿಸಿಕೊಂಡು ಸೇಸಿ ಅಂಗಳದೊಳಗೆ ಬಂದು ಮೆಟ್ಟಿಲ ಬಳಿ ಬುಟ್ಟಿ ಕೆಳಗಿಟ್ಟಳು.

ಪದ್ದು ಬಂದುಹೋಗಿದ್ದೆ ಸುಳ್ಳೆನ್ನುವಂತೆ ಕೊರಾತಿಯ ಬುಟ್ಟಿಯ ಲೋಕ ಅಲ್ಲೆಲ್ಲ ವಿಸ್ತರಿಸಿಕೊಂಡಿತು. ಗುಂಡನೆಯ ಗೆರಸಿ, ಚಪ್ಪಟೆ ಆಕಾರದ ಬುಟ್ಟಿ, ಸಿಬ್ಬಲ, ದೊಡ್ಡ ಬುಟ್ಟಿ, ಚಿಕ್ಕ ಬುಟ್ಟಿ, ಹೂವಿನಬುಟ್ಟಿ ಎಲ್ಲವನ್ನು ದರಗಿನ ಜಲ್ಲೆಯಲ್ಲಿ ಅಡಕವಾಗಿಟ್ಟುಕೊಂಡಿದ್ದನ್ನು ಹೊರಗೆ ತೆಗೆದು ಬಿಡಿಸಿ ಇಟ್ಟಳು. ಎತ್ತುಗಳಿಗೆ ಹುರುಳಿ ಕೊಡಲು ಬೇಕೆಂದು ಮಂಜ ಎರಡು ಬುಟ್ಟಿ ತೆಗೆದಿಟ್ಟುಕೊಂಡ. ಅಕ್ಕಣಿ ದರಗಿನ ಜಲ್ಲೆ ಚೆನ್ನಾಗವೆ ಅಮ್ಮಾ ತಗಳಿ ಅಂದು ತರಗು ತುಂಬುವ ಜಲ್ಲೆಗಳೆರಡನ್ನು ಪ್ರತ್ಯೇಕವಾಗಿಟ್ಟಳು.

ದೊಡ್ಡ ಗೆರಸಿ ಮೆಣಸು ಕಾಳು, ಏಲಕ್ಕಿ ಒಣಗಿಸಲು ಚೆನ್ನಾಗಿದೆ ಅಂತ ತೆಗೆದುಕೊಂಡರು. ಅಜ್ಜಿಯ ಕಣ್ಣು ಹೂಬುಟ್ಟಿಯ ಮೇಲೆ ಇರುವುದನ್ನು ಗಮನಿಸಿ ಸೇಸಿ 'ಅಮ್ಮ ಸಣ್ಣ ಸಲಕಿನಿಂದ ಹೆಣೆದಿದ್ದು, ಗಟ್ಟಿಯಾಗಿದೆ. ನಾನ್ ಸತ್ತು ಬುಟ್ಟಿ ನನ್ ನೆನಪು ಮಾಡದೆ", ಬುಟ್ಟಿಯನ್ನು ಅಜ್ಜಿಯ ಕೈಗೆ ಕೊಟ್ಟಳು. ರಸ್ತೆಯಲ್ಲಿ ಹೋಗುತ್ತಿದ್ದ ತಮ್ಮಯ್ಯ ಬುಟ್ಟಿ ನೋಡಿ ಬಂದು ಚೌಕಾಸಿ ಮಾಡಿ ಎರಡು ಬುಟ್ಟಿ ಕೊಂಡಾಗ ಸೇಸಿಯ ಬುಟ್ಟಿಗಳೆಲ್ಲ ಖಾಲಿಯಾಗಿ ಎರಡು

ಮೊರ ಮಾತ್ರ ಉಳಿದವು, ಕುಳ್ಳಗಿದ್ದ ಸೇಸಿಯ ಕೂದಲು ಗುಂಗುರಾಗಿದ್ದವು. ಅವಳು ಸೀರೆಯನ್ನೂ ಕಾಲು ಕಾಣುವಷ್ಟು ಗಿಡ್ಡ ಉಟ್ಟುಕೊಂಡಿದ್ದಳು. ಅವಳು ಹಿತ್ತಿಲಬಾಗಿಲ ಕಡೆ ಹೋಗಿ ಮಜ್ಜಿಗೆ ಕೇಳಿ ಕುಡಿದು, ದುಡ್ಡು ಅಕ್ಕಿ ತೆಗೆದುಕೊಂಡು ಹೊರಟಳು. ಅವಳು ಹೋದ ಮೇಲೂ ತಾವು ಕೊಂಡ ಬುಟ್ಟಿಗಳ ಕುರಿತು ಮಾತು ಮುಂದುವರೆಯಿತು.

* * *

ಶನಿವಾರ ಸ್ಕೂಲ್‌ನಿಂದ ಬಂದಾಗ ಅಂಗಳದಲ್ಲಿ ಕುಂಬಾರ ಸೀನ ಕುಡಿಕೆ ಮಡಿಕೆ ಇಟ್ಟುಕೊಂಡು ಕುಳಿತಿದ್ದ. ನಾನಾ ಆಕಾರದ ಕೆಂಪು ಕಪ್ಪು ಬಣ್ಣದ ಕುಡಿಕೆ ಮಡಿಕೆಗಳು ಹರಡಿಕೊಂಡು ಕುಳಿತಿದ್ದವು. ಅಜ್ಜಿ ಆಯ್ದ ಮಡಕೆಯನ್ನು ತಿರುಗಿಸಿ ಮುರುಗಿಸಿ ನೋಡಿ, ಬೆರಳಿನಿಂದ ಬಾರಿಸಿ ಟಣ್ ಶಬ್ದ ಬರಿಸಿ ಪರೀಕ್ಷಿಸಿದರು. ರುಕ್ಕು ಕುಳ್ಳಗೆ ಅಗಲ ಬಾಯಿಯಿದ್ದ ಮಡಕೆಯೊಂದನ್ನು ತೋರಿಸಿ ಮೀನು ಬತ್ತಿಸಲು ಲಾಯಿದೆ ತಗಣಿ ಅಂದಳು.ಅಜ್ಜಿ ಮೊಸರು ಇಡಲು ಕಪ್ಪಗೆ ಬೇಯಿಸಿದ ಮಡಕೆಯನ್ನು ತೆಗೆದುಕೊಂಡರು, ಹಾಲು ಹೆಪ್ಪು ಹಾಕಿಡಲು ಬಳಸುತ್ತಿದ್ದ, ಜಿಡ್ಡಿನಿಂದ ಹೊಳೆಯುತ್ತಿದ್ದ ಮೊಸರು ಮಡಕೆಯನ್ನು ಬೆಕ್ಕು ಒಡೆದುಹಾಕಿತ್ತು. ಜೊತೆಗೆ ಎರಡು ಗುಂಡನೆಯ ಗುಂಡಾಲಗಳು, ಅವುಗಳ ಒಳಗೆ ಅಕ್ಕಿಕಾಳು ಹಾಕಿ ಒಳಗೆ ತೆಗೆದುಕೊಂಡು ಹೋದರು. ರುಕ್ಕು ನನಗೊಂದು 'ಕೊಡ' ಬೇಕು ಎಂದು ಬಂದು ಕೊಡ ನೋಡುವ ಗಡಿಬಿಡಿಯಲ್ಲಿ ಹೂಜಿಯ ಮೂತಿ ಮುಕ್ಕಾಗಿಸಿದಳು. ಮಡಕೆ ವ್ಯಾಪಾರ ಮುಗಿಸಿ ಸೀನ ಹೆಂಡತಿ ಜತೆ ಹಿತ್ತಿಲಕಡೆ ಹೋಗಿ ಕಾಫಿ ತಿಂಡಿ ತಿಂದು ಹೊರಟ. ಪ್ರತಿದಿನ ಎರಡು ಅಥವ ಮೂರು ಮನೆಗೆ ಹೋದರೆ ಅವರ ವ್ಯಾಪಾರ ಮುಗಿಯಿತು. ಜೈನ ಮುನಿಗಳು ಆಚರಿಸುವ 'ಚರಿಗೆ' ಎಂಬ ಹೆಸರಿನ ಭಿಕ್ಷೆಯಂತೆ ಅಂದಿನ ಅಗತ್ಯಕ್ಕೆ ಬೇಕಾದಷ್ಟೆ ಆದರೆ ಸಾಕು.

ಆಗ ಟೈಮ್ ಪಾಸ್, ಬೋರ್ ಎಂಬ ಶಬ್ದಗಳೇ ನಮ್ಮ ಪರಿಸರದಲ್ಲಿರಲಿಲ್ಲ. ಎಲರೂ ಒಂದಲ್ಲ ಒಂದು ಕೆಲಸದಲ್ಲಿ ತೊಡಗಿಕೊಂಡಿರುತ್ತಿದ್ದರು.ಇತ್ತೀಚೆಗೆ ಪ್ರೈಮರಿ ಸ್ಕೂಲ್ ಓದುತ್ತಿದ್ದ ಮಗುವಿನ ಬಾಯಿಯಲ್ಲಿ ಈ ಪದ ಕೇಳಿ ಆಶ್ಚರ್ಯವಾಯಿತು. ಅಜ್ಜಿಯ ಮನೆಗೆ ಹಳ್ಳಿಗೆ ಬಂದಿದ್ದ ಆ ಮಗು ಅಲ್ಲಿ ಯಾವಾಗಲೂ ಕರೆಂಟ್ ಇರಲ್ಲ. ಟಿ. ವಿ. ಇಲ್ಲ ಬೋರ್ ಆಗುತ್ತೆ ನನಗೆ ಎಂದು ಹಠ ಮಾಡಿ ಎರಡೆ ದಿನಕ್ಕೆ ವಾಪಸ್ ಹೋದಳು ಅಂತ ಅವಳಜ್ಜಿ

ಬೇಸರಪಟ್ಟುಕೊಂಡರು.

ಈಗ ಹಳ್ಳಿ ಮನೆಗಳಿಗೆ ಯಾರೂ ಮಡಕೆಕುಡಿಕೆ, ಬುಟ್ಟಿ, ಇತ್ಯಾದಿ ಮಾರಲು ಬರವುದಿಲ್ಲ. ಸ್ಟೀಲ್ ಪಾತ್ರೆ ಬಳಕೆ ಸುಲಭವಾದ ಮೇಲೆ ಅವು ಬೇಕೂ ಇಲ್ಲ. ಇತ್ತೀಚೆಗೆ ಮೊಸರು ಹೆಪ್ಪು ಹಾಕಲು ಮುಚ್ಚಳವಿರುವ ಮಾಟವಾದ ಮಣ್ಣಿನ ಪಾತ್ರೆಯೊಂದನ್ನು ತಂದೆ, ಪ್ರತೀ ಸಲ ಅದನ್ನು ಬಿಸಿನೀರಿನಲ್ಲಿ ತೊಳೆದು ಶುಚಿ ಮಾಡಲು ಬೇಜಾರಾಗಿ ಬದಿಗಿರಿಸಿದ್ದೇನೆ...

"ದೀಪಾವಳೀ ಹಣತೆ" ಎಂದು ಕೂಗುತ್ತಾ ಬರುವ ಹಣತೆ ಮಾರುವವರ ಬಳಿ ಬೇಕಿಲ್ಲದಿದ್ದರೂ ಜಾಸ್ತಿ ಹಣತೆಗಳನ್ನು ಕೊಳ್ಳುತ್ತೇನೆ. ಅಕ್ಕ ಈ ಹಣತೆ ಮಾಡಲು ಕೆಲಸ ಜಾಸ್ತಿ. ಏನೂ ಗಿಟ್ಟುವುದಿಲ್ಲ. ಮೊದಲಿನಿಂದ ಮಾಡಿದ್ದನ್ನು ಬಿಡಬಾರದು ಅಂತ ಮಾಡ್ತಿದೀವಿ" ಅನ್ನುವವರ ಎದುರು ಆ ಕಾಲದ ಮಾತೇ ಇಲ್ಲದೆ ಮಡಕೆ ಮಾರುತ್ತಿದ್ದ ಕುಂಬಾರ, ಕಲಾವಿದನಂತೆ ಕಾಣುತ್ತಿದ್ದ. ಪುಂಗಿ ಊದಿ ಹಾವು ತೋರಿಸುವ ಹಾವಾಡಿಗನಿಗಿಂತ ಅವನ ಹೆಂಡತಿ ಮಾರುತ್ತಿದ್ದ ಮಣಿಸರಕಿನ ಪಿನ್ನು, ಚೌರಿ, ರಿಬ್ಬನ್ನು ಇತ್ಯಾದಿಗಳೇ ಆಕರ್ಷಕವಾಗಿರುತ್ತಿದ್ದವು.

ರಜೆಯಲ್ಲಿ ಅಜ್ಜಿ ಮನೆಗೆ ಹೋದಾಗ ಅಲ್ಲಿ ತೀರ್ಥಹಳ್ಳಿಯಿಂದ ಬಿದಿರಿನ ಗೂಡೆಯಲ್ಲಿ ತಿಂಡಿ ಪದಾರ್ಥಗಳನ್ನು ಹೊತ್ತುಕೊಂಡು ಮಾರಲು ತರುತಿದ್ದ ಪುಟ್ಟಯ್ಯನೆಂಬುವನು. ಅವನು ಬರುವುದು ಅವನು ಹೊತ್ತುಕೊಂಡಿರುತ್ತಿದ್ದ ದೊಡ್ಡ ಗೂಡೆಯಿಂದಾಗಿ ಬಹಳ ದೂರಕ್ಕೆ ಕಾಣುತ್ತಿತ್ತು. ಮಿಠಾಯಿ, ಕಾರಶೇವು, ಕಮ್ಬರ್ಕಟ್, ಕಡಲೆಪುರಿಗಳ ಆಸೆಯಿಂದ ಅವನು ಅಂದು ಬುಟ್ಟಿ ಇಳಿಸುವುದನ್ನೇ ಕಾಯುತ್ತಿದ್ದೆವು.... ಆ ದೊಡ್ಡ ಬಿದಿರಿನ ಬುಟ್ಟಿಯಿಂದ ಹೊರಬರುತ್ತಿದ್ದ ತಿಂಡಿಗಳು ಎಲ್ಲೆಲೋ ಇದ್ದ ಮಕ್ಕಳನ್ನೆಲ್ಲ ಆಕರ್ಷಿಸುತ್ತಿತ್ತು, ಅಮ್ಮನೋ ಅಜ್ಜಿಯೋ ಕೆಲವು ತಿಂಡಿಗಳನ್ನು ಕೊಡಿಸುತ್ತಿದರು.

ತೀರ್ಥಹಳ್ಳಿಯ ಬಟ್ಟೆ ವ್ಯಾಪಾರಿಯೊಬ್ಬರು ತಲೆಯ ಮೇಲೆ ಸೀರೆ ಗಂಟನ್ನು ಹೊತ್ತು ಮಾರಲು ತರುತ್ತಿದ್ದರು.ಅವರ ಹತ್ತಿರ ರೇಷ್ಮೆ ಸೀರೆಗಳೂ ಇರುತ್ತಿದ್ದವು. ಹೀಗೆ ಒಮ್ಮೆ ಇಳಿಮಧ್ಯಾಹ್ನದ ಸಮಯ ಚಿಕ್ಕು ಕಾಯಿ ತಿಂದು ಮನೆಯೊಳಗೆ ಬರುವಾಗಲೇ ಜಗುಲಿಯಲ್ಲಿ ಸೀರೆ ಹರಡಿಕೊಂಡು ಕುಳಿತಿದ್ದು ಕಣ್ಣಿಗೆ ಬಿದ್ದಾಗ ನಾವೆಲ್ಲ ಸುತ್ತಲೂ ನೆರೆದೆವು. ಅಜ್ಜಿ ಬೀಟ್ರೋಟ್ ಬಣ್ಣದ ಸೀರೆಯನ್ನು ಕೈಲಿ ಹಿಡಿದು ಪರೀಕ್ಷಿಸುತ್ತಿದ್ದರು. ನೀಲಿ, ನೇರಳೆ ಬಣ್ಣದ ಸೀರೆಗಳನ್ನು ನೋಡುತ್ತಿದ್ದ ನಮಗೆ ಕೈಯಲ್ಲಿನ ಚಿಕೂ ಮೇಣ ಸೀರೆಗೆ ಹಿಡಿಯುತ್ತೆ ಮುಟ್ಟಬೇಡಿ ಎಂಬ ಆದೇಶ ಬಂತು.

ಬಣ್ಣ ಹೋಗಲ್ಲ ತಾನೆ, ಅಜ್ಜಿಯ ಪ್ರಶ್ನೆ, ಬಣ್ಣ ಹೋದರೆ ನಿಮ್ಮ ದುಡ್ಡು

ವಾಪಸ್.ಅಜ್ಜಿ ಸೀರೆಗೆ ಹಣ ಕೊಟ್ಟ ಮೇಲೆ ಅದರ ಒಂದು ತುದಿಯನ್ನು ನೀರಿನಲ್ಲಿ ನೆನೆಸಿ ಹಿಂಡಿದರು. ತೆಳುವಾಗಿ ಕಂಡೂ ಕಾಣದಂತೆ ನೀರಿಗೆ ಬಣ್ಣ ಬಂತು. ಆ ಸೀರೆ ಬಹಳ ಇಷ್ಟವಾಗಿದ್ದರಿಂದ ಅಜ್ಜಿ ತೊಗೊಂಡರು... ಸೀರೆಗಳು ಮಧ್ಯಾಹ್ನವನ್ನೆಲ್ಲ ಬಣ್ಣದಿಂದ ತುಂಬಿದ್ದವು.

* * *

ಹಳ್ಳಿ ಮನೆಯ ಪ್ರಶಾಂತ ಅಂಗಳದಲ್ಲಿ ಅಪರಿಚಿತ ಅಥವಾ ಪರಿಚಿತ ವ್ಯಾಪಾರಿ ಬಂದರೆ ಸಂತಸದ ಸ್ವಾಗತವಿತ್ತು.

ವರ್ಷಕ್ಕೊಮ್ಮೆ ಸಂಕ್ರಾಂತಿಯ ವೇಳೆಗೆ ಬಯಲು ಸೀಮೆಯ ಕಡೆಯಿಂದ ಮಲೆನಾಡಿನಲ್ಲಿ ಬೆಳೆಯದ ಜೀರಿಗೆ, ಕೊತ್ತಂಬರಿ, ಉದ್ದು, ಕಡಲೆ, ಹೆಸರು ಬೇಳೆ, ಬ್ಯಾಡಗಿ ಮೆಣಸಿನಕಾಯಿಗಳನ್ನು ಮಾರುವವರು ಬರುತ್ತಿದ್ದರು. ಗೋಟಡಿಕೆಯನ್ನು ತೆಗೆದುಕೊಂಡು ಬದಲಿಗೆ ಕಾಳು ಬೇಳೆ ಕೊಡುತ್ತಿದ್ದರು. ಅದು ನಮಗೂ ಖುಶಿಯ ಸಮಯ, ಆ ದಿನಸಿ ಪದಾರ್ಥಗಳಲ್ಲಿ ಹುರಿ ಗಡಲೆ, ಶೇಂಗಾ ಕೂಡ ಇರುತ್ತಿದ್ದವು. ಪೂರ್ತಿ ಅರ್ಧ ದಿನ ಈ ಎಕ್ಸ್‌ಚೆಂಜ್ ವ್ಯಾಪಾರ ನಡೆಯುತ್ತಿತ್ತು. ಸಂಕ್ರಾಂತಿ ಹೊತ್ತಿಗೆ ತೆಗೆದುಕೊಂಡ ಬೇಳೆಕಾಳುಗಳು ಮುಂದಿನ ದೀಪಾವಳಿಯವರೆಗೂ ಸಾಕಾಗುವಷ್ಟಿರುತ್ತಿತ್ತು. ಈ ವ್ಯಾಪಾರದ ವೇಳೆಯಲ್ಲಿ ಬಯಲು ಸೀಮೆಯ ರೈತರ ಕಷ್ಟಗಳೂ ಮಲೆನಾಡಿನ ರೈತರ ಕಷ್ಟಗಳೂ ಮಾತಿನಲ್ಲಿ ಬರುತ್ತಿದ್ದವು... ಹೀಗೆ ಬರುವವರು ದೈನಂದಿನ ಬದುಕಿನ ಏಕತಾನತೆಯನ್ನು ಮುರಿಯುತ್ತಿದ್ದರು. ಸಂಜೆ ಮಾತ್ರ ರೇಡಿಯೋ ಕೇಳುವ ಸಮಯ ನ್ಯೂಸ್ ಪೇಪರ್ ಸಿಗುತ್ತಿದ್ದುದು ಸಂಜೆಯೇ. ಇಂತಹ ಪರಿಸರದಲ್ಲಿ ಹೊರಗಿನಿಂದ ಬರುವ ಹೊತ್ತು ಮಾರುವವರಿಗೆ ಸ್ವಾಗತವಿತ್ತು. ಆ ನಂತರದ ವರ್ಷಗಳಲ್ಲಿ ದೀಪಕ್ ಡೆ, ಎಂಬ ಹೆಸರಿನ ಬಂಗಾಳಿಯೊಬ್ಬ ಬಂಗಾಳಿ ಕೈಮಗ್ಗದ ಸೀರೆಗಳನ್ನು ತಂದು ಮಾರುವವನು ವರ್ಷಕ್ಕೊಮ್ಮೆ ನಮ್ಮ ಮನೆಗೆ ಬರುತ್ತಿದ್ದ. ಅವನು ನಮ್ಮ ಹಳ್ಳಿಗೂ ಹೋಗುತ್ತಿದ್ದ. ಪುರುಲಿಯ, ಎಂಬ ಬಂಗಾಳದ ಹಳ್ಳಿಯ ಹೆಸರು ಅವನು ತರುತ್ತಿದ್ದ ಆ ಊರಿನಲ್ಲಿ ನೇಯ್ದ ಕೈಮಗ್ಗದ ಸೀರೆಗಳಿಂದಾಗಿ ಪರಿಚಿತವಾಯ್ತು, ಟಾಂಗಾಯಿಲ್, ಜಾಮ್ದಾನಿ, ಶಾಂತಿನಿಕೇತನ ಸೀರೆಗಳು, ಡಾಕ್ಕ ರೇಷ್ಮೆ ಸೀರೆಗಳು ಸುಂದರವಾದ ಕೈಕಸೂತಿ ಹೆಣೆದ ತಿಳಿಬಣ್ಣದ ಬೆಡ್ ಶೀಟ್‌ಗಳು ಹೀಗೆ ತರಹೆವಾರಿ ವಸ್ತುಗಳು ಅವನ ಬಟ್ಟೆಗಂಟಿನಲ್ಲಿರುತ್ತಿದ್ದವು. ಸೀರೆಗಳನ್ನು ತೋರಿಸುತ್ತ "ಮೊಮತ ದೀದಿ ಇಂತದೇ ಸೀರೆ ಉಡುವುದು"

ಎಂದು ಯಾವುದೋ ಸೀರೆ ತೋರಿಸುತ್ತಿದ್ದ ಮಮತಾ ಬ್ಯಾನರ್ಜಿಯವರ ಸರಳ ಜೀವನದ ಕುರಿತು ಮಾತಾಡುತ್ತಲೇ ಮತ್ತೆ ಸೀರೆಯ ಗಂಟು ಕಟ್ಟುತ್ತಿದ್ದ. ದುರ್ಗಾಪೂಜೆಯ ಸಮಯಕ್ಕೆ ನೀವು ಬನ್ನಿ ಎಂದು ಆಹ್ವಾನ ನೀಡುತ್ತಿದ್ದ. ಹೀಗೆ ಹತ್ತು ಹನ್ನೆರಡು ವರ್ಷ ಬಂದವನು ಈ ಸೀರೆ ವ್ಯಾಪಾರ ಬಿಟ್ಟು ನಮ್ಮ ಊರಲ್ಲೆ ಏನಾದರೂ ವ್ಯಾಪಾರ ಮಾಡ್ತೀನಿ ಅಂತ ಹೇಳಿ ಮತ್ತೆ ಬರಲಿಲ್ಲ.

ಟೀ.ವಿ. ಸೀರಿಯಲ್‌ಗಳ ಕೃತಕ ಮೇಕಪ್ಪಿನ ಮುಖಗಳು, ಅಪರಾಧದ ಸುದ್ದಿಗಳನ್ನು ವೈಭವಿಕರಿಸುವ ನ್ಯೂಸ್ ಚಾನಲ್‌ಗಳೂ ಇಲ್ಲದಿದ್ದ ಅಂದಿನ ದಿನಗಳಲ್ಲಿ ನಿಜಕ್ಕೂ ಈ ವ್ಯಾಪಾರಿಗಳು ಮಾರುತ್ತಿದ್ದುದ್ದು ಬರೀ ಸರಕಲ್ಲ. ಬೆಲೆಯುಳ್ಳ 'ಸಮಯ'ವನ್ನು, ಗ್ರಾಮೀಣ ಬದುಕಿನ ಮಧ್ಯಾಹ್ನದ ತೆರಪನ್ನು ತಮ್ಮ ಮಾತು ಮತ್ತು ವಸ್ತುಗಳಿಂದ ಜೀವಂತವಾಗಿ ತುಂಬುತ್ತಿದ್ದ ಅವರು ಕಾಲದ ಅಲೆಯಲ್ಲಿ ತೇಲಿ ಹೋಗಿದ್ದಾರೆ. ಈಗ ಚಿತ್ರ ಬದಲಾಗಿದೆ, ಕರಕುಶಲ ವಸ್ತುಗಳು ನಗರದ ಮೇಳಗಳಲ್ಲಿ ಜಾಗ ಪಡೆದಿವೆ. ಮನೆ ಬಾಗಿಲಿಗೆ ಬರುವ ಅಗ್ಗದ ಪ್ಲಾಸ್ಟಿಕ್, ಎಲೆಕ್ಟ್ರಾನಿಕ್ಸ್ ವಸ್ತುಗಳನ್ನು ಮಾರುವವರು, 'ನಾನುಮಾರ್ಕೆಟಿಂಗ್ ಸ್ಟಡಿ ಮಾಡುವ ಸ್ಟುಡೆಂಟ್' ಅಂತ ತಲೆ ತಿನ್ನುವವರು ಪದೇ ಪದೇ ಕಾಲಿಂಗ್ ಬೆಲ್ ಮಾಡಿ ತೊಂದರೆ ಮಾಡ್ತಾರೆ ಅಂತ ಬೆಲ್ ಸ್ವಿಚ್ ಆಫ್ ಮಾಡಿರ್ತೀನಿ. ಮರದ ಕೆತ್ತನೆಯಲ್ಲಿ ಅಳವಡಿಸಿದ ರಾಜಾಸ್ಥಾನಿ ಕುಸುರಿ ಕೆಲಸದ ಗಂಟೆಯೊಂದನ್ನು ತೂಗುಹಾಕಿದ್ದೇನೆ. ಅದು ನಿಧಾನವಾಗಿ ಸದ್ದು ಮಾಡುತ್ತದೆ. ಬಾಗಿಲು ತೆರೆದು ನೋಡಲು ನನಗೆ ಹೊತ್ತಿಲ್ಲ.

* * *

***ಆಕರ : 'ಗದ್ದೆಯಂಚಿನ ದಾರಿ,' ಡಾ. ಎಲ್. ಸಿ. ಸುಮಿತ್ರಾ***

**ಡಾ. ಎಲ್. ಸಿ. ಸುಮಿತ್ರಾ:**

ಹುಟ್ಟಿದ್ದು ತೀರ್ಥಹಳ್ಳಿ ತಾಲ್ಲೂಕಿನ ಲಕ್ಷ್ಮೀಪುರದಲ್ಲಿ ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ಕನ್ನಡ ಎಮ್.ಎ. ಓದಿನ ನಂತರ 'ಕುವೆಂಪು ಮತ್ತು ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಪ್ರಕೃತಿ' ವಿಷಯದಲ್ಲಿ ಪಿಎಚ್.ಡಿ. ಪದವಿ. ಪರಿಸರ ಚಿಂತನೆ ಮತ್ತು ವಿಮರ್ಶೆಯಲ್ಲಿ ಒಲವು. ಕಥೆಗಾರ್ತಿ, ಕವಯತ್ರಿಯಾಗಿ ಗುರುತಿಸಲ್ಪಟ್ಟಿದ್ದಾರೆ. ಇವರ ಕಥೆಗಳು ಮಲಯಾಳಮ್,

ಇಂಗ್ಲಿಷ್ ಮತ್ತು ತೆಲುಗು ಭಾಷೆಗಳಿಗೆ ಅನುವಾದಗೊಂಡಿವೆ. ಕವಿತೆಗಳು ಬೆಂಗಳೂರು ಮತ್ತು ಮಂಗಳೂರು ವಿ.ವಿ.ಯಲ್ಲಿ ಪದವಿ ಪಠ್ಯಪುಸ್ತಕದಲ್ಲಿ ಸೇ–ರಿವೆ. ಬಕುಲದ ದಾರಿ ಮತ್ತು ತುಂಬೆ ಹೂ ಕವನಸಂಗ್ರಹಗಳು. ವಿಭಾವ, ನಿರುಕ್ತ, ಕಾಡುಕಡಲು, ಓದಿನ ಸುಖ, ಇವರ ವಿಮರ್ಶಾ ಕೃತಿಗಳು. ಗುಬ್ಬಿಹಳ್ಳದ ಸಾಕ್ಷಿಯಲ್ಲಿ ಕಥಾ ಸಂಕಲನ, ಹೂ ಹಸಿರಿನ ಮಾತು, ಪಶ್ಚಿಮ ಘಟ್ಟಗಳ ಹೂ ಬಿಡುವ ಸಸ್ಯಗಳ ಕುರಿತ ಬರಹ. ಅಮೃತಾಪ್ರೀತಮ್ ಅವರ 'ಪಿಂಜರ್' ಕಾದಂಬರಿಯನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. 'ಗದ್ದೆಯಂಚಿನ ದಾರಿ' ಪ್ರಬಂಧ ಸಂಕಲನ, ಧಾರವಾಡ ಕರ್ನಾಟಕ ಸಂಘದ ಮಾತೊ ರತ್ನಮ್ಮ ಹೆಗ್ಗಡೆ ಪುಸ್ತಕ ಬಹುಮಾನ, ಕರ್ನಾಟಕ ಲೇಖಕಿಯರ ಸಂಘದ ಎಚ್. ವಿ. ಸಾವಿತ್ರಮ್ಮ ಪ್ರಶಸ್ತಿ ['ಪಿಂಜರ್' ಅನುವಾದಕ್ಕೆ ಶಿವಮೊಗ್ಗ ಕರ್ನಾಟಕ ಸಂಘದ ಎಸ್. ವಿ. ಪರಮೇಶ್ವರ ಭಟ್ಟ ಪ್ರಶಸ್ತಿ, ['ಪಿಂಜರ್' ಅನುವಾದಕ್ಕೆ, ಸಾಹಿತ್ಯ ಪರಿಷತ್ತಿನ ನೀಲಗಂಗಾ ದತ್ತಿ ಬಹುಮಾನ ['ಬಕುಲದ ದಾರಿ' ಕವನ ಸಂಕಲನಕ್ಕೆ), ಧಾರವಾಡದ ಇನ್ಫೋಸಿಸ್ ಪ್ರತಿಷ್ಠಾನದ ಪ್ರಶಸ್ತಿ, 'ಗುಬ್ಬಿಹಳ್ಳದ ಸಾಕ್ಷಿಯಲ್ಲಿ' ಕೃತಿಗೆ ಪಡೆದಿದ್ದಾರೆ. ತೀರ್ಥಹಳ್ಳಿಯ ತುಂಗಾ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಿಕೆಯಾಗಿ, ಪ್ರಿನ್ಸಿಪಾಲರಾಗಿ ನಿವೃತ್ತರಾಗಿದ್ದಾರೆ.

## 2.4 ಓದುಪತ್ಯ : ತಾಯಿ–ಮಗ (ಕಥೆ)

**–ಎಂ.ವಿ. ಸೀತಾರಾಮಯ್ಯ**

ಅವಳು ಹುಚ್ಚಿ! ಶುದ್ಧ ಹುಚ್ಚಿ! ಅದರಲ್ಲೇನೂ ಸಂದೇಹವೇಇಲ್ಲ. ಅವಳ ಇರವೇ ಹೇಳುತ್ತಿದೆ, ಸಾರಿ ಹೇಳುತ್ತಿದೆ ಅವಳು ಹುಚ್ಚಿ ಎಂಬುದನ್ನು; ಎಣ್ಣೆ ಕಾಣದ, ಬಾಚಿಲ್ಲದ, ಧೂಳಡರಿದ, ಕೆದರುಕುರುಳು; ಬಿಟ್ಟ ಕಣ್ಣು, ನಟ್ಟ ನೋಟ; ಇದ್ದಕ್ಕಿದ್ದಂತೆ ಒಮ್ಮೆ ಗಹಗಹ ನಗು, ಮರುಕ್ಷಣದಲ್ಲಿ ಅಳು, ನೀಳವಾದ ಉದ್ಗಾರ; ಈ ಉದ್ರೇಕದ ಉರುಬು ತಣ್ಣಗಾದ ತರುವಾಯ ಬಲು ಹೊತ್ತಿನ ನಿಡುಮೌನ, ನೆಲ ನೋಡುವ ನೋಟ. ಯಾರ ಮನೆಯ ಜಗುಲಿಯ ಮೇಲಾದರೂ ಮೌನವಾಗಿ ತಲೆ ಬಗ್ಗಿಸಿ ಕುಳಿತಿದ್ದರೆ ಅವಳು ತಿರುಕಿಯಂತೆ ಕಾಣುವಳು; ಆದರೆ ಅವಳು ತಿರುಕಿಯಲ್ಲವೆಂಬುದು ಊರಿನವರಿಗೆಲ್ಲ ಗೊತ್ತು. ಅವಳಾದರೂ ಯಾರನ್ನೂ ತಿರುಪೆಗಾಗಿ ಬೇಡಳು ಕಾಡಳು. ಯಾತಕ್ಕಾಗಿ ಬೇಡಬೇಕು! ಹಸಿವೆ? ಅವಳಿಗೆ ಹಸಿವೇ ಆಗದು. ಹಸಿವಾದರೂ ತಿನ್ನಲು ಅವಳಿಗೆ ಮನೆಯಿಲ್ಲದೆ ಇಲ್ಲ. ಅತ್ತಿಗೆಗೆ ಬೇಡವಾದರೂ ಪ್ರೀತಿಯಿಂದ ಉಣ್ಣಲಿಕ್ಕುವ ಅಣ್ಣನಿದ್ದಾನೆ; ತನಗೆ ಬೇಡದಿದ್ದರೂ ಗಂಡನ ಆಣತಿಗೆ ಕಟ್ಟು ಬಿದ್ದು ಹುಚ್ಚಿ ಹಸಿದು ಮನೆಯ ಬಾಗಿಲಿಗೆ ಬಂದರೆ ಕೂಳು ಸುರಿಯುತ್ತಾಳೆ ಅತ್ತಿಗೆ ಪ್ರೀತಿಯ ಮಾತುಗಳಿಂದ ಬಡಿಸಲಿ, ಕಡೆಗಂಡು ಸುರಿಯಲಿ–ಹುಚ್ಚಿಗೆ ಎರಡೂ ಒಂದೆ. ಆದರೂ, ಗಂಡ ಮನೆಯಲ್ಲಿ ಇದ್ದರೆ ತನಗೆ ಇಷ್ಟವಿಲ್ಲದಿದ್ದರೂ ಒಂದೆರಡು ಉಪಚಾರದ ಮಾತಾಡುತ್ತಾಳೆ ಅತ್ತಿಗೆಯೆನ್ನಿಸಿ ಕೊಂಡವಳು: ಇಲ್ಲದೆ ಹೋದರೆ, ಹುಚ್ಚಿ ನಾದಿನಿಯ ಮುಂದೆ ಹವಣಿಲ್ಲದೆ ಸುರಿದ ಅನ್ನದ ಅಗುಳು ಅಗುಳಿಗೂ ಅಂಟಿಕೊಂಡಿರುತ್ತದೆ; ಅತ್ತಿಗೆಯ ಒಂದೊಂದು ಬೈಗಳು.

ಅವಳು ಶುದ್ಧ ಹುಚ್ಚಿ? ಇದರಲ್ಲಿ ಎಳ್ಳಷ್ಟೂ ಸಂದೇಹವಿಲ್ಲ. ಬೀದಿಯಲ್ಲಿ ಯಾವ ಒಬ್ಬ ಹೊಸಬನಾದ ಹರೆಯದ ತರುಣನನ್ನು ಕಾಣಲಿ–"ಇಷ್ಟು ದಿವಸಕ್ಕೆ ಈಗ ಸಿಕ್ಕಿದೆಯಾ ಮಗು. ಎಲ್ಲಿಗೆ ಹೋಗಿದ್ದೆಯಪ್ಪಾ ಮಗೂ?.... ಇಷ್ಟು ದಿನದ ಮೇಲೆ ತಾಯನ್ನು ಕಾಣುವ ಹಂಬಲಾಯ್ತೆ ಮಗೂ, ಬಾ, ಮಗು! ನನ್ನ ಬೆಂದ ಜೀವಕ್ಕೆ ತಂಪು ಮಾಡು" ಎಂದು ಉದ್ಗಾರ ತೆಗೆಯುತ್ತ ಅಪ್ಪಿಕೊಂಡುಬಿಡುವಳು. ಈ ಅನುಭವ ನನಗೇ ಒಮ್ಮೆ ಆಯಿತು. ಆ ಹುಚ್ಚಿಯ ಊರಿನಲ್ಲಿ ನನ್ನ ಮಾವನ ಮನೆ. ಮೊದಲ ಸಲ ಹೆಂಡತಿಯನ್ನು ಕರೆದುಕೊಂಡು ಬರುವುದಕ್ಕೆ ಆ ಊರಿಗೆ ಹೋಗಿದ್ದಾಗ ಒಂದು ಸಂಜೆ ಈ ಹುಚ್ಚಿ ಮೇಲ್ಕಂಡಂತೆ ಉದ್ಗಾರ ತೆಗೆದು ನನ್ನನ್ನು ಅಪ್ಪಿಕೊಂಡುಬಿಟ್ಟಳು! ನನಗೇನೋ ತಟ್ಟನೆ ದಿಗಿಲೇ ಆಯಿತು. "ಛೇ, ದೂರ ನಡಿ! ನಾನೆಲ್ಲಿಯ ನಿನ್ನ ಮಗ!" ಎಂದು ಕೋಪದ ವೇಷ ತೊಟ್ಟ

ದಿಗಿಲಿನಿಂದಲೆ ಚೀರಿ ಕೊಳ್ಳಲು, "ಕ್ಷಮಿಸಪ್ಪ ಮಗೂ, ನನ್ನ ಮಗನೇ ಎಂದು ತಿಳಿದುಕೊಂಡು ಹಾಗೆ ಮಾಡಿ ಬಿಟ್ಟೆ" ಎಂದು ಖಿನ್ನವದನಳಾಗಿ ಒಂದು ಜಗುಲಿಯ ಮೇಲೆ ತಲೆಬಗ್ಗಿಸಿ ಕುಳಿತುಬಿಟ್ಟಳು. ಬೀದಿಯಲ್ಲಿ ಹೋಗುತ್ತಿದ್ದವರು ಯಾರೋ ವಿವರಿಸಿದರು: ಹತ್ತಿಪ್ಪತ್ತು ವರ್ಷದ ಕೆಳಗೆ ಬೀದಿಯಲ್ಲಿ ಆಡುತ್ತಿರುವ ಯಾವ ಹಸುಳೆ ಕಂಡರೂ ತನ್ನ ಮಗು ಎಂದು ಎತ್ತಿಕೊಂಡು, ಮಗು ಅತ್ತ ಕೂಡಲೆ ತನ್ನದಲ್ಲವೆಂದು ಕೆಳಗಿಳಿಸಿಬಿಡುತ್ತಿದ್ದಳು; ಯಾವ ರೀತಿಯಲ್ಲಿ ಅದಕ್ಕೆ ತೊಂದರೆ ಮಾಡುತ್ತಿರಲಿಲ್ಲ; ವರ್ಷಗಳು ಕಳೆದಂತೆಲ್ಲಾ ಬೆಳೆದ ಹುಡುಗರನ್ನು ಆ ರೀತಿ ಕಾಣತೊಡಗಿದಳು; ಊರ ಹುಡುಗರಲ್ಲಿ ಯಾರೂ ತನ್ನ ಮಗನಲ್ಲ ಎಂದು ಕ್ರಮಕ್ರಮವಾಗಿ ಖಚಿತ ವಾಗುತ್ತಬರಲು, ಹೊರಗಿನಿಂದ ಪ್ರಾಯದ ಹುಡುಗ ಯಾರಾದರೂ ಬಂದರೆ ಅವನನ್ನು ತನ್ನ ಮಗನೆಂದು ಭ್ರಮಿಸುವಳು. ಈಗ ನನ್ನನ್ನು ಹಾಗೆಂದು ತಿಳಿದುಬಿಟ್ಟಿದ್ದಳು.

ದಿಗಿಲು, ಹುಸಿಕೋಪ ಎಲ್ಲವೂ ಮಾಯವಾಗಿ ಆ ಹುಚ್ಚಿಯಲ್ಲಿ ಆ ಕ್ಷಣದಲ್ಲಿ ಮರುಕ ಹುಟ್ಟಿತು. ಮರುಕದಿಂದಾಗಿ ಆಕೆಯ ವಿಷಯದಲ್ಲಿ ಕುತೂಹಲ ಕೊನರಿತು: ಅಯ್ಯೋ ಪಾಪ! ಎಲ್ಲೋ ತನ್ನ ಒಂದೇ ಒಂದಾದ ಎಳೆಯ ಗಂಡು ಕೂಸನ್ನು ಕಳೆದುಕೊಂಡುಬಿಟ್ಟಿದ್ದಾಳೆ! ಆದರೆ, ಅವಳ ಭಾಗಕ್ಕೆ ಅದು ಸತ್ತಿಲ್ಲದೆ, ಅವಳ ಕಲ್ಪನೆಯಲ್ಲಿ ಪ್ರವರ್ಧಮಾನಕ್ಕೆ ಬರುತ್ತಿದೆ; ಅವಳ ಮಗ ಬೆಳೆಯುತ್ತಿದ್ದಾನೆ. ಇಂದು ನಾನು ಅವಳ ಮಗನಾಗಿದ್ದೆ ಕ್ಷಣಕಾಲ ಮಾತ್ರ. "ನಾನೆಲ್ಲಿಯ ನಿನ್ನ ಮಗ" ಎಂಬ ಕ್ರೂರವಾಕ್ಯ ಅವಳ ಕಿವಿಹೊಗುವ ಮುನ್ನ, ಆ ಕ್ಷಣಕಾಲ, ಅವಳು ಎಂತಹ ಸುಖವಾದ ತಾಯ್ತನದ ದಿವ್ಯಾನುಭವವನ್ನು ಪಡೆದಿರಬೇಕು! ಅವಳ ಬುದ್ಧಿ ಭ್ರಮಣೆಗೂ ಕಾರಣವಾಗಿದ್ದಿರಬಹುದಾದ ಅವಳ ತಾಯ್‌ಕರುಳು ಎಷ್ಟು ಆಳವಾದ ಪುತ್ರವಾತ್ಸಲ್ಯದಿಂದ ಬುದ್ಧಿಯನ್ನೂ ಮೆಟ್ಟಿ ತಾನೇತಾನಾಗಿ ಚೀರಿರಬೇಕು! ಆದರೆ ತನ್ನ ಮಗನಲ್ಲ ಎಂಬ ಘೋರ ಸತ್ಯ ತಿಳಿದಾಗ ಅದೇ ಕರುಳಿಗೆ ಎಂಥ ಕಿವಿಚಿಕೆ, ಎಷ್ಟು ನೋವು!

ನನ್ನ ಹೆಂಡತಿಯನ್ನು ಕೇಳಿದ್ರೆ, ಭಾವ ಭಾವಮೈದುನರನ್ನು ವಿಚಾರಿಸಿದೆ ಹೆಚ್ಚು ವಿಚಾರ ತಿಳಿದುಬರಲಿಲ್ಲ: ಹುಚ್ಚಿಗೆ ಈಗ ನಲವತ್ತರ ಸಮೀಪದ ವಯಸ್ಸು. ಮಕ್ಕಳಾಗಿದ್ದರೆ ನನ್ನ ವಯಸ್ಸಿನ 20 ವರ್ಷಕ್ಕೆ ಮೇಲ್ಪಟ್ಟ ವಯಸ್ಸಿನ ಮಗನಿದ್ದಿರಬೇಕು. ಆದರೆ........ಅವಳಿಗೆ ಮಕ್ಕಳಾಗುವುದಕ್ಕೆ ಮುಂಚೆಯೇ ಗಂಡ ತೀರಿಹೋದ; ಮಕ್ಕಳಾಗುವುದಿರಲಿ, ದಾಂಪತ್ಯ ಸುಖ ಅನುಭವಿಸುವುದಕ್ಕೆ ಮುನ್ನವೇ ವಿಧಿ ಅವಳನ್ನು ವಿಧವೆಯನ್ನಾಗಿ ಮಾಡಿಬಿಟ್ಟಿದೆ! ಅವಳ ಹುಚ್ಚು ನಿನ್ನೆ ಮೊನ್ನೆಯದಲ್ಲ, 15–20 ವರ್ಷಗಳಷ್ಟು ಹಿಂದಿನದು. ಹುಚ್ಚು ಏಕೆ

ಹಿಡಿಯಿತು ಎಂಬುದು ಯಾರಿಗೂ ತಿಳಿಯದ ವಿಷಯ. ಹುಚ್ಚು ಹಿಡಿದ ದಿನದಿಂದಲೂ ತನ್ನ ಮುದ್ದು ಕಂದ; ತನ್ನ ಮಗುವಿನ ಚೌಲ, ಉಪನಯನ; ತನ್ನ ಮಗನ ಓದು, ಉದ್ಯೋಗ, ತನ್ನ ಚೆಲುವಿನ ಸೊಸೆ, ಇಷ್ಟೇ ಅವಳ ಹುಚ್ಚು ನುಡಿಗಳ ಪಲ್ಲವಿ. ಎಲ್ಲ ಹೆಣ್ಣು ಮಕ್ಕಳಂತೆ ತಾನು ತಾಯಾಗಲಿಲ್ಲವಲ್ಲ, ತಾನೊಬ್ಬ ಮಗನನ್ನು ಹಡೆಯಲಿಲ್ಲವಲ್ಲ ತಾಯ್ತನದ ಕೊರತೆಯೇ ಕುಡಿಚಾಚಿ ಬಳ್ಳಿವರಿದು ಹೂತು ಪುತ್ರಫಲವನ್ನು ಬಿಡಲಾಗದ್ದರಿಂದ ಹುಚ್ಚಾಗಿ ಫಲಿಸಿದೆ ಎಂಬುದು ಊರ ಜನರ ಅಭಿಪ್ರಾಯ, ಊರ ಜನರ ಅಭಿಪ್ರಾಯವೇನು, ಬೆಂಗಳೂರಿನ ಹುಚ್ಚರಾಸ್ಪತ್ರೆಯ ಮನೋರೋಗ ಪ್ರವೀಣರಾದ ವೈದ್ಯರ ಅಭಿಪ್ರಾಯವೂ ಅದೇ ಆಗಿತ್ತಂತೆ.

ನನಗೇನೋ ಇದನ್ನು ನಂಬಲಾಗಲಿಲ್ಲ. ನನಗೆ ಅಲ್ಪ ಸ್ವಲ್ಪ ಪರಿಚಯವಿದ್ದ ಊರಿನ ಸ್ಥಳೀಕರಾದ ಕೆಲವರನ್ನು ವಿಚಾರಿಸಿದೆ. ಅವರುಗಳೆಲ್ಲರೂ ಇದೇ ಅಭಿಪ್ರಾಯವನ್ನು ದೃಢ ಪಡಿಸಿದರು. ಇನ್ನು ನಂಬದೆ ಹೇಗೆ ಇರಲಿ?

ಆದರೂ... ಹುಂ; ಇನ್ನು ಈ ವಿಚಾರ ಯೋಚಿಸಿ ಪ್ರಯೋಜನವಿಲ್ಲ ಎಂದು ಸುಮ್ಮನಾದೆ. ಆದರೂ... ತಾಯ ಮುಖವನ್ನು ಕಂಡರಿಯದೆ ತಬ್ಬಲಿಯಾಗಿ ಬೆಳೆದ ನನಗೆ ಆ ಹುಚ್ಚಿಯನ್ನು ನೆನೆಸಿಕೊಂಡಾಗಲೆಲ್ಲ ಕರುಳು ಹಿಂಡಿಬರುತ್ತಿತ್ತು. ಆ ಮಾತು ಈ ಮಾತು ಆಡುತ್ತ ಧೈರ್ಯಮಾಡಿ ಆ ಹುಚ್ಚಿಯ ಮನೆಯವರ ವಿಚಾರವಾಗಿ ನನ್ನ ಮಾವನವರನ್ನೆ ಕೇಳಿಬಿಟ್ಟೆ. ಹೆಚ್ಚಿನ ವಿಚಾರ ತಿಳಿಯಬರದಿದ್ದರೂ ಹುಚ್ಚಿಯ ಮನೆಯವರು ಯಾರು ಯಾರು ಎಂಬುದಿಷ್ಟು ತಿಳಿಯಬಂತು.

* * *

ಹುಚ್ಚಿಯ ಅಣ್ಣ ಸುಬ್ಬರಾಯರು, ಊರಿನಲ್ಲೆಲ್ಲ ತುಂಬ ಗಣ್ಯರಾದ ವ್ಯಕ್ತಿಗಳು, ಒಳ್ಳೆಯ ಹಿರಿಯ ವಂಶದವರು. ಅವರ ತಂದೆಗೆ ಆತನೊಬ್ಬನೆ ಮಗ, ಆತನ ತಂಗಿ ಯಮುನೆ ಒಬ್ಬಳೆ ಮಗಳು, ತಕ್ಕಮಟ್ಟಿನ ಸ್ಥಿತಿವಂತರಾದ್ದರಿಂದ ಸುಬ್ಬರಾಯರ ತಂದೆಗೆ ತಮ್ಮ ಈಡಿಗೆ ಬರುವವರ ಸಂಬಂಧ ಮಾಡುವುದು ಕಷ್ಟವಾಗಿರಲಿಲ್ಲ. ಬಡವನಾದರೂ ಯೋಗ್ಯನಾದವನಿಗೆ ಮಗಳನ್ನು ಕೊಡಬೇಕೆಂಬುದು ಅವರ ಉದ್ದೇಶವಾಗಿತ್ತು. ಅವರ ಉದ್ದೇಶವೇನೊ ನೆರವೇರಿತು; ಯೋಗ್ಯನಾದ ವರನೆ ದೊರೆತ, ಅಲ್ಪಾಯುವೆಂಬುದನ್ನು ಅವರು ಹೇಗೆ ಮುಂಗಾಣಬೇಕು? ಆದರೆ ಅಳಿಯ ಮೈಸೂರಿನಲ್ಲಿ ಒಟ್ಟಿಗೆ ಎಂಟ್ರೆನ್ಸ್ ಪರೀಕ್ಷೆಗೆ ಕುಳಿತು ತೇರ್ಗಡೆಯಾಗಿದ್ದ ತಮ್ಮ ಮಗ ಸುಬ್ಬರಾಯನನ್ನೂ ಅಳಿಯ ನಾಗಭೂಷಣನನ್ನೂ

ಬೆಂಗಳೂರಿನಲ್ಲಿ ಮುಂದಕ್ಕೆ ಓದಿಸಬೇಕೆಂದು ಆಶಿಸಿದ್ದರು. ಆದರೆ ಅವರ ಈ ಆಶೆ ನಿರಾಶೆಯಾಯಿತು: ಅಳಿಯ ಪರೀಕ್ಷೆಯಾದ ತರುಣದಲ್ಲಿ ವಿಷಮಶೀತ ಜ್ವರಕ್ಕೆ ಈಡಾಗಿ ಚಿಕ್ಕ ಹೆಂಡತಿಯನ್ನು ಬಿಟ್ಟು, ಕಣ್ಣು ಮುಚ್ಚಿದ; ತಂಗಿಗಾದ ದುಃಸ್ಥಿತಿ ಕಂಡು ಸುಬ್ಬರಾಯ ಉತ್ಸಾಹಗುಂದಿ ತನ್ನ ಓದನ್ನೂ ನಿಲ್ಲಿಸಿದ. ಇಷ್ಟವಿಲ್ಲದಿದ್ದರೂ ಸುಬ್ಬರಾಯನ ಮದುವೆಗೆ ಆತುರಪಟ್ಟರು ರಾಮಣ್ಣನವರು. ರಾಮಣ್ಣನವರಿಗೆ ಯಾವಾಗಲೂ ಬಡವರ ನಂಟಸ್ತಿಕೆ ಹಿತಕರ. ಮನೆಗೆ ಬಂದ ಹೆಣ್ಣು ಬಡವರ ಮನೆಯವಳು, ಅಷ್ಟು ರೂಪವತಿಯಲ್ಲದಿದ್ದರೂ ಗುಣವಂತೆ. ಬೇಗ ಮೊಮ್ಮಗುವನ್ನೂ ಕಂಡು, ಕಣ್ಣು ಮುಚ್ಚಿದರು; ಮಗಳ ದುಃಸ್ಥಿತಿ, ತಮ್ಮ ವೈಧವ್ಯ ಎರಡನ್ನೂ ತಾಳಲಾರದ ಕೊರಗಿನಿಂದ ರಾಮಣ್ಣನವರ ಹೆಂಡತಿ ಬೇಗನೆ ಪತಿಯನ್ನು ಹಿಂಬಾಲಿಸಿದರು. ಮದುವೆಯಾದ ನಾಲ್ಕೈದು ವರ್ಷಗಳೊಳಗಾಗಿ ಸಂಸಾರದ ಸಂಪೂರ್ಣ ಭಾರ ಸುಬ್ಬರಾಯನ ತಲೆಯ ಮೇಲೆ ಬಿತ್ತು. ವರ್ಷಗಳೊಳಗಾಗಿ ಸಂಸಾರದ ಸಂಪೂರ್ಣ ಭಾರ ಸುಬ್ಬರಾಯನ ತಲೆಯ ಮೇಲೆ ಬಿತ್ತು. ಕಷ್ಟದಿಂದಲೇ ಮೊದಲಾದ ಸಂಸಾರದಲ್ಲಿ ಕಷ್ಟದ ಮೇಲೆ ಕಷ್ಟಗಳು ಬಂದೊದಗಿದುವು: ಚೊಚ್ಚಲ ಗಂಡುಮಗು ತೀರಿತು; ಅತ್ತೆ ಮಾವಂದಿರು ತೀರಿಹೋದರು: ಮನೆಯಲ್ಲಿ ಉಂಡಾಡಿಯಾಗಿದ್ದ ವೆಂಕಟಪತಿ ತನ್ನ ತಂಗಿ ಸಾವಿತ್ರಿಗೆ ಬರೆದು ಸುಬ್ಬರಾಯನ ಸಂಸಾರ ದಲ್ಲಿ ಭಂಡಜೀವನ ಹೊರೆಯತೊಡಗಿದ; ಸುಬ್ಬರಾಯ ಭಾವನ ಬರವು, ಇರವುಗಳನ್ನು ಮೊದಲು ಗಮನಿಸಲಿಲ್ಲ; ಇನ್ನು ಇಬ್ಬರು ಮೂವರು ಮನೆಯಲ್ಲಿ ಬಂದಿದ್ದರೂ ಆತ ಬೇಡವೆನ್ನುತ್ತಿರಲಿಲ್ಲ, ಅಷ್ಟು ಧಾರಾಳ ಮನಸ್ಸು; ಆದರೆ ಭಾವನ 'ಇರಿಸರಿಕೆ' ಬರು ಬರುತ್ತ ಸುಬ್ಬರಾಯನಿಗೆ ಸರಿಬೀಳಲಿಲ್ಲ: ಅವನ ಇಸ್ಪೀಟು, ಅವನ ಷೋಕಿ, ಎಲ್ಲಕ್ಕೂ ತಂಗಿಯ ಮೂಲಕ ತನ್ನಿಂದಲೇ ಹಣ ಹಿರಿಯುತ್ತಿದ್ದ; ಈ ಮಧ್ಯೆ ತಂಗಿ ಯಮುನೆಗೆ ಪ್ರಬಲ ರೋಗದ ಚಿಹ್ನೆಯೊಂದು ಕಾಣಿಸಿಕೊಂಡಿತು; ತಂಗಿಯನ್ನು ಕರೆದುಕೊಂಡು ಸುಬ್ಬರಾಯ ಮೈಸೂರಿಗೆ ಹೋಗಿನಿಂತ; ಅಲ್ಲಿ ತಂಗಿಯ ರೋಗ ಗುಣವಾಗದೆ ಹುಚ್ಚಿಗೆ ತಿರುಗಿತು; ಕೂಡಲೆ ಬೆಂಗಳೂರಿಗೆ ಕರೆದುಕೊಂಡು ಹೋಗಿ ಹುಚ್ಚರಾಸ್ಪತ್ರೆಯಲ್ಲಿಯೂ ಕೆಲವು ದಿನ ಬಿಟ್ಟಾಯಿತು; ವೈದ್ಯರು ಗುಣವಾಗುವ ಬಗ್ಗೆ ನಿರಾಶೆ ಸೂಚಿಸಲು ತಂಗಿಯನ್ನು ಮರಳಿ ಊರಿಗೆ ಕರೆದುಕೊಂಡು ಬಂದ; ರೋಗಿಯೆಂದು ಊರುಬಿಟ್ಟು ಹುಚ್ಚಿಯಾಗಿ ಹಿಂದಿರುಗಿದ ಯಮುನೆಯನ್ನು ಕಂಡು ಊರಿಗೆ ಊರೇ ಮರುಗಿತು; ಮನಸ್ಸು ತೀರ ಕೆಟ್ಟಿದ್ದ ಸುಬ್ಬರಾಯ ಮನೆಬಿಟ್ಟು ಹೊರಡೆಂದು ಹೇಳಿಬಿಡಬೇಕೆಂದುಕೊಂಡಿದ್ದು ಹಿಂದು ಮುಂದು ನೋಡುತ್ತಿರುವಾಗಲೆ ಭಂಡ ವೆಂಕಟಪತಿ ಹೇಳದೆ ಕೇಳದೆ ಪರಾರಿಯಾದ. ಇದಕ್ಕೆ ತನ್ನ ಗಂಡನ ಮೇಲೆ

ಸಾವಿತ್ರಿಗೆ ಸಿಟ್ಟು; ಗಂಡನ ಮೇಲಿನ ಸಿಟ್ಟನ್ನು ನಿರಪರಾಧಿನಿಯಾದ ತನ್ನ ನಾದಿನಿ ಹುಚ್ಚಿ ಯಮುನೆಯ ಮೇಲೆ ತೀರಿಸಿಕೊಳ್ಳತೊಡಗಿದಳು. ಹೆಂಡತಿ ಹೀಗೆ ಸಿಟ್ಟುಗೊಂಡು ಯಮುನೆಯಮೇಲೆ ವಿಷಕಾರುತ್ತಿರುವುದು ಅನ್ಯಾಯವೆಂದು ಸುಬ್ಬರಾಯನಿಗೆ ಅನ್ನಿಸಿತು. ಒಳ್ಳೆಯ ಮಾತಿನಲ್ಲಿ ಹೆಂಡತಿಗೆ ಹೇಳುವನ್ನು ಹೇಳಿದ; ತಾನು ಸಿಟ್ಟುಗೊಂಡರೆ ಸಂಸಾರದಲ್ಲಿ ಉಳಿದಿದ್ದ ಅಲ್ಪ ಸೌಖ್ಯಕ್ಕೂ ಸಂಚಕಾರ ಬರುವುದೆಂದು ಕೋಪಕ್ಕೆ ಕಡಿವಾಣ ಹಾಕಿದ.

ಸುಬ್ಬರಾಯನ ಸಂಸಾರ ಹೀಗೆಯೇ ಸಾಗಿತು. ಮೂರು ನಾಲ್ಕು ವರ್ಷವಾದ ಮೇಲೆ ಒಂದು ಹೆಣ್ಣು ಮಗು ಆಯಿತು; ಆ ಮೇಲೆ ಒಂದು ಗಂಡು ಮತ್ತೊಂದು ಹೆಣ್ಣು, ಆ ಹಿರಿಯ ಹೆಣ್ಣೇ ಈಗ ಮದುವೆಯಾಗಿ ಗಂಡನ ಮನೆಗೆ ಹೋಗಲಿರುವ ಸುಬ್ಬುಲಕ್ಷ್ಮಿ; ಎರಡನೆಯ ಹುಡುಗ ಲೋವರ್ ಸೆಕಂಡರಿ ಪರೀಕ್ಷೆಗೆ ಕಟ್ಟಿರುವ ಸುಬ್ರಹ್ಮಣ್ಯ; ಕಡೆಯ ಹುಡುಗಿ ಹತ್ತು ವರ್ಷ ವಯಸ್ಸಿನ ನಾಗರತ್ನ ಈ ಮನೆಯಲ್ಲಿ ಆ ಹುಚ್ಚಿಯ ಬಾಳು ಒಂದೇ ಸಮನೆ ಸಾಗುತ್ತಿತ್ತು: ಬಾಳಿನಲ್ಲಿ ಯಾವ ಏಳುಬೀಳೂ ಇಲ್ಲ; 20 ವರ್ಷಗಳಿಂದ ಒಂದೇ ಹಂಬಲು ಅವಳಿಗೆ; ದೇವರು ತನಗೆ ಕರುಣಿಸದ ಕಂದನನ್ನು ಸಾಯುವುದರೊಳಗೆ ಕಾಣುವೆನೆಂಬುದು !

* * *

ಸುಬ್ಬುಲಕ್ಷ್ಮಿಯ ಗಂಡ ಶ್ರೀಕಂಠಯ್ಯ ಬಂದಿದ್ದಾನೆಂದು ತಿಳಿಯಬಂತು. ಅವನು ಬಿ.ಎಸ್ಸಿ, ಪರೀಕ್ಷೆಗೆ ಕಟ್ಟಿದ್ದನಂತೆ; ನನಗೆ ಬಿ.ಎಸ್ಸಿ, ಕಳೆದ ವರ್ಷ ತಾನೇ ಆಗಿತ್ತು. ಶ್ರೀಕಂಠಯ್ಯ ಎಂಬ ಹೆಸರಿನವರು ಎಷ್ಟೋ ಮಂದಿ ಈ ಶ್ರೀಕಂಠಯ್ಯ ಯಾರು ಎಂದು ನೋಡುವ ಕುತೂಹಲವಾಯಿತು. ಸುಬ್ಬರಾಯರ ಮನೆಗೆ ಹೋಗೋಣವೇ ಎನ್ನಿಸಿತು. ಆದರೆ ಸಂಕೋಚ, ನಿಜವಾಗಿಯೂ ಸಂಕೋಚಪಡಲು ಕಾರಣವಿರಲಿಲ್ಲ. ಏಕೆಂದರೆ, ಸುಬ್ಬರಾಯರೇ ನನ್ನ ಮದುವೆಗೆ ಕಾರಣಭೂತರು. ನನ್ನ ಮಾವನವರು ವರಾನ್ವೇಷಣೆಯಲ್ಲಿದ್ದಾಗ ನನ್ನನ್ನು ಅವರಿಗೆ ತೋರಿಸಿದವರು ಸುಬ್ಬರಾಯರು; ಇಷ್ಟರಮೇಲೆ ನನ್ನ ತಂದೆಯ ಹತ್ತಿರದ ಗೆಳೆಯರು. ಇಷ್ಟಾದರೂ ಕೂಡ, ನಾಲ್ಕೈದು ಸಲ ಅವರನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಕಂಡಿದ್ದೆನೇ ಹೊರತು ಅವರೊಡನೆ ಸಲಿಗೆಯಿಂದ ಮಾತಾಡಿರಲಿಲ್ಲ. ಆದರೂ ನನ್ನಲ್ಲಿ ಅವರ ವಿಶ್ವಾಸ ತುಂಬ ಎಂದು ನನ್ನ ತಂದೆಯವರಿಂದ ಒಂದೆರಡು ಸಲ ಕೇಳಿದ್ದೆ. ಅಷ್ಟು ವಿಶ್ವಾಸವಿದ್ದವರು ಈಗ ನಾನು ಬಂದಿದ್ದೇನೆಂದು ತಿಳಿದೂ ನನ್ನನ್ನು ವಿಚಾರಿಸಿಕೊಂಡು ಹೋಗಲು

ಬರಲಿಲ್ಲವಲ್ಲಾ ಎಂದು ತುಸ ಅಸಮಾಧಾನ. ಅವರು ಹಿರಿಯರು, ನಾನೇ ಅವರನ್ನು ನೋಡಿಕೊಂಡು ಬರೋಣ ಎಂದು ಒಮ್ಮೆ ಎನ್ನಿಸಿತು; ಆದರೆ ಹೋಗಲು ಬಿಗುಮಾನ. ಸುಬ್ಬುಲಕ್ಷ್ಮಿಯ ಗಂಡ ಬಂದಿದ್ದಾನೆಂದು ನನ್ನ ಹೆಂಡತಿಯಿಂದ ನನಗೆ ತಿಳಿಯಲು, ಅವನನ್ನು ನೋಡುವ ನೆವದಲ್ಲಿ ಸುಬ್ಬರಾಯರನ್ನೂ ನೋಡಿಕೊಂಡು ಬರುವುದೆಂದು ನಿಶ್ಚಯಮಾಡಿದೆ.

* * *

ಬೆಳಿಗ್ಗೆ 9 ಗಂಟೆಯ ಸಮಯ. ಶ್ರೀಕಂಠಯ್ಯನನ್ನು ವಿಚಾರಿಸಿಕೊಂಡು ಸುಬ್ಬರಾಯರ ಮನೆಗೆ ಹೋದೆ. ಮನೆಯ ಮುಂದೆ ಜಗಲಿಯ ಮೇಲೆ ಆ ಹುಚ್ಚಿ ಕುಳಿತಿದ್ದಳು. ಛೆ, 'ಆ ಹುಚ್ಚಿ'ಯಲ್ಲ ; ಯಮುನಮ್ಮ, ಆಕೆಯನ್ನು ಕಂಡಕೂಡಲೆ, "ನಾನೆಲ್ಲಿಯ ನಿನ್ನ ಮಗ" ಎಂದು ನಾನು ಅಂದು ಆಡಿದ್ದು, ಅದನ್ನು ಕೇಳಿ ಅವಳು ಖಿನ್ನಳಾಗಿ ಯಾರದೋ ಜಗಲಿಯ ಮೇಲೆ ತಲೆ ಬಗ್ಗಿಸಿ ಕುಳಿತಿದ್ದದ್ದು, ಅವಳ ಸಂಕಟ, ನನ್ನ ಆಮೇಲಿನ ಮರುಕ ಎಲ್ಲ ನೆನಪಿಗೆ ಬಂದುವು. ಅಂದು ಯಾರದೋ ಮನೆಯ ಜಗಲಿಯ ಮೇಲೆ ಹಾಗೆಯೇ ಕುಳಿತಿದ್ದಳು: ಅದೇ ಖಿನ್ನತೆ, ಅದೇ ಕೆಳನಟ್ಟನೋಟ. ನಾನು ಯಾತಕ್ಕೆ ಬಂದಿದ್ದೆನೆಂಬುದರ ಅರಿವೇ ಇಲ್ಲದಾಯಿತು. ಕ್ಷಣಕಾಲ ಅವಳನ್ನೇ ದಿಟ್ಟಿಸಿ ನೋಡುತ್ತ ನಿಂತೆ. ಅವಳು ಇದ್ದಕ್ಕಿದ್ದ ಹಾಗೆ ತಲೆಯೆತ್ತಿದಳು; ನನ್ನನ್ನು ನೋಡಿದಳು; ಮುಖದ ಮೇಲೆ ಒಂದು ಮೆಲುನಗೆ ಮೂಡಿತು; ಕಣ್ಣುಗಳಲ್ಲಿ ಏನೋ ಬೆಳಕು ತುಳುಕಿತು; ನನ್ನ ಕಡೆಗೆ ಕೈಚಾಚಿದಳು, ಆದರೆ ಮೌನವಾಗಿದ್ದಳು; ವಿವೇಕವಂತರ ಮಾತಿಗಿಂತಲೂ ಹುಚ್ಚಿಯ ಛೆ, ಯಮುನಮ್ಮನ ಈ ಮೌನ ಹೆಚ್ಚು ಅರ್ಥಪೂರ್ಣವಾಗಿತ್ತು. ನನಗೂ ಏನೋ ಹೊಳೆಯಿತು. ಅಂದು "ನಾನೆಲ್ಲಿಯ ನಿನ್ನ ಮಗ" ಎಂದಿದ್ದೆ ; ಇಂದು "ನಾನು ನಿನ್ನ ಮಗ" ಎಂದು ಅವಳ ತಾಯ್ತನದ ಕರೆಗೆ ಓಗೊಟ್ಟರೆ ಅವಳ ಹುಚ್ಚು ಬಿಟ್ಟರೂ ಬಿಡಬಹುದು, ಮನೋರೋಗದ ವೈದ್ಯರು ಸಾಧಿಸಲಾಗದ್ದನ್ನು ನಾನು ಸಾಧಿಸಬಹುದು; ಆಕೆ ಕಾಣದ ಮಗನಿಗಾಗಿ ಹಂಬಲಿಸುತ್ತಿರುವ ತಾಯಿ, ಇಲ್ಲವೆ ತಾನು ತಾಯಿ ಎಂದು ತಿಳಿದುಕೊಂಡಿರುವಳು; ನಾನು ತಾಯನ್ನು ಕಂಡರಿಯದ ತಬ್ಬಲಿ; 'ಅವಳು ನನ್ನ ತಾಯಾಗಿ ನಾನು ಅವಳ ಮಗನಾಗುವ' ಪವಾಡವೊಂದು ಏಕೆ ನಡೆಯಬಾರದು? ಇಷ್ಟೆಲ್ಲ ತರ್ಕ ಒಂದು ನಿಮಿಷಕಾಲದಲ್ಲಿ ನನ್ನ ತಲೆಯಲ್ಲಿ ನಡೆದುಹೋಯಿತು. ತೀರ್ಮಾನ ಮಾಡಿದ್ದೇ ತಡ, "ಅಮ್ಮಾ!" ಎಂದು ಕೂಗಿಕೊಂಡು, ನೀಡಿದ್ದ ಯಮುನಮ್ಮನ ತೋಳುಗಳಿಗೆ ನನ್ನ ಮೈಯನ್ನು ತಕ್ಕೆಗೊಟ್ಟೆ. ಆಕೆ ಬಂದೆಯಾಮಗೂ! ಕಡೆಗೂ ನಿನ್ನ ತಾಯನ್ನು ಗುರುತಿಸಿದೆಯಾ ಮಗೂ! ಇಷ್ಟು ದಿನ ನನ್ನನ್ನು ತೊರೆದು ಎಲ್ಲಿಗೆ ಹೋಗಿದ್ದೆ

ಮಗೂ! ನನ್ನಪ್ಪ, ನನ್ನ ಕಂದಾ..." ಎಂಬ ಉದ್ಧಾರಗಳನ್ನು ನಿಲುಗಡೆಯಿಲ್ಲದೆ ಪದೇ ಪದೇ ಜಪಿಸುತ್ತಿದ್ದಳು; ಮಗುವನ್ನು ಮುಂಡಾಡುವಂತೆ ನನ್ನನ್ನು ಮುಂಡಾಡುತಿದ್ದಳು. ಅವಳ ಕಂಬನಿಯ ಕೋಡಿಯಿಂದ ನನ್ನ ಷರಟು ಅನೇಕ ಕಡೆ ಒದ್ದೆ ಮುದ್ದೆಯಾ ಯಿತು. ಹೀಗೆ ಒಂದು ಐದು ನಿಮಿಷ ಕಳೆದಮೇಲೆ ಅವಳು ನನ್ನನ್ನು ಬಲವಾಗಿ ತಬ್ಬಿಕೊಂಡು ಬಲು ಹೊತ್ತು ಮೌನವಾಗಿದ್ದಳು; ಕಂಬನಿ ಸುರಿಯುತ್ತಲೇ ಇತ್ತು. ಅವಳ ಅ ಅವರ್ಣನೀಯವಾದ ತಾಯ್ತನದ ಸಮಾಧಿಯ ಪ್ರಭಾವದಿಂದಾಗಿ, ನಾನು ನಟಿಸುತ್ತಿರುವೆನೆಂಬುದನ್ನು ಮರೆತು ನಿಜವಾದ ಮಗ ಬಹು ವರ್ಷಗಳಾದ ಮೇಲೆ ತನ್ನ ತಾಯನ್ನು ಕಂಡರೆ ಯಾವ ಔತ್ಕಂಠ್ಯದಲ್ಲಿರುತ್ತಾನೆಯೋ ಆ ಸ್ಥಿತಿಯಲ್ಲಿಯೇ ಇದ್ದೆ. ನನ್ನ ಕೊರಲು ಬಿಗಿದಿತ್ತು; ಕಣ್ಣು ಒದ್ದೆಯಾಗಿತ್ತು ಎದೆ ಡವಡವ ಎನ್ನುತ್ತಿತ್ತು.

ತಾಯಿ ತನ್ನ ಪ್ರೇಮದ ತೆಕ್ಕೆಯನ್ನು ಸಡಿಲಿಸಿದಳು; ನಾನೂ ಎಚ್ಚರಗೊಂಡು ಸುತ್ತ ನೋಡಿದೆ; ಬೀದಿಯಲ್ಲಿ ಸಣ್ಣ ಗುಂಪೇ ನೆರೆದಿತ್ತು; ಸುಬ್ಬರಾಯರು ಹೊರಗೆ ಬಂದು ಬೆರಗಿನಿಂದ ನೋಡುತ್ತಿದ್ದರು; ಅವರ ಹೆಂಡತಿ ಮಕ್ಕಳು ಬಾಗಿಲೊಳಗೆ ನಿಂತು ಬಾಯಿ ಬಿಟ್ಟುಕೊಂಡು ನೋಡುತ್ತಿದ್ದರು.

"ಸುಬ್ಬಣ್ಣ, ನನ್ನ ಮಗ ಬಂದಿದ್ದಾನೆ. ಇಷ್ಟು ವರ್ಷಗಳಾದಮೇಲೆ. ಒಳಕ್ಕೆ ಕರೆಯುವುದಿಲ್ಲವೇ?" ಎಂದು ಕೇಳಿಕೊಂಡಳು ತನ್ನ ಅಣ್ಣನನ್ನು "ಒಳಕ್ಕೆ ನಡೀ ಮಗು, ಸ್ನಾನಮಾಡಿ ಏನಾದರೂ ತಿಂಡಿ ಇದ್ದರೆ ತಿನ್ನುವೆಯಂತೆ" ಎಂದು ನನಗೆ ಹೇಳಿದಳು. "ಒಳಕ್ಕೆ ಬಾ ಯಮುನಾ, ನಿನ್ನ ಮಗನೂ ಬರುತ್ತಾನೆ. ಬಾ, ರಾಮು" ಎಂದು ಸುಬ್ಬ ರಾಯರು ನನ್ನ ಈ ನಾಟಕಕ್ಕೆ ತಕ್ಕ ಮುಕ್ತಾಯ ಕೊಟ್ಟರು.

* * *

ಯಮುನಮ್ಮನ ಮಾತಿನಲ್ಲಿ ಆಗೊಮ್ಮೆ ಈಗೊಮ್ಮೆ ಸರಣಿ ತಪ್ಪುತ್ತಿದ್ದರೂ ಹುಚ್ಚು ಕ್ರಮೇಣ ಇಳಿಯತೊಡಗಿತು. ನನಗೆ ಸಂತೋಷ, ಅಚ್ಚರಿ. ಆದರೆ ಸುಬ್ಬರಾಯರೂ ಅವರ ಹೆಂಡತಿಯೂ ಏನೋ ಕಳವಳಗೊಂಡವರಂತಿದ್ದರು. ಯಮುನಮ್ಮನ ಈ ಅನಿರೀಕ್ಷಿತ ಪರಿವರ್ತನೆ ಊರಿಗೆಲ್ಲಾ ಅಚ್ಚರಿಯ ಸುದ್ದಿಯಾಗಿ ಪರಿಣಮಿಸಿತು; ಊರಿಗೆ ಊರೇ ನನ್ನನ್ನು ಹಾಡಿ ಹರಸತೊಡ ಗಿತು. ಆದರೆ ನನ್ನ ಅತ್ತೆ ಮಾವ ಕೊಂಚ ಅಸಮಾಧಾನಗೊಂಡರು, ಏನೋ ತೊಳಸಂಬಟ್ಟೆಯಾಯಿತೆಂದು. ನನ್ನ ಹೆಂಡತಿಗೂ ನನ್ನ ಮೇಲೆ ತುಂಬ ಸಿಟ್ಟು, ಯಮುನಮ್ಮನನ್ನು ಸುಪ್ರೀತಳನ್ನಾಗಿ ಮಾಡುವುದಕ್ಕಾಗಿ ನನ್ನ ಹೆಂಡತಿಯನ್ನು

ಸುಬ್ಬರಾಯರ ಮನೆಗೆ ಕರೆದುಕೊಂಡು ಹೋಗಿ "ಅತ್ತೆಗೆ ನಮಸ್ಕಾರ ಮಾಡು ಎಂದೆ. ಅಲ್ಲದ ಅತ್ತೆಗೆ ನಮಸ್ಕಾರ ಮಾಡು ಎಂದರೆ ಅಳಬೇಕೊ ನಗಬೇಕೊ? ಅಳಲೂ ಇಲ್ಲ, ನಗಲೂ ಇಲ್ಲ. ಕೋಪಿಸಿಕೊಂಡು ಸುಮ್ಮನೆ ನಿಂತಳು. "ನನ್ನನ್ನು ಇವೊತ್ತೆ, ಪಾಪ, ಅತ್ತೆ ಅಂತ ಕಂಡದ್ದು. ಏಕೆ ಬಲವಂತ ಮಾಡುತ್ತಿ, ಸುಮ್ಮನಿರು. ನಾನು ಹಾಗೆಯೇ ಹರಸುತ್ತೇನೆ" ಎಂದು ಯಮುನಮ್ಮ ಎದ್ದು ನಿಂತಳು. ಏನು ತೋಚಿತೋ ಏನೋ, ರತ್ನ ನಮಸ್ಕಾರ ಮಾಡಿದಳು. ಯಮುನಮ್ಮ ತುಂಬ ಸಂತೋಷಪಟ್ಟಳು, "ಅಂದಹಾಗೆ, ಹೆಣ್ಣು ಯಾರ ಮಗಳು? ನಿನಗೆ ಮದುವೆ ಮಾಡಿಸಿದವರು ಯಾರು? ಅತ್ತೆ ಮಾವ ಯಾರು? ಮಾವನ ಮನೆ ಎಲ್ಲಿ? ..." ಎಂದು ಪ್ರಶ್ನೆಗಳ ಸುರಿಮಳೆಯನ್ನೆ ಸುರಿಸಿಬಿಟ್ಟಳು. ಎಲ್ಲ ಪ್ರಶ್ನೆಗಳಿಗೂ ಸಮಂಜಸವಾಗಿ ಉತ್ತರಕೊಡಲು, "ಸುಬ್ಬಣ್ಣನೇ ನಿನಗೆ ಹೆಣ್ಣು ಗೊತ್ತು ಮಾಡಿದನೊ? ಸರಿ, ನಾನೇ ಗೊತ್ತು ಮಾಡಿದ ಹಾಗಾಯಿತು. ರತ್ನ ನಮ್ಮ ನಂಜುಂಡಯ್ಯನವರ ಮಗಳೆ? ಕಮಲಮ್ಮನೂ ಗೊತ್ತು ನನಗೆ ನಾಳೆಯೇ ಅವರ ಮನೆಗೆ ಹೋಗಬೇಕು. ಬಡವೆ ಎಂದು ದೂರ ಮಾಡುತ್ತಾರೋ ಏನೋ ..." ಎಂದು ತನ್ನ ಭಾಗಕ್ಕೆ ಸಂಗತವಾದರೂ ಇತರರಿಗೆ ಸರಿಬೀಳದಿರಬಹುದಾದ ಮಾತುಗಳನ್ನಾಡತೊಡಗಿದಳು.

ಮಾರನೆಯದಿನ ನನ್ನ ಮಾವನ ಮನೆಗೆ ಯಮುನಮ್ಮ ಬಂದೂಬಿಟ್ಟಳು; ನಾನು ರತ್ನನನ್ನು ಕರೆದುಕೊಂಡು ಹೋಗುವಾಗ ತಾನೂ ಜೊತೆಯಲ್ಲಿ ಬಂದು, ಮಗಸೊಸೆ ಸಂಸಾರ ಮಾಡುವುದನ್ನು ನೋಡಿ, ಮೊಮ್ಮಗನನ್ನು ಕಂಡು ಕಣ್ಣು ಮುಚ್ಚಿಕೊಳ್ಳುವುದಾಗಿ ಹೇಳಿದಳು. "ಎಲ್ಲಿಯ ಮಗ, ಎಲ್ಲಿಯ ಸೊಸೆ" ಎಂದು ನಮ್ಮ ಅತ್ತೆ ಆಡಿಕೊಂಡರು, ಸರಿಯೆ, ಆದರೆ, ಯಮುನಮ್ಮನ ಬಯಕೆ ತೀರದೆ ಹೋದರೆ ಆಕೆಯ ಇಳಿಯುತ್ತ ಬರುತ್ತಿದ್ದ ಹುಚ್ಚು ಎಲ್ಲಿ ಮತ್ತೆ ಕೆರಳುವುದೋ ಎಂದು ನಾನು ಕನಿಕರಗೊಂಡು, ಸುಬ್ಬರಾಯರು ಮತ್ತು ನನ್ನ ಮಾವನವರ ಸಲಹೆ ಕೇಳಿ, ಅವರು ಒಪ್ಪುವುದಾದರೆ ನಾನು ಯಮುನಮ್ಮನನ್ನು ಕರೆದುಕೊಂಡು ಹೋಗಿ, ಕೆಲಸ ಸಿಕ್ಕಿದಮೇಲೆ ಬೇರೆಯಾಗಿ ಸಂಸಾರ ಹೂಡುವುದಾಗಿ ಅಭಿಪ್ರಾಯಪಟ್ಟೆ. ಸುಬ್ಬರಾಯರೂ ನನ್ನ ಮಾವನವರೂ ತಮ್ಮತಮ್ಮಲ್ಲಿ ಅದೇನು ಚರ್ಚೆ ಮಾಡಿಕೊಂಡರೋ ಏನೋ, ನನ್ನ ಅತ್ತೆ ಮತ್ತು ನನ್ನ ಹೆಂಡತಿ ಸ್ವಲ್ಪ ಗೊಣಗುಟ್ಟಿದರೂ ಅವರ ಮಾತಿಗೆ ಅಷ್ಟು ಬೆಲೆಕೊಡದೆ ಯಮುನಮ್ಮನನ್ನು ನನ್ನ ಸಂಗಡ ಕರೆದುಕೊಂಡು ಹೋಗಲು ನನ್ನ ಮಾವನವರು ಸಮ್ಮತಿಸಿದರು. ಯಮುನಮ್ಮನ ಖರ್ಚಿಗೆಂದು ನನಗೆ ತಿಂಗಳಿಗೆ 25 ರೂಪಾಯಿ ಕಳಿಸುವುದಾಗಿ ಸುಬ್ಬರಾಯರು ಒಪ್ಪಿದರು.

* * *

ನನಗೆ ಬೇಗನೆ ಕೆಲಸವೂ ಸಿಕ್ಕಿತು. ಬೇರೆಯ ಊರಾದ್ದರಿಂದ, ಯಮುನಮ್ಮ ಮತ್ತು ರತ್ನನೊಡನೆ ಬೇರೆಯ ಸಂಸಾರ ಹೂಡುವ ಏರ್ಪಾಡೂ ಆಯಿತು. ಸಂಸಾರ ಕೂಡಿದ ತರುಣದಲ್ಲಿ, ಯುಮುನಮ್ಮ ಮೊಮ್ಮಗನನ್ನು ಕಂಡು ನಲಿದಳು. ಅಷ್ಟು ಹೊತ್ತಿಗೆ ಅವರ ಹಂಬಲೆಲ್ಲ ಹಣ್ಣಾಗಿ ಹುಚ್ಚು ಪೂರ್ತಿ ಬಿಟ್ಟು ಹೋಗಿತ್ತೆಂದೇ ಹೇಳಬೇಕು. ನಾಮಕರಣಕ್ಕೆ ನನ್ನ ತಂದೆ ಮತ್ತು ಚಿಕ್ಕಮ್ಮ, ನನ್ನ ಅತ್ತೆ, ಮಾವ, ಸುಬ್ಬರಾಯರು ಮತ್ತು ಅವರ ಹೆಂಡತಿ ಎಲ್ಲರೂ ಬಂದಿದ್ದು ನಲಿದು ಹಿಂದಿರುಗಿದರು.

* * *

ನನ್ನ 'ತಾಯಿ'ಗೆ (ಯಮುನಮ್ಮನಿಗೆ) ಖಾಯಿಲೆಯಾಗಿ ಹಾಸಿಗೆ ಹಿಡಿದು ಮಲಗಿದಳು. ಔಷದೋಪಚಾರ, ಶುಶ್ರೂಷೆ ಯಾವುದರಲ್ಲೂ ಕೊರತೆಮಾಡಲಿಲ್ಲ: ವಿಷಮ ಸ್ಥಿತಿಯನ್ನು ಮುಟ್ಟಿದಾಗ, ಹತ್ತಿರದ ಸಂಬಂಧಿಗಳು ಹತ್ತಿರ ಇರಬೇಕಾದ್ದು ನ್ಯಾಯವೆಂದು ಸುಬ್ಬರಾಯರಿಗೆ ಕಾಗದ ಹಾಕಿದೆ. ಅವರೂ ಬಂದರು.

ತಂಗಿಯ ಬಳಿ ಕುಳಿತು ಸುಬ್ಬರಾಯರು ಆಕೆಯನ್ನು ಸಂತೈಸುತ್ತಿದ್ದರು.

"ಸುಬ್ಬಣ್ಣ ನಾನು ಇನ್ನು ಬದುಕುವುದಿಲ್ಲ, ಕರ್ಮಾಂತರಗಳನ್ನೆಲ್ಲ ಸರಿಯಾಗಿ ಮಾಡಿಸಿಬಿಡಪ್ಪ" ಎಂದು ಯಮುನಮ್ಮ ಬೇಡಿ ನುಡಿದಳು,

"ಹಾಗೆಲ್ಲಾ ಮಾತನಾಡಬಾರದು, ಸುಮ್ಮನೆ ಮಲಗಿಕೊಳ್ಳಮ್ಮ, ನಾನಿರುವಾಗ ನಿನಗೇಕೆ ಯೋಚನೆ?" ಎಂದು ನಾನೂ ಸಮಾಧಾನಪಡಿಸಿದೆ.

ಎರಡು ಮೂರು ದಿನ "ತಾಯಿ' ವಿಪರೀತ ಸಂಕಟಪಟ್ಟಳು. ಈಗ ಶುಶ್ರೂಷೆ ಉಪಚಾರಗಳ ಭಾರವನ್ನೆಲ್ಲ ಸುಬ್ಬರಾಯರೆ ವಹಿಸಿಕೊಂಡಿದ್ದರು. ತಂಗಿ ಬದುಕಬೇಕೆಂದು ಬಹಳವಾಗಿ ಸಾಹಸಪಡುತ್ತಿದ್ದರು, ದೇವರಲ್ಲಿ ಮೊರೆಯಿಡುತ್ತಿದ್ದರು.

'ತಾಯಿ'ಗೆ ಸಾವು ಸಂಕಟ, ಬದುಕುವುದಿಲ್ಲವೆಂದು ಖಚಿತವಾಗಿಹೋಯಿತು. ಸುಬ್ಬರಾಯರು ತಲೆಯ ಬಳಿ ಕುಳಿತಿದ್ದರು. ನಾನು ಪಕ್ಕದಲ್ಲಿ ನಿಂತಿದ್ದೆ. ಏನೋ ಹೇಳ ಬೇಕೆಂದು ಬಾಯಿ ತೆರೆದು ಸನ್ನೆ ಮಾಡಿದರು, ತಾಯಿ. "ಏನಮ್ಮ? ಎಂದು ಮೃದು ಧ್ವನಿ ಯಲ್ಲಿ ಕಿವಿಯ ಹತ್ತಿರ ಬಾಯಿಟ್ಟು ಕೇಳಿದರು ಸುಬ್ಬರಾಯರು ಇದ್ದ ಶಕ್ತಿಯನ್ನೆಲ್ಲ ಕೂಡಿಸಿಕೊಂಡು; "ರಾಮು ಖಂಡಿತವಾಗಿಯೂ ನನ್ನ

ಮಗನೆ? ಕೈಮೇಲೆ ಆಣೆಯಿಟ್ಟು ಹೇಳು" ಎಂದು ತಾಯಿ' ತೊದಲಿದಳು. ಸುಬ್ಬರಾಯರು, "ನನ್ನಾಣೆಗೂ ನಿನ್ನಾಣೆಗೂ ನಿನ್ನ ಮಗನೆ" ಎಂದು ತಂಗಿಯ ಕೈಮುಟ್ಟಿ ನುಡಿದರು. 'ತಾಯಿ' ಹತ್ತಿರಕ್ಕೆ ಬಂದು ಕುಳಿತುಕೊಳ್ಳುವಂತೆ ನನಗೆ ಸನ್ನೆ ಮಾಡಿದಳು. ಹತ್ತಿರ ಹೋಗಿ ಕುಳಿತೆ. ಹೇಗೋ ಕಷ್ಟದಿಂದ ಕೈನೀಡಿ, ನನ್ನ ತಲೆಯನ್ನು ತನ್ನ ಎದೆಯಮೇಲೆ ಒರಗಿಸಿಕೊಂಡಳು. ತಾಯ್ತನದ ಸಮಾಧಿಯಲ್ಲಿ ತನ್ನ ಕಡೆಯುಸಿರು ಬಿಟ್ಟಳು.

ಸುಬ್ಬರಾಯರು ಹೇಳಿದರು–"ರಾಮು, ತಾಯ ಋಣವನ್ನು ತೀರಿಸಲು ನಿನ್ನ ಹಣೆಯಲ್ಲಿ ಬರೆದಿತ್ತು; ತೀರಿಸಿದ್ದೀಯೆ. ನಾನು ಯಮುನೆಗೆ ಹೇಳಿದ್ದು ಸುಳ್ಳಲ್ಲ. ನನ್ನಾಣೆಗೂ, ನನ್ನ ಮಕ್ಕಳಾಣೆಗೂ, ಅವಳು ನಿನ್ನನ್ನು ಹಡೆದ ತಾಯಿ, ನೀನು ಅವಳ ಮಗ."

ನನಗೆ ದಿಗ್ಭ್ರಮೆಯಾಯಿತು. ಸಂತೋಷ, ಆಶ್ಚರ್ಯ, ದುಃಖ– ಎಲ್ಲವೂ ಏಕಕಾಲದಲ್ಲಿ ಮೂಡಿ ಕೆಲಹೊತ್ತು ಮೂಕನಾದೆ.

"ಹಾಗಾದರೆ ..."

"ಕೃಷ್ಣರಾಯರು ನಿನ್ನ ಸಾಕುತಂದೆ; ನಿನ್ನ ಚಿಕ್ಕಮ್ಮ ಅವರ ಒಬ್ಬಳೇ ಹೆಂಡತಿ ..." ನನ್ನ ಸೋದರಮಾವ ಸುಬ್ಬರಾಯರು 10 ದಿನದ ಕೂಸಾದ ನನ್ನನ್ನು ಕೃಷ್ಣ ರಾಯರ ಹೆಂಡತಿಯ ಮಡಿಲಿಗೆ ಹಾಕಿ ನನ್ನನ್ನು ಮುಂದಕ್ಕೆ ತಂದ ಕಥೆ ಕೇಳಿ ಆಶ್ಚರ್ಯಪಟ್ಟೆ, "ನನ್ನನ್ನು ತಾಯಿಇಂದ ಅಗಲಿಸದಿದ್ದರೆ ಅವಳಿಗೆ ಹುಚ್ಚು ಹಿಡಿಯುತ್ತಿರಲಿಲ್ಲವೇನೋ" ಎಂದುದಕ್ಕೆ, "ಹುಚ್ಚು ಹಿಡಿಯುವುದೆಂದು ನಾನು ಎಣಿಸಿರಲಿಲ್ಲ. ಆದರೆ, ಲೋಕದ ದೃಷ್ಟಿಯಲ್ಲಿ ಅವಳ ಹೆಸರು ಮಲಿನವಾಗುವುದಕ್ಕೆ ನನ್ನ ಮನಸೊಪ್ಪಲಿಲ್ಲ. ಕೃಷ್ಣರಾಯರೊಬ್ಬರನ್ನು ಅಂತರಂಗಕ್ಕೆ ತೆಗೆದುಕೊಂಡು ಆ ಕಳಂಕವನ್ನು ಉಳಿದ ಎಲ್ಲರಿಂದಲೂ ಮುಚ್ಚಿದ್ದೇನೆ. ಉತ್ತರಕ್ರಿಯೆಗೆ ಅಧಿಕಾರಿ ಯಾದ ನಿನಗೆ ಇಂದು ಹೇಳಬೇಕಾಗಿ ಬಂತು."

"ಹೇಳದೆಯೇ ತಾಯಾಗಿದ್ದಳು; ಹೇಳಿದ್ದರಿಂದ ಹಡೆದ ತಾಯಾದಳು. ಮಾತು ಮುಗಿಯುವುದಕ್ಕೆ ಮೊದಲೆ ದುಃಖ ಒತ್ತರಿಸಿ ಬಂತು ತಾಯನ್ನು ತಬ್ಬಿಕೊಂಡು ಬಿಕ್ಕಿ ಬಿಕ್ಕಿ ಅತ್ತೆ.

* * *

*ಆಕರ : ಬಿಸಿಲು ಬೆಳದಿಂಗಳು : ಎಂ.ವಿ. ಸೀತಾರಾಮಯ್ಯ*

**ಎಂ.ವಿ. ಸೀತಾರಾಮಯ್ಯ:**

ಮೈಸೂರು ವೆಂಕಟದಾಸಪ್ಪ ಸೀತಾರಾಮಯ್ಯ ನವರು ಕನ್ನಡದ ಪ್ರಮುಖ ಸಾಹಿತಿಗಳಲ್ಲಿ ಒಬ್ಬರು, ರಾಘವ ಕಾವ್ಯನಾಮದ ಮೂಲಕ ಪರಿಚಿತರು; ಇವರು ಜನಿಸಿದ್ದು ಮೈಸೂರಿನಲ್ಲಿ. ಮಕ್ಕಳಿಗಾಗಿ ಬರೆದ ಹಾಡು 'ಹೂವನು ಮಾರುತ ಹೂವಾಡಗಿತ್ತಿ' ಮಕ್ಕಳ ಮನಗೆದ್ದ ಕವಿತೆ. ಕನ್ನಡ ಅಧ್ಯಾಪಕರಾಗಿದ್ದ ಇವರು ಸಾಹಿತ್ಯ ಕ್ಷೇತ್ರದಲ್ಲಿಯೂ ಮನೆಮಾತಾಗಿದ್ದರು.

ಕನ್ನಡ ಸಾಹಿತ್ಯಕ್ಕೆ ಇವರ ಕೊಡುಗೆಗಳೆಂದರೆ ಹಕ್ಕಿಹಾಡು, ರಾಗ, ಅಶೋಕ ಚಕ್ರ (ಕವನ ಸಂಗ್ರಹಗಳು), ರಾಘವ, ಕವನ ಕೋಶ, ಆ ಚಿತ್ರಗಳು, ಹಕ್ಕಿ ಹಾಡು, ರತಿದೇವಿ ಮತ್ತು ಇತರ ಕಥೆಗಳು, ಬಿಸಿಲು ಬೆಳದಿಂಗಳು, ನಿಲ್ದಾಣಗಳ ನಡುವೆ (ಕಥಾ ಸಂಕಲನಗಳು), ಭಾಗ್ಯಲಕ್ಷ್ಮಿ, ನಂಜಿನ ಸವಿ, ಜೀವನದ ಜೊತೆಗಾರ (ಕಾದಂಬರಿಗಳು), ತೆರೆಮರೆಯ ಚಿತ್ರಗಳು, ತೊಟ್ಟಿಲು ತೂಗದ ಕೈ (ನಾಟಕಗಳು), ಧೂಮಲೀಲೆ, ಮತ್ತು ಮುಗಿಲುಗಳು, ಹಿಡಿಹೂವು, (ಪ್ರಬಂಧಗಳು), ಕವಿರಾಜ ಮಾರ್ಗ, ಉದಯಾದಿತ್ಯಾಲಂಕಾರ, ಚಿನ್ನದ ಬೆಳಸು, ಅರ್ಚನ, ಶ್ರೀಕೃಷ್ಣಬಾಲಲೀಲೆ (ಸಂಪಾದಿತ ಕೃತಿಗಳು).

ಇವರಿಗೆ ಬಿ.ಎಂ.ಶ್ರೀ. ಸ್ವರ್ಣಪದಕ, ಕನ್ನಡ ಸಾಹಿತ್ಯ ಪರಿಷತ್ತಿನ ಬಹುಮಾನ, ದೇವರಾಜ ಬಹದ್ದೂರ್ ಬಹುಮಾನ, ಮೈಸೂರು ಸರ್ಕಾರದ ಸಾಹಿತ್ಯ ಮತ್ತು ಸಂಸ್ಕೃತಿ ಇಲಾಖೆಯ ಬಹುಮಾನ, ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ವಿಚಾರ ರತ್ನಾಕರ' ಬಿರುದು, ದೊರೆತಿದೆ. ಬಿ.ಎಂ.ಶ್ರೀ ಪ್ರತಿಷ್ಠಾನದ ಸಂಸ್ಥಾಪಕರಾದ ಇವರು ಚಿತ್ರಕಾರರೂ ಆಗಿದ್ದರು. ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿ ಕೆಲಕಾಲ ಸೇವೆ ಸಲ್ಲಿಸಿದ್ದರು.

# 3. ಅಂತಃಕರಣ

| | | | |
|---|---|---|---|
| 3.1 | ಕರ್ಣರಾಗ | : ಎಲ್. ಹನುಮಂತಯ್ಯ | 061 |
| 3.2 | ಕಣ್ಣಪ್ಪನ ಅಂತಿಮ ದಿನಗಳು | : ಪಿ. ಲಂಕೇಶ್ | 063 |
| 3.3 | ಕೋಡುಗಲ್ಲ ಬಸವ (ಶಾಂತಲಾ) | : ಕೆ.ವಿ. ಅಯ್ಯರ್ | 071 |
| 3.4 | ಓದುಪತ್ಯ : ಅನುಕಂಪದ ಹತ್ತು ಮುಖಗಳು | : ಮಾಲವಿಕಾ ಕಪೂರ್ | 079 |

# 3. ಅಂತಃಕರಣ

## ಆಶಯ:

**ಅಂತಃಕರಣ** –ಸಾಂಖ್ಯದರ್ಶನದ ಒಂದು ಮುಖ್ಯ ಪಾರಿಭಾಷಿಕ ಪದ. ಆಧುನಿಕ ಮನಶ್ಶಾಸ್ತ್ರಜ್ಞರು ಮಿದುಳು ನಮ್ಮ ಒಳ ಅನುಭವಗಳಿಗೆ ಕಾರಣವಾದ ಒಳ ಅಂಗವೆಂದೂ ಹೊರಗಿನ ವಸ್ತುಗಳ ಅನುಭವಕ್ಕೆ ಕಾರಣವಾದ ಕಣ್ಣು, ಕಿವಿ ಮೂಗು, ನಾಲಗೆ ಮತ್ತು ಸ್ಪರ್ಶೇಂದ್ರಿಯಗಳು ಹೊರ ಅಂಗಸಂಸ್ಥೆಗಳೆಂದೂ ಭಾವಿಸುತ್ತಾರೆ. ಸಾಂಖ್ಯರ ಅಂತಃಕರಣ ಒಳ ಅಂಗವಾದ ಮಿದುಳಿಗೆ ಸಮಾನಾಂತರವಾದ ಪದ. ಸಾಂಖ್ಯದರ್ಶನದ ಪ್ರಕಾರ ಅಂತಃಕರಣ ಮನಸ್ಸು, ಅಹಂಕಾರ ಮತ್ತು ಬುದ್ಧಿ– ಈ ಮೂರರಿಂದ ಕೂಡಿದ ಒಳ ಇಂದ್ರಿಯ ಸ್ಥಾನ, ಇವುಗಳ ಮೂಲಕ ಜ್ಞಾನೋತ್ಪತ್ತಿಯ ಕ್ರಮ ಈ ರೀತಿ ಇದೆ: ಹೊರ ವಸ್ತುಗಳ ರೂಪ, ಶಬ್ದ, ರಸ, ಗಂಧ, ಮುಂತಾದ ಗುಣಗಳನ್ನು ಕಣ್ಣು, ಕಿವಿ, ನಾಲಗೆ, ಮೂಗು ಮುಂತಾದ ಹೊರ ಇಂದ್ರಿಯಗಳು ಮನಸ್ಸಿಗೆ ಮುಟ್ಟಿಸುತ್ತವೆ. ಮನಸ್ಸು ಇಂದ್ರಿಯಾನುಭವಗಳನ್ನು ವರ್ಗೀಕರಿಸುತ್ತದೆ. ಈ ವರ್ಗೀಕರಿಸುವ ವೃತ್ತಿಗೆ ಸಂಕಲ್ಪವೆಂದು ಪಾರಿಭಾಷಿಕ ಹೆಸರು. ಸಂಕಲ್ಪಿಸಿದ ವಿಷಯ ಜೀವನಿಗೆ ಉಪಯುಕ್ತವೋ ನಿರುಪಯುಕ್ತವೋ ಅದನ್ನು ಆದರಿಸಬೇಕೋ ಬಿಡಬೇಕೋ ಎಂಬುದನ್ನು ಅಹಂಕಾರ ತಿಳಿಸುತ್ತದೆ. ಅಹಂಕಾರ ನಮ್ಮ ಅಭಿಮಾನ, ದುರಭಿಮಾನಗಳಿಗೆ ಕಾರಣ. ಹೀಗೆ ಅಭಿಮಾನದಿಂದ ದುರಭಿಮಾನದಿಂದ ಹುಟ್ಟಿದ ಅನುಭವ ಬುದ್ಧಿಯನ್ನು ಸುಖಕರವಾಗಿರಿಸಬಹುದು ಅಥವಾ ದುಃಖಕರವಾಗಿರಿಸ ಬಹುದು. ಈ ಮೂರು ವಿಧವಾದ ಅನುಭವಗಳಿಗೆ ಕಾರಣವಾದ ಒಳ ಅಂಗಗಳ ಸ್ಥಾನ ಅಂತಃಕರಣ.

ವೇದಾಂತಿಗಳು ಅಂತಃಕರಣ ಚತುಷ್ಟಯ ಎಂಬ ಪದ ಪ್ರಯೋಗ ಮಾಡುತ್ತಾರೆ. ಚಿತ್ತ ನಾಲ್ಕನೆಯದು. ವೇದಾಂತದ ಪ್ರಕಾರ ಅಹಂಕಾರವು ಅಂತಃ ಕರಣದ ಕಾರ್ಯದಲ್ಲಿ ಅಭಿಮಾನಪುರ್ವಕವಾಗಿ ಕಾರ್ಯನಿರ್ವಹಿಸಿ, ಎಲ್ಲ ಅನುಭವಗಳನ್ನೂ ಜೀವಿಗೆ ಆರೋಪಿಸುವ ಮೂಲಕ ಸುಖ – ದುಃಖಗಳ ಅನುಭವಕ್ಕೆ ಕಾರಣೀಭೂತವಾಗುತ್ತದೆ. ಆದ್ದರಿಂದ ಅಹಂಕಾರವನ್ನು ಕಡಿಮೆ ಮಾಡಿಕೊಳ್ಳುವುದು ಮನುಷ್ಯನ ಆರೋಗ್ಯಕ್ಕೆ ಮತ್ತು ಉನ್ನತಿಗೆ ಮುಖ್ಯ ಎಂದು ವೇದಾಂತಿಗಳು ಅಭಿಪ್ರಾಯ ಪಡುತ್ತಾರೆ.

– *ವಿಕಿಪೀಡಿಯ*

## 3.1 ಕರ್ಣರಾಗ

**–ಎಲ್. ಹನುಮಂತಯ್ಯ**

ಹೆತ್ತ ಕಂದನನು ನಿಮ್ಮ ಮಡಿಲಿಗೆ ಹಾಕಿ
ದೂರದಲಿ ನಿಂತಿರುವ ಗಗನಮುಖಿಯಾಗಿ
ಒಂಬತ್ತು ತಿಂಗಳು ಹೊತ್ತ ನೋವನು ಮರೆತು
ಎತ್ತರಕೆ ಏರುವುದ ಬಯಸುತಿರುವೆ

ಅನಾಥ ಮಗುವನ್ನು ಸಾಕಬೇಕೇ ಎಂಬ
ಬೇಸರದ ಕಿರಣವೊಂದಿರಬಹುದು ಕರುಳಲ್ಲಿ
ಕುಂತಿ ಕಷ್ಟದಿ ಪಡೆದು ಲೋಕನಿಂದೆಗೆ ಬೆದರಿ
ಹೊಳೆಗೆ ತೇಲಿಡುವುದು ಸುಲಭವೇನವ್ವ?

ಮೀನಬಲೆಯಲಿ ತಂದು ಅಚ್ಚರಿಯ ಅಲೆ ಸರಿಸಿ
ಜೀವ ಉಳಿಸಿದೆಯಪ್ಪ ನೀನು ತಾಯಿ
ನಿನ್ನ ತಾಯ್ತನದಲ್ಲಿ ಒಂದಿನಿತು ನನದಲ್ಲ
ನಿದ್ರೆಯಿಲ್ಲದ ರಾತ್ರಿ ಲೆಕ್ಕವಿಲ್ಲ.

ಲೋಕದರಿವಿಗೆ ತರದೆ ಹಿರಿಮೆಗರಿ ತೂಗಲು
ತೊರೆದ ಕಂದನ ಶೌರ್ಯ ಇನ್ನು ಬಲಿಗೊಡೆನು
ಕೃಷ್ಣತಂತ್ರಕೆ ಮಣಿದು ಧರ್ಮದರ್ಪಕೆ ಕುಣಿದು
ಮಾತೃಪ್ರೇಮದ ಭಿಕ್ಷೆ ಬೇಡಲಾರೆ

ಪರಶುಪರ್ವದಲಿ ಶಾಪವಿತ್ತ ಘಳಿಗೆ
ಅಬ್ಬರಿಸಿ ಆ ಕ್ಷಣವೆ ಕೂಗಬೇಕೆಂದಿದ್ದೆ
ಅಮ್ಮನಿರುವಾ ಕಂದ ತಬ್ಬಲಿ ಅಲ್ಲೆಂದು
ರಾಜಋಷಿ ಗರ್ವವನ್ನು ಮುರಿಯಬೇಕೆಂದಿದ್ದೆ

ಸ್ತ್ರೀಕುಲದ ಹೆಮ್ಮೆಗೆ ಕರುಳಕುಡಿ ಒಲುಮೆಗೆ
ನಿಜದ ಹಾಡನು ಒಮ್ಮೆ ಹಾಡಬೇಕೆಂದಿರುವೆ
ಗಂಟಲನು ಸುತ್ತಿರುವ ಬೆರಳುಗಳ ಕತ್ತರಿಸಿ
ದನಿ ಎತ್ತಿ ಹಾಡುವನು ಕರ್ಣರಾಗ

* * *

**ಎಲ್. ಹನುಮಂತಯ್ಯ:**

ಅವರು ದೊಡ್ಡಬಳ್ಳಾಪುರ ಜಿಲ್ಲೆ ರಾಮೇಶ್ವರ ಗ್ರಾಮದವರು. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಉದ್ಯೋಗಿಯಾಗಿರುವ ಇವರು ಸ್ವಯಂ ನಿವೃತ್ತಿ ತೆಗೆದುಕೊಂಡು, ದಲಿತ ಸಾಹಿತ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಸೃಜನಶೀಲ ಸಾಹಿತಿ, ವಾಗ್ಮಿ ಹಾಗೂ ವಿಮರ್ಶಕರಾಗಿರುವ ಅವರು 2001ರಲ್ಲಿ ವಿಧಾನ ಪರಿಷತ್ ಸದಸ್ಯರೂ ಆಗಿದ್ದರು. 'ಕಪ್ಪು ಕಣ್ಣಿನ ಹುಡುಗಿ', 'ಅವ್ವ (ಕವನ ಸಂಕಲನ), 'ಅಂಬೇಡ್ಕರ್ ಕವನಗಳು (ಸಂಪಾದನೆ) 'ದಲಿತ ಲೋಕದ ಒಳಗೆ' (ವಿಮರ್ಶೆ), ಅಂಬೇಡ್ಕರ್' (ನಾಟಕ), ಪ್ರಕಟಿತ ಕೃತಿಗಳು. ಒಂಟಿ ಕಾಲಿನ ನಡಿಗೆ ಎನ್ನುವ ಆತ್ಮಕತೆಯನ್ನೂ ಕೂಡ ಬರೆದಿದ್ದಾರೆ. ಅವರ ಸಮಗ್ರ ಕೃತಿಗಳನ್ನು ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸಿದೆ. ಅವರು ಜನಪರ ಸಂಘಟನೆಗಳಲ್ಲಿ ಸಕ್ರಿಯ ಪಾತ್ರ ವಹಿಸುತ್ತಿದ್ದಾರೆ. 2015ರಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿಯೂ ಸೇವೆಸಲ್ಲಿಸಿದ್ದಾರೆ. ಹತ್ತನೇ ತರಗತಿಯವರೆಗೆ ಹುಟ್ಟೂರಿನಲ್ಲೇ ಶಿಕ್ಷಣ ಪಡೆದ ಅವರು, ಆನಂತರ ಬೆಂಗಳೂರಿನ ಸರಕಾರಿ ವಿಜ್ಞಾನ ಕಾಲೇಜ್‌ನಲ್ಲಿ ಪದವಿ, ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕನ್ನಡದಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಬಂಡಾಯ ಕವಿತೆಗಳಲ್ಲಿ ದಲಿತ ಪ್ರಜ್ಞೆ ಎಂಬ ಪ್ರೌಢ ಪ್ರಬಂಧಕ್ಕೆ ಮೈಸೂರು ವಿಶ್ವವಿದ್ಯಾಲಯ ಡಾಕ್ಟರೇಟ್ ನೀಡಿದೆ.

## 3.2 ಕಣ್ಣಪ್ಪನ ಅಂತಿಮದಿನಗಳು

**–ಪಿ. ಲಂಕೇಶ್**

ಕಣ್ಣಪ್ಪ ನೂಕುವ ಗಾಡಿಯಲ್ಲಿ ತರಕಾರಿ ವ್ಯಾಪಾರ ಮಾಡುವವ; ಅರವತ್ತು ವರ್ಷದ ಕಣ್ಣಪ್ಪ ಕಳೆದ ಐವತ್ತು ವರ್ಷದಿಂದ ಇದೇ ವ್ಯಾಪಾರ ಮಾಡುತ್ತಿದ್ದಾನೆ. ಬೆಳಿಗ್ಗೆ ಲಾಲ್‌ಬಾಗ್‌ಗೆ ಹೋಗಿ ಹರಾಜಿನಲ್ಲಿ ತರಕಾರಿಕೊಂಡು ಕಲಾತ್ಮಕವಾಗಿ ಜೋಡಿಸಿ ಗಾಡಿಯನ್ನು ಲಾಲ್‌ಬಾಗ್ ಪೂರ್ವದ ದ್ವಾರದಲ್ಲಿ ನಿಲ್ಲಿಸಿ ಮೂಲೆ ಹೋಟಲಲ್ಲಿ ಕಾಫಿ ಕುಡಿದು, ಹೊರಡುತ್ತಾನೆ. “ಗೋರಿಕಾಯಿ, ಬೆಂಡೆಕಾಯಿ, ನುಗ್ಗೇಕಾಯಿ, ಸೋರೇಕಾಯಿ” ಎಂದು ಕಂಚಿನ ಕಂಠದಲ್ಲಿ ಕೂಗುತ್ತಾ ಬಿನ್ನಿಪೇಟೆ, ಶ್ರೀರಾಂಪುರದ ಇಕ್ಕಟ್ಟು ರಸ್ತೆಗಳಲ್ಲಿ ಹೋಗುತ್ತಾನೆ. ಆತ ಬೇರೆ ರಸ್ತೆಗಳಿಗೆ ಹೋಗಿದ್ದೇ ಕಡಿಮೆ. ಲಾಲ್‌ಬಾಗ್, ಬಿನ್ನಿಪೇಟೆ, ಶ್ರೀರಾಂಪುರ ಹೆಚ್ಚೆಂದರೆ ಪಕ್ಕದ ಮಲ್ಲೇಶ್ವರ, ಅದು ಆತನ ವ್ಯಾಪಾರದ ವಲಯ, ಬಿನ್ನಿಪೇಟೆಯ ಹತ್ತಾರು ಮನೆಗಳು ಅವನ ಖಾಯಂ ಗಿರಾಕಿಗಳು, ಅಲ್ಲಿಯ ಹೆಂಗಸರು, ಮಕ್ಕಳೆಲ್ಲ ಅವನಿಗೆ ಗೊತ್ತು. ಹಾಗೆಂದು ಅವರ ಹೆಸರು, ವೃತ್ತಿ, ಚಾಳಿಯ ಬಗ್ಗೆಯೆಲ್ಲ ತಲೆಕೆಡಿಸಿಕೊಳ್ಳುವವನಲ್ಲ ಕಣ್ಣಪ್ಪ. ಗಿರಾಕಿಗಳಿಗೂ ಅವನಿಗೂ ಇರುವ ವಿಚಿತ್ರ ಸ್ನೇಹದಲ್ಲಿ ಸಲಿಗೆಯಾಗಲಿ, ವಿಶೇಷ ಕುತೂಹಲವಾಗಲಿ ಇಲ್ಲ. ಆತನನ್ನು ಅವರು ನಂಬುತ್ತಾರೆ, ಆತನ ಬೆಂಡೆಕಾಯಿ ಬಲಿತಿರುವುದಾಗಿ ಹಲವೊಮ್ಮೆ ಹೀಯಾಳಿಸಿದರೂ ಅದು ವ್ಯಾಪಾರದ ತಂತ್ರ ಮಾತ್ರ, ಆದಷ್ಟೂ ಕಡಿಮೆ ಬೆಲೆಗೆ ಕೊಳ್ಳಲು ಹೂಡುವ ಚೌಕಾಶಿ ಅದು, ಅದು ಕಣ್ಣಪ್ಪನಿಗೂ ಗೊತ್ತು, ಗಿರಾಕಿಗಳಿಗೂ ಗೊತ್ತು. “ಹೀರೇಕಾಯಿಗೆ ಎಷ್ಟು?” ಎಂದು ಒಬ್ಬಳು ಗೃಹಿಣಿ ಕೇಳಿದರೆ “ಎರಡು ರೂಪಾಯಿ, ಬರೇ ಎರಡು ರೂಪಾಯಿ” ಅಂದರೂ ಗೃಹಿಣಿ ಎರಡು ಕೇಜಿ ಕೊಂಡು ಒಂದೂವರೆ ಕೊಡುತ್ತಾಳೆ, ಕಣ್ಣಪ್ಪ ಮರುಮಾತಾಡದೆ ತೆಗೆದುಕೊಂಡು “ಹೀರೇಕಾಯಿ ಚಿನ್ನದಂಥ ಹೀರೇಕಾಯಿ! ರಸಗುಲ್ಲ! ರಸಗುಲ್ಲಾ!” ಎಂದು ಕೂಗತೊಡಗುತ್ತಾನೆ. ಆತ ‘ಹೀರೇಕಾಯಿ’ಯನ್ನು ಬಿಟ್ಟು ‘ರಸಗುಲ್ಲಾ’ ಎಂದು ಕೂಗಿದರೂ ಆತ ಯಾವುದೋ ಖರ್ಚಾಗದ ಕಾಯಿಪಲ್ಲೆಯನ್ನು ಹಾಗೆ ಕರೆಯುವುದಾಗಿ ಹೆಂಗಸರಿಗೆ ಗೊತ್ತು. ಈ ತಮಾಷೆ ಮತ್ತು ವಿಶ್ವಾಸ ಆತನ ವ್ಯವಹಾರದ ಒಂದು ಭಾಗ.

ಶಿವರಾತ್ರಿ ಆದ ಒಂದು ವಾರಕ್ಕೆ ಏನಾಯಿತೆಂದರೆ, ಕಣ್ಣಪ್ಪ ರಸ್ತೆಯ ನಡುವೆ ಬಿಟಿಎಸ್ ಕಂಡಕ್ಟರ್ ರಾಮಣ್ಣನ ಮನೆಯೆದುರು ವ್ಯಾಪಾರಕ್ಕೆ ನಿಂತುಬಿಟ್ಟ, ರಾಮಣ್ಣನ ಹೆಂಡತಿ ಕಿರಾಣಿ ಅಂಗಡಿ ಇಟ್ಟಿರುವವಳು, ಕಿರಾಣಿ ಅಂಗಡಿ ಬಿಟ್ಟು

ಅಡಿಗೆಮನೆಗೆ ಹೋಗಿ ತರಕಾರಿ ಹಾಕಿಕೊಳ್ಳಲು ಬಕೆಟ್ ತಂದ ಹೆಂಗಸು ಗೋರಿಕಾಯಿಯ ಮೇಲೆ ಕಣ್ಣುಹಾಕಿ ಚೌಕಾಶಿಗೆ ಇಳಿದಳು, ಕಣ್ಣಪ್ಪ ಒಂದೆರಡು ಮಾತಾಡುವಷ್ಟರಲ್ಲೇ ರಸ್ತೆಯಲ್ಲಿ ವಾಹನಗಳು ಸೇರತೊಡಗಿದವು. ರಾಮಣ್ಣನ ಹೆಂಡತಿ ಅಲ್ಲಿದ್ದ ತರಕಾರಿಯನ್ನೆಲ್ಲಾ ಜರಿದು ಕೊನೆಗೆ ಆರಿಸಿಕೊಂಡು "ಒಟ್ಟು ಐದು ರೂಪಾಯಿ ಕೊಡ್ತೇನೆ" ಅನ್ನುವಷ್ಟರಲ್ಲಿ ಕಣ್ಣಪ್ಪನ ನೂಕುವ ಗಾಡಿ ರಸ್ತೆಯ ವಾಹನಗಳಿಗೆ ಅಡ್ಡಿಯಾಗಿರುವುದು ಅಲ್ಲೇ ಇದ್ದ ಕಾನ್‌ಸ್ಟೆಬಲ್ ಕಣ್ಣಿಗೆ ಬಿದ್ದು ವಿಶಲ್ ಹಾಕಿ ಹತ್ತಿರ ಬಂದ. ಅಷ್ಟರಲ್ಲಿ ರಾಮಣ್ಣನ ಹೆಂಡತಿ ಮನೆಯೊಳಕ್ಕೆ ಮಾಯವಾಗಿದ್ದಳು. ಆಕೆ ಐದು ರೂಪಾಯಿಯೊಂದಿಗೆ ಹಿಂದಕ್ಕೆ ಬರುವವರೆಗೆ ಕಣ್ಣಪ್ಪ ಮುಂದಕ್ಕೆ ಹೋಗುವಂತಿರಲಿಲ್ಲ, ಎಂದೂ ಉದ್ರೆ ವ್ಯಾಪಾರ ಮಾಡಿದವನಲ್ಲ, ಈಗ ಹಣ ತೆಗೆದುಕೊಳ್ಳದೆ ಹೋಗಬಹುದೆನಿಸಿದರೂ ಹಿಂದೆ, ಮುಂದೆ ಜಮಾಯಿಸಿದ ರಿಕ್ಷಾ, ಗಾಡಿ, ಲಾರಿ, ಬಸ್ಸುಗಳಿಂದಾಗಿ ಆಘಾತಗೊಂಡು ನಿಂತಲ್ಲೇ ನಿಂತ.

ಪೊಲೀಸ್‌ನ ವಿಶಲ್ ಹೆಚ್ಚಾಯಿತು. "ಮುಂದೆ ಹೋಗು! ಹೋಗ್ತಿಯೋ ಇಲ್ಲೋ?" ಎಂದು ಕಾನ್‌ಸ್ಟೇಬಲ್ ಅಬ್ಬರಿಸುತ್ತಾ ಬಂದ: ಬಸ್ಸಿನ ಕಂಡಕ್ಟರ್ "ಏ ಬೆಂಡೆಕಾಯಿ, ಮುಂದೆ ಹೋಗು!" ಎಂದು ಅರಚಿದ. ಆ ಗದ್ದಲದಲ್ಲಿ ಕಣ್ಣಪ್ಪ ಏನೇನೋ ಬಡಬಡಿಸಿದ. ಅಷ್ಟರಲ್ಲಿ ಕಾನ್‌ಸ್ಟೇಬಲ್ ಹತ್ತಿರ ಬೈಯತೊಡಗಿದ, "ಪೊಲೀಸರೆ, ಹೋಗೋಕೆ ದಾರಿ ಎಲ್ಲಿದೆ?" ಎಂದು. ಕಣ್ಣಪ್ಪ ಏನೇನೋ ಕೂಗಿ ಕೊಳ್ಳುವಷ್ಟರಲ್ಲಿ ಕಾನ್‌ಸ್ಟೇಬಲ್ ಹತ್ತಿರ ಬಂದು ದಬಾಯಿಸತೊಡಗಿದ. ಕಣ್ಣಪ್ಪ ಸಿಟ್ಟು, ಹತಾಶೆಯಿಂದ ಕೂಗಿಕೊಂಡ, ಕಾನ್‌ಸ್ಟೇಬಲ್, "ಏನಂದೆ? ಪೊಲೀಸ್‌ಗೆ ಧಿಕ್ಕಾರ?" ಅಂದ. "ಪೊಲೀಸ್ ಧಿಕ್ಕಾರ" ಅಂದ ಕಣ್ಣಪ್ಪ, "ಪೊಲೀಸ್‌ಗೆ ಧಿಕ್ಕಾರ ಅಂದಿದ್ದೀ, ಬಾ ಮಾವನ ಮನೆಗೆ" ಅಂದು ಪೊಲೀಸಿನವ ಕಣ್ಣಪ್ಪನನ್ನು ಎಳೆದುಕೊಂಡು ಪೊಲೀಸ್ ಸ್ಟೇಷನ್‌ಗೆ ಕರೆದೊಯ್ದ.

ಆದದ್ದೆಲ್ಲ ಕಣ್ಣಪ್ಪನಿಗೆ ಹೇಗೆಗೋ ಅನ್ನಿಸಿತು. ಹೀಗೂ ಆಗಬಹುದೇ ಅಂದುಕೊಂಡು ಪೊಲೀಸ್ ಸ್ಟೇಷನ್‌ನಲ್ಲಿ ಕೂತು ಯೋಚಿಸಿದ. ಗಾಡಿಯನ್ನು ನಡುರಸ್ತೆಯಲ್ಲಿ ಬಿಟ್ಟುಬಂದಿದ್ದ, ಕಂಡಕ್ಟರ್ ರಾಮಣ್ಣನ ಹೆಂಡತಿ ಐದು ರೂಪಾಯಿ ಕೊಟ್ಟಿರಲಿಲ್ಲ. ಪೊಲೀಸಿನವ ಅವನ ಯಾವ ಪ್ರಶ್ನೆಗೂ ಉತ್ತರಿಸಲಿಲ್ಲ. ಸುತ್ತ ನೋಡಿದ. ಪೊಲೀಸ್ ಸ್ಟೇಷನ್ ಅಷ್ಟೇನೂ ಕೆಟ್ಟದಾಗಿರಲಿಲ್ಲ. ಯಾರೂ ಅವಮಾನ ಕೂಡ ಮಾಡಲಿಲ್ಲ. ಸಂಜೆ ಊಟ ಕೊಟ್ಟರು. ಆದರೂ ಇದೆಲ್ಲ ತನ್ನ ಜೀವನದಲ್ಲಿ ಆಗುತ್ತಿದೆ ಎಂದು ಕಣ್ಣಪ್ಪನಿಗೆ ನಂಬಲಾಗಲಿಲ್ಲ. ಮರುದಿನ ಕೋರ್ಟ್‌ನಲ್ಲಿ ಕಣ್ಣಪ್ಪನನ್ನು ಹಾಜರ್‌ಪಡಿಸುವ ಮುನ್ನ ಒಬ್ಬ

ಲಾಯರ್ ಬೇಕಾಗುತ್ತೆಂದು ಹೇಳಿದರು. ಕಣ್ಣಪ್ಪ ಹೇಗೋ ವಿಷಯವನ್ನು ತನ್ನ ಬಡಾವಣೆಯ ವಕೀಲ ಚಂದ್ರಣ್ಣನಿಗೆ ಹೇಳಿ ಕಳಿಸಿದ. ಆತ ಯುವಕ, ನಾಲ್ಕೈದು ವರ್ಷ ಮಾತ್ರ ಲಾಯರಾಗಿ ಕೆಲಸ ಮಾಡಿದ್ದವನು. ಕಣ್ಣಪ್ಪನ ವಿವರಗಳನ್ನು ಅರ್ಧ ನಂಬುತ್ತಾ, ಅರ್ಧ ನಂಬಲಾಗದೆ ಆತ ಕೇಳಿದ. ಕಣ್ಣಪ್ಪ ತುಂಬ ಗೊಂದಲಗೊಂಡಿದ್ದರಿಂದ, ಅದೆಲ್ಲ ಬೇಡ ಕಣ್ಣಪ್ಪ, ನೀನು ಪೊಲೀಸ್‌ಗೆ ಧಿಕ್ಕಾರ ಅಂದಿದ್ದು ನಿಜಾನಾ? ಅದನ್ನು ಹೇಳು" ಅಂದ.

ಕಣ್ಣಪ್ಪ ಎಂದೂ ಚರ್ಚಿಸಿದವನಲ್ಲ, ಈ ವಕೀಲ ಚಂದ್ರಣ್ಣನಂಥವರನ್ನು ನೋಡಿದವನಲ್ಲ, ಕಣ್ಣಪ್ಪ ಗೊಂದಲಗೊಂಡು ಸುಮ್ಮನಿದ್ದಾಗ 'ಸತ್ಯ ಹೇಳು' ಅಂದ. "ಅಲ್ಲ, ನಾನ್ಯಾವಾಗ ಹಾಗಂತ ಅಂದೆ?" ಆತ "ನೀನು ಪೊಲೀಸ್‌ಗೆ ಧಿಕ್ಕಾರ" ಅಂದಿದ್ದೀ ಅಂದ. ನಾನು "ಪೊಲೀಸ್‌ಗೆ ಧಿಕ್ಕಾರ?" ಅಂದೆ. ಹೌದಲ್ಲವಾ, "ನಾನು ಹಾಗಂದೆ, ಅಂದೆ ಅಂತ ಕಾಣುತ್ತೆ, ಅಲ್ಲಿ ತುಂಬ ಗಲಾಟೆ ಸಾರ್, ಅಂದೆ ಅಂತ ಕಾಣುತ್ತೆ" ಅಂದ.

"ಹ್ಞಾ, ಹಾಗೆ ದಾರಿಗೆ ಬಾ. ನೀನು ಅಂದಿದ್ದೀಯ, ಅದಕ್ಕೇ ಪೊಲೀಸಿನವನು ಅರೆಸ್ಟ್ ಮಾಡಿದ್ದಾನೆ. ಈಗ ಇದೆಲ್ಲದರಿಂದ ಹೊರಬರುವ ದಾರಿ ಕೋರ್ಟಿನಲ್ಲಿ ತಪ್ಪು ಒಪ್ಪಿಕೊಂಡುಬಿಡುವುದು. ಇದರಿಂದ ತುಂಬ ಸಾಮಾನ್ಯ ಶಿಕ್ಷೆ ಸಿಗುತ್ತೆ" ಅಂದ ವಕೀಲ.

ಆದರೆ ಕಣ್ಣಪ್ಪನಿಗೆ ತಾನು ಹಾಗೆ ಅಂದಹಾಗೆ ಅನ್ನಿಸಲಿಲ್ಲ. ಮರುದಿನ ಕೋರ್ಟಿನಲ್ಲಿ ಹಾಜರ್‌ಪಡಿಸಿದಾಗ ಅಲ್ಲಿದ್ದ ಗೌರವಾನ್ವಿತ ನ್ಯಾಯಾಧೀಶರು, ವಕೀಲರು, ಗುಮಾಸ್ತರು, ಜನಸಮೂಹ ಕಂಡು ಕಣ್ಣಪ್ಪ ದಂಗಾಗಿಹೋದ. ಎಲ್ಲರೂ ಒಳ್ಳೆಯವರ ಹಾಗಿದ್ದರು. ಕಣ್ಣಪ್ಪ ಎಂದೂ ದೊಡ್ಡವರ ಬಗ್ಗೆ ಅಸೂಯೆ, ಕೋಪ ತೋರಿದವನಲ್ಲ. ಅವತ್ತು ನ್ಯಾಯಮೂರ್ತಿಯನ್ನು ನೋಡಿ ಕಣ್ಣಪ್ಪನಲ್ಲಿ ಭಯ, ಭಕ್ತಿ, ಗೌರವ ಮೂಡಿತು. ಕನ್ನಡಕದ ಮೂಲಕ ತಲೆತಗ್ಗಿಸಿ, ತುಂಬ ಸೌಮ್ಯವಾಗಿ, ಅನ್ಯಾಯ ಮಾಡಬೇಕೆಂಬ ಯಾವುದೇ ಉದ್ದೇಶವಿಲ್ಲದೆ ನೋಡುತ್ತಿದ್ದ ನ್ಯಾಯಮೂರ್ತಿ, ಅವರ ಪ್ರಶ್ನೆಗಳೂ ಅಷ್ಟೆ, ಸೌಮ್ಯವಾಗಿದ್ದವು, ತುಂಬ ಒಳ್ಳೆ ಮಾತುಗಳಿಂದ ಕೂಡಿದ್ದವು. ಅವರು ಮೊದಲು ಸಾಕ್ಷಿಗಳನ್ನು, ಕಣ್ಣಪ್ಪನನ್ನು, ಆರೆಸ್ಟ್ ಮಾಡಿದ ಕಾನ್‌ಸ್ಟೇಬಲ್‌ನನ್ನು ಕರೆದರು. ಅವರೆಲ್ಲ ಕಣ್ಣಪ್ಪನ ಬಗ್ಗೆ ಹೇಳಿದರು. ಕಾನ್‌ಸ್ಟೇಬಲ್, "ಮಾರ್ಚ್ ಒಂಭತ್ತನೇ ತಾ–ರೀಕು ಸೋಮವಾರ ಮಧ್ಯಾಹ್ನ ಒಂದು ಗಂಟೆ ಸಮಯದಲ್ಲಿ ಬಿನ್ನಿಪೇಟೆಯ 224ನೇ ಮನೆಯ ಎದುರು ಸದರಿ ಕಣ್ಣಪ್ಪ ತನ್ನ ನೂಕುವ ಗಾಡಿಯನ್ನು ರಸ್ತೆ ನಡುವೆ ನಿಲ್ಲಿಸಿ ವಾಹನಗಳಿಗೆ ಅಡ್ಡಿಪಡಿಸಿ, ಗಲಾಟೆ ಮಾಡಿದ; ಆತನಿಗೆ

ಅಲ್ಲಿಂದ ಮುಂದೆ ಹೋಗಲು ನಾನು, ಅಂದರೆ ಕಾನ್‌ಸ್ಟೇಬಲ್ ಬಿ/12, ಆಜ್ಞೆ ಮಾಡಿದಾಗ ಗದರಿಸಿ, 'ಪೊಲೀಸ್‌ಗೆ ಧಿಕ್ಕಾರ' ಕೂಗಿದ, ಎಂದು ಹೇಳಿದ.

ಕಾನ್‌ಸ್ಟೇಬಲ್‌ನ ಹೇಳಿಕೆ ಕೆಳದನಿಯಲ್ಲಿ ನಿಷ್ಠುರವಾಗಿತ್ತು. ಅವನ ಧ್ವನಿಯಲ್ಲಿ ಯಾವುದೇ ಉದ್ವೇಗ, ಸಣ್ಣತನ ಇರಲಿಲ್ಲ. ಕಣ್ಣಪ್ಪನಿಗೆ ಎಲ್ಲರೂ ಒಳ್ಳೆಯವರೆನ್ನಿಸಿತು. ನ್ಯಾಯಮೂರ್ತಿ ಕೊನೆಯಲ್ಲಿ ಕಣ್ಣಪ್ಪನ ಕಡೆಗೆ ತಿರುಗಿ, "ನೀವು ಮಾರ್ಚ್ ಒಂಭತ್ತನೇ ತಾರೀಖು ಹೀಗೆ ವರ್ತಿಸಿದ್ದು, ಮಾತಾಡಿದ್ದು ನಿಜಾನಾ?" ಅಂ–ದರು. ಕಣ್ಣಪ್ಪನಲ್ಲಿ ಅವರ ಬಗ್ಗೆ ಗೌರವ, ಭಯ ತುಂಬಿಕೊಂಡಿದ್ದು ಏನು ಹೇಳುವುದೆಂದು ಗೊತ್ತಾಗದೆ, "ನಾನು ಹಾಗೆಂದದ್ದು ನೆನಪಾಗಿಲ್ಲ" ಎಂದು ತೊದಲಿದ. ಅವನ ಪರವಾಗಿ ಕಣ್ಣಪ್ಪನ ವಕೀಲ ವಾದಿಸುತ್ತಾ, "ಸ್ವಾಮಿ, ಈತ ಮುಗ್ಧ. ಒಂದು ವೇಳೆ ಹಾಗೆ ಅಂದಿರುವುದು ಸಾಧ್ಯ ಅಂದಿಟ್ಟುಕೊಂಡರೂ ಆತನಲ್ಲಿ ಧಿಕ್ಕಾರ ಅಥವಾ ತಾತ್ಸಾರದ ಭಾವನೆ ಇಲ್ಲ, ತುಂಬ ಕೆಳಸ್ತರದ ಮನುಷ್ಯ, ಹುಂಬ, ಅವನನ್ನು ನೋಡಿ, ದಿನಾಲೂ ಕುಡಿದು: ಅವನ ಕಣ್ಣು ಹೇಗೆ ಕೆಂಪಾಗಿ ಗುಳಿಬಿದ್ದಿದೆ ನೋಡಿ ಸ್ವಾಮಿ, ಆತನ ಕಷ್ಟದಿಂದಾಗಿ ಕುಡಿದು ಹಾಳಾಗಿ ಹೋಗಿದ್ದಾನೆ. ಆತ ಹಾಗೆ ಅಂದಿರುವುದು ತೀರ್ಮಾನಿಸಿದರೂ ದೊಡ್ಡವರಾದ ತಾವು ಕ್ಷಮಿಸಬೇಕು" ಅಂದ.

ಕಣ್ಣಪ್ಪನಿಗೆ ತಾನು ಎಲ್ಲಿದ್ದೇನೆ, ಏನಾಗುತ್ತಿದೆ ಎಂಬ ಬಗ್ಗೆಯೇ ಅಸ್ಪಷ್ಟವಾಗಿ ತಲೆ ತಿರುಗತೊಡಗಿತು. ಕಣ್ಣಪ್ಪ ಎಂದೋ ಒಮ್ಮೆ ಕುಡಿಯುತ್ತಿದ್ದುದು ನಿಜವಾದರೂ ಆತನ ವಕೀಲರು ಹೇಳಿದಂತೆ ಕುಡುಕನಾಗಿರಲಿಲ್ಲ. ತನ್ನ ಐವತ್ತು ವರ್ಷದ ನೂಕುವ ಗಾಡಿ ವ್ಯಾಪಾರದಲ್ಲಿ ಎಂದೂ ದೊಡ್ಡವರಿಗೆ ಬೈದಿರಲಿಲ್ಲ, ಸರ್ಕಾರದೊಂದಿಗೆ ಜಗಳವಾಡಿರಲಿಲ್ಲ, ಕುಡಿದು ತೂರಾಡಿರಲಿಲ್ಲ. ಯೌವನದಲ್ಲಂತೂ ಅವನು ಅತ್ಯಂತ ಚುರುಕಾದ ತರಕಾರಿ ವ್ಯಾಪಾರಿಯಾಗಿದ್ದ.

ನ್ಯಾಯಮೂರ್ತಿ ಕಣ್ಣಪ್ಪನನ್ನು ಮತ್ತೆ ಮತ್ತೆ ಪ್ರಶ್ನಿಸಿದರೂ ಅಷ್ಟೇನೂ ಉತ್ತರ ದೊರೆಯಲಿಲ್ಲ. ತಾನು ಕುಡುಕನಲ್ಲ ಎಂದು ಕೂಡ ಕಣ್ಣಪ್ಪ ಹೇಳಲಿಲ್ಲ. ಯಾಕೆಂದರೆ ಆತ ಎಂದೋ ಕುಡಿದಿದ್ದುದು ನಿಜ. ಬಡವನಲ್ಲ ಎಂದು ಹೇಳಲಿಲ್ಲ, ಯಾಕೆಂದರೆ ಹೊಟ್ಟೆಗಿಲ್ಲದ ಮುಷ್ಯನಲ್ಲದಿದ್ದರೂ ಈ ನ್ಯಾಯಮೂರ್ತಿ ಮತ್ತು ವಕೀಲನಂತೆ ಶ್ರೀಮಂತನಲ್ಲ, ಅವರಷ್ಟು ಸುಸಂಸ್ಕೃತನಲ್ಲ. ನ್ಯಾಯಮೂರ್ತಿ ಆತನ ಮೌನ ಮತ್ತು ದಿಕ್ಕೆಟ್ಟ ಸ್ಥಿತಿ ನೋಡಿ ತಪ್ಪಿತಸ್ಥನೆಂದು ತೀರ್ಮಾನಿಸಿ ಐವತ್ತು ರೂಪಾಯಿ ದಂಡ ಮತ್ತು ಹದಿನೈದು ದಿನದ ಸಾದಾ ಜೈಲುವಾಸದ ಶಿಕ್ಷೆ ನೀಡಿದರು.

ನ್ಯಾಯಾಲಯದ ಹೊರಗೆ ಬಂದಾಗ ವಕೀಲ ಚಂದ್ರಣ್ಣ ಕಣ್ಣಪ್ಪನ ಬೆನ್ನುತಟ್ಟಿ

"ಗೆದ್ದೇ ಬಿಟ್ಟೆ! ತಪ್ಪು ಒಪ್ಪಿಕೊಂಡದ್ದು ಒಳ್ಳೇದಾಯ್ತೋ ಇಲ್ಲವೋ? ನಾನು ನಿನಗಾಗಿ ನಮ್ಮ ಬಡಾವಣೆಯಲ್ಲಿ ಐವತ್ತು ರೂಪಾಯಿ ಸಂಗ್ರಹಿಸಿ ಕೋರ್ಟಿಗೆ ಕೊಡ್ತೇನೆ. ಅತ್ತಿತ್ತ ನೋಡೋದ್ರಲ್ಲಿ ಹದಿನೈದು ದಿನ ಮುಗಿದು ಹೋಗುತ್ತೆ. ಏನೂ ಬೇಜಾರೂ ಮಾಡಿಕೊಳ್ಳಬೇಡ" ಎಂದು ಹೇಳಿದ.

"ಸ್ವಾಮಿ ನನ್ನ ತರಕಾರಿ ನೂಕೋಗಾಡಿ ಏನಾಯ್ತು ಸ್ವಲ್ಪ ನೋಡಿ" ಎಂದು ಹೇಳಿದ ಕಣ್ಣಪ್ಪ ಜೈಲಿನಲ್ಲಿ ವಾಸಿಸತೊಡಗಿದ. ತನಗೆ ಕೊಟ್ಟ ಶಿಕ್ಷೆ ನ್ಯಾಯವೋ ಅನ್ಯಾಯವೋ– ಅದು ಕೂಡ ಕಣ್ಣಪ್ಪನಿಗೆ ಗೊತ್ತಿರಲಿಲ್ಲ. ಊಟ ಪರವಾಗಿರಲಿಲ್ಲ. ಬಟ್ಟೆ ಕೊಟ್ಟಿದ್ದರು. ಜೈಲಲ್ಲಿದ್ದ ಜನ ಕೂಡ ಕೆಟ್ಟವರಲ್ಲ. ದಿನಗಳು ಸರಿಯತೊಡಗಿದಂತೆ ಇದೆಲ್ಲ ಆದದ್ದಕ್ಕೆ ಅವನಿಗೆ ಬೇಸರವೆನಿಸಿದರೂ, 'ಸರ್ಕಾರ ಅಂದ್ರೆ ಸುಮ್ಮನೇನಾ? ಕೆಟ್ಟವರಿಗೆ ಶಿಕ್ಷೆ ಕೊಡಲೇಬೇಕಾಗುತ್ತೆ' ಅಂ–ದುಕೊಳ್ಳುವನು, ಜೈಲು ಪರವಾಗಿಲ್ಲ. ಅನ್ನಿಸಿದರೂ ತಾನು ವಾಸಿಸುವ ಪುಟ್ಟ ಕೋಣೆಯೇ ಇದಕ್ಕಿಂತ ವಾಸಿ ಎಂದು ಅದೇಕೋ ಅನ್ನಿಸುವುದು, ಬರುವ ಖೈದಿಗಳು, ಅವರಿಗೆ ಹಾಕಿದ ಕೋಳ ಪೊಲೀಸರ ಜಬರ್‌ದಸ್ತು ಜೈಲಿನ ಅಧಿಕಾರಿಗಳ ಅಚ್ಚುಕಟ್ಟು – ಎಲ್ಲವನ್ನೂ ಗಮನಿಸುವನು. ಯಾವುದೋ ವಿಚಿತ್ರ ಬೇಸರದಿಂದ ನಿಟ್ಟುಸಿರುಬಿಡುವನು.

ಜೈಲಿನ ಶಿಕ್ಷೆ ಮುಗಿಸಿ ಕಣ್ಣಪ್ಪ ಹೊರಗೆ ಬಂದ. ಹುಡುಕಿ ತನ್ನ ಗಾಡಿಯನ್ನೂ ದೊರಕಿಸಿಕೊಂಡು ಅಲ್ಲಲ್ಲಿ ಸಾಲ ಮಾಡಿ ಮತ್ತೆ ತರಕಾರಿ ಕೊಂಡು ಮಾರತೊಡಗಿದ. ಆದರೆ ಅವನ ಬಗ್ಗೆ ಜನರ ನಿಲುವು ಸೂಕ್ಷ್ಮವಾಗಿ ಬದಲಾದಂತೆ ಕಂಡಿತು. "ಹದಿನೈದು ದಿನ ಎಲ್ಲಿಗೆ ಹೋಗಿದ್ದೆ" ಎಂದು ಗಿರಾಕಿಗಳು ಕೇಳುವರು. ಕಣ್ಣಪ್ಪ ಆದದ್ದನ್ನೆಲ್ಲ ವಿವರಿಸಿ ಜೈಲಲ್ಲಿದ್ದ ಬಗ್ಗೆ ಹೇಳುವನು. ಅವನು ಹೇಳಿದ್ದನ್ನು ಯಾರೂ ಪೂರ್ಣವಾಗಿ ನಂಬಿದಂತೆ ಕಾಣಲಿಲ್ಲ. ಹಳೆಯ ಗಿರಾಕಿಗಳು ಅವನ ಕಣ್ಣೆದುರಿಗೇ ಬೇರೆ ಗಾಡಿಯಿಂದ ಕಾಯಿಪಲ್ಲೆ ಕೊಳ್ಳತೊಡಗಿದರು. ಆತ "ತರಕಾರಿ! ಬೆಂಡೆಕಾಯಿ, ಪಡುವಲಕಾಯಿ!!" ಎಂದು ಕೂಗುವಾಗ ಕೂಡ ಮುಂಚಿನ ಸ್ಪಷ್ಟತೆ, ಮುಗ್ಧತೆ ಇರಲಿಲ್ಲ. ಇದೆಲ್ಲ ಕಣ್ಣಪ್ಪನಲ್ಲಿ ಅಚ್ಚರಿ ಹುಟ್ಟಿಸುವ ಬದಲು ಸಿಟ್ಟು ತಂದಿತು. ಜನ ತನಗೆ ಅನ್ಯಾಯ ಮಾಡುತ್ತಿರುವುದು ಅವನಿಗೆ ಸ್ಪಷ್ಟವಾಗಿತ್ತು. ಆದ್ದರಿಂದ ಜೈಲಿನಿಂದ ಬಂದ ಕೆಲವು ದಿನಗಳಲ್ಲೇ ತನ್ನ ದುಗುಡ ಹೋಗಲಾಡಿಸಿಕೊಳ್ಳಲು ಕುಡಿಯತೊಡಗಿದ. ಅರವತ್ತು ವರ್ಷ ಮೀರಿದ ದೇಹ ಬ್ರಾಂದಿಯಿಂದ ಚೇತರಿಸಿಕೊಂಡಂತೆ, ಹೊಸ ಶಕ್ತಿ ಪಡೆದಂತೆ ಅನ್ನಿಸತೊಡಗಿ–ತು, ಅದರಿಂದ ಸೋಮಾರಿತನ, ಒಂದು ಬಗೆಯ ನಿರ್ಲಕ್ಷ್ಯ ಹೆಚ್ಚಾಯಿತು. ಸಾಲ ಬೆಳೆಯತೊಡಗಿದವು. ಆದರೆ ವರಮಾನ ಕಮ್ಮಿಯಾದಂತೆ ಕಣ್ಣಪ್ಪನ

ಮಾತು ಹೆಚ್ಚಾದವು –ಸಣ್ಣ ವಿಷಯಕ್ಕೆ ರೇಗುವನು, ಜನರ ಸಣ್ಣತನದ ಬಗ್ಗೆ ಮಾತಾಡುವನು. ತನ್ನ ಜೈಲಿನ ಅನುಭವ ಕುರಿತು ಮಾತಾಡುವನು. ಆದರೂ ಆತನಿಗೆ ತನಗಾದ ಶಿಕ್ಷೆ ಸರಿಯೋ ತಪ್ಪೋ ಎಂಬುದು ಗೊತ್ತಿರಲಿಲ್ಲ. ನ್ಯಾಯಾಧೀಶ ಕೆಟ್ಟವರು ಅನ್ನಿಸಲಿಲ್ಲ. ಜೀವನದಲ್ಲಿ ಹೀಗಾಗುತ್ತೆ –ಎಂದುಕೊಳ್ಳುವನು. ಆದರೆ ವಿಚಿತ್ರ ವ್ಯಸನ ಅವನನ್ನು ಮುತ್ತಿತ್ತು. ಇದು ಮುಪ್ಪಿನಿಂದಾದ ವ್ಯಸನ ಎಂದುಕೊಂಡು ಇನ್ನಷ್ಟು ಕುಡಿಯುವನು.

ನೋವು, ದೌರ್ಬಲ್ಯ, ಕುಡಿತ –ಯಾವುದು ತನ್ನನ್ನು ತಿನ್ನುತ್ತಿದೆ; ಎಂದು ಅರಿಯಲಾರದ ಕಣ್ಣಪ್ಪ ಅನೇಕ ಸಲ ತರಕಾರಿ ಸೊಸೈಟಿಯ ಹರಾಜಿಗೆ ತಡವಾಗಿ ಹೋಗುವನು. ಅಲ್ಲಿ ತನ್ನಲ್ಲಿದ್ದ ಕಾಸಿನಲ್ಲೇ ಎಲ್ಲರೂ ತಿರಸ್ಕರಿಸಿದ ತರಕಾ–ರಿಕೊಂಡು ಮಾರಲು ಯತ್ನಿಸುವನು. ಮಾರಾಟವಾಗದೆ ಹೋದಾಗ ತನ್ನ ಯೌವನ, ಕೈಯಲ್ಲಿ ಕಾಸು ಕುಣಿಯುತ್ತಿದ್ದುದು –ಎಲ್ಲವನ್ನೂ ನೆನೆಸಿಕೊಳ್ಳುವನು –ನೆನೆಯುತ್ತಾ ಕೂತುಬಿಡುವನು. ತನ್ನ ಕೋಣೆಗೆ ಹೋಗುವುದನ್ನೂ ಮರೆತು ವ್ಯಾಕುಲದಲ್ಲಿ ಮುಳುಗುವನು, ಹೀಗೆ ವ್ಯಾಕುಲದಲ್ಲಿ ಮುಳುಗಿದ ಒಂದುದಿನ ಬ್ರಾಂಡಿ ಅಂಗಡಿಯ ಜೋಸೆಫ್‌ನ ಪುಟ್ಟ ಮಗ, "ಕಣ್ಣಪ್ಪ ಜೈಲು ಹ್ಯಾಗಿತ್ತು?" ಎಂದು ಕೇಳಿದ ಕಣ್ಣಪ್ಪನಿಗೆ ರೇಗಿಹೋಯಿತು. "ವಿಷ ಮಾರುವ ನಿನ್ನಪ್ಪ ಜೈಲಿಗೆ ಹೋಗಬೇಕು" ಎಂದು ಅಬ್ಬರಿಸಿ ಆ ಹುಡುಗನ ಕೆನ್ನೆಗೆ ಬಾರಿಸಿದ, ಜೋಸೆಫ್, ಜಗಳಕ್ಕೆ ಬರಲಿಲ್ಲ. ಅವನ ಸ್ನೇಹಿತರು, "ಮಕ್ಕಳ ಬಗ್ಗೆ ಹೀಗೆ ವರ್ತಿಸಬಾರದು ಅವಕ್ಕೆ ಏನು ಗೊತ್ತಾಗುತ್ತೆ?" ಎಂದು ಕಣ್ಣಪ್ಪನನ್ನು ಟೀಕಿಸಿ ಸುಮ್ಮನಾದರು.

ದಿನಗಳದಂತೆ ಕಣ್ಣಪ್ಪ 'ಅನ್ಯಾಯ, ಮೋಸ' ಎಂದು ಬಡಬಡಿಸತೊಡಗಿದ. ಜನರ ಬಗ್ಗೆ ಸಿಟ್ಟು ಬರುತ್ತಿದ್ದರೂ ಯಾರು ತನಗೆ ಅನ್ಯಾಯ ಮಾಡುತ್ತಿದ್ದಾರೆಂದು ಅವನಿಗೇ ಸ್ಪಷ್ಟವಾಗಲಾರದಷ್ಟು ಒಳ್ಳೆಯವನಾತ, ಗಾಡಿ ಖಾಲಿಯಾಗಿದೆ. ಮೈ ಬತ್ತಿಹೋಗುತ್ತಿದೆ. ಸಿಟಿ ಮಾರ್ಕೆಟಿನ ಹತ್ತಿರ ಸಿಕ್ಕಿದ ಹಳೇ ಗೋಣಿಚೀಲ ಕೂಡ ಅವನನ್ನು ಚಳಿಗಾಲದಲ್ಲಿ ಬೆಚ್ಚಗಿಡುತ್ತಿಲ್ಲ. ಆತನ ಎಲ್ಲ ದುರಂತಕ್ಕೆ ಸರಿಯಾಗಿ ಈ ಸಲ ಭೀಕರ ಚಳಿ; ಮಳೆಗಾಲ ಮುಗಿದು ಚಳಿ ಕೊರೆಯುತ್ತಿದೆ. ಹೊಟ್ಟೆ ತಾಳ ಹಾಕುತ್ತಿದೆ. ಬೆಂಗಳೂರಿನ ಧೂಳು, ಗದ್ದಲ, ಹೊಗೆಯೊಂದಿಗೆ ಕೊರೆಯುವ ಚಳಿ

ಆ ರಾತ್ರಿ ತೀವ್ರ ಚಳಿಯಲ್ಲಿ ನೋಡಿದ, ರಾತ್ರಿ ಬಲಿಯುತ್ತಿದ್ದಂತೆ ಜನ ರಸ್ತೆಗಳಿಂದ ಕರಗಿಹೋಗುತ್ತಿದ್ದಾರೆ. ಯೌವನದಲ್ಲಿ, ಇಳಿವಯಸ್ಸಿನಲ್ಲಿ ತಾನು ಕೂಡ ತನ್ನ ಕೋಣೆಗೆ ಹೋಗುತ್ತಿದ್ದುದು ನೆನಪಾಗುತ್ತದೆ. ಜೇಬಿನ ತುಂಬ ನಾಣ್ಯಗಳು, ಮೈಯಲ್ಲಿ ಚೈತನ್ಯ, ಗೆಳೆಯರೊಂದಿಗೆ ಹರಟೆ ಕನಸುತ್ತಿದ್ದ

ದಿನಗಳವು, ಬಡತನದಲ್ಲಿ ಕೂಡ ಇರುತ್ತಿದ್ದ ಹುಮ್ಮಸ್ಸಿನ, ಹುಚ್ಚಾಟದ ದಿನಗಳವು. ತನ್ನ ಕೋಣೆ ತನ್ನ ಅರಮನೆಯಂತಿತ್ತು ಎಂದು ಯೋಚಿಸುತ್ತಿದ್ದಂತೆ ಕಾನ್‌ಸ್ಟೇಬಲ್, ನ್ಯಾಯಾಧೀಶ, ವಕೀಲ ಚಂದ್ರಪ್ಪ – ನೆನಪಾದರು. ಮಂಕಾಗಿಸಿದ ನ್ಯಾಯಾಲಯದ ಚೆಂದ ಮತ್ತು ವೈಶಾಲ್ಯ ಮನಸ್ಸು ತುಂಬಿದವು. ಆಮೇಲೆ ಜೈಲು.

ಕಣ್ಣಪ್ಪ ತಡವರಿಸುತ್ತ ಎದ್ದು ನಿಂತ. ಮೆಲ್ಲಗೆ ನಡೆಯತೊಡಗಿದ. ರಾತ್ರಿಯ ಮಬ್ಬು ಮತ್ತು ಧೂಳು ರಾತ್ರಿಯ ಮೌನದೊಂದಿಗೆ ಸೇರಿಕೊಂಡಂತಿತ್ತು. ಅಲ್ಲೊಬ್ಬ ಇಲ್ಲೊಬ್ಬ ಓಡಾಡುವುದನ್ನು ಬಿಟ್ಟರೆ, ಅಲ್ಲೊಂದು ಇಲ್ಲೊಂದು ವಾಹನ ಬಿಟ್ಟರೆ ಎಲ್ಲ ಆರಾಮ. ಸರ್ಕಲ್‌ಗೆ ನಡೆದು ಬಂದ. ಅಲ್ಲಿ ಸರ್ಕಲ್‌ನ ಮಧ್ಯದ ದೀಪದ ಹತ್ತಿರ ಕಾನ್‌ಸ್ಟೇಬಲ್ ಒಬ್ಬ ನಿಂತಿದ್ದ, ಕಣ್ಣಪ್ಪ ನಿಂತಿದ್ದ ಕಡೆಯಿಂದ ಆತ ಭೂತದಂತೆ, ಅಲ್ಲಾಡದ ಭೂತದಂತೆ ಕಾಣುತ್ತಿದ್ದ, ಹತ್ತಿರ ಬಂದಂತೆ ಅವನ ಬಿಳಿ ಮೀಸೆ, ಟೋಪಿ, ಸಮವಸ್ತ್ರ, ಗೋಚರವಾದವು. ಇದ್ದಕ್ಕಿದ್ದಂತೆ ಕಣ್ಣಪ್ಪನಿಗೆ ಕಾನ್‌ಸ್ಟೇಬಲ್ ಬಗ್ಗೆ ವಿಚಿತ್ರ ಕುತೂಹಲ, ಜೈಲಿನ ಬಗ್ಗೆ ತೀವ್ರ ಆಸೆ ಮೂಡಿದವು. ಕಾನ್‌ಸ್ಟೇಬಲ್ ಎದುರಿಗೆ ಬಂದು, "ಪೊಲೀಸ್‌ಗೆ ಧಿಕ್ಕಾರ!" ಎಂದ.

ಪೊಲೀಸ್ ತಣ್ಣಗೆ ತಿರುಗಿ ಕಣ್ಣಪ್ಪನನ್ನು ನೋಡಿದ, ಕಣ್ಣಪ್ಪ ಮತ್ತೊಮ್ಮೆ "ಪೊಲೀಸ್‌ಗೆ ಧಿಕ್ಕಾರ! ಖದೀಮ ಪೊಲೀಸರಿಗೆ ಧಿಕ್ಕಾರ!" ಅಂದ.

ಕಾನ್‌ಸ್ಟೇಬಲ್ ಮೆಲುದನಿಯಲ್ಲಿ "ಯಾರು ನೀನು? ಏನಾಗಬೇಕು?" ಅಂದ. "ಪೊಲೀಸ್‌ಗೆ ಧಿಕ್ಕಾರ! ನನ್ನನ್ನು ಹಿಡಿದು ಜೈಲಿಗೆ ಹಾಕಿ. ಯಾಕೆ ಸುಮ್ಮನೇ ಇದ್ದೀರಿ. ನನ್ನನ್ನು ಜೈಲಿಗೆ ಹಾಕಿ" ಅಂದ ಕಣ್ಣಪ್ಪ

"ಜೈಲು? ಯಾಕೆ ಜೈಲು? ಸುಮ್ಮನೇ ಹೋಗು, ವಯಸ್ಸಾಗಿದೆ. ವಿವೇಕ ಮಾತ್ರ ಬಂದಂತಿಲ್ಲ. ದಾರಿಯಲ್ಲಿ ಹೋಗೋ ನಿಮ್ಮಂಥ ಮುದುಕರನ್ನೆಲ್ಲ ಜೈಲಿಗೆ ಹಾಕ್ತಾ ಹೋದ್ರೆ ಆಯಿತು ನಮ್ಮ ಕತೆ!" ಅಂದು ಕಾನ್‌ಸ್ಟೇಬಲ್ ಮತ್ತೆ ಚಲಿಸದೆ ನಿಂತ.

ಕ್ಷಣ ಕಾನ್‌ಸ್ಟೇಬಲ್‌ನನ್ನು ನೋಡುತ್ತಾ ನಿಂತ ಕಣ್ಣಪ್ಪ ತಲೆ ಕೊಡವಿಕೊಂಡು ಕಾಲೆಳೆದುಕೊಂಡು ಕತ್ತಲಲ್ಲಿ ನಡೆಯತೊಡಗಿದ.

* * *

ಮೇಲಿನ ಕತೆ ನಾನು ಎರಡು ವರ್ಷದ ಹಿಂದೆ ಓದಿದ್ದು, ಫ್ರಾನ್ಸ್‌ನ ಪ್ರಖ್ಯಾತ ಲೇಖಕ ಅನಾಟೋಲ್ ಫ್ರಾನ್ಸ್‌ನ ಕತೆಯೊಂದನ್ನು ಇಂಗ್ಲೀಷ್ ಸಾಹಿತಿ ಜಾರ್ಜ್ ಆರ್ವೆಲ್ 1942ರಲ್ಲಿ ರೇಡಿಯೋ ನಾಟಕವನ್ನಾಗಿ ಮಾಡಿದ. ಆದರೆ ಅದು ಬಿ.ಬಿ.ಸಿ.ಯಲ್ಲಿ ಇಪ್ಪತ್ತೈದು ವರ್ಷಕಾಲ ಹೂತುಹೋಗಿತ್ತು. ಕಳೆದುಹೋಗಿದ್ದ

ಈ ನಾಟಕವನ್ನು ಹುಡುಕಿ ತೆಗೆದ ಡಬ್ಲ್ಯೂ.ಜೆ.ಎಸ್. ಎಂಬ ವಿದ್ವಾಂಸ 1984ರಲ್ಲಿ ಪ್ರಕಟಿಸಿದ. ಆದರ ಸಾರಾಂಶ ಕನ್ನಡ ರೂಪದಲ್ಲಿ ಮೇಲಿದೆ.

*ಆಕರ : 'ಉಲ್ಲಂಘನೆ ಮತ್ತು ಇತರ ಕತೆಗಳು' ಪಿ. ಲಂಕೇಶ್*

**ಪಿ. ಲಂಕೇಶ್:**

ನವ್ಯ ಸಾಹಿತ್ಯದ ಪ್ರಮುಖ ಕವಿ, ಕಥೆಗಾರ, ಕಾದಂಬರಿಕಾರ ವಿಮರ್ಶಕ ಹಾಗೂ ಪತ್ರಿಕೋದ್ಯಮಿಯಾಗಿ ಪ್ರಸಿದ್ಧಿ ಪಡೆದಿರುವ ಪಿ. ಲಂಕೇಶರು 1935ರಲ್ಲಿ ಶಿವಮೊಗ್ಗ ಜಿಲ್ಲೆಯ ಕೊನಗವಳ್ಳಿಯಲ್ಲಿ ಜನಿಸಿದರು. ಇವರು ಕನ್ನಡ ಸಾಹಿತ್ಯಕ್ಕೆ ನೀಡಿದ ಕಾವ್ಯ ಸಂಕಲನಗಳು: ತಲೆಮಾರು, ಬಿಚ್ಚು. ಕಾದಂಬರಿಗಳು: ಮುಸ್ಸಂಜೆಯ ಕಥಾ ಪ್ರಸಂಗ, ಬಿರುಕು, ಅಕ್ಕ. ಕಥಾಸಂಕಲನಗಳು: ನಾನಲ್ಲ, ಕೆರೆಯ ನೀರು ಕೆರೆಗೆ ಚೆಲ್ಲಿ, ಉಮಾಪತಿಯ ಸ್ಕಾಲರ್ಶಿಪ್ ಯಾತ್ರೆ, ಕಲ್ಲು ಕರಗುವ ಸಮಯ ಮತ್ತು ಇತರ ಕಥೆಗಳು.

ಚಲನಚಿತ್ರ ನಿರ್ದೇಶನ: ಪಲ್ಲವಿ, ಅನುರೂಪ, ಮುಂತಾದವು. ನಟರಾಗಿ, ಪ್ರಕಾಶಕರಾಗಿ, ಮುದ್ರಕರಾಗಿ, ಸಾಹಿತ್ಯದ ಎಲ್ಲಾ ರಂಗದಲ್ಲಿ ಆಳವಾಗಿ ಇಳಿದ ಒಂದು ಕಾಲಮಾನದ ಮಹತ್ವದ ಲೇಖಕರ ಸಾಲಿನಲ್ಲಿ ನಿಲ್ಲುವ ಬಹುಮುಖಿ ವ್ಯಕ್ತಿತ್ವದ ಲಂಕೇಶ್ ರವರು 2000ರಲ್ಲಿ ಇಹಲೋಕ ತ್ಯಜಿಸಿದರು.

ತನ್ನ ಹೆಸರಿನ ಪತ್ರಿಕೆಯೊಂದು ಎರಡು ದಶಕಗಳಷ್ಟು ಕಾಲ ಯಾವುದೇ ಜಾಹೀರಾತುಗಳಿಲ್ಲದೆ ಲಂಕೇಶ್ ನಡೆಸಿದ್ದರು. ಲಂಕೇಶ್ ಮೂಲತಃ ಅಧ್ಯಾಪಕರು. ಅಪಾರವಾದ ಓದು, ವ್ಯಾಪಕವಾದ ಬರವಣಿಗೆಯ ಮೂಲಕ ಅವರು ಗುರುತಿಸಿಕೊಂಡಿದ್ದರೂ ಉತ್ತಮ ಬೋಧಕರಾಗಿ ಲಂಕೇಶ ವಿದ್ಯಾರ್ಥಿಗಳ ವಲಯದಲ್ಲಿ ಗಮನ ಸೆಳೆದುದಕ್ಕಿಂತ ಬರಹದಲ್ಲಿ ಸಮಷ್ಟಿಗರ ಗಮನ ಸೆಳೆದರು. ಲಂಕೇಶರಂತಹ ಗದ್ಯ ಬರಹಗಾರರು ಕನ್ನಡ ನಾಡಿನ ಬಹುದೊಡ್ಡ ಆಸ್ತಿ.

## 3.3 ಕೋಡುಗಲ್ಲ ಬಸವ (ಶಾಂತಲಾ)

**–ಕೆ.ವಿ. ಅಯ್ಯರ್**

ಶಾಂತಲೆಗೆ ಸಂಬಂಧಿಸಿದ ಶಾಸನಾಧಾರಗಳನ್ನು ನೋಡಿದ್ದರ ಜೊತೆಗೆ ತಂಜಾವೂರಿನ ಸರಸ್ವತೀಭಂಡಾರದ ಇತಿಹಾಸ್ಯ ಗ್ರಂಥಗಳ ಅವಲೋಕನದಿಂದ ಹೊಯಿಸಳ ವಿಷ್ಣುವರ್ಧನನ ಸಮಕಾಲೀನರ ವಿಷಯಗಳನ್ನೂ ಸಂಗ್ರಹಿಸಿಕೊಂಡು ಈ ಕಥೆಯನ್ನು ಬರೆದಿದ್ದೇನೆ. ಬರವಣಿಗೆ ಸಾಗಿದಂತೆಲ್ಲ, ಸಹೃದಯರಾದ ಶ್ರೀ ರಾಜರತ್ನಂ ಅದನ್ನು ಓದಿಸಿ ಕೇಳಿದ್ದಾರೆ. ಈ 'ಶಾಂತಲಾ' ಕೃತಿ ಪ್ರಕಟವಾಗಿರುವುದು ಇವರ ಮಿತ್ರಕಾರ್ಯದ ಫಲವಾಗಿ.

ಹೊಯಿಸಳ ರಾಜ್ಯದ ಮಹಾ ಸಂಪತ್ತನ್ನು ಮಲ್ಲಿಕ್ ಕಾಫೂರನು ಆ ಕಾಲದಲ್ಲಿ ದೋಚಿದ್ದು ಇರಲಿ, ದೇವಾಲಯದ ಮೂರ್ತಿಗಳನ್ನು ಭಿನ್ನಮಾಡಿದ್ದೂ ಇರಲಿ ಅನುಪಮವಾದ ಹಳೆಯಬೀಡಿನ ಸುಂದರ ವಿಗ್ರಹಗಳ ಕೈಕಾಲು ಮುರಿದು, ಕಣ್ಣುಕಿತ್ತು, ಮುಖ ತಲೆಗಳನ್ನು ಜಜ್ಜಿರುವವರು ನಾವು, ನಮ್ಮವರು. ಮಂಗನ ಕೈಯ ಮಾಣಿಕ್ಯವಾಗಿದೆ ಈ ಬೃಹತ್ ಕಲಾಸೃಷ್ಟಿ, ಕನ್ನಡನಾಡಿನ ಪೀಳಿಗೆಯ ಈ ರೂಕ್ಷಕೃತ್ಯಗಳಿಗೆ ವಿಷ್ಣುವರ್ಧನ ಶಾಂತಲೆಯರ ಆತ್ಮಗಳು ಎಷ್ಟು ನೋಯುವುವೊ! ಈ ಕತೆ ಅದಕ್ಕಾಗಿ ನನ್ನ ಹೃದಯ ಮಿಡಿದ ಕಂಬನಿಯಾದರೂ ಅಂತರ್ಯದಲ್ಲಿ ಇದು ಒಂದು ಪ್ರೇಮಮಯ ಸಂಸಾರದ ಚಿತ್ರ.

**–ಕೆ. ವಿ. ಅಯ್ಯರ್**

ಗಾವುದಗಾವುದಕ್ಕೂ ಕುದುರೆಗಳನ್ನು ಬದಲಾಯಿಸುತ್ತಿದ್ದರಿಂದ ದಾರಿ ಬಹುಬೇಗ ಸಾಗಿತು. ಕುದುರೆಗಳಿಗೂ ದಣಿವಾಗಲಿಲ್ಲ. ವೇಗವಾಗಿ ಹೋಗುತಿದ್ದ ರಥದಲ್ಲಿ ಕುಳಿತಿದ್ದ ಇವರಿಗೆ ಬಿಸಿಲ ಬಾಧೆಯೂ ಹೆಚ್ಚು ಅನುಭವವಾಗಲಿಲ್ಲ. ಮಧ್ಯಾಹ್ನ ಸಮಯಕ್ಕೆ ಕಾಡಿನ ರಮ್ಯವಾದ ಒಂದು ಸರೋವರದ ತೀರದಲ್ಲಿ, ಮರಗಳ ನೆರಳಿದ್ದ ಕಡೆ, ರಥವನ್ನು ನಿಲ್ಲಿಸಿ ಕೆಳಗಿಳಿದು, ತಣ್ಣನೆಯ ನೀರಿನಲ್ಲಿ, ಮುಖಪ್ರಕ್ಷಾಳನ, ಪಾದಪ್ರಕ್ಷಾಳನಗಳನ್ನು ಮಾಡಿ, ಸೋವಲೆ ಮಾಡಿರಿಸಿದ್ದ ದಿವ್ಯವಾದ ಅಡುಗೆಯನ್ನು ವನಭೋಜನಮಾಡಿ, ರಥ ನಡೆಸುವವನಿಗೂ ಇಟ್ಟು, ಅವನು ಉಂಡು ಕುದುರೆಗಳನ್ನು ಮೇವಿಗೆ, ನೀರಿಗೆ ಬಿಡುವವರೆಗೂ ನೆರಳಲ್ಲಿ ವಿಶ್ರಮಿಸಿಕೊಂಡು ಅನಂತರ ಪ್ರಯಾಣವನ್ನು ಮುಂದುವರಿಸಿದರು. ಸಂಜೆಗೆ ಇನ್ನೂ ಸ್ವಲ್ಪ ಸಮಯವಿರುವಾಗಲೆ ಶಿವಗಂಗೆಯನ್ನು ಸೇರಿದರು.

* * *

ಮರುದಿನ ಬಿಸಿಲೇರುವುದಕ್ಕೆ ಮೊದಲೆ ಶಾಂತಲೆ ಬೆಟ್ಟವನ್ನು ಹತ್ತಲು ಸಿದ್ಧಳಾದಳು. ಕುವರನೂ ಸಿದ್ಧನಾದ. ಗಿರಿಗೆ ಕೈಮುಗಿದು ಬೆಟ್ಟವನ್ನು ಹತ್ತಲು ಉಪಕ್ರಮಿಸಿದರು. ಸ್ವಲ್ಪ ದೂರ ಹತ್ತುವುದರಲ್ಲಿ ಗಂಗಾಧರೇಶ್ವರ ಗುಹಾಂತರ್ದೇವಾಲಯ ಸಿಕ್ಕಿತು. ವಿಶ್ವೇಶ್ವರ, ನಂದಿಗಳಿಗೆ ನಮಸ್ಕರಿಸಿ ಒಳಹೊಕ್ಕು, ಮಹಾದೇವನಿಗೆ ಭಕ್ತಿಯಿಂದೆರಗಿ, ಅನಂತರ ಗಿರಿಶಿಖರಕ್ಕೆ ನಡೆದಾಗ. ಹಾದಿ ಬಹು ಇಕ್ಕಟ್ಟು, ಕಡಿದ ಮೆಟ್ಟಲು ಸಣ್ಣವು, ಅಲ್ಲಲ್ಲಿ ಜಾರಿ ಬೀಳುವ ಸ್ಥಿತಿ. ಇಷ್ಟು ಕಠಿಣವಿದ್ದರೂ ಶಾಂತಲೆಯ ಮನಸ್ಸು ಶಾಂತವಾಗಿಯೇ ಇತ್ತು. 'ಅವಸರ ಬೇಡ ಅಕ್ಕ, ನಿಧಾನಮಾಡು. ಪಕ್ಕದ ಬಂಡೆಯನ್ನು ಹಿಡಿದುಕೊ. ಅಷ್ಟು, ಸಣ್ಣ ಕಲ್ಲಿನ ಮೇಲೆ ಕಾಲಿಡಬೇಡ, ಜಾರೀತು, ಹೊರಳೀತು. ಅಲ್ಲಿ ಚೌಗು ಹೆಚ್ಚು, ಪಾಚಿ ಕಟ್ಟಿದೆ, ಎಚ್ಚರಿಕೆ!' ಎನ್ನುತ್ತ ಕುವರವಿಷ್ಣು ಅಕ್ಕನ ಕೈಹಿಡಿದುಕೊಂಡು ಮೆಲ್ಲಮೆಲ್ಲನೆ ಹತ್ತಿಸಿಕೊಂಡು ಹೋದ. ದಣಿವನ್ನು ತೀರಿಸಿಕೊಳ್ಳಲು ಅಲ್ಲಲ್ಲಿ ಕುಳಿತು, ಆಯಾಸ ಪರಿಹಾರ ಮಾಡಿಕೊಂಡು, ಮುಂದುವರಿದರು. ದಾರಿ ಯುದ್ದಕ್ಕೂ ಮಂಟಪಗಳು, ಸೋಪಾನಗಳು, ಚಿಕ್ಕ ದೊಡ್ಡ ಗುಡಿಗಳು, ವಿನಾಯಕನ, ನಂದಿಗಳ ಮೂರ್ತಿಗಳು ಇದ್ದವು. ಬೆಟ್ಟದ ಗಾಳಿ ತಣ್ಣಗೆ ಬೀಸುತ್ತಿದ್ದರೂ, ಚೈತ್ರಮಾಸದ ಬಿಸಿಲು ಚುರುಕಾಗಿದ್ದಿತು.

ಅಂದು ಚೈತ್ರ ಶುದ್ಧ ಪಂಚಮಿ, ಸೋಮವಾರ, ಸೋಮಧರನ ದಿನದಲ್ಲೆ ಆತನ ದರ್ಶನ ಪಡೆದು, ಆತನನ್ನೆ ಧ್ಯಾನಿಸುತ್ತ ಬೆಟ್ಟವನ್ನು ಹತ್ತುತಿದ್ದಳು ಶಾಂತಲೆ. ಬೆಟ್ಟದ ಕಿಬ್ಬಿಯನ್ನು ಸೇರಿದಾಗ ಆಕೆಗೆ ಹೆಚ್ಚು ದಣಿವಾಗಿತ್ತು ತೀರ್ಥೋದ್ಭವ ಹೊಂಡದ ಬಳಿ ಇಬ್ಬರೂ ಕುಳಿತರು. 'ಅಕ್ಕ, ಈ ಬೆಟ್ಟ ಇಷ್ಟು ಕಡಿದು ಎಂದು ಬಲ್ಲೆಯಾದರೂ ಹತ್ತಿ ಬಂದೆಯಲ್ಲ!' ಎಂದ ಕುವರ. 'ನಾನು ಚಿಕ್ಕವಳಿದ್ದಾಗ ಓಡಿ ಓಡಿ ಹತ್ತಿದೆನೆಂದು ಅವ್ವ ಹೇಳಿದರು. ಅದೀಗ ಸಾಧ್ಯವೆ!' ಎಂದಳು ಶಾಂತಲೆ,

ಸ್ವಲ್ಪ ಹೊತ್ತು ಕುಳಿತು ದಣಿವಾರಿದ ಮೇಲೆ ಶಾಂತಲೆ 'ತಮ್ಮ, ಬಾಯಾರುತ್ತಿದೆ, ಹತ್ತಿರದಲ್ಲಿ ಜಲವಿಲ್ಲ. ನಾವು ಜೊತೆಯಲ್ಲಿ ತರಬೇಕಾಗಿತ್ತು ನಾವು ಬಂದ ದಾರಿಯಲ್ಲಿ ವಿಶ್ವೇಶ್ವರನ ಮಂಟಪದ ಎದುರಿನ ದೋಣೆಯಲ್ಲಿ ತಿಳಿನೀರಿದ್ದುದನ್ನು ಕಂಡೆವಲ್ಲವೆ; ಪಕ್ಕದಲ್ಲಿ ಅರ್ಚಕರ ಮನೆ ಇದೆ. ಕೇಳಿ ಒಂದು ಪಾತ್ರೆಯಲ್ಲಿ ನೀರು ತೆಗೆದುಕೊಂಡು ಬಾ' ಎಂದಳು. 'ತರುವೆನಕ್ಕ, ಇಲ್ಲಿಯೆ ಕುಳಿತಿರು' ಎಂದು ಹೇಳಿ ಕುವರ ನಿಮಿಷಮಾತ್ರದಲ್ಲಿ ಇಳಿದುಹೋದ.

ಕುವರನು ಅಲ್ಲಿಂದ ಇಳಿದು ಹೋದಮೇಲೆ ಶಾಂತಲೆ ಎದ್ದು ಸುತ್ತ ನೋಡಿದಳು. ಸುಂದರವಾದ ದೃಶ್ಯ: ಬೆಟ್ಟದ ತಪ್ಪಲಿನಲ್ಲಿ ಶಿವಗಂಗೆ ಊರು

ತೀರ ಪುಟ್ಟದಾಗಿ ಕಂಡಿತು. ಚಿಕ್ಕಂದಿನ ನೆನಪು, ಅಲ್ಲಿಯೆ ಎಲ್ಲೋ ಹತ್ತಿರದಲ್ಲಿಯೆ 'ಕೋಡುಗಲ್ಲು ಬಸವ' ಎಂಬ ಹೆಸರಿನ ಒಂದು ನಂದಿ ವಿಗ್ರಹ ಇದ್ದುದು. ಕಡೆಗೆ ಅದು ಇದ್ದ ದಿಕ್ಕನ್ನು ಹುಡುಕಿ ಕಂಡುಹಿಡಿದು ಆ ಕೋಡುಗಲ್ಲು ಬಸವನಿರುವೆಡೆಗೆ ಹೋದಳು. ಕೋಡುಗಲ್ಲು ಬಸವ ಸಿಕ್ಕಿತು. ಅದರ ಸುತ್ತು ಪ್ರದಕ್ಷಿಣಕ್ಕೆ ಸ್ಥಳ ಬಹು ಇಕ್ಕಟ್ಟು. ಕಾಲು ಜಾರಿದರೆ ಮೈಮೂಳೆ ಉಳಿಯುವ ಸಂಭವವೆ ಇಲ್ಲ. ಬಹಳ ಎಚ್ಚರದಿಂದ ಪ್ರದಕ್ಷಿಣೆ ಬರಬೇಕು. ಹೆಂಗಸರು ಮಕ್ಕಳಿಗಂತೂ ಅದು ಸಾಧ್ಯವೇ ಇಲ್ಲ.

ಶಾಂತಲೆ ಧೈಯ್ಯದಿಂದ ಒಂದು ಸಲ ಆ ಬಸವನನ್ನು ಬಲವಂದಳು, ಕೈಮುಗಿದಳು. ತರುವಾಯ ಮಧ್ಯ ಆಕಾಶವನ್ನು ಸಮೀಪಿಸುತ್ತಿದ್ದ ಭಾಸ್ಕರನನ್ನು ನೋಡಿ ಕೈಮುಗಿದು 'ಭಗವನ್ ನಾರಾಯಣ, ಇನ್ನು ನನಗೆ ನೀನೇ ದಿಕ್ಕು, ನೀನೇ ಸಾಕ್ಷಿ. ಇಹಜನ್ಮದ ಕೊನೆಯ ಕರ್ತವ್ಯವಿದೆಂದು ಮಾಡುತ್ತಿದ್ದೇನೆ. ನಿನಗೆ ನನ್ನ ಆತ್ಮಾರ್ಪಣೆ ಮಾಡಿಕೊಳ್ಳುತ್ತಿದ್ದೇನೆ. ನನಗೆ ಬೇರೆ ಯಾವ ಮಾರ್ಗವನ್ನೂ ನೀನು ತೋರಲಿಲ್ಲ. ನಮ್ಮ ರಾಜ್ಯಕ್ಕೆ ಒಳಿತಾಗಲಿ. ಲಕ್ಷ್ಮಿ ಪಟ್ಟಮಹಿಷಿಯಾಗಲಿ. ಅವಳಿಗೆ ಪುತ್ರಸಂತಾನವನ್ನೂ ದೇಶಕ್ಕೆ ಒಡೆಯನನ್ನೂ ಕೊಡು. ಪ್ರಭುಗಳ ಮನಸ್ಸನ್ನು ಹೇಗಾದರೂ ಸಂತೈಸು. ಅವರ ನನ್ನ ಮೇಲಿನ ಅನುರಾಗವೆಲ್ಲ ಲಕ್ಷ್ಮಿಗೆ ದೊರೆಯಲಿ, ಭಗವಂತ, ಕ್ಷಮಿಸು, ಕರುಣಿಸು' ಎನ್ನುತ್ತ ಶಾಂತಲೆ ಕಣ್ಣು ಮುಚ್ಚಿದಳು. ಅಷ್ಟೆ. ಶಾಂತಲೆಯ ಶರೀರ ಅಲಿಂದ ನೆಟ್ಟಗೆ ಕೆಳಕ್ಕೆ ಬಿದ್ದು ಬಂಡೆಗಳ ಮೇಲೆ ಉರುಳಿ ಉರುಳಿ ನೂರಡಿ ದೂರಕ್ಕೆ ಬಿದ್ದಿತು. ರಮ್ಯವಾದ ನಕ್ಷತ್ರವೊಂದು ಮೂಡಿ, ಧರೆಗೆ ಬೆಳಕಿತ್ತು, ಕಣ್ಮರೆಯಾಯಿತು. ಶಕವರ್ಷ 1050 (ಕ್ರಿ. ಶ. 1131) ವಿರೋಧಿಕೃತು ಸಂವತ್ಸರದ ಚೈತ್ರ ಶುದ್ಧ ಪಂಚಮಿ ಸೋಮವಾರ, ಪೂರ್ವಾಹ್ನ ಶಾಂತಲದೇವಿ ಶಿವಗಂಗೆ ಪುಣ್ಯ ಕ್ಷೇತ್ರದಲ್ಲಿ ದೇಹವನ್ನು ಮುಡುಪಿದಳು.

ಅದೇ ಸಮಯದಲ್ಲಿ ಪ್ರಭುಗಳೂ ಲಕ್ಷ್ಮಿಯ ವೇಲಾಪುರದಲ್ಲಿ ಚೆನ್ನಕೇಶವನಿಗೆ ಶಾಂತಲದೇವಿಯ ಹೆಸರಿನಲ್ಲಿ ಪೂಜೆಯನ್ನು ಅರ್ಪಿಸುತ್ತಿದ್ದರು. ಅರ್ಚಕರು ಹೂವು ತುಂಬಿದ್ದ ತಟ್ಟೆಯ ನಡುವೆ ತುಪ್ಪದ ದೀಪವನ್ನಿಟ್ಟು ದೇವನಿಗೆ ಬೆಳಗುತ್ತಿದ್ದರು. ತಟ್ಟೆ ಪೂಜಾರಿಯ ಕೈಯಿಂದ ಅಕಸ್ಮಾತ್ತಾಗಿ ಜಾರಿ, ದೀಪದೊಡನೆ ನೆಲಕ್ಕುರುಳಿತು. ದೀಪ ನಂದಿಹೋಗುವುದರಲ್ಲಿತ್ತು. ಆರಿಹೋಗುತ್ತಿದ್ದ ಬತ್ತಿಯನ್ನು ಪ್ರಭುಗಳ ತತ್‌ಕ್ಷಣ ಕೈಯಿಂದ ಎತ್ತಿ, ಜ್ಯೋತಿಯನ್ನು ಉದ್ಧಾರಗೊಳಿಸಿದರು. ಆರಿಹೋಗುತ್ತಿದ್ದ ಆ ಸೊಡರು ಮತ್ತೆ ಪ್ರಜ್ವಲಿಸಿತು. ಪ್ರಭುವಿಗೆ ಇದು ಏನೋ ಅಶುಭಸೂಚನೆ ಎನ್ನಿಸಿತು. ಆ ಕ್ಷಣದಲ್ಲಿಯೆ ಎದೆಯ ಪಾರ್ಶ್ವದಲ್ಲಿ ಏನೋ ವಿಕಾರ ಅನುಭವವಾಯ್ತು. ಅರ್ಚಕನು ಅಂಜಿದನು. 'ಕೈ ಒದ್ದೆಯಾಗಿದ್ದುದ

ರಿಂದ ತಟ್ಟೆ ಜಾರಿತು. ಸಹಸ್ರ ಅಪರಾಧವಾಯ್ತು. ದೇವರು ಮನ್ನಿಸಬೇಕು' ಎಂದು ಕೈ ಜೋಡಿಸಿ ದೈವವನ್ನೂ ಪ್ರಭುಗಳನ್ನೂ ಬೇಡಿ, ದೇವನಿಗೆ ಮತ್ತೆ ಹೊಸ ದೀಪಾರತಿಯನ್ನು ಬೆಳಗಿದನು.

ದೀಪಾರತಿ ಕೆಳಗುರುಳಿದಾಗ ಲಕ್ಷ್ಮಿಗೂ ಹೊಟ್ಟೆಯಲ್ಲಿ ಕಿವಿಚಿ ಹಿಂಡಿದಂತೆ ಸಂಕಟವಾಯಿತು. ನಿಟ್ಟುಸಿರೊಂದು ಅವಳ ಎದೆಯಿಂದ ತಾನಾಗಿ ಹೊರಟಿತು. ಪ್ರಭುಗಳು ಲಕ್ಷ್ಮಿಯೊಡನೆ ಗರ್ಭಗುಡಿಯಿಂದ ಈಚೆಗೆ ಬಂದು 'ಲಕ್ಷ್ಮಿ, ಇದೇನೋ ಅಶುಭಸೂಚಕವಾಗಿದೆ, ಮನಸ್ಸಿಗೆ ಕಳವಳ ಕಾರಣ ವಾಗಿದೆ' ಎಂದರು. ಲಕ್ಷ್ಮಿಯು 'ಸ್ವಾಮಿ, ನನಗೂ ಏಕೋ ಭಯವಾಗುತ್ತಿದೆ. ಆರತಿ ಜ್ಯೋತಿಯು ಹಾಗೆ ನೆಲಕ್ಕೆ ಉರುಳಬಾರದು. ನಮ್ಮ ತಪ್ಪೇನಿದ್ದರೂ ಚೆನ್ನಕೇಶವನು ಮನ್ನಿಸಲಿ. ಪ್ರಜ್ಞೆ ಇದ್ದು ನಾನು ಯಾವ ದೋಷವನ್ನೂ ಆಚರಿಸಿಲ್ಲ. ದೇವನು ಕಾಪಾಡಬೇಕು' ಎಂದಳು. ಪ್ರಭುಗಳೂ ಲಕ್ಷ್ಮಿಯೂ ದೇವನ ಕ್ಷಮೆ ಬೇಡುತ್ತ ಸೋಪಾನಗಳ ಮೇಲೆ ಸ್ವಲ್ಪ ಕಾಲ ಕುಳಿತರು.

ಅತ್ತ, ಕುವರ ಬೆಟ್ಟವನ್ನು ಸರಸರನೆ ಇಳಿದು, ಪೂಜಾರಿಯ ಮನೆಯಲ್ಲಿ ಒಂದು ಶುಭ್ರವಾದ ಪಾತ್ರೆಯನ್ನು ಈಸಿಕೊಂಡು ವಿಶ್ವೇಶ್ವರನ ದೋಣೆಯಲ್ಲಿ ನೀರನ್ನು ತುಂಬಿಕೊಂಡು, ಪುನಃ ಮೇಲಕ್ಕೆ ಹತ್ತಿಬಂದ. ಅಕ್ಕನನ್ನು ಬಿಟ್ಟು ಹೋಗಿದ್ದೆಡೆಯಲ್ಲಿ ಅಕ್ಕನಿರಲಿಲ್ಲ. ಅಕ್ಕ ಅಕ್ಕ!' ಎಂದು ಕೂಗಿದೆ, ಸುತ್ತ ನೋಡಿದ. ಉತ್ತರ ಬರಲಿಲ್ಲ, ಅಕ್ಕ ಕಣ್ಣಿಗೂ ಬೀಳಲಿಲ್ಲ. 'ದೂರ ಏನಾದರೂ ಹೋಗಿರುವಳೊ?' ಎಂದು, ಧ್ವನಿಯನ್ನು ಎತ್ತರಿಸಿ 'ಅಕ್ಕಾ, ಅಕ್ಕಾ!'ಎಂದು ಕೂಗಿದ, ಉತ್ತರ ಬರಲಿಲ್ಲ. ಕುವರನಿಗೆ ಆಶ್ಚರ್ಯವಾಯಿತು, ಭಯವಾಯಿತು. ತಂದಿದ್ದ ಉದಕಪಾತ್ರೆಯನ್ನು ತೀರ್ಥೋದ್ಭವ ಹೊಂಡದ ಒಳಗೆ ಇಟ್ಟು, ಬಂಡೆಯೊಂದರ ಮೇಲೆ ಏರಿ ಇನ್ನೂ ಗಟ್ಟಿಯಾಗಿ 'ಅಕ್ಕಾ! ಅಕ್ಕಾ!!' ಎಂದು ಸುತ್ತಲೂ ತಿರುಗಿ ಕರೆದ. ಬೆಟ್ಟದ ಬೋರೆಗಲ್ಲುಗಳಿಂದ ಪ್ರತಿಧ್ವನಿ ಹೊರಟಿತು. ಉತ್ತರ ಬರಲಿಲ್ಲ. 'ಅಕ್ಕ ಇಷ್ಟರಲ್ಲಿ ಎಲ್ಲಿಗೆ ಹೋದಳು? ನನ್ನ ಕೂಗು ಕೇಳಬರದಷ್ಟು ದೂರ ಎಲ್ಲಿ ಹೋಗಿರಬಹುದು?' ಎಂದು ಕುವರನಿಗೆ ಭಯವಾಯಿತು. ಇನ್ನೊಂದು ಸಲ ತನ್ನ ದೇಹಶಕ್ತಿಯನ್ನೆಲ್ಲ ಗಂಟಲಿಗೆ ಕೊಟ್ಟು 'ಅಕ್ಕಾ! ಅಕ್ಕಾ!' ಎಂದು ಅರಚಿದ. ಎರಡು, ಮೂರು, ನಾಲ್ಕೈದು ಪ್ರತಿ ಧ್ವನಿಗಳುಂಟಾದವು. ಬೆಟ್ಟವೆಲ್ಲ ಕೇಳಿಸಿತು ಆ ಧ್ವನಿ. ಉತ್ತರ ಮಾತ್ರ ಇಲ್ಲ.

ಸೋಮವಾರ ಗಿರಿಪೂಜೆಗೆಂದು, ಇವರಿಗಿಂತ ಮುಂಚಿತವಾಗಿಯೇ ಬೆಟ್ಟವನ್ನು ಹತ್ತಿಬಂದು, ಪೂಜೆ ಮುಗಿಸಿ, ಕಾಯಿಹಣ್ಣುಗಳನ್ನು ತಿನ್ನುತ್ತ ಕುಳಿತಿದ್ದ ಒಂದು ತಂಡ ಗ್ರಾಮವಾಸಿಗಳು, ಕುವರನ ಕಾತರಧ್ವನಿಗೆ ಬೆಚ್ಚಿದವರಾಗಿ "ಅಯ್ಯ,

ಯಾರೊ ಭಾಗ್ಯವಂತೆ, ನಿಮ್ಮ ಅಕ್ಕನೆ ಇರಬಹುದು, ಆಕೆ, ಈಗ ಸ್ವಲ್ಪ ಹೊತ್ತಿಗೆ ಮುಂಚೆ, ಆ ಕೋಡುಗಲ್ಲು ಬಸವನಿರುವ ಕಡೆಗೆ ನಡೆದುಹೋದರು' ಎಂದರು. ಅದೆಲ್ಲಿ?" ಎಂದು ಕೇಳಿದ ಕುವರ. ಅದೂ ಆ ಕಡೆ' ಎಂದು ಬೆರಳುಮಾಡಿ ತೋರಿದರು. ಕುವರ ಆ ಕಡೆ ಓಡಿದ. ಕುವರನ ಭೀತಿ ಕಾತರತೆಗಳನ್ನು ಕಂಡು ಆ ಗ್ರಾಮವಾಸಿಗಳು 'ಆ ಹೆಂಗಸಿಗೆ ಏನಾಯಿತೊ?" ಎಂದು ಅಂಜಿ, ಕುವರನ ಹಿಂದೆಯೇ ತಾವೂ ಓಡಿದರು.

ಕೋಡುಗಲ್ಲ ಬಸವನಿರುವಲ್ಲಿಗೆ ಬಂದ ಕುವರ. ಅಲ್ಲಿಯೂ ಸುತ್ತ ನೋಡಿದ. ಗಿರಿಯೆ ಅದಿರುವಂತೆ ಅಕ್ಕಾ ಅಕ್ಕಾ ಅಕ್ಕಾ' ಎಂದು ಅರಚಿದ. ಆ ಕೂಗಿಗೆ ಬೆಟ್ಟದ ಪ್ರತಿಯೊಂದು ಬಿರುಕಿನಲ್ಲಿಯೂ, ಬಂಡೆಗಳ ನಡುವೆಯೂ, ಕೆಳಗಿನ ಊರುಗಳಲ್ಲಿಯೂ, ಬಯಲಿನಲ್ಲಿಯೂ ಪ್ರತಿಧ್ವನಿಗಳು ಹೊರಟವು. ಉತ್ತರ ಮಾತ್ರ ಬರಲಿಲ್ಲ. ಆಗ ಕುವರನ ಧೈಯ್ಯ ಒಡೆಯಿತು. ನಡುಗುತ್ತಿರುವ ಧ್ವನಿಯಲ್ಲಿ ಇತ್ತ ಕಡೆ ಬಂದಳೆ? ನೀವು ನೋಡಿದಿರಾ?' ಎಂದು ಗ್ರಾಮವಾಸಿಗಳನ್ನು ಕೇಳಿದ. 'ಹೌದು ಅಯ್ಯಾ, ಈ ಕಡೆಗೇ ಬಂದರು, ನಿಮ್ಮ ಈ ಕೂಗು ಅವರೆಲ್ಲಿದ್ದರೂ ಕೇಳಿಸಿರಬೇಕು' ಎಂದರು ಗ್ರಾಮವಾಸಿಗಳು. ಕುವರನಿಗೆ ತಲೆ ತಿರುಗಿತು, ಕಾಲು ಕುಸಿಯಿತು. ಅವನು ಅವರನ್ನು ಕುರಿತು 'ಈ ಬೆಟ್ಟದಲ್ಲಿ ಕ್ರೂರ ಮೃಗಗಳಿವೆಯೆ?" ಎಂದು ಪ್ರಶ್ನೆ ಮಾಡಿದ. ಅಂತಹವು ಏನಿಲ್ಲ ಅಯ್ಯ, ಇದ್ದರೂ ಇಷ್ಟು ಹೊತ್ತಿನಲ್ಲಿ ಅವು ಹೊರಗೆ ಬಾರವು' ಎಂದರವರು. ಕುವರನಿಗೆ ಸಹನೆ ತಪ್ಪಿತು, ಬಹು ಭಯ ವುಂಟಾಯಿತು. 'ಅಕ್ಕ ಎಲ್ಲಿಗೆ ಹೋದಳು?' ಎಂದು ಬಂಡೆಯಿಂದ ಬಂಡೆಗೆ ಓಡುತ್ತ ದಿಕ್ಕು ದಿಕ್ಕುಗಳಲ್ಲಿಯೂ ಎದೆ ಬಿರಿದು ಹೋಗುವಂತೆ ಕೂಗಿದ. ಈಗ ಗ್ರಾಮವಾಸಿಗಳಿಗೂ 'ಆ ಹೆಂಗಸು ಏನಾದಳು!' ಎಂದು ಭಯ ಹುಟ್ಟಿತು. ಕುವರವಿಷ್ಣು ಬಂಡೆಯಿಂದ ಬಂಡೆಗೆ ಓಡಿದಾಗ ಗ್ರಾಮವಾಸಿಗಳು ಕುವರನ ಕಾಲುಗಳಲ್ಲಿದ್ದ ಚಿನ್ನದ ತೋಡಗಳನ್ನು ಕಂಡರು, ಬಲಗಾಲಿನ ತೋಡದಲ್ಲಿ ಜಗ್ಗುತ್ತಿದ್ದ ಮುತ್ತಿನ ಗೊಂಚಲುಗಳನ್ನು ಕಂಡರು. ಆಗ ಅವರಿಗೆ ಇವರು ಮಹಾರಾಜರೆ ಇರಬೇಕು' ಎಂದು ತೋರಿತು. ಭಯಭಕ್ತಿಗಳಿಂದ ಕುವರನಿಗೆ ನಮಸ್ಕರಿಸಿ ಅವನೊಡನೆ ತಾವೂ ಹುಡುಕುವುದರಲ್ಲಿ ತೊಡಗಿದರು.

ಗ್ರಾಮವಾಸಿಗಳ ಗುಂಪಿನಲ್ಲಿದ್ದ ಒಬ್ಬ ಹುಡುಗನ ಸೂಕ್ಷ್ಮದೃಷ್ಟಿಗೆ, ಕೆಳಗೆ ನೂರು ಅಡಿಗಳ ದೂರದಲ್ಲಿ ಬಿದ್ದಿದ್ದ ಹೆಂಗಸಿನ ಶರೀರ ಒಂದು ಕಂಡಿತು. ಆಗ ಅವನು 'ಅಗೋ! ಅಗೋ!....ಅಲ್ಲಿ!" ಎಂದು ಕೆಳಗಡೆ ಕೈ ಮಾಡಿ ತೋರಿಸಿದ. ಎಲ್ಲರ ದೃಷ್ಟಿ ಆ ಕಡೆ ಓಡಿತು. ಗ್ರಾಮವಾಸಿಗಳೂ, ಉತ್ತಮ ವಸ್ತ್ರಗಳಿಂದ ಒಪ್ಪುತ್ತಿದ್ದ ಹೆಂಗಸೊಬ್ಬಳ ದೇಹ ಅಲ್ಲಿ ಬಿದ್ದಿರುವುದನ್ನು ಕಂಡರು. ಕುವರವಿಷ್ಣುವೂ ಕಂಡ.

ತನ್ನ ಅಕ್ಕ ಹೋದಳು' ಎಂದು ಅವನ ಹೃದಯ ಅಲ್ಲಿಯೆ ನಿರ್ಧರಿಸಿತು. ಆ ಕ್ಷಣವೆ ಅಕ್ಕಾ, ಇದೊ ನಾನೂ ಬಂದೆ' ಎನ್ನುತ್ತ ಒಂದೇ ಹಾರಿಗೆ ತನ್ನ ಅಕ್ಕನನ್ನು ಹೋಗಿ ಸೇರಿದ ಕುವರ.

ಗ್ರಾಮವಾಸಿಗಳು ಮೂಕರಾದರು. ಕಣ್ಮುಚ್ಚಿ ತೆಗೆಯುವುದರೊಳಗೆ ಈ ದುರಂತ ಅವರ ಕಣ್ಣು ಮುಂದೆ ನಡೆದುಹೋಯಿತು. ಕುವರ ನಿಧಾನಿಸಲಿಲ್ಲ, ನಿಂತು ಯೋಚಿಸಲಿಲ್ಲ. ಹಿಂದು ಮುಂದು ನೋಡಲಿಲ್ಲ. ಅಕ್ಕ ಹೋದಳು ಎಂದು ಅವನ ಮನಸ್ಸಿಗೆ ತಿಳಿದ ಕ್ಷಣವೇ ಅವನೂ ಹೋಗಿಬಿಟ್ಟ. 'ಹೆಂಗಸು, ಪಾಪ! ಕಾಲು ಜಾರಿ ಬಿದ್ದು ಸತ್ತಿರಬೇಕು, ಆಕೆಯ ತಮ್ಮಂದಿರಾದ ಈ ರಾಜರು ಆ ದುಃಖದಿಂದ ತಾವೂ ದುಮುಕಿ ಪ್ರಾಣ ಕಳೆದುಕೊಂಡರು! ಎಂದುಕೊಂಡರು ಗ್ರಾಮವಾಸಿಗಳು. ಅವರಿಗೆಲ್ಲ ಬಹು ದುಃಖವಾಯಿತು, ಬಹು ಸಂಕಟವಾಯಿತು. 'ಅಯ್ಯೋ! ಅಯ್ಯೋ!' ಎಂದು ದುಃಖದಿಂದ, ಭಯದಿಂದ, ಅರಚುತ್ತ ಅವರು ದಡದಡನೆ ಬೆಟ್ಟವಿಳಿದು ಶಿವಗಂಗೆ ಊರಿಗೆ  ಓಡಿದರು. ಗ್ರಾಮವಾಸಿಗಳ ಪೈಕಿ ಇಬ್ಬರು ಗಂಡಸರು, ಮೆಲ್ಲಗೆ ಆ ಇರುಕುಗಳಲ್ಲಿ ಇಳಿದು, ಆ ಎರಡು ಶರೀರಗಳೂ ಬಿದ್ದಿದ್ದ ಸ್ಥಳವನ್ನು ಸೇರಿ, 'ಯಾರಿಗಾದರೂ ಜೀವವಿದೆಯೇ?' ಎಂದು ನೋಡಿದರು. ಸತ್ತಿದ್ದ ಹೆಂಗಸು ಶ್ರೀ ಮಹಾಲಕ್ಷ್ಮಿಯಂತೆ ಇದ್ದರು. ತಲೆಯ ಒಂದು ಪಾರ್ಶ್ವ ಜಜ್ಜಿ ಹೋಗಿ, ರಕ್ತಸ್ರಾವವಾಗಿತ್ತು. ರಾಜರೂ ಬಿದ್ದೊಡನೆಯೆ ಒಂದೆರಡಾವರ್ತಿ ಕೈಕಾಲುಗಳನ್ನು ಝಾಡಿಸಿ ತಣ್ಣಗಾಗಿದ್ದರು. ಅಕ್ಕನ ಕಳೇಬರಕ್ಕೆ ಹತ್ತೇ ಅಡಿ ದೂರದಲ್ಲಿ ರಾಜರ ಶವವೂ ಬಿದ್ದಿದ್ದಿತು. ಆ ಇಬ್ಬರು ಗ್ರಾಮವಾಸಿಗಳು ಆ ಘೋರ ದೃಶ್ಯವನ್ನು ಕಂಡು ಎದೆಯೊಡೆದು ಕಣ್ಣೀರು ಸುರಿಸುತ್ತ ಮೂಕ ರಂತೆ ನಿಂತುಬಿಟ್ಟರು.

ಬೆಟ್ಟವಿಳಿದ ಗ್ರಾಮವಾಸಿಗಳು 'ರಾಜರೂ ಅವರ ಅಕ್ಕದಿರೂ ಬೆಟ್ಟದ ಮೇಲಿನಿಂದ ಬಿದ್ದು ಸತ್ತರು' ಎಂದು ಶಿವಗಂಗೆಯ ಊರಲ್ಲೆಲ್ಲ ಸುದ್ದಿ ಹರಡಿದರು. ರಥ ನಡಸಿಕೊಂಡು ಬಂದಿದ್ದ ಸಾರಥಿ ಆ ಸುದ್ದಿಯನ್ನು ಕೇಳಿ ಅಲ್ಲಿಯೇ ಕುಸಿದ. 'ಅಯ್ಯೋ! ಅದು ನಮ್ಮ ಶಾಂತಲಾ ಮಹಾರಾಣಿಯವರು, ಕುವರವಿಷ್ಣು ಅವರು' ಎಂದು ದೊಡ್ಡ ದನಿಯಿಂದ ಗೋಳಿಟ್ಟ. ಬಿಡದಿಯ ಅಧಿಕಾರಿ ಓಡಿಬಂದ. ಒಂದೆ ನಿಮಿಷದಲ್ಲಿ ಊರ ಜನರೆಲ್ಲ ಓಡಿ ಓಡಿ ಬಂದರು. ಹೆಗ್ಗಡೆ ನಗರ ರಕ್ಷಕರು, ಇತರ ಸಣ್ಣ ಪುಟ್ಟ ಅಧಿಕಾರಿಗಳು ಎಲ್ಲರೂ ಓಡಿಬಂದರು. 'ಎಲ್ಲಿ? ಯಾವ ಕಡೆ? ಇಬ್ಬರೂ ಕಾಲು ಜಾರಿದರೆ! ಅಯ್ಯೋ ಇನ್ನೇನು ಗತಿ?' ಎನ್ನುತ್ತ ಬೆಟ್ಟವನ್ನು ಹತ್ತಿ ಕಳೇಬರಗಳಿದ್ದೆಡೆಗೆ ಓಡಿದರು. ಗ್ರಾಮವಾಸಿಗಳಿಬ್ಬರೂ ಅಲ್ಲಿಯೆ ದುಃಖಿಸುತ್ತ ಕಾಯ್ದು ಕೂತಿದ್ದರು.

ಅತಿ ಪರಿತಾಪಕರವಾದ ಈ ದೃಶ್ಯವನ್ನು ಕಂಡು, ಮಕ್ಕಳು ಮರಿ ಮೊದಲುಗೊಂಡು ಎಲ್ಲರಿಗೂ ದುಃಖ ಉಕ್ಕಿ ಬಂದಿತು. 'ಶಾಂತಲಾ ಮಹಾರಾಣಿಯವರು ಕಾಲುಜಾರಿ ಬಿದ್ದು ಸತ್ತರೆ! ಅಯ್ಯೋ, ದೇಶಕ್ಕೇ ಎಂತಹ ದುರ್ದಿನವಿದು! ಅಕ್ಕ ಸತ್ತುದನ್ನು ಕಂಡು ಈ ಪುಣ್ಯಾತ್ಮನು ಪ್ರಾಣ ಕಳೆದುಕೊಂಡನೆ? ಗಂಗಾಧರೇಶ್ವರ, ನಿನ್ನ ಸೇವೆಗೆಂದು ಬಂದ ಇವರಿಗೆ ಈ ಫಲವೆ? ಈ ಪ್ರಾಪ್ತಿಯೆ! ಅಯ್ಯೋ! ಪ್ರಭು ವಿಷ್ಣುವರ್ಧನರು ಈ ದುಃಖವನ್ನು ಇನ್ನು ಹೇಗೆ ತಾನೆ ಸಹಿಸುವರು!" ಎಂದು ಗೋಳಿಟ್ಟರು. ಹೆತ್ತ ತಾಯಿತಂದೆಗಳನ್ನು ಕಳೆದುಕೊಂಡಂತೆ ದುಃಖಪಟ್ಟರು ಆ ಜನರು.

ಇಷ್ಟರಲ್ಲಿ ಸಾರಥಿಯೂ, ಬಿಡದಿಯವನೂ, ಮಾತನಾಡುತ್ತಿದ್ದವರು ತತ್‌ಕ್ಷಣ ಬೆಟ್ಟದ ಶಿಖರಕ್ಕೆ ನಡೆದರು. ಆ ಕಡೆ ನಿಂತಿದ್ದ ಇಬ್ಬರು ಗ್ರಾಮವಾಸಿಗಳು ಅವರ ಸಂಕಲ್ಪವನ್ನು ಊಹಿಸಿ, ಅವರನ್ನು ತಡೆದು 'ಅಯ್ಯ, ನೀವೆಲ್ಲಿಗೆ?' ಎಂದು ಕೇಳಿದರು. ಉತ್ತರ ಬಾರದಿರಲು ಆ ಗ್ರಾಮವಾಸಿಗಳು ಅವರನ್ನು ಬಲವಾಗಿ ಹಿಡಿದುಕೊಂಡು, ನಿಲ್ಲಿಸಿ, ಅಲ್ಲಿದ್ದ ಇತರರಿಗೆ ಕೇಳಿಬರುವಂತೆ ದೊಡ್ಡ ಧ್ವನಿಯಲ್ಲಿ 'ಅಯ್ಯ, ಅಯ್ಯ, ಇವರೂ ಪ್ರಾಣ ಕಳೆದು ಕೊಳ್ಳಲು ಹೋಗುತ್ತಿದ್ದಾರೆ, ನಿಲ್ಲಿಸಿ' ಎಂದು ಕೂಗಿಕೊಂಡಾಗ, ಜನರು ಓಡಿಬಂದು ಅವರನ್ನು ತಡೆದರು. ಸಾರಥಿಯೂ, ಬಿಡದಿಯ ಅಧಿಕಾರಿಯೂ 'ನಮ್ಮನ್ನು ಬಿಡಿ. ಇನ್ನು ನಾವು ಹಿಂದಕ್ಕೆ ಹೋಗಿ ಪ್ರಭುಗಳಿಗೆ ನಮ್ಮ ಮುಖಗಳನ್ನು ತೋರಲಾರೆವು. ನಮ್ಮನ್ನು ತಡೆಯಬೇಡಿ. ನಿಮಗೆ ಕೋಟಿ ಪುಣ್ಯ ಉಂಟು' ಎಂದು ಬೇಡಿಕೊಂಡರು. ಹೆಗ್ಗಡೆಗಳು 'ಸಾಕು, ಸಾಕು. ಈ ಅನಾಹುತಗಳು ಇನ್ನು ಸಾಕು. ಇದನ್ನು ನಾವು ವಿರೋಧಿಸುತ್ತೇವೆ, ಖಂಡಿತ ಆಸ್ಪದ ಕೊಡೆವು. ಹೇಳಿರಿ, ನಿಮಗೆ ಏನಾದರೂ ಈ ವಿಷಯದಲ್ಲಿ ತಿಳಿದಿದ್ದರೆ?

***ಆಕರ :*** *ಶ್ರೀ ವಿಷ್ಣು ಕಾಂತೆ ಶಾಂತಲಾ : ಕೆ.ವಿ. ಅಯ್ಯರ್*

**ಕೆ.ವಿ. ಅಯ್ಯರ್:**

ಕನ್ನಡ ನಾಡು ಕಂಡ ಅತ್ಯಂತ ವಿಶೇಷ ವ್ಯಕ್ತಿಗಳಲ್ಲಿ ಪ್ರೊ. ಕೆ.ವಿ. ಅಯ್ಯರ್ ಅವರೂ ಒಬ್ಬರು. ಅವರು ಜನಿಸಿದ್ದು ಜನವರಿ 8, 1894ರ ವರ್ಷದಲ್ಲಿ. ಅವರು ವೃತ್ತಿಯಿಂದ ದೈಹಿಕ ಶಿಕ್ಷಣ ತಜ್ಞರಾದರೂ ಪ್ರವೃತ್ತಿಯಿಂದ ಸಾಹಿತಿಗಳಾಗಿದ್ದವರು. ಬಾಲ್ಯದಲ್ಲಿ ತೀವ್ರ ಬಡತನ ಅನುಭವಿಸಿದ ಅಯ್ಯರ್ ಅವರು ಹೊಟೆಲಿನಲ್ಲಿ ಪ್ರತಿದಿನ ದೊಡ್ಡ ರುಬ್ಬುಗುಂಡುಗಳನ್ನು ಬಳಸಿ ಇಡ್ಲಿ, ದೋಸೆ ಹಿಟ್ಟು ರುಬ್ಬುತ್ತಿದ್ದರು. ಅದರೊಂದಿಗೆ ಅಡುಗೆ ಮನೆಗೆ ಬೇಕಾದ ನೀರನ್ನು ಬಾವಿಯಿಂದ ಸೇದಿ ತರಬೇಕಿತ್ತು. ನಿತ್ಯ ನೂರಾರು, ಭಾರೀ ಗಾತ್ರದ ಕೊಡಗಳಿಂದ ನೀರನ್ನು

ಎಳೆದೆಳೆದು, ಹೆಗಲಮೇಲೆ ಹೊತ್ತು ತಂದು ತುಂಬುವುದು ತುಂಬ ಶ್ರಮದ ಕೆಲಸವೇ ಆಗಿತ್ತು. ಈ ಕೆಲಸ ಪ್ರಯಾಸದ್ದಾಗಿದ್ದರೂ ಅವರ ದೇಹದಾರ್ಢ್ಯ ಬೆಳೆಸಲು ಅನುಕೂಲವಾಗಿತ್ತು. ಹೋಟೆಲ್ ಮಾಲೀಕರು ಈ ತರುಣನ ದೇಹ ಶಕ್ತಿ ಗಮನಿಸಿ ಕರೆದೊಯ್ದು ಒಂದು ವ್ಯಾಯಾಮ ಶಾಲೆಗೆ ಸೇರಿಸಿದರು. ಅಲ್ಲಿ ವೈಜ್ಞಾನಿಕವಾದ ತರಬೇತಿ ಪಡೆದ ತರುವಾಯ ತಮ್ಮದೇ ವ್ಯಾಯಾಮ ಶಾಲೆಯನ್ನು ಪ್ರಾರಂಭಿಸಿದ್ದು ಅಯ್ಯರ್ ಅವರ ಸಾಧನೆಯ ಛಲ ತೋರಿಸುತ್ತದೆ.

ಇದರೊಂದಿಗೆ ಸದಾ ಸಾಹಿತಿಗಳೊಡನೆ ಇರುತ್ತಲೇ ತಮ್ಮ ಸಾಹಿತ್ಯ ಸೇವೆ ಮುಂದುವರೆಸಿ ಶಾಂತಲಾ, ರೂಪದರ್ಶಿ ಮೊದಲಾದ ಉತ್ತಮ ಕಾದಂಬರಿಗಳನ್ನು, 'ಸಮುದ್ಯತಾ'ದಂತಹ ಕಥಾಸಂಕಲನಗಳನ್ನು ಬರೆದು ಕನ್ನಡದ ಓದುಗರ ಮನೆ ಮನಗಳನ್ನು ಪ್ರವೇಶಿಸಿದರು. ದೈಹಿಕ ಶಿಕ್ಷಣ ಕುರಿತು 'Chemical change in Physical Figure', 'Physic and Figure', 'Surya Namaskar', 'Perfect Strength', 'How to obtain strength' ಮುಂತಾದ ಕೃತಿಗಳನ್ನು ಬರೆದರು. 1979ರ ವರ್ಷದಲ್ಲಿ ಅವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಸಲ್ಲಿಸಲಾಗಿತ್ತು.

ಇಚ್ಛಾಮರಣಿಯಂತೆ ತಾವು ಮೊದಲೇ ಹೇಳಿದ ವರ್ಷ, ತಿಂಗಳು, ವಾರ, ಸಮಯದಂದೇ (3.1.1980) ದೇಹಬಿಟ್ಟರು ಅಯ್ಯರ್. ರಾಮಕೃಷ್ಣ ಪರಮಹಂಸರಲ್ಲಿ ಅಪಾರ ಭಕ್ತಿ ಹೊಂದಿದ್ದ ಅಯ್ಯರ್, ತಾವು ಜೀವಮಾನ ಪೂರ್ತಿ ಗಳಿಸಿದ್ದನ್ನು ಶ್ರೀರಾಮಕೃಷ್ಣಾಶ್ರಮಕ್ಕೆ ದಾನ ನೀಡಿದರು. ಈ ಸುಂದರ ಜೀವನದ ಪ್ರಯಾಣ ಗಮನಿಸಿ.

ಬಡತನದ ಬೇಗೆಯಲ್ಲಿ ಬೆಂದರೂ ನಿರಾಶರಾಗದೇ, ಹತಾಶೆಯ ಹೊಗೆ ತುಂಬಿಕೊಳ್ಳದೇ, ಜಗತ್ತಿನಲ್ಲಿ ಸುಂದರವಾದದ್ದನ್ನು ದೈಹಿಕ, ಸಾಹಿತ್ಯಿಕ, ಸಂಗೀತದ, ಮಾನವೀಯ ಅನುಕಂಪಗಳನ್ನೆಲ್ಲ ಮೊಗೆಮೊಗೆದು ತುಂಬಿಕೊಂಡು ಕೊನೆಗೆ ಯಾವುದೂ ತನ್ನದಲ್ಲವೆಂದು ಸಮರ್ಪಣೆ ಮಾಡಿ ಬದುಕು ದೂಡಿದ ಅಯ್ಯರ್ ಅವರದ್ದು ಅತ್ಯಂತ ಸಾರ್ಥಕವಾದ, ಅನುಕರಣ ಯೋಗ್ಯವಾದ ಜೀವನ. ಅಂಥವರ ಸ್ಮರಣೆ ನಮ್ಮಲ್ಲಿ ಉತ್ಸಾಹ ತುಂಬುತ್ತದೆ.

## 3.4 ಓದು ಪಠ್ಯ: ಅನುಕಂಪದ ಹತ್ತು ಮುಖಗಳು

**–ಮಾಲವಿಕಾ ಕಪೂರ್**

ನಾನು ಲೀಲಾ ಕಾರಂತರ ಒರೇಮಗಳು ಮಾಲವಿಕಾ, ನನ್ನ ಮತ್ತು ಅಮ್ಮನ ಬಾಂಧವ್ಯ ನಾನು ಚಿಕ್ಕವಳಿರುವಾಗ ಹೇಗಿತ್ತು, ಆ ಮೇಲೆ ಹೇಗಾಯಿತು ಎಂಬುದನ್ನು ಬಿಂಬಿಸುವ ಉದ್ದೇಶದಿಂದ ಬರೆಯುತ್ತಿದ್ದೇನೆ. ನನಗೆ ಇಪ್ಪತ್ತು ವರ್ಷ ಪ್ರಾಯವಾಗುವ ತನಕ ನಾನು ಅವರಿಗೆ ಮಗಳಂತಿದ್ದೆ. ಆದರೆ ಬಳಿಕ ಅಮ್ಮನಿಗೆ ತಾಯಿಯಂತಿರಬೇಕಾಯಿತು ಮರದೃಷ್ಟದಿಂದ. ಇದಕ್ಕೆ ಅವರ ಮಾನಸಿಕ ಹಾಗೂ ದೈಹಿಕ ಅಸ್ವಸ್ಥತೆಯೇ ಕಾರಣವಾಗಿತ್ತು,

ನನ್ನ ಮತ್ತು ಅಮ್ಮನ ಸ್ವಭಾವದಲ್ಲಿ ಬಹಳ ವ್ಯತ್ಯಾಸವಿದ್ದಿತು. ಚಿಕ್ಕವಳಿರುವಾಗ ನಾನು ಬಹಳಮಟ್ಟಿಗೆ ಏಕಾಂತ ಬಯಸುತ್ತಿದ್ದೆ, ಯಾರೊಡನೆಯೂ ಜಾಸ್ತಿ ಮಾತನಾಡುವುದಾಗಲೀ, ನನ್ನ ಭಾವುಕತೆಯನ್ನು ತೋರಿಸಿಕೊಳ್ಳುವುದಾಗಲೀ ನನಗೆ ಹಿಡಿಸದ ವಿಷಯ. ನನ್ನ ಅಮ್ಮನಿಗೆ ಎಲ್ಲರೂ ಬೇಕು, ಎಲ್ಲರ ಜೊತೆ ಮಾತುಕತೆ ಬೇಕು, ಜನಸಾಮಾನ್ಯರ ಕಷ್ಟ ಸುಖಗಳನ್ನು ತಿಳಿದು, ಅವರ ಭಾವನೆಗಳಲ್ಲಿ, ಕಷ್ಟ ಸುಖಗಳಲ್ಲಿ ಪಾಲುಗೊಳ್ಳಬೇಕು. ಎಳೆತನದಲ್ಲಿ ಬಾಲವನದಿಂದ ಪುತ್ತೂರು ಪೇಟೆಗೆ ಅಮ್ಮನೊಡನೆ ಕಾಲ್ನಡೆಯಲ್ಲಿ ಹೋಗುವಾಗ ಅವರ ವರ್ತನೆ ನನಗೆ ಬಹಳ ವಿಚಿತ್ರವೆನಿಸುತ್ತಿತ್ತು. ಹಗಲಲ್ಲಿ ದೊಡ್ಡ ಕೊಡೆಯೊಂದನ್ನು ಬಂದೂಕಿನಂತೆ ಇಟ್ಟುಕೊಂಡು ಹೊರಟು ನೂರು ಗಜಕ್ಕೊಂದು ಕಟ್ಟೆಪೂಜೆ, ಪ್ರತಿಯೊಬ್ಬರನ್ನು ನಿಲ್ಲಿಸಿ ಮಾತನಾಡಿಸುವುದು, ಅವರ ಕಷ್ಟ ಸುಖ ತಿಳಿದುಕೊಂಡು ಕೊನೆಗೆ ಹಾಸ್ಯಮಯ ಮಾತಿನಿಂದ ನಗಿಸಿ ಬೀಳ್ಕೊಳ್ಳುವುದು ಅವರ ಅಭ್ಯಾಸವಿತ್ತು. ನನಗೆ ಇದರಿಂದ ತುಂಬ ನಾಚಿಕೆಯಾಗುತಿತ್ತು. ಈಗ ಎಷ್ಟೋ ವರ್ಷಗಳ ಬಳಿಕ, ಮನಃಶಾಸ್ತ್ರಜ್ಞಳಾದ ನನಗೆ ಅಮ್ಮ ಬಹಳ ವಿಶೇಷ ಮಟ್ಟದ ಮಾರ್ಗದರ್ಶಿ ಅಥವಾ Counsellor ಆಗಿದ್ದರು ಎಂದು ಅನಿಸುತ್ತದೆ. ಅದು ಸತ್ಯವೇ ಆಗಿದೆ. ಬಾಲವನದ ಮನೆಗೆ ಬರುತ್ತಿದ್ದವರು, ತಂದೆ ಕಾರಂತರೊಡನೆ ವಿಚಾರ ವಿಮರ್ಶೆ ಮಾಡಲು ಬರುತ್ತಿದ್ದ ದೇಶೀಯ ವಿದೇಶೀಯ ಜನರು ಅಧಿಕ ಹೊತ್ತು ಅಮ್ಮನೊಡನೆ ಮಾತುಕತೆ ನಡೆಸುತ್ತಿದ್ದರು. ಅವರ ವಿಚಾರ, ಭಾಷಾಶೈಲಿ, ಮಾತಿನ ಸರಣಿಗೆ ಮಾರುಹೋಗದ ಜನರಿಲ್ಲ.

ವಾತ್ಸಲ್ಯ ಭರಿತ ಸಂಭಾಷಣೆಯಲ್ಲಿ ಅಮ್ಮನಿಗೆ ಅಪಾರ ಆನಂದವಿತ್ತು. ಮಾತುಕತೆಯಲ್ಲಿ ಮೈಮರೆಯುತ್ತಿದ್ದರೆನ್ನಬಹುದು. ಚಿಕ್ಕವರು, ದೊಡ್ಡವರು, ಬಡವರು, ಶ್ರೀಮಂತರು, ವಿದ್ಯಾವಂತರು, ನಿರಕ್ಷರರು, ಗಂಡಸರು, ಹೆಂಗಸರು

ಎಂತು ತಾರತಮ್ಯ ಅವರಲ್ಲಿರಲಿಲ್ಲ. ಎಲ್ಲರೊಡನೆ ಪರಿಸ್ಥಿತಿಗೆ ಅನುಸರಿಸಿ ಸನ್ಮಾನಿಸುವ ಸಾಮರ್ಥ್ಯ ಅವರಿಗಿತ್ತು. ಮನೆಗೆ ಬಂದವರು ಯಾರೇ ಇದ್ದರೂ ಅವರಿಗೆ ಪ್ರೀತಿಯ ಸ್ವಾಗತ, ಸತ್ಕಾರ ಕಾದಿತ್ತು. ಮನೆ ಕೆಲಸದಾಕೆ ಒಮ್ಮೆ 'ಯಾರೋ ಬಂದವರ ಬಟ್ಟೆ ತಾನು ಒಗೆಯಲಾರೆ' ಎಂದು ಸತ್ಯಾಗ್ರಹ ಹೂಡಿದಾಗ ಸದ್ದಿಲ್ಲದೆ ಆ ಬಟ್ಟೆಗಳನ್ನು ತಾನೇ ಒಗೆದಿದ್ದರು.

ಅಮ್ಮನಿಂದ ಪೆಟ್ಟುತಿಂದ ಒಂದು ಘಟನೆ ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿವೆ. ನನಗೆ ಆಗ ಆರೇಳು ವಯಸ್ಸಿರಬೇಕು. ನಮ್ಮ ಕೆಲಸದಾಕೆ ಮಂತ್ರ ಚಿಕಿತ್ಸೆಯ ವಿಷಯ ಹೇಳುತ್ತಿದ್ದಳು. ನಾನು ಅವಳನ್ನು ಗೇಲಿ ಮಾಡಿದೆ, ಅವಳು ಸಿಟ್ಟುಗೊಂಡು ಅಳುತ್ತ ಅಮ್ಮನೊಡನೆ ಹೇಳಿದಳು: ಅಮ್ಮ ಪಟಾರನೆ ಒಂದೇಟು ನನ್ನ ಕೆನ್ನೆಗೆ ಹೊಡೆದು "ನೀನು ಇನ್ನೆಂದಾದರೂ ಇಂಥ ಬಡಪಾಯಿಗಳನ್ನು ಗೇಲಿ ಮಾಡಿದರೆ ನೋಡು, ಇದಕ್ಕಿಂತ ಹೆಚ್ಚಿನ ಶಿಕ್ಷೆ ಸಿಗುತ್ತದೆ. ಜಾಗ್ರತೆ" ಎಂದರು ಸಿಟ್ಟಿನಿಂದ, ಮಾತಿಗೆ ಮರುಮಾತು ಕೊಟ್ಟು ಸಮನಾಗಿ ಜಗಳ ಮಾಡಲು ಸಾಧ್ಯವಿಲ್ಲದ ಅಸಹಾಯಕ ಬಡಪಾಯಿಗಳೊಡನೆ ನಮ್ಮ ಶಕ್ತಿ ತೋರಿಸಬಾರದು ಎಂಬ ಪಾಠ ಆ ದಿನ ಅಮ್ಮನಿಂದ ಕಲಿತೆ. ಈ ಪಾಠವನ್ನು ನಾನೆಂದೂ ಜೀವನದಲ್ಲಿ ಮರೆತಿಲ್ಲ. ಆ ಘಟನೆಯ ಮೊದಲೂ ಆ ಬಳಿಕವೂ ಅಮ್ಮ ಎಂದೂ ನನ್ನನ್ನು ಹೊಡೆದುದಿಲ್ಲ.

ಅಮ್ಮನ ಮಾತುಕತೆ ತನ್ನ ಸ್ನೇಹಿತರ ಜೊತೆ ಬೇರೆಯೇ ತರಹವಿತ್ತು. ಡಿ.ವಿ.ಜಿ. ಯವರೊಡನೆ ಅಮ್ಮನ ನಿಕಟ ಬಾಂಧವ್ಯ ಇದ್ದಿತ್ತು. ಪರಸ್ಪರ ಭೇಟಿಯಾದಾಗ ಮಾತುಕತೆ, ಗಹನ ವಿಷಯಗಳ ಬಗ್ಗೆ ಚರ್ಚೆ ನಡೆಯುತ್ತಿತ್ತು. ಇಲ್ಲದಿದ್ದರೆ ಪತ್ರ ವ್ಯವಹಾರ ಎಂದೂ ಇರುತ್ತಿತ್ತು, ಆಧ್ಯಾತ್ಮಿಕ ವಿಚಾರಗಳ ಸಂದೇಹಗಳನ್ನು ಪತ್ರಮುಖೇನ ತೋಡಿಕೊಂಡು ಉತ್ತರ ಪಡೆಯುತ್ತಿದ್ದರು, ಡಿ.ವಿ.ಜಿ.ಯವರು ಮಂಕುತಿಮ್ಮನ ಕಗ್ಗ ಬರೆದ ಕಾಲದಲ್ಲಿ ಹೆಚ್ಚಿನ ಪತ್ರವ್ಯವಹಾರ ನಡೆದಿತ್ತು. ಅಮ್ಮನ ಆಧ್ಯಾತ್ಮ ಪ್ರಶ್ನೆಗಳು, ವಿಚಾರಗಳು ನನಗೆ ಆಗ ಅರ್ಥವಾಗುತ್ತಿರಲಿಲ್ಲ. ಅವರ ವಿದ್ಯಾಭ್ಯಾಸ ಎಸ್.ಎಸ್.ಎಲ್.ಸಿ.ಯಲ್ಲಿ ಮುಕ್ತಾಯ ಗೊಂಡಿದ್ದರೂ ಅವರ ಬೌದ್ಧಿಕ ವಿಚಾರಗಳು ಬಹಳ ಬಹಳ ಮುಂದೆ ಹೋಗಿದ್ದುವು.

ಅಮ್ಮ ಯಾವಾಗಲೂ ಹೇಳುತ್ತಿದ್ದರು ನನ್ನೊಡನೆ, "ನಿನ್ನನ್ನು ಬಸುರಿ ಯಾಗಿರುವಾಗ ನಾನು ಸಿಗ್‌ಮಂಡ್ ಫ್ರಾಯಿಡ್‌ನ (Sigmund Freud) ಪುಸ್ತಕ ಬಹಳ ಓದಿದ್ದೆ. ಅದಕ್ಕೆ ನೀನು ಮನಃಶಾಸ್ತ್ರಜ್ಞಳಾಗಿದ್ದಿ" ಎಂದು. ಇದು ಒಂದು ರೀತಿಯಲ್ಲಿ ಹಾಸ್ಯಾತ್ಮಕ ಅನಿಸಬಹುದು. ಹತ್ತೊಂಬತ್ತು ವರ್ಷದ ಲೀಲಾ ಫ್ರಾಯಿಡ್‌ನ ಪುಸ್ತಕ ಓದಿ ಅರ್ಥ ಮಾಡಿಕೊಳ್ಳುತ್ತಿದ್ದರೆಂದರೆ ಆಶ್ಚರ್ಯವೆನಿಸುತ್ತದೆ.

ಈಗಿನ ಪದವಿ ತರಗತಿಯ ಮನಃಶಾಸ್ತ್ರ ವಿದ್ಯಾರ್ಥಿಗಳು ಕೂಡಾ ಇನ್ನೂ ಓದಿರಲಾರರು ಅನಿಸುತ್ತದೆ. ಜನಸಂಪರ್ಕದಿಂದ, ಅನುಭವದಿಂದ, ಓದಿನಿಂದ ಅವರ ಜ್ಞಾನ ಭಂಡಾರ ಬೆಳೆದಿತ್ತು. ಅವರ ಜ್ಞಾನದಾಹ ಎಂದೂ ಬತ್ತಿದ್ದು ಇಲ್ಲ.

ಯಾವುದೇ ವಿಷಯದಲ್ಲಿ, ಯಾರೇ ಇರಲಿ, ಏನೇ ಘಟನೆ ಇರಲಿ, ನನ್ನ ಅಮ್ಮನ ಅಭಿಪ್ರಾಯ ಕೇಳಿದರೆ ಅದಕ್ಕೆ ನಿಷ್ಪಕ್ಷಪಾತ ತೀರ್ಮಾನ ಕೊಡುವುದು ಅವರ ಮುಖ್ಯ ಗುಣ. ಅದಕ್ಕೆ ಅವರಿಗೆ ನಾನು fair witne ಎಂದು ಹೆಸರಿಟ್ಟಿದ್ದೆ. ಹೊಗಳಲಿ ತೆಗಳಲಿ, ಟೀಕಿಸಲಿ, ತನ್ನವರಿರಲಿ, ಪರರೇ ಇರಲಿ, ದೊಡ್ಡವರಿರಲಿ, ಚಿಕ್ಕವರಿರಲಿ – ಅಮ್ಮನ ತೀರ್ಮಾನ ಎಂದೂ ಪಕ್ಷಪಾತ ರಹಿತವಾದುದು. ಕಂಡದ್ದನ್ನು ಕಂಡಂತೆ ಹೇಳುವುದು ಅವರ ಸ್ವಭಾವ. ಸತ್ಯವನ್ನು ಎತ್ತಿ ಹೇಳಲು ಅವರಿಗೆ ಯಾರ ಭಯವೂ ಇದ್ದಿಲ್ಲ. ಯಾವ ದಾಕ್ಷಿಣ್ಯವೂ ಇದ್ದಿಲ್ಲ. ಅಮ್ಮನಷ್ಟು ವಿಶಾಲ ಮುಗ್ಧ ಕಪಟರಹಿತ ಮನಸ್ಸಿನ ವ್ಯಕ್ತಿಗಳನ್ನು ನಾನೆಲ್ಲೂ ಕಂಡಿಲ್ಲ. ಉದಾರತೆಯೋ ಆ ಬಗ್ಗೆ ಅವರ ಪರಿಚಿತರಿಗೆ ತಿಳಿದಿದ್ದೀತು. ಉಟ್ಟ ಬಟ್ಟೆ, ಕೈಯಲ್ಲಿನ ತುತ್ತು, ಹಾಕಿದ ಆಭರಣ ಏನೇ ಇರಲಿ ಕೇಳಿದವರಿಗೆ ಅಗತ್ಯವಿದ್ದಿದ್ದರೆ ತೆಗೆದು ಕೊಡುತ್ತಿದ್ದರು. ದುರಾಸೆ ಎಂಬುದು ಅವರ ಬಳಿ ಸುಳಿದಿರಲಿಲ್ಲ. ತನ್ನಲ್ಲಿ ಉಳ್ಳ ಎಲ್ಲವನ್ನೂ ಪೂರ್ತಿ ಮನಸಾರೆ ಎಲ್ಲರೊಡನೆ ಹಂಚಿಕೊಳ್ಳುತ್ತಿದ್ದರು. " 'ತಾ' ಎಂಬುದು ಮನುಷ್ಯನಲ್ಲಿ ಜನ್ಮಕ್ಕೂ ಬರಬಾರದು. 'ಕೊ' (ಕೊಡು) ಎಂಬುದು ತಲೆತಲಾಂತರದಿಂದ ಬರಬೇಕು" ಎಂದು ನಮ್ಮೊಡನೆ ಪದೇ ಪದೇ ಹೇಳುತ್ತಿದ್ದುದು ನೆನಪಾಗುತ್ತದೆ.

ನಾನು ಕಂಡಂತೆ ಅಮ್ಮ ಒಬ್ಬರು ವಿಶೇಷ ಮಹಿಳೆ, ಬಹಳ ಉದಾರಿ, ಭಕ್ತಿ, ಜ್ಞಾನಿ, ವಾತ್ಸಲ್ಯದ ವಿಶೇಷ ಪ್ರತೀಕ. ಆದರೆ ಅವರ ಜೀವದುದ್ದಕ್ಕೂ ಕಠಿಣ ದಾರಿ. ಆದಿಯಿಂದ ಅಂತ್ಯದ ತನಕವೂ ಕಷ್ಟಕಾರ್ಪಣ್ಯ. ಸುಖವಿರಲಿಲ್ಲ. ಮೇಧಾವಿ ಪ್ರತಿಭಾಶಾಲಿ, ಗಂಡ ಕಾರಂತರಿಗೆ ಅನುಕೂಲವಾಗಿ ಬಾಳುವುದಕ್ಕೆ ತನ್ನ ಜೀವನದ ದಾರಿಯನ್ನು ಬದಲಿಸಿಕೊಂಡರು. ಎಲ್ಲೆಲ್ಲೂ ಒಯ್ದರು. ತನ್ನ ಆಸೆ ಅಭಿರುಚಿಗಳನ್ನು ಕಡೆಗಣಿಸಿದರು ಮೊದಲಿಗೆ, ಬಳಿಕ ಮಾನಸಿಕ ಹಾಗೂ ದೈಹಿಕ ಕಾಯಿಲೆಗಳು ಪೀಡಿಸತೊಡಗಿದುವು. ಅಮ್ಮ ತನ್ನ ತಂದೆಯ ಆಸೆಯಂತೆ ವಕಾಲತು ಓದಿ ವಕೀಲರಾಗುತ್ತಿದ್ದರೆ ಜೀವನದಲ್ಲಿ ಹೆಸರುವಾಸಿಯಾಗುತ್ತಿದ್ದರು ಎಂಬುದರಲ್ಲಿ ಸಂದೇಹವಿಲ್ಲ. ಅತಿ ವಿಶೇಷ ವ್ಯಕ್ತಿ. ಆದರೆ ಜೀವನದಲ್ಲಿ ಅನುಭವಿಸಬೇಕಾದ ಸುಖ ಅನುಭವಿಸಲಾರದೆ ಹೋದರು ಎಂದು ವಿಷಾದಿಸಬೇಕಾಗಿದೆ. ಜೀವಂತರಿದ್ದಾಗ ನಾವು ಅವರನ್ನು ಸರಿಯಾಗಿ ಅಥ–ರ್ಮಾಡಿಕೊಳ್ಳಲಾರದೆ ಹೋದವೆಂದು ಬೇಸರವಾಗುತ್ತದೆ. ಈ ಸಂದರ್ಭದಲ್ಲಿ

ಅಮ್ಮನ ಬಗ್ಗೆ ನಾಲ್ಕು ಮಾತುಗಳನ್ನು ಬರೆಯುವುದರಿಂದ ಮನಸ್ಸಿಗೆ ಸಮಾಧಾನ, ಸಂತೋಷವಾದೀತು ಎಂದೆನಿಸುತ್ತದೆ. ಅವರಿಗೆ ಸಲ್ಲಿಸಬೇಕಾದ ಪ್ರೀತಿ, ಆದರ, ಗೌರವ ಬದುಕಿರುವ ಕಾಲದಲ್ಲಿ ಸಲ್ಲಿಸಲಾರದೆ ಹೋದೆವು. ಈಗಲಾದರು ಅದು ಸಲ್ಲಲಿ.

ಬಾಲ್ಯದಲ್ಲಿ, ಅಂದರೆ ಐದನೆಯ ತರಗತಿವರೆಗೆ, ನಮ್ಮಲ್ಲಿ ಯಾರನ್ನೂ ಶಾಲೆಗೆ ಕಳುಹಿಸಲಿಲ್ಲ. ಅಮ್ಮ ನನಗೆ ಪಾಠ ಹೇಳಿಕೊಡುತ್ತಿದ್ದರು. ವಿಜ್ಞಾನದ ಚಿತ್ರಮಯ ಎನ್‌ಸೈಕ್ಲೋಪೀಡಿಯಗಳನ್ನು ತೆರೆದು ನೋಡುವ, ಓದುವ ಕುತೂಹಲ ಬರುವಂತೆ ಅಮ್ಮ ಮಾಡುತ್ತಿದ್ದರು. ಕೇಳಿದ ಪ್ರಶ್ನೆಗಳಿಗೆ ಉತ್ತರ ನಮ್ಮ ತಂದೆ ಮಾತ್ರವಲ್ಲ, ಅಮ್ಮನೂ ಕೊಡುತ್ತಿದ್ದರು. ವಿಚಾರ ಸ್ವಾತಂತ್ರ್ಯ ನನಗೆ ಬಹಳಷ್ಟು ಇದ್ದಿತ್ತು. ಪಿ.ಯು.ಸಿ. ಪರೀಕ್ಷೆ ಸಮೀಪಿಸಿದಾಗ ನಾನು ನೀರು ಕೋಟಲೆಯಿಂದ ಪೀಡಿತಳಾದೆ. ಅಮ್ಮ ನನ್ನ ಎಲ್ಲ ಪಾಠಗಳನ್ನು ಓದಿ, ಓದಿ ಹೇಳಿ ನನ್ನನ್ನು ಪರೀಕ್ಷೆಗೆ ತಯಾರು ಮಾಡಿ ಕಳುಹಿಸಿದ್ದರು.

ಅಮ್ಮನಿಗೆ ಸಂಗೀತ, ನಾಟಕ, ನೃತ್ಯ ಎಲ್ಲವೂ ಪ್ರಿಯವಾದ ವಿಷಯಗಳೇ. ಅವರು ಹೇಳಿದ ಒಂದು ಘಟನೆ ನೆನಪಾಗುತ್ತದೆ. ಅವರು 16–17 ವಯಸ್ಸಿನವ–ರಿದ್ದಾಗ ಒಮ್ಮೆ ನಮ್ಮ ತಂದೆಯವರ ನಾಟ್ಯಮಂಡಲಿಯೊಡನೆ ಕೇರಳಕ್ಕೆ ಹೋಗಿದ್ದರಂತೆ. ಆಗ ಯಾವುದೋ ನಾಟ್ಯದಲ್ಲಿ ನಾಯಕ 10–12 ಅಡಿ ಜಿಗಿದು ಅಮ್ಮ ಕುಳಿತಿದ್ದ ದಿಕ್ಕಿಗೆ ಬಂದಾಗ ಅಮ್ಮ ಮೈಮರೆತು ಅವನಂತೆ ಜಿಗಿದು ಅವನ ವಿರುದ್ಧ ದಿಕ್ಕಿಗೆ ಹೋದರಂತೆ. ವಾಸ್ತವವನ್ನು ಮರೆಯುವ ಭಾವತಲ್ಲೀನತೆ ಅವರದ್ದು. ಪುತ್ತೂರು ಶಾಲೆಯಲ್ಲಿ ನಾನು ವಿದ್ಯಾರ್ಥಿಯಾಗಿದ್ದಾಗ ಒಮ್ಮೆ 'ಲವ–ಕುಶ' ಗೀತ ನಾಟಕದಲ್ಲಿ ಸೀತೆಯ ಪಾತ್ರವಹಿಸಿದ್ದೆ. ನಾಟಕದ ದಿನ ನೆಗಡಿಯಾಗಿ ನನ್ನ ಸ್ವರ ಪೂರ್ತಿಯಾಗಿ ಬಿದ್ದು ಹೋಯಿತು. ನಾಟಕವನ್ನೇ ರದ್ದು ಮಾಡಬೇಕಾದ ಸಂದರ್ಭ ಅದು. ಅಮ್ಮ "ಏನೂ ಚಿಂತೆ ಬೇಡ, ನಾನು ನಿನಗೆ ಹಿನ್ನಲೆ ದ್ವನಿ ಕೊಡುತ್ತೇನೆ. ನೀನು ಅಭಿನಯಿಸು" ಎಂದರು. ಅದರಂತೆ ಅವರು ಹಿನ್ನಲೆ ಗಾಯಕಿಯಾದರು. ನಾನು ಅಭಿನಯಿಸಿ ಮೊದಲ ಬಹುಮಾನ ಪಡೆದೆ. ತಂದೆಯವರ ಎಲ್ಲ ಗೀತನಾಟಕಗಳನ್ನು ಅವರು ಬಾಯಿಪಾಠ ಮಾಡಿಕೊಂಡಿದ್ದರು. ಸಂದರ್ಭಕ್ಕೆ ಸರಿಯಾಗಿ ಪ್ರವರ್ತಿಸುವ ಧೈರ್ಯ, ಸಾಮರ್ಥ್ಯ ಅವರಲ್ಲಿತ್ತು. ಯೋಗ್ಯತೆ ಇದ್ದರೂ ಸಂದರ್ಭ ಸಿಕ್ಕಾಗ ಉಪಯೋಗಿಸಲು ಸಂಕೋಚಪಟ್ಟು, ಬಳಿಕ ಪರಿತಪಿಸುವವರು ಹೆಚ್ಚಿನವರು. ಆದರೆ ಅಮ್ಮ ಸಂದರ್ಭಕ್ಕೆ ತಕ್ಕ ನಿರ್ಣಯ ತಕ್ಷಣ ತೆಗೆದುಕೊಳ್ಳುವ ಸ್ವಭಾವದವರು. ಮಾತಿನಲ್ಲಿ, ಬರವಣಿಗೆಯಲ್ಲಿ, ಅಭಿನಯದಲ್ಲಿ ಬಹಳ ಚತುರೆ,

ಒಮ್ಮೆ ಮಂಗಳೂರಿಗೆ ಹೋಗಿ Audrey Hepburns "Roman Holiday" ಎಂಬ ಸಿನೆಮಾ ನೋಡಿ ಬಂದರು. ಬಂದ ಕೂಡಲೇ ನನ್ನನ್ನು ಕರೆದು ಮನೆ ಜಗುಲಿಯಲ್ಲಿ ಕುಳ್ಳಿರಿಸಿಕೊಂಡು ಅದರ ಕತೆಯನ್ನು ಹೇಳಿದರು. ಚಿಕ್ಕ ವಯಸ್ಸಿನ ರಾಜಕುಮಾರಿ ಒಂದು ಸಭೆಯಲ್ಲಿ ಅವಳ ಖುಃಜಃ ಕಾಲು ಜಾರಿ ಹೋದಾಗ ತನ್ನ ಉದ್ದದ ಉಡುಪಿನ ಕೆಳಗೆ ಹೇಗೆ ಮತ್ತೆ ಹಾಕಿಕೊಂಡಳು, ಅವಳು ಕಲ್ಲಿನ ಮೊನೆಸ್ಟರ್ ಬಾಯಿ ಒಳಗೆ ಕೈ ಹಾಕಿ ಹೇಗೆ ಹೆದರಿದಳು ಎಂಬುದೆಲ್ಲವನ್ನು ನಟಿಸಿ ತೋರಿಸಿದ್ದರು. ಎಷ್ಟೋ ವರ್ಷಗಳ ಬಳಿಕ ನಾನು ಅದೇ ಸಿನೆಮಾನೋಡಿದಾಗ ಅಮ್ಮ ಅದೆಷ್ಟು ಅಮೋಘವಾಗಿ ನಟಿಸಿದ್ದರು ಎಂದು ಅಚ್ಚರಿಗೊಂಡೆ.

ತಂದೆಯವರಂತೆ ಅಮ್ಮನೂ ಸಂಚಾರ ಪ್ರಿಯರೇ, ಆದರೆ ತಂದೆಯವರು ಮೊದಲು ಜಗತ್ತಿನ ಪರ್ಯಟನ ಮಾಡುವಾಗ ಆರೋಗ್ಯ ಚೆನ್ನಾಗಿದ್ದರೂ ಮಕ್ಕಳು, ಮನೆ, ಗಂಡನ ಆರ್ಥಿಕ ಮುಗ್ಗಟ್ಟುಗಳಿಂದ ಹೋಗದೆ ಉಳಿದರು. ಕೆಲ ವರ್ಷಗಳಲ್ಲಿ ಆರ್ಥಿಕ ಸ್ಥಿತಿ ಸುಧಾರಿಸಿದಾಗ ಅನಾರೋಗ್ಯದ ಕಾರಣ ಹೋಗಲಾರದಾದರು. ಒಂದು ಘಟನೆ ನೆನಪಾಗುತ್ತದೆ. ಅಮ್ಮನಿಗೆ ತನ್ನ ಗೆಳತಿಯರೊಡನೆ ಕಾಶ್ಮೀರಕ್ಕೆ ಹೋಗಿ ಬರುವ ದೊಡ್ಡ ಆಸೆ ಇದ್ದಿತ್ತು. ಯಾವುದೋ ಕಾರಣಗಳಿಂದ ಅದು ಸಾಧ್ಯವಾಗಲಿಲ್ಲ. ಆದರೆ ಕಾಶ್ಮೀರದ ಬಗ್ಗೆ ಪ್ರವಾಸ ಕಥನಗಳನ್ನು ಓದಿ, ಚಿತ್ರಗಳನ್ನು ನೋಡಿ ವಿಷಯ ಸಂಗ್ರಹಿಸಿ "ನಮ್ಮ ಕಾಶ್ಮೀರ ಪಯಣ" ಎಂಬ ಲೇಖನ ಬರೆದು ತನ್ನ ಗೆಳತಿಯರಿಗೆ ಓದಿ ಹೇಳಿದ್ದನ್ನು ಕೇಳಿದ್ದೇನೆ. ನಾನೂ ಓದಿದ್ದೇನೆ. ಕಣ್ಣಾರೆ ಕಂಡು ಬರೆದಂತಿದ್ದ ಆ ಲೇಖನ ನನಗೆ ಈಗಲೂ ಆಶ್ಚರ್ಯ ವೆನಿಸುತ್ತದೆ; ವಿಶೇಷವೆನಿಸುತ್ತದೆ. ಯಾವುದೇ ಆಸೆ ಈಡೇರದಾಗ ಆಕೆ ಅದರ ಕಲ್ಪನೆಯಲ್ಲೇ ಸುಖ ಕಾಣುತ್ತಿದ್ದರು. ನನ್ನ ಅಮ್ಮ, ಪ್ರಸಿದ್ಧ ಶಿವರಾಮ ಕಾರಂತರ ಪತ್ನಿ, ಜೀವನದ ಎಲ್ಲ ಸುಖಗಳನ್ನೂ ಕನಸಲ್ಲೇ ಕಾಣಬೇಕಾಯಿತಲ್ಲ ಎಂದೆಣಿಸುವಾಗ ಎಲ್ಲಿಲ್ಲದ ಸಂಕಟವಾಗುತ್ತಿದೆ.

ಅಮ್ಮನಿಗೆ ಹೆಚ್ಚಿನಂಶ ಅವರ ಮಾನಸಿಕ ಖೇದ (depression episode) ನನಗೆ ಐದು ವರ್ಷ ಪ್ರಾಯ, ಅವರಿಗೆ 25 ವರ್ಷ ಇರುವಾಗ ಬಂದಿರಬೇಕು. ಎಷ್ಟೋ ವರ್ಷದ ಬಳಿಕ ಒಂದು ದಿನ ನನ್ನೊಡನೆ ಹೇಳಿದರು, "ಮಾಲು, ನಾನು ಬದುಕಿರುವುದು ನಿನ್ನಿಂದಾಗಿ" ಎಂದು. "ಯಾಕೆ ಹಾಗೆ ಹೇಳುತ್ತಿ" ಎಂದು ಕೇಳಿದೆ. ಅದಕ್ಕೆ "ನಿನಗೆ 5 ವರ್ಷ ಇರುವಾಗ, ನನಗೆ ಜೀವನದಲ್ಲಿ ಬಹಳ ನಿರಾಸೆ, ಜಿಗುಪ್ಸೆ ಬಂದು ದುಃಖವಾಯಿತು. ಆಗ ನಿನ್ನನ್ನು ಕರೆದುಕೊಂಡು, ಭಾವಿಯ ಬಳಿ ಹೋದೆ. ನಿನ್ನೊಡನೆ "ಮಾಲು, ನಾವಿಬ್ಬರೂ ಬಾವಿಗೆ ಬಿದ್ದು ಸಾಯೋಣವೇ" ಎಂದು ಕೇಳಿದೆ. ಆಗ ನೀನು "ಬೇಡಮ್ಮಾ,

ನನಗೆ ಜೀವಂತವಾಗಿರಬೇಕೆಂದು ಆಸೆ" ಎಂದು ಹೇಳಿದೆ. ಹಾಗಾಗಿ ನಾನು ವಾಪಸು ಬಂದೆ, ಎಂದಿದ್ದರು. ಅದರ ಎರಡನೆಯ episode ನಮ್ಮ ತಂದೆ ಪಾಶ್ಚಾತ್ಯ ದೇಶಕ್ಕೆ (ಅಪೂರ್ವ ಪಶ್ಚಿಮ ಬರೆಯುವ ಮೊದಲು) ಹೋದಾಗ ಎಂದೆನಿಸುತ್ತದೆ. ಆಗ ನನಗೆ 13 ವರ್ಷ ಪ್ರಾಯ, ತಂದೆಯವರಿಲ್ಲದ ಆ ದಿನಗಳಲ್ಲಿ ಒಳ್ಳೆಯ ಸೀರೆ ರವಕೆ ಧರಿಸಿ, ಹೂ ಮುಡಿದು, ಕೈತುಂಬ ಗಾಜಿನ ಬಳೆಗಳನ್ನು ತೊಟ್ಟು ದೇವಸ್ಥಾನಕ್ಕೆ ಹೋಗುತ್ತಿದ್ದರು. ಮನೆಯಲ್ಲಿ ಹಾಡುತ್ತ ತುಂಬ ಸಂತೋಷದಿಂದ ದಿನ ಕಳೆಯುತ್ತಿದ್ದರು. ಅಂಥ ಸಂದರ್ಭದಲ್ಲಿ ಒಂದು ದಿನ ನನ್ನೊಡನೆ, "ನನ್ನ ಕಾಲು ಮುಟ್ಟಿ ನಮಸ್ಕಾರ ಮಾಡು, ಆಶೀರ್ವಾದ ಕೇಳು, ನಾನು ದೇವಿ" ಅಂದರು. ಅದು Mania ಇದ್ದಿರಬೇಕು. ಆ ಕಾಲದಲ್ಲಿ ಮಾನಸಿಕ ರೋಗಗಳ ಬಗ್ಗೆ ಯಾರಿಗೂ ತಿಳಿದಿರಲಿಲ್ಲ. ಕೆಲವು ವರ್ಷಗಳ ನಂತರ ಅಂದರೆ ನಾನು ಮೈಸೂರಿನಲ್ಲಿ ಕಾಲೇಜು ಓದುತ್ತಿದ್ದಾಗ ತನ್ನ ಅಜ್ಜಿಯನ್ನು ರಾತ್ರಿ ಹಗಲೆನ್ನದೆ ನೋಡಿಕೊಂಡು ಅವರನ್ನು ಕಳಕೊಂಡಾಗ ಇನ್ನೊಂದು episode ಬಂದಿತು. ಆಗ ನಮಗೆಲ್ಲರಿಗೂ ಅದು ಮಾನಸಿಕ ವ್ಯಾಧಿ ಎಂದು ತಿಳಿಯಿತು. ಆ ಮೇಲೆ ನಾನೂ ಮನಃಶಾಸ್ತ್ರದಲ್ಲಿ ವಿಶೇಷ ಅಧ್ಯಯನ ಮಾಡಿದೆ. ತಂದೆಯವರು ಅಮ್ಮನನ್ನು ಆಗಾಗ ಬೆಂಗಳೂರಿನ ಹಿರಿಯ ಮನಃಶಾಸ್ತ್ರಜ್ಞ ಡಾ. ಯಸ್,ಯಸ್. ಜಯರಾಮ ಅವರ ಬಳಿ ಚಿಕಿತ್ಸೆಗೆ ಕರೆದುಕೊಂಡು ಹೋಗುತ್ತಿದ್ದರು. ಆರೋಗ್ಯ ಸುಧಾರಿಸಿದ ವೇಳೆ ಅಮ್ಮ ಡಾ. ಜಯರಾಮರಿಗೆ ಪ್ರೀತಿಯ ಕಾಣಿಕೆಯಾಗಿ ಸ್ವೆಟರ್ ಹೆಣೆದದ್ದನ್ನು ಕಂಡಿದ್ದೆ. ಆದರೆ ಬಳಿಕ ಅವರ ಮಾನಸಿಕ ಖೇದ ಹಾಗೂ ಉದ್ರಿಕ್ತತೆಯ ಸ್ಥಿತಿಗಳು ಸಮುದ್ರದ ಅಲೆಗಳ ತರಹ ಬರುತ್ತಿದ್ದುವು–ಹೋಗುತ್ತಿದ್ದುವು. ಅಂಥ ಸ್ಥಿತಿಯಲ್ಲಿ ಅಮ್ಮನಿಗೆ ನಾನು ತಾಯಿಯಾದೆ; ಆಮ್ಮ ಮಗಳಂತಾದರು. Lithium ಎಂಬ ಔಷಧ ಆರಂಭಿಸಿದ ಮೇಲೆ ಕೆಲಸಮಯ ಯಾವ ತೊಂದರೆಯೂ ಇಲ್ಲದೆ ಇರುತ್ತಿದ್ದರು. ಇದರೆಡೆಯಲ್ಲಿ ರಕ್ತದ ಒತ್ತಡ ಹಾಗೂ ಸಿಹಿಮೂತ್ರ ವ್ಯಾಧಿಗಳು ಬಾಧಿಸತೊಡಗಿದ್ದುವು. ಅಮ್ಮನ ಆರೋಗ್ಯ ಕೆಡುತ್ತಲೇ ಹೋಯಿತು.

ಬಾಲವನದ ಮನೆಯಲ್ಲಿ ಇದ್ದಕ್ಕಿದ್ದಂತೆ 40 ಜನ ಬಂದರೂ ಅಡುಗೆ ಮಾಡಿ ಬಂದವರಿಗೆ ಔತಣದ ವ್ಯವಸ್ಥೆ ಮಾಡಿದ್ದ ನನ್ನ ಅಮ್ಮನಿಗೆ ಕೈಕಾಲಿಗೊಂದು ಎಂಬಂತೆ ನೌಕರರು ಬೇಕಾಯಿತು. ಒಂದು ಮಾತು ನಿಜ. ಹುಚ್ಚು ಮನಸ್ಸಿನ ಹತ್ತು ಮುಖಗಳನ್ನು ಬರೆದ ನಮ್ಮ ತಂದೆಯವರಿಗಿಂತ ಹೆಚ್ಚು ಪರಿಪಕ್ವವಾದ ಮನಸ್ಸು ಅಮ್ಮನದ್ದಾಗಿತ್ತು. ವಿಚಾರದಲ್ಲಿ ಸಮತೋಲನವಿದ್ದಿತ್ತು. ನಾವು ಮಕ್ಕಳು ಅಪ್ಪ ಅಮ್ಮನ ಮೌಲ್ಯಮಾಪನ ಮಾಡಿದ್ದುಂಟು. ಅಮ್ಮನ ಮೌಲ್ಯ ಅಧಿಕವೆಂಬುದನ್ನು ಕಂಡುಕೊಂಡದ್ದುಂಟು. ಅವರು ಪರಿಪೂರ್ಣ ವ್ಯಕ್ತಿ.

ಹೆಂಗಸಾಗಿ ಹುಟ್ಟಿದ್ದು, ವ್ಯಾಧಿಗ್ರಸ್ಥರಾದುದು ಅವರ ದುರ್ದೈವ. ಅವರು ಯಾವ ಮಟ್ಟದಲ್ಲೂ ಯಾವುದರಲ್ಲೂ ಕಡಿಮೆಯಿರಲಿಲ್ಲ. ಹರಿನಾರಾಯಣ ಆಪ್ಟೆಯವರ ಮರಾಠಿ ಪುಸ್ತಕದ ತರ್ಜುಮೆ "ಯಾರು ಲಕ್ಷಿಸುವವರು" ಇದಕ್ಕೆ ದೃಷ್ಟಾಂತ, ಯಾರೊಡನೆ ಯಾವ ಸಂದರ್ಭದಲ್ಲಿ ಹೇಗೆ ಏನು ಮಾತನಾಡಬೇಕು, ಹೇಗೆ ವ್ಯವಹರಿಸಬೇಕು ಎಂಬ ಜ್ಞಾನ ತಂದೆಯವರಿಗಿಂತ ಅಮ್ಮನಿಗೆ ಅಧಿಕವಿತ್ತು ಎನ್ನಬಲ್ಲೆ. ಅಮ್ಮ ತನ್ನ ಮಕ್ಕಳನ್ನು ಅರ್ಥ ಮಾಡಿಕೊಂಡಿದ್ದರು. ಮಕ್ಕಳ ಬೇಕುಬೇಡಗಳನ್ನು ಅರಿತಿದ್ದರು. ನಮ್ಮ ಆಸೆ ಆಕಾಂಕ್ಷೆಗಳನ್ನು, ಬಲ ದುರ್ಬಲತೆಗಳನ್ನು ತಿಳಿದುಕೊಂಡು ನಮ್ಮ ಬಗ್ಗೆ ತಂದೆಯವರಿಗೆ ಸಲಹೆ ಸೂಚನೆ ಕೊಡುತ್ತಿದ್ದರು. ಸ್ನೇಹಿತರು, ಶುಭಾಕಾಂಕ್ಷಿಗಳು ನಮ್ಮ ಪರಿವಾರದ ಬೆಳವಣಿಗೆಗೆ ಮಾಡಿದ ಸಹಾಯದ ನೆನಪನ್ನು ತಂದೆಯವರಿಗೆ ಪದೇ ಪದೇ ಮಾಡಿಸುತ್ತಿದ್ದರು. ಅಮ್ಮನ ಸ್ನೇಹ ಪೂರ್ಣ ಸ್ವಭಾವದಿಂದ ತಂದೆಯವರ ಮಿತ್ರ ಸಂಪತ್ತು ಬೆಳೆದಿತ್ತು, ವೃದ್ಧಿಸಿತ್ತು. ಅಮ್ಮನ ಶಕ್ತಿ ಕುಂದಿದಂತೆಯೇ ಅದು ಕ್ಷಯಿಸತೊಡಗಿತು. ತಂದೆಯವರ ಕೋಪಾಗ್ನಿಗೆ ಸಿಂಚನೆಯ ಕಾರ್ಯ ಅಮ್ಮ ಸದಾ ಸರ್ವದಾ ಮಾಡುತ್ತಿದ್ದುದರಿಂದ ಅದೆಷ್ಟೋ ಭಿನ್ನಾಭಿಪ್ರಾಯಗಳು ದೂರವಾಗಿ ಪರಸ್ಪರ ಸ್ನೇಹ ಬಾಂಧವ್ಯ ಮುಂದುವರಿದುದುಂಟು. ಅಮ್ಮನ ವ್ಯಕ್ತಿತ್ವದ ನಿಜ ಸ್ವರೂಪದ ಅನುಭವ ಹಿರಿಯಳಾದ ನನಗೆ ಅದನ್ನು ತಮ್ಮ ಉಲ್ಲಾಸ ಮತ್ತು ತಂಗಿ ಕ್ಷಮಾಳಿಗೆ ಆಗುವ ಸಾಧ್ಯತೆ ಇಲ್ಲದಾಯಿತು. ಅವರಿಬ್ಬರು ನನಗಿಂತ ಹತ್ತು ವರ್ಷಕ್ಕೆ ಕಿರಿಯರು, ಅರ್ಥ ಮಾಡಿಕೊಳ್ಳುವ ವಯಸ್ಸಿಗೆ ಬರುವಾಗ, ಕಾಯಿಲೆಗಳಿಂದ ಅಮ್ಮನ ಅಡಿಪಾಯವೇ ಕುಸಿಯಲು ಆರಂಭಿಸಿತ್ತು. ಅಕಾಲದಲ್ಲಿ ಕಳಕೊಂಡ ಹಿರಿಯ ಮಗನ ನೆನಪು ಅವರನ್ನು ಬಾಧಿಸುತ್ತಿದ್ದಿತು. ನಮ್ಮ ಚಿಕ್ಕಪ್ಪನ ಮಗ ಸೂರ್ಯನಾರಾಯಣನನ್ನು ತನ್ನದೇ ಮಗನಂತೆ ಭಾವಿಸತೊಡಗಿದ್ದರು. ಆತನ ಹೆಂಡತಿ ಮಕ್ಕಳನ್ನು ತನ್ನ ಸೊಸೆ ಮೊಮ್ಮಕ್ಕಳು ಎನ್ನುತ್ತಿದ್ದರು. ನಾವು ಮಕ್ಕಳೆಲ್ಲರೂ ಮನೆಯಿಂದ ದೂರವಾದಾಗ ಸೂರ್ಯಣ್ಣ ಪರಿವಾರದ ಸಾಮೀಪ್ಯವಿದೆ ಎಂಬಾಸೆಯಿಂದ ತಂದೆ ತಾಯಿಯರು ಸಾಲಿಗ್ರಾಮ ಸೇರಿದ್ದರು. ದಿನದ ಯಾವ ಹೊತ್ತಲ್ಲಿ ಸೂರ್ಯಣ್ಣ ಬಂದು ಅಮ್ಮನನ್ನು ಕಾಣುತ್ತಿದ್ದನೋ ಆಗಲೇ ಅಮ್ಮನ ಪಾಲಿಗೆ ಸೂರ್ಯೋದಯ. ಅಷ್ಟರ ತನಕ ಕತ್ತಲು ಕವಿದಂತೆಯೇ ಅವರ ಪಾಲಿಗೆ, ಕಾರು ಅಪಘಾತದಲ್ಲಿ ಸೂರ್ಯಣ್ಣ ಸಾಯುವ ಒಂದು ವರ್ಷಕ್ಕೆ ಹಿಂದೆಯೇ ಅಮ್ಮ ಮೃತರಾದುದು ಅವರ ಪುಣ್ಯ. ಇಲ್ಲವೆ ಆ ಮಗನ ಸಾವನ್ನು ಅವರು ಸಹಿಸುವಂತಿರಲಿಲ್ಲ ಎನಿಸುತ್ತದೆ. ತಂದೆಯವರ ತಂಗಿಯರಿಬ್ಬರಿಗೂ ಅಮ್ಮನೊಡನೆ ಅಪಾರ ಪ್ರೀತಿ ವಿಶ್ವಾಸ, ಕಾರಂತಕುಟುಂಬದ ಎಲ್ಲರೊಡನೆ ಸಂಪರ್ಕವಿಟ್ಟುಕೊಂಡಿದ್ದರು ಅಮ್ಮ.

ಅಮ್ಮನಿಗೆ ಒಬ್ಬರು ಅಕ್ಕ, ಮೂವರು ತಂಗಿಯರು. ಅಕ್ಕ ಸಾವಿತ್ರಿ ಪರಿವಾರ ಸಮೇತ ಅಸ್ಸಾಂನಲ್ಲಿದ್ದಾರೆ. ತಂಗಿ ಅಹಲ್ಯ ಮತ್ತು ಸರೋಜಿನಿ ತೀರಿಕೊಂಡಿದ್ದಾರೆ. ತಂಗಿ ರತ್ನಾ ಮಂಗಳೂರಲ್ಲಿದ್ದಾರೆ. ಮೂವರು ತಂಗಿಯರ ಮದುವೆಯಲ್ಲಿ ಅಮ್ಮನ ಪಾತ್ರವಿದ್ದಿತ್ತು. ನಾಲ್ಕು ಹುಡುಗಿಯರಿಗೆ ಇವರು ಅಣ್ಣನಂತಿದ್ದರು. ನಾವು ಚಿಕ್ಕಂದಿನಲ್ಲಿ ಐದು ಜನ ಅಕ್ಕ ತಂಗಿಯರನ್ನು ಪಂಚಪಾಂಡವರೆನ್ನುತ್ತಿದ್ದೇವು. ಅಮ್ಮ ಎಲ್ಲರಿಗಿಂತ ದಪ್ಪವಾಗಿದ್ದುದರಿಂದ ಭೀಮ ಎನ್ನುತ್ತಿದ್ದೆವು. ಹೆಣ್ಣು ಮಕ್ಕಳಷ್ಟೇ ಪ್ರೀತಿ ಅಳಿಯಂದಿರ ಮೇಲೂ ಅಮ್ಮನಿಗಿದ್ದಿತ್ತು. ಅಳಿಯಂದಿರು ಅವರಿಗೆ ಗಂಡು ಮಕ್ಕಳೇ ಸರಿ. ಅಳಿಯಂದಿರಿಬ್ಬರೂ ಹೆಚ್ಚಿನ ಮಾತುಕತೆ ಮಾವನೊಡನೆ ಅಲ್ಲ, ಅತ್ತೆಯೊಡನೆ ನಡೆಸುತ್ತಿದ್ದರು. ನನ್ನ ಗಂಡ ರವೀಂದ್ರ ಕಪೂರ್ ಅಮ್ಮನನ್ನು the best human being ಎನ್ನುತ್ತಿದ್ದಾರೆ. ಮೊಮ್ಮಕ್ಕಳು ಮನೆಗೆ ಬಂದಿರುವುದು ಅಮ್ಮನ ಪಾಲಿಗೆ ಹಬ್ಬದ ದಿನಗಳೇ ಸರಿ. ಮಕ್ಕಳ ಬೇಡಿಕೆಗಳನ್ನು ಪೂರೈಸುವುದರಲ್ಲಿ, ಅವರ ಪ್ರಶ್ನೆಗಳಿಗೆ ಉತ್ತರಿಸುವುದರಲ್ಲಿ ಅಪಾರ ಆನಂದ ಅವರಿಗಿತ್ತು.

ನಮ್ಮ ಅಮ್ಮ ಜೀವಂತವಿದ್ದಷ್ಟು ಕಾಲ ನಾವು ಮಕ್ಕಳು ಜೀವನದಲ್ಲಿ ಸಂಪನ್ನರಾಗಿ ಜೀವನದಲ್ಲಿ ಸುಖ ಸಂತೋಷ ಸಾಕಷ್ಟು ಅನುಭವಿಸಿದ್ದೇವೆ. ಶಿವರಾಮ ಮತ್ತು ಲೀಲಾ ಕಾರಂತರ ಅಪಾರ ಪ್ರೀತಿ ವಾತ್ಸಲ್ಯಕ್ಕೆ ಪಾತ್ರರಾಗಿದ್ದೇವು. ಆದರೆ 1986 ಸಪ್ಟೆಂಬರ್ 22 ರಂದು ಅಮ್ಮ ತೀರಿಕೊಂಡಂದಿನಿಂದ ಬಾಂಧವ್ಯದ ಶೃಂಖಲೆ ಶಿಥಿಲವಾಗತೊಡಗಿತು ಎಂದು ನನ್ನ ಅನುಭವ. ಸಾಯುವ ಕೆಲವು ದಿನ ಮೊದಲಿಂದ ಅವರು ಅರ್ಧ ಪ್ರಜ್ಞಾವಸ್ಥೆಯಲ್ಲಿದ್ದರು. ಅವರ ಆರೋಗ್ಯ ತೀರ ಕೆಟ್ಟ ದಿನಗಳಿಂದ ನಾವು ಮಕ್ಕಳು ಮೂವರಲ್ಲಿ ಒಬ್ಬರಲ್ಲ ಒಬ್ಬರು ಮನೆಯಲ್ಲಿ ಅವರ ಬಳಿ ಇರತೊಡಗಿದ್ದೆವು. ಒಂದು ದಿನ ನಾನು ಅವರ ಬಳಿ ಕುಳಿತು ನೋಡುತ್ತಲೇ ಕೇಳುತ್ತಲೇ ಇದ್ದೆ. ಒಮ್ಮೆ ಅವರು ಬಹಳ ಅತ್ತರು. “ಅಮ್ಮ ಯಾಕೆ ಅಳುತ್ತಿ?” ಎಂದರೆ “ಉಲ್ಲಾಸ ತೀರಿಕೊಂಡ” ಎಂದು ಬಿಕ್ಕಳಿಸತೊಡಗಿದರು. ‘ಅಮ್ಮ, ಉಲ್ಲಾಸ ಇದ್ದಾನೆ, ಹರ್ಷ ತೀರಿಕೊಂಡದ್ದು’ ಎಂದು ಸಮಾಧಾನ ಮಾಡಿದೆ. ಆ ಮೇಲೆ ಅವರ ಮನಸ್ಸು ತನ್ನ ಜೀವನದ ಮೊದಲ ಹಂತಕ್ಕೆ ಹೋಗುತ್ತಿದ್ದಿತು. ಸಂತೋಷವಾಗಿ ಗೊಣ ಗುಟ್ಟುತ್ತಾ ಅವರ ಪ್ರೀತಿಯ ಹಾಡುಗಳನ್ನು, ಗೀತನಾಟಕದ ಕೆಲ ಪಂಕ್ತಿಗಳನ್ನು, ಭಜನೆಗಳನ್ನು ಅಶಕ್ತ ಸ್ವರದಲ್ಲಿ ಉಚ್ಚರಿಸುತ್ತ ಆ ಅಮೂಲ್ಯ ಜೀವ; ಪರಮಾತ್ಮನಲ್ಲಿ ಲೀನ ವಾಯಿತು. ಪರಮಾತ್ಮನಲ್ಲಿ ಲೀನವಾಗಿರಲೇಬೇಕು. ಯಾಕೆಂದರೆ ಅವರಿಗೆ ದೇವರಲ್ಲಿ ಅಪಾರ ನಂಬಿಕೆ, ಭಕ್ತಿ ಇದ್ದಿತ್ತು.

ಒಮ್ಮೆ ಅವರ ನಾದಿನಿಯೊಬ್ಬರು ಅವರ ಹತ್ತಿರ ತನ್ನ ವ್ಯಾಧಿಯ ಬಗ್ಗೆ

ಹೇಳುತ್ತ ಬೇಸರಪಟ್ಟಾಗ ಅಮ್ಮ ಹೇಳಿದರು, "ಹೆಚ್ಚೆಂದರೆ ಏನಾಗುತ್ತದೆ? ಜೀವ ಹೋಗುತ್ತದೆ. ಅದಕ್ಕೆ ಯಾಕೆ ಭಯ, ಚಿಂತೆ? ಸುಮಂಗಲಿಯಾಗಿ ಸಾಯುವುದು ಒಳ್ಳೆಯದಲ್ಲವೇ?" ಈ ಮಾತು ಕೇಳಿ ನಮಗೆ ಆಶ್ಚರ್ಯವಾಯಿತು. ನವೀನ ವಿಚಾರಧಾರೆಯ ನನ್ನ ಅಮ್ಮನಿಗೆ ಇಂತಹ ಕೆಲವು ನಂಬಿಕೆಗಳು ಮುಖ್ಯವಾಗಿದ್ದುವು.

ಹೆದ್ದಾರಿಯ ಬಳಿಯ 'ಸುಹಾಸ'ದ ಮುಂದಣ ಅಂಗಣದಲ್ಲಿ ಅಮ್ಮನ ಚಿತೆ ಉರಿಯ ತೊಡಗಿತ್ತು. ಅದೆಷ್ಟೋ ಪ್ರಯಾಣಿಕರು ಬಸ್ಸಿನಿಂದ ಇಳಿದು ಬಂದು ಅಮ್ಮನಿಗೆ ನಮಸ್ಕಾರ ಮಾಡಿ ಹೋದರು. "ಮನೆಯ ದೇವಿಯಂತಿದ್ದರು" ಎನ್ನುತ್ತ ತೆರಳಿದರು. ಅಮ್ಮ ಬಯಸಿದ ಸುಮಂಗಲಿ ಸಾವು ಅವರಿಗೆ ಲಭಿಸಿತು. ಅಮ್ಮ ಲೀಲಾ ಕಾರಂತರು ಇದ್ದಷ್ಟು ಕಾಲ ಕಾರಂತ ಕೋಟೆಗೆ ಅನೇಕ ದ್ವಾರಗಳು. ಅಮ್ಮ ಬಡವ ಬಲ್ಲಿದ, ತನ್ನವರು ಪರರು ಎಂಬ ತಾರತಮ್ಯ ವಿಲ್ಲದೆ; ಎಲ್ಲ–ರಿಗೂ ಪ್ರವೇಶವಿಟ್ಟಿದ್ದರು. ಅವರು ಕಾಲವಾದ ಬಳಿಕ ಅವೆಲ್ಲ ದ್ವಾರಗಳು ಮುಚ್ಚಿ ನಾವೆಲ್ಲ ಹೊರಗಾದೆವು. ಯಾಕೆಂದರೆ ಕೋಟೆಗೆ ಒಂದೇ ಒಂದು ಕಿರಿಬಾಗಿಲು; ಒಂದೇ ಒಂದು ದ್ವಾರಪಾಲಕ

***ಆಕರ : 'ಲೀಲಾ ಕಾರಂತ ನೆನಪಿನ ಸಂಪುಟ' ಸಂ: ಬಿ.ಲೀಲಾ ಭಟ್***

# 4. ಸಂಕೀರ್ಣ


| | | | |
|---|---|---|---|
| 4.1 | ನೂಲಲ್ಯಾಕ ಚನ್ನೀ! | : ಜಾನಪದ | 090 |
| 4.2 | ಹುಲಿಯ ಸವಾರಿ | : ವಿವೇಕ ಶಾನಭಾಗ | 093 |
| 4.3 | ಜಾಪಾನಿನ ಅಪೂರ್ವ ಕಲೆ ಜಾನೂಯು (ಲೇಖನ) | : ಜಿ.ಎಸ್. ಆಮೂರ | 105 |
| 4.4 | ಓದು ಪಠ್ಯ: ಬುರ್ಖಾ (ಕಥೆ) | : ಫಕೀರ್ ಮಹಮ್ಮದ್ ಕಟ್ಪಾಡಿ | 112 |

# 4. ಸಂಕೀರ್ಣ

## ಆಶಯ

ಸೃಜನಶೀಲತೆಯೆಂದರೆ ಕೇವಲ ವರ್ಣಚಿತ್ರಗಳನ್ನು ರಚಿಸುವುದಾಗಲೀ ಕವಿತೆಗಳನ್ನು ಬರೆಯುವುದಾಗಲೀ ಅಲ್ಲ. ಅವು ಒಳ್ಳೆಯ ಕೆಲಸಗಳೇ, ಆದರೆ ವಿಶೇಷ ಮಹತ್ವವನ್ನು ಪಡೆದಿಲ್ಲ. ಸಂಪೂರ್ಣವಾದ ಅತೃಪ್ತ ಸ್ಥಿತಿ ಬಹಳ ಮುಖ್ಯ. ಏಕೆಂದರೆ ಅಂತಹ ಅಸಮಾಧಾನವು ಇನಿಶಿಯೇಟಿವ್‌ಗೆ ಕಾರಣವಾಗುತ್ತದೆ. ಪರಿಪಕ್ವವಾದಂತೆ ಅದು ಸೃಜನಶೀಲತೆಯಾಗಿ ಪರಿವರ್ತನೆಯಾಗುತ್ತದೆ. ಸತ್ಯವನ್ನು ಕಂಡುಕೊಳ್ಳಲು ಅದೊಂದೇ ದಾರಿ. ದೇವರನ್ನು ಕಾಣುವ ದಾರಿಯೂ ಅದೇ. ಏಕೆಂದರೆ ಸೃಜನಶೀಲ ಸ್ಥಿತಿಯೇ ದೇವರು.

ಇನಿಶಿಯೇಟಿವ್ ಎಂದರೇನು? ಬೇರೆ ಯಾರ ಒತ್ತಾಯವೂ ಇಲ್ಲದೆ ಒಂದು ಕೆಲಸವನ್ನು ಮೊದಲು ಮಾಡುವುದು, ಹಾಗೆ ಮಾಡುವುದರಲ್ಲಿ ಆಸಕ್ತಿ ತೋರಿಸುವುದು ಇನಿಶಿಯೇಟಿವ್, ಅದು ಬಹಳ ವಿಶಿಷ್ಟವಾದ ಘನಕಾರ್ಯವೇನೂ ಆಗಬೇಕಿಲ್ಲ. ಅಂಥ ಕೆಲಸಗಳನ್ನು ಆಮೇಲೆ ಮಾಡಬಹುದು. ಒಂದು ಗಿಡವನ್ನು ನೀವಾಗಿಯೇ ನೆಟ್ಟು ಬೆಳೆಸಿದರೆ ಅದು ಇನಿಶಿಯೇಟಿವ್. ಇನ್ನೊಬ್ಬರ ಬಗ್ಗೆ ದಯೆತೋರಿಸಿದರೆ, ಭಾರವಾದ ಹೊರೆಯಡಿಯಲ್ಲಿ ನಲುಗಿರುವ ಕೂಲಿಯನ್ನು ನೋಡಿ ಮುಗುಳ್ನಕ್ಕರೆ, ಬೀದಿಯಲ್ಲಿ ಬಿದ್ದಿರುವ ಕಲ್ಲನ್ನು ಪಕ್ಕಕ್ಕೆ ಎಸೆದರೆ, ಅಥವಾ ಒಂದು ಪ್ರಾಣಿಯ ಬೆನ್ನುತಟ್ಟಿದರೆ ಅಲ್ಲೆಲ್ಲ ಇನಿಶಿಯೇಟಿವ್‌ನ ಕಿಡಿಯಿದೆ. ನಿಮಗೆ ಸೃಜನಶೀಲತೆಯೆಂಬ ಅತ್ಯದ್ಭುತ ಸಂಗತಿಯ ಅರಿವು ಬರಬೇಕಾದರೆ, “ಅಪಾರವಾದ ಇನಿಶಿಯೇಟಿವ್ ಬೇಕು. ಇದು ಆ ಹಾದಿಯಲ್ಲಿ ಮೊದಲ ಹೆಜ್ಜೆ. ಆಳವಾದ ಅಸಮಾಧಾನದ ಒಡಲಿನಿಂದ ಮೂಡಿಬರುವ ಇನಿಶಿಯೇಟಿವ್‌ನಲ್ಲಿ ಸೃಜನಶೀಲತೆಯ ಬೇರುಗಳಿವೆ.

## 3.1 ನೂಲಲ್ಯಾಕ ಚನ್ನೀ!

**–ಜಾನಪದ**

ನೂಲಲ್ಯಾಕ ಚನ್ನೀ!
ನೂಲಲ್ಯಾಕ ಚನ್ನೀ!

ರಾಟಿಲ್ಲಲ್ಲೋ ಜಾಣಾ!
ರಾಟಿಲ್ಲಲ್ಲೋ ಜಾಣಾ!

ಮನಿಯಾನ ಬಂಡೀ ಮುರಸಿ
ಮನಿಯಾನ ಬಂಡೀ ಮುರಸಿ
ರಾಟೆ ಮಾಡಿಸಿ ಕೊಟ್ಟಾ
ರಾಟೆ ಮಾಡಿಸಿ ಕೊಟ್ಟಾ

ನೂಲಲ್ಯಾಕ ಚನ್ನೀ!
ನೂಲಲ್ಯಾಕ ಚನ್ನೀ!

ಕದಿರಿಲ್ಲೊ ಜಾಣ!
ಕದಿರಿಲ್ಲೊ ಜಾಣ!

ಕೈಯಾನ ಗುದ್ದಲಿ ಮುರಸಿ
ಕೈಯಾನ ಗುದ್ದಲಿ ಮುರಸಿ
ಕದರ ಮಾಡಿಸಿ ಕೊಟ್ಟಾ
ಕದರ ಮಾಡಿಸಿ ಕೊಟ್ಟಾ

ನೂಲಲ್ಯಾಕ ಚನ್ನೀ!
ನೂಲಲ್ಯಾಕ ಚನ್ನೀ!

ಚೆಲ್ಲಿಲ್ಲೋ ಜಾಣ
ಚೆಲ್ಲಿಲ್ಲೋ ಜಾಣ

ಮನಿಯಾನ ಕೋಣವು ಕಡಿಸಿ
ಮನಿಯಾನ ಕೋಣವು ಕಡಿಸಿ
ಚಿಲ್ಲು ಮಾಡಿಸಿ ಕೊಟ್ಟಾ
ಚಿಲ್ಲು ಮಾಡಿಸಿ ಕೊಟ್ಟಾ

ನೂಲಲ್ಯಾಕ ಚೆನ್ನಿ!
ನೂಲಲ್ಯಾಕ ಚೆನ್ನಿ!

ಹಮ್ಮಿಗಿಲ್ಲಲೊ ಜಾಣಾ
ಹಮ್ಮಿಗಿಲ್ಲಲೊ ಜಾಣಾ

ನಡುವಿನ ಉಡದಾರ ಕಡಿದು
ನಡುವಿನ ಉಡದಾರ ಕಡಿದು
ಹಮ್ಮಿಗಿ ಮಾಡಿಸಿ ಕೊಟ್ಟಾ
ಹಮ್ಮಿಗಿ ಮಾಡಿಸಿ ಕೊಟ್ಟಾ

ನೂಲಲ್ಯಾಕ ಚೆನ್ನಿ!
ನೂಲಲ್ಯಾಕ ಚೆನ್ನಿ!

ಕಟ್ಟಿ ಇಲ್ಲಲೋ ಜಾಣಾ
ಕಟ್ಟಿ ಇಲ್ಲಲೋ ಜಾಣಾ

ಊರಾನ ವಡ್ಡರ ಕರಿಸಿ
ಊರಾನ ವಡ್ಡರ ಕರಿಸಿ
ಕಟ್ಟಿ ಕಟ್ಟಿಸಿಕೊಟ್ಟಾ
ಕಟ್ಟಿ ಕಟ್ಟಿಸಿಕೊಟ್ಟಾ

ನೂಲೊಲ್ಯಾಕ ಚೆನ್ನಿ!
ನೂಲೊಲ್ಯಾಕ ಚೆನ್ನಿ!

ಗೆಳತ್ಯಾರಿಲ್ಲೊ ಜಾಣಾ!
ಗೆಳತ್ಯಾರಿಲ್ಲೊ ಜಾಣಾ!

ಓಣ್ಯಾಗಿನವರ ಕರಿಸಿ
ಓಣ್ಯಾಗಿನವರ ಕರಿಸಿ
ಗೆಳತ್ಯಾರ ಕೂಡಿಸಿ ಕೊಟ್ಟಾ
ಗೆಳತ್ಯಾರ ಕೂಡಿಸಿ ಕೊಟ್ಟಾ

ನೂಲಲ್ಯಾಕ ಚನ್ನೀ
ನೂಲಲ್ಯಾಕ ಚನ್ನೇ

ಗುಗ್ಗರಿಲ್ಲೊ ಜಾಣ
ಗುಗ್ಗರಿಲ್ಲೊ ಜಾಣ
ಗೋಧಿ ಕಡ್ಲಿ ತರಿಸಿ
ಗೋಧಿ ಕಡ್ಲಿ ತರಿಸಿ

ಗುಗ್ಗರಿ ಹಾಕಿಸಿಕೊಟ್ಟಾ
ಗುಗ್ಗರಿ ಹಾಕಿಸಿಕೊಟ್ಟಾ

ನೂಲಲ್ಯಾಕ ಚೆನ್ನೀ
ನೂಲಲ್ಯಾಕ ಚೆನ್ನೀ

ನನಗೆ ಬರೋದಿಲ್ಲೋ ಜಾಣ
ನನಗೆ ಬರೋದಿಲ್ಲೋ ಜಾಣ

**– ಜಾನಪದ**

## 4.2 ಹುಲಿಯ ಸವಾರಿ

**–ವಿವೇಕ ಶಾನಭಾಗ**

ಉಚೆ ಆಫ್ರಿಕಾ ಖಂಡದ ಸಣ್ಣ ದೇಶವೊಂದರಿಂದ ಬಂದವನು. ನಾವಿಬ್ಬರೂ ಒಂದೇ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೆವು. ಕಂಡಕಂಡ ದೇಶಗಳಲ್ಲೆಲ್ಲ ತನ್ನ ವ್ಯಾಪಾರ ವಿಸ್ತರಿಸಿದ್ದ ಈ ಕಂಪನಿ, ಮುಂಬೈಯಲ್ಲಿ ನಡೆಸಿದ ಹತ್ತು ದಿನಗಳ ತರಬೇತಿ ಶಿಬಿರಕ್ಕೆ ಎಂಟು ದೇಶಗಳಿಂದ ಕರೆಸಲಾದ ಹನ್ನೆರಡು ಜನರಲ್ಲಿ ನಾನು ಮತ್ತು ಉಚೆ ಕೂಡ ಇದ್ದೆವು. ಇಂಥ ಶಿಬಿರಗಳಿಗೆ ಆಯ್ಕೆಯಾಗುವುದು ಬಹಳ ಮಹತ್ವದ ಸಂಗತಿಯೆಂಬ ಭಾವನೆಯಿತ್ತು ಹೊಸಹೊಸ ಎತ್ತರದ ಹುದ್ದೆಗಳಿಗೆ, ಹೆಚ್ಚಿನ ಜವಾಬ್ದಾರಿಗೆ ನಮ್ಮನ್ನು ಸನ್ನದ್ಧಗೊಳಿಸುವ ಹಲವು ಪರಿಗಳಲ್ಲಿ ಈ ಶಿಬಿರದ ಯೋಜನೆಯೂ ಒಂದು. ಇತರ ದೇಶಗಳ ಸಂಸ್ಕೃತಿ, ಜೀವನ, ವ್ಯಾಪಾರವಹಿವಾಟು ಇತ್ಯಾದಿಗಳನ್ನು ಅರಿಯುವುದೂ ಇದರ ಮುಖ್ಯ. ಉದ್ದೇಶಗಳಲ್ಲೊಂದು ಎಂದು ನಮಗೆ ತಿಳಿಸಿದ್ದರು. ಸಮುದ್ರದ ಎದುರಿಗೇ ಇದ್ದ ಕಂಪನಿಯ ಟ್ರೇನಿಂಗ್ ಸೆಂಟರಿನಲ್ಲಿ ಶಿಬಿರದ ವ್ಯವಸ್ಥೆ ಮಾಡಲಾಗಿತ್ತು. ಈ ಹವಾನಿಯಂತ್ರಿತ ಕಟ್ಟಡದ ಒಳಗೆ ಕೂತು, ಹೊರಗೆ ಬೇಯುವ ಬೇಸಿಗೆಯ ಸೆಖೆಗೂ, ಉಕ್ಕುವ ಕಡಲಿಗೂ, ಬೀಸುವ ಗಾಳಿಗೂ ಸಂಬಂಧವೇ ಇಲ್ಲದವರ ಹಾಗೆ ಏಳು ದಿನ ಕಳೆದಿದ್ದೆವು. ಶಬ್ದವೂ ಹಾದು ಬಾರದ ಹಾಗೆ ಮುಚ್ಚಿಬಿಟ್ಟಿರುವ ಗಾಜಿನ ದೊಡ್ಡ ಕಿಟಕಿಗಳಿಂದ ಆಚೆ ನೋಡಿದರೆ ಮೂಕಚಿತ್ರವೊಂದರ ದೃಶ್ಯ ನೋಡಿದಂತಾಗುತ್ತಿತ್ತು. ನೊರೆನೊರೆಯಾಗಿ ದಂಡೆಯನ್ನಟ್ಟಿ ಬರುವ ಎತ್ತರದ ಅಲೆಗಳು, ತೊಟ್ಟ ಬಟ್ಟೆ ಪತಾಕೆಯ ಹಾಗೆ ಪಟಪಟ ಹೊಡೆದುಕೊಳ್ಳುವಂತೆ ಬೀಸುವ ಗಾಳಿ, ದಂಡೆಯ ಗುಂಟ ಹಾದುಹೋಗುವ ರಸ್ತೆಯಲ್ಲಿ ಸಾಲು ವಾಹನಗಳು, ನೂರಾರು ಸಣ್ಣಸಣ್ಣ ತಳ್ಳುಗಾಡಿಯ ಅಂಗಡಿಗಳು, ಓಡಲು ನಡೆಯಲು ನೋಡಲು ಕೊಳ್ಳಲು ಬಂದ ಜನ. ಆಚೆ ಜಗತ್ತು ಸದ್ದೇ ಇಲ್ಲದೆ ಜರುಗಿ ಹೋಗುತ್ತಿರುವ ಹಾಗೆ ಕಾಣಿಸುತ್ತಿತ್ತು.

ಉಚೆ ನನ್ನ ಪಕ್ಕದ ರೂಮಿನಲ್ಲೇ ಇದ್ದ. ಅವನು ನನಗೆ ಹೆಚ್ಚು ಹತ್ತಿರವಾಗಲು ಅದೂ ಒಂದು ಕಾರಣವಾಯಿತು. ಇಡೀ ದಿನ ಆರ್ಥಿಕನೀತಿ, ವ್ಯಾಪಾರನೀತಿ, ಮಾರಾಟ, ಉತ್ಪಾದನೆ, ಯೋಜನೆಗಳನ್ನು ರೂಪಿಸುವುದು, ಯಾವುದೋ ದೇಶದ ಸಂಸ್ಥೆ ತನ್ನ ಬಿಕ್ಕಟ್ಟುಗಳನ್ನು ಹೇಗೆ ದಾಟಿ ಬಂತು – ಎಂದೆಲ್ಲ ಎಂಟು ಗಂಟೆಗಳ ಕಾಲ ಮಾತು ಕೇಳಿಸಿಕೊಂಡು, ಕಡ್ಡಾಯವಾಗಿ ಇದನ್ನೆಲ್ಲ ಚರ್ಚಿಸಿ ದಣಿದು ಬಂದ ಎಲ್ಲರೂ ರಾತ್ರಿ ಊಟದ ನಂತರ ಕೂತು ಹರಟುತ್ತಿದ್ದವು. ಕೆಲವೊಮ್ಮೆ ಸಮುದ್ರದ ದಂಡೆಗುಂಟ ನಡೆಯುತ್ತಿದ್ದೆವು. ಉಚೆ ನಮ್ಮ

ಮನರಂಜನೆಯ ಕೇಂದ್ರವಾಗಿದ್ದ, ತುಂಬ ಚೆನ್ನಾಗಿ ಹಾಡುತ್ತಿದ್ದ. ತನ್ನ ಜೊತೆ ತಂದಿದ್ದ ಕ್ಯಾಸೆಟ್ ಪ್ಲೇಯರ್‌ನಲ್ಲಿ ಸಂಗೀತ ಹಾಕಿ ಕುಣಿಯುತ್ತಿದ್ದ. ಹಾಡು ಮತ್ತು ಕುಣಿತ ಹುಟ್ಟಿನಿಂದಲೇ ಪಡೆದು ಬಂದಂತಿದ್ದ ಕಪ್ಪಾಗಿ ಆರೋಗ್ಯದಿಂದ ಮಿರಿಮಿರಿ ಮಿಂಚುತ್ತಿದ್ದ ಅವನ ಸದೃಢ ದೇಹ, ಸಂಗೀತ ಕಿವಿಗೆ ಬಿದ್ದದ್ದೇ ಬಳುಕತೊಡಗುತ್ತಿತ್ತು ಅವನ ಗುಂಗುರು ಕೂದಲನ್ನು ಎಳೆದು ಎಷ್ಟು ಉದ್ದ ಇದೆ ಎಂದು ತೋರಿಸಿದ. ತನ್ನ ದೇಶದ ಗುಲಾಮರ ಹಾಡುಗಳನ್ನು ಹಾಡಿ ತೋರಿಸಿದ. ಬ್ಲ್ಯಾಕ್ ಮ್ಯಾಜಿಕ್ ಮಾಡುತ್ತೇನೆಂದು ಹೇಳಿ ಚಾಕುವನ್ನು ಅಂಗೈಯ ಮೂಲಕ ಆಚೆಯಿಂದ ಈಚೆ ತರಿಸುವ ಸಣ್ಣ ಜಾದೂ ಮಾಡಿದ. ಹೀಗೆ ಉಚೆ ಎಲ್ಲರ ಸ್ನೇಹಿತನಾದ.

ಏಳನೆಯ ದಿನ ರಾತ್ರಿ ಊಟದ ನಂತರ ನಮ್ಮೆಲ್ಲರನ್ನೂ ಒಂದೆಡೆ ಸೇರಿಸಿ ಮುಂದಿನ ಮೂರು ದಿನಗಳ ಕಾರ್ಯಕ್ರಮ ವಿವರಿಸಿದರು. ಶಿಬಿರದ ಕೊನೆಯ ಮೂರು ದಿನಗಳಲ್ಲಿ ಇಷ್ಟು ದಿನ ಕಲಿಸಿದ್ದನ್ನು ಅನುಭವಕ್ಕೆ ಭಟ್ಟಿ ಇಳಿಸಲೆಂಬಂತೆ ಒಂದು ಆಟವಿತ್ತು ಅದೊಂದು ಮ್ಯಾನೇಜ್‌ಮೆಂಟ್ ಗೇಮ್, ನಿಜಕ್ಕೆ ಹತ್ತಿರವಾದ ಅಂತರಾಷ್ಟ್ರೀಯ ವ್ಯಾಪಾರ ಸನ್ನಿವೇಶವೊಂದನ್ನು ಸೃಷ್ಟಿಸಿ, ಅದರಲ್ಲಿ ನಾವೆಲ್ಲ ಪಾಲ್ಗೊಂಡು ನಮ್ಮ ಕೌಶಲ್ಯಗಳನ್ನು ಒರೆಗೆ ಹಚ್ಚುವುದು. ಇದ್ದ ಹನ್ನೆರಡು ಜನರನ್ನು ಮೂರು ಮೂರು ಜನರ ನಾಲ್ಕು ಗುಂಪುಗಳಾಗಿ ವಿಂಗಡಿಸಿದ್ದರು. ಪ್ರತಿ ಗುಂಪಿಗೂ ಒಂದೊಂದು ಕಾಲ್ಪನಿಕ ಕಂಪನಿಯನ್ನು ವಹಿಸಿಕೊಟ್ಟರು. ಎಲ್ಲವೂ ಸಮಾನ ಅವಸ್ಥೆಯಲ್ಲಿರುವ ಕಂಪನಿಗಳು – ಉತ್ಪಾದನಾ ಸಾಮರ್ಥ್ಯ, ಕಾರ್ಖಾನೆಗಳ ಸಂಖ್ಯೆ, ಕಾರ್ಮಿಕ ಸಂಖ್ಯೆ, ಬ್ಯಾಂಕ್‌ನಲ್ಲಿದ್ದ ಹಣ, ಸಾಲದ ಮೊತ್ತ ಎಲ್ಲವೂ ಸಮವಾಗಿತ್ತು, ಪ್ರತಿ ಗುಂಪೂ ತನ್ನ ಕಂಪನಿಯನ್ನು ಮುಂದಿನ ಮೂರು ವರ್ಷಗಳ ಕಾಲ ನಡೆಸಬೇಕು. ಬೆಳಿಗ್ಗೆ ಎಂಟಕ್ಕೆ ಆರಂಭವಾಗುವುದು. ಪ್ರತಿ ಗಂಟೆ ಒಂದು ತಿಂಗಳಿಗೆ ಸಮ. ತಿಂಗಳ ಅಂತ್ಯದ ಉತ್ಪಾದನೆ ಮಾರಾಟ, ಸಾಲಪಾವತಿ ಎಲ್ಲವೂ ಆ ಗಂಟೆಯ ಕೊನೆಗೆ ಜರುಗಬೇಕು. ಹೀಗೆ ಒಂದುದಿನ ಅಂದರೆ ಒಂದು ವರ್ಷ. ವರ್ಷದ ಕೊನೆಗೆ ಪ್ರತಿ ಕಂಪನಿಯೂ ಆಯವ್ಯಯ, ಲಾಭನಷ್ಟ ಪ್ರಕಟಿಸಬೇಕು. ಮೂರನೆಯ ವರ್ಷದ ಕೊನೆಗೆ ಅಂದರೆ ಮೂರನೇ ದಿನ ರಾತ್ರಿ ಪ್ರತಿ ತಂಡವೂ, ತಾನು ಯಾವ ರೀತಿ ವ್ಯವಹಾರಗಳನ್ನು ನಿರ್ವಹಿಸಿದೆ. ಅದರಿಂದ ಹೇಗೆ ಹೆಚ್ಚು ಲಾಭವಾಯಿತು. ಯಾವ ಉಪಾಯಗಳು ಸರಿಹೋಗಲಿಲ್ಲ. ಎಲ್ಲಿ ಹಿನ್ನಡೆಯಾಯಿತು ಇತ್ಯಾದಿ ಎಲ್ಲರಿಗೂ ವಿವರಿಸಬೇಕು.

ಇಷ್ಟೆಲ್ಲ ಹೇಳಿ ನಮಗೆ ಸುಮಾರು ಅರವತ್ತು ಪುಟಗಳನ್ನು ಓದಲು ಕೊಟ್ಟರು. ಅದರಲ್ಲಿ ಆಟದ ನಿಯಮಗಳು, ನಮಗೆ ಕೊಟ್ಟ ಕಾರ್ಖಾನೆಗಳ

ಸಾಮರ್ಥ್ಯ, ಯಾವ ಯಾವ ರೀತಿಯ ವಸ್ತುಗಳನ್ನು ಅಲ್ಲಿ ತಯಾರಿಸಬಹುದು. ಹೊಸ ಕಾರ್ಖಾನೆ ತೆರೆಯುವ ವಿಧಾನಗಳು, ನಿಯಮಗಳು, ವೆಚ್ಚಗಳು, ಯಾವ ಯಾವ ದೇಶಗಳಲ್ಲಿ ಏನೇನು ಮಾರಾಟ ಮಾಡಬಹುದು. ಎಲ್ಲೆಲ್ಲಿಯಾವ ರೀತಿಯ ತಂತ್ರಜ್ಞಾನ ಇದೆ. ಅದನ್ನು ಬೆಳೆಸುವುದಾದರೆ ಅದಕ್ಕೆ ತಗಲುವ ಕಾಲ ಮತ್ತು ವೆಚ್ಚವೇನು, ಎಲ್ಲೆಲ್ಲಿ ಕಾರ್ಮಿಕರ ಸಂಬಳ ಎಷ್ಟು, ಅವರ ಸಮಸ್ಯೆಗಳು, ಸಂಭವಿಸಬಹುದಾದ ಮುಷ್ಕರಗಳು, ವಿವಿಧ ದೇಶಗಳಲ್ಲಿ ಸಾಗಣೆಯ ವೆಚ್ಚ, ಅಲ್ಲಿಯ ರಾಜಕೀಯ ಸ್ಥಿತಿ, ಆರ್ಥಿಕ ಸ್ಥಿತಿ, ಮಿಲಿಟರಿ ಆಡಳಿತವೋ ಪ್ರಜಾಪ್ರಭುತ್ವವೋ, ಆ ದೇಶದ ಆಯಾತ – ನಿರ್ಯಾತಗಳೇನು ಬಹುಸಂಖ್ಯಾತ ಜನರ ಧರ್ಮ ಯಾವುದು ಇತ್ಯಾದಿ ಎಲ್ಲ ವಿವರಗಳೂ ಆ ಅರವತ್ತು ಪುಟಗಳಲ್ಲಿದ್ದವು. ಜಾಗತಿಕ ಮಟ್ಟದಲ್ಲಿ ವ್ಯವಹಾರ ನಿರ್ವಹಿಸಲು ತರಬೇತುಗೊಳಿಸುವ ಅತ್ಯುತ್ತಮ ವಿಧಾನವೆಂದು ಈ ಆಟ ಹೆಸರುವಾಸಿಯಂತೆ. ಇದನ್ನು ರೂಪಿಸಿದ ಪೀಟರ್ ಹಿಂದಿನ ರಾತ್ರಿ ಇಂಗ್ಲೆಂಡಿನಿಂದ ಬಂದಿಳಿದಿದ್ದ. ಒಂದು ಬಾರಿ ಇದನ್ನು ಆಡಲು ಅವನಿಗೆ ಕೊಡಬೇಕಾದ ರಾಯಲ್ಟಿಯ ಮೊತ್ತ ಕೇಳಿ ಅಸೂಯೆಪಟ್ಟೆವು, ಮುಂದಿನ ಮೂರು ದಿನಗಳಲ್ಲಿ ಆ ಆಟ ಸರಿಯಾಗಿ, ನಿಯಮಗಳ ಪ್ರಕಾರ ನ್ಯಾಯವಾಗಿ ನಡೆಯುವಂತೆ ನೋಡಿಕೊಳ್ಳುವ ಜವಾಬ್ದಾರಿ ಹೊತ್ತಿದ್ದ ಪೀಟರ್, ವಿವಿಧ ದೇಶಗಳ ಸರ್ಕಾರಗಳ, ಬ್ಯಾಂಕುಗಳ ಪಾತ್ರ ವಹಿಸುವವನಿದ್ದ. ನಿಮ್ಮ ನಿಜವಾದ ಶಕ್ತಿಗಳನ್ನು ಉಪಯೋಗಿಸಲು ನಿಮಗೆ ತಿಳಿಸುವ, ಕುಂದುಕೊರತೆಗಳನ್ನು ಬೇರೆ ಯಾವುದರಿಂದ ತುಂಬಿಸಿಕೊಳ್ಳಬೇಕೆಂಬುದನ್ನು ನಿಮ್ಮ ಅರಿವಿಗೆ ತರುವ, ಇದನ್ನೆಲ್ಲ ನಿಜವಾದ ಸಂದರ್ಭವೊಂದರಲ್ಲಿಟ್ಟು ಪ್ರಯೋಗಿಸಿ ಪರೀಕ್ಷಿಸಲು ಅವಕಾಶ ಕೊಡುವ ಆಟ... ಎಂದೆಲ್ಲ ಈ ಆಟದ ಬಗ್ಗೆ ಹೆಮ್ಮೆಯಿಂದ ಹೇಳಿಕೊಂಡ. ನಮಗೆ ಒದಗಿಸಿದ ವಿವರಗಳೆಲ್ಲ ಬೇರೆ ಬೇರೆ ಮೂಲಗಳಿಂದ ಸಂಗ್ರಹಿಸಿದ ನಿಜವಾದ ವಿವರಗಳಂತೆ. ಪ್ರತೀ ತಿಂಗಳೂ ಈ ಅರವತ್ತು ಪುಟಗಳನ್ನು ಮರುಪರಿಶೀಲಿಸಿ, ವಿವರಗಳನ್ನು ತಕ್ಕಂತೆ ಬದಲಾಯಿಸುತ್ತಾನಂತೆ. ಅಂತೂ ಅವನ ಪ್ರಕಾರ ಇದೆಲ್ಲ ನಿಜಕ್ಕೆ ಅತಿ ಹತ್ತಿರವಾದ ಸಂದರ್ಭವೊಂದನ್ನು ಸೃಷ್ಟಿಸಿತ್ತು. ಇದನ್ನು ನಿರ್ವಹಿಸಲು ನಾವು ಸಜ್ಜಾದೆವು.

ತಲೆತುಂಬ ಆಟ. ಕೈಯಲ್ಲಿ ಆ ಅರವತ್ತು ಪುಟಗಳನ್ನು ಹಿಡಿದುಕೊಂಡು ನಮ್ಮ ನಮ್ಮ ಕೋಣೆಗೆ ಹಿಂದಿರುಗಿದೆವು. ನಮ್ಮ ಗುಂಪಿನಲ್ಲಿ ನಾನು, ಉಚೆ ಮತ್ತು ಜೆಫ್, ಡಚ್ ಮೂಲದ ಜೆಫ್ ಇಂಗ್ಲೆಂಡಿನಲ್ಲೇ ಹುಟ್ಟಿ ಬೆಳೆದವನು. ವಾಣಿಜ್ಯ ವಿಭಾಗದಲ್ಲಿ ಅಕೌಂಟೆಂಟ್ ಆಗಿ ಕೆಲಸ ಮಾಡಿ ಸಣ್ಣ ವಯಸ್ಸಲ್ಲೇ ಎತ್ತರಕ್ಕೇ–ರಿದ್ದ, ಉಚೆ ನಮ್ಮ ಜೊತೆಗಿದ್ದದ್ದು ನಮಗೆ ಖುಷಿಯಾಗಿತ್ತು. ಎಂದಿನಂತೆ ಈ

ರಾತ್ರಿ ನಮ್ಮ ಮನರಂಜನೆ ಕಾರ್ಯಕ್ರಮ ನಾಳೆ ಬೆಳಿಗ್ಗೆ ಆಟ ಆರಂಭವಾಗುವ ಮುನ್ನ ಕೊಟ್ಟಿದ್ದನ್ನೆಲ್ಲ ಓದಿ ಸನ್ನದ್ದರಾಗಬೇಕೆಂಬ ಸ್ಪರ್ಧೆ ಒಳಗೊಳಗೇ ಶುರುವಾಗಿತ್ತು. ನಮ್ಮ ಗುಂಪಿನ ನಾವು ಮೂವರೂ ಪ್ರತ್ಯೇಕವಾಗಿ ಕೂತು ಎಲ್ಲವನ್ನೂ ಓದಿ, ನಂತರ ಒಂದೆಡೆ ಸೇರಿ ನಮ್ಮ ಪಾಲಿಗೆ ಬಂದ ಕಂಪನಿಯ ಸ್ಥಿತಿಗತಿಗಳನ್ನು ಚರ್ಚಿಸಿದೆವು. ಆಟದ ನಿಯಮಗಳನ್ನು ಚರ್ಚಿಸಿದೆವು. ಆಟ ಒಳಗೆ ಇಳಿಯಲಾರಂಭಿಸಿತ್ತು. ರಾತ್ರಿ ಮಲಗಿದಾಗ ಒಂದೂವರೆ.

ಮರುದಿನ ಬೆಳಿಗ್ಗೆ ಪರೀಕ್ಷೆಗೆ ಹೊರಟವರಂತೆ ತಲೆತುಂಬ ನೂರು ಸಂಗತಿ ತುಂಬಿಕೊಂಡಿದ್ದೆವು. ಒಂದು ವಿಶಾಲವಾದ ಹಾಲ್‌ನಲ್ಲಿ ಆಟದ ವ್ಯವಸ್ಥೆ ಮಾಡಿದ್ದರು. ದೊಡ್ಡ ಟೇಬಲ್ಲುಗಳನ್ನು ನಾಲ್ಕು ದಿಕ್ಕಿಗೆ ಇಟ್ಟು ಅದರ ಮೇಲೆ ಜಗತ್ತಿನ ದೊಡ್ಡ ನಕಾಶೆ ಹಾಸಿದ್ದರು. ಆಯಾ ದೇಶದ ಹೆಸರು ಬಿಟ್ಟರೆ ಬೇರೇನೂ ಇರಲಿಲ್ಲ. ನಮ್ಮ ಪಾಲಿಗೆ ಬಂದ ಕಂಪನಿಯ ಕಾರ್ಖಾನೆಯ ಒಂದು ಸಣ್ಣ ಪ್ಲಾಸ್ಟಿಕ್ ಅಚ್ಚನ್ನು ಅಲ್ಲಲ್ಲಿ ಇಟ್ಟಿದ್ದರು. ಉಚೆ ನಕಾಶೆಯಲ್ಲಿ ತನ್ನ ದೇಶವನ್ನು ಗುರುತಿಸಿ ಪುಲಕಿತನಾದ. ನಮಗೆಲ್ಲ ತೋರಿಸಿದ. ವಿವರಗಳನ್ನೆಲ್ಲ ಗ್ರಹಿಸಲು, ಅನುಮಾನಗಳಿದ್ದರೆ ಸರಿಪಡಿಸಿಕೊಳ್ಳಲು ಅರ್ಧಗಂಟೆ ಕೊಡಲಾಯಿತು. ನಾವು ನಮ್ಮ ಸರಕುಗಳ ಉತ್ಪಾದನಾ ವೆಚ್ಚ, ಮಾರುಕಟ್ಟೆಯ ಖರ್ಚು, ಸಾಗಣೆ, ನಮಗೆ ಬೇಕಾದ ಲಾಭ ಎಲ್ಲ ಎಣಿಸಿ ಯಾವ ಬೆಲೆಗೆ ಮಾರಬಹುದೆಂದು ಲೆಕ್ಕ ಹಾಕಿದೆವು. ಜೆಫ್ ಅಕೌಂಟೆಂಟ್ ಆದ್ದರಿಂದ ಚಕಚಕನೆ ಕೂಡಿ ಕಳೆಯುತ್ತ ಅದ್ದರಿಂದ ವರ್ಷದ ಕೊನೆಯಲ್ಲಿ ಲಾಭದ ಮೊತ್ತದ ಮೇಲಾಗುವ ಪರಿಣಾಮವನ್ನು ಅಂದಾಜು ಮಾಡಿದ. ಬಂದ ಹಣವನ್ನು ಎಲ್ಲಿ ತೊಡಗಿಸಬೇಕು. ಬ್ಯಾಂಕ್‌ನಿಂದ ಸಾಲ ತೆಗೆದರೆ ಆ ಬಡ್ಡಿಯ ದರದಲ್ಲಿ ಹೆಚ್ಚು ಲಾಭವೋ, ನಮ್ಮ ದುಡ್ಡ ತೊಡಗಿಸುವುದು ಒಳ್ಳೆಯದೋ ಎಂದು ತೂಗಿ ನೋಡಿದೆವು. ಎಲ್ಲವೂ ಬಹಳ ಸರಳವಾಗಿ ಕಂಡು ಎಲ್ಲ ನಮ್ಮ ಲೆಕ್ಕಾಚಾರದಂತೆ ನಡೆದರೆ ಭಾರೀ ಲಾಭ ಮಾಡುವ ಲಕ್ಷಣಗಳು ಕಂಡವು.

ಆಟ ಆರಂಭವಾಯಿತು. ತಿಂಗಳ ಕೊನೆಗೆ ಗುಪ್ತ ಟೆಂಡರು ಹಾಕಿ ಸರಕು ಮಾರಾಟ ಮಾಡಬೇಕಾಗಿತ್ತು. ಈ ತಿಂಗಳು ಎಲ್ಲೆಲ್ಲಿ ಯಾವ ವಸ್ತುವಿಗೆ ಬೇಡಿಕೆ ಇದೆ ಎಂದು ತಿಳಿಸುವ ವಿವರಗಳ ಪಟ್ಟಿ ಕೊಡಲಾಯಿತು. ಒಂದು ಚೀಟಿಯಲ್ಲಿ ನಾವು ಮಾರಬಯಸುವ ವಸ್ತುವಿನ ಬೆಲೆ ಮತ್ತು ಯಾವ ದೇಶದಲ್ಲಿ ಎಷ್ಟೆಷ್ಟು ಎಂದು ಬರೆದು ಪೀಟರ್‌ಗೆ ಕೊಡಬೇಕು. ಇತರ ಗುಂಪುಗಳು ಎಷ್ಟು ಬೆಲೆ ನಮೂದಿಸಿವೆ ಎಂದು ಪೀಟರ್ ಬಿಟ್ಟರೆ ಬೇರೆ ಯಾರಿಗೂ ಗೊತ್ತಿರುವುದಿಲ್ಲ, ಅತ್ಯಂತ ಕಡಿಮೆ ಬೆಲೆಗೆ ಮಾರಲು ಸಿದ್ದರಾದವರಿಗೆ ಮೊದಲ ಅವಕಾಶ.

ಅವರು ಬೇಡ ಅಂದರೆ ಅದರ ನಂತರದ ಕಡಿಮೆ ಬೆಲೆ ನಮೂದಿಸಿದವರಿಗೆ, ಎಲ್ಲ ಚೀಟಿಗಳನ್ನೂ ಸೇರಿಸಿ, ಮಾರುಕಟ್ಟೆಯ ಪ್ರಕಾರ, ವಸ್ತುಗಳ ಪ್ರಕಾರ ವಿಂಗಡಿಸಿ ಪ್ರತಿ ಮಾರುಕಟ್ಟೆಯಲ್ಲೂ ಯಾರ ಟೆಂಡರು ಸ್ವೀಕಾರವಾಯಿತೆಂದು ಕೂಗಿ ಹೇಳುತ್ತಿದ್ದ. ಮೊದಲ ತಿಂಗಳು ನಮ್ಮ ಬೆಲೆಗಳೆಲ್ಲ ಹೆಚ್ಚಾಗಿ ಒಂದೇ ಒಂದು ಟೆಂಡರೂ ನಮಗೆ ದಕ್ಕಲಿಲ್ಲ. ಕೆಲವು ವಸ್ತುಗಳ ಬೆಲೆ ಇಳಿಸಿದ್ದ ರಿಂದ ಎರಡನೇ ತಿಂಗಳು ಉತ್ಪಾದನೆಯ ಕಾಲುಭಾಗದಷ್ಟು ಖರ್ಚಾಯಿತು. ಇನ್ನೆರಡು ತಿಂಗಳು ಹೀಗೇ ಆದರೆ ಕಚ್ಚಾವಸ್ತು ಖರೀದಿಗೆ, ನೌಕರರ ಸಂಬಳಕ್ಕೆ ದುಡ್ಡು ಸಾಲದೇ ಹೋಗುವ ಪರಿಸ್ಥಿತಿ ಬರಲಿದೆ ಎಂದು ಜೆಫ್ ಎಚ್ಚರಿಸಿದ. ಯಾವುದೂ ನಾವು ಅಂದುಕೊಂಡಂತೆ ನಡೆಯದೇ, ನಮ್ಮ ಲೆಕ್ಕಾಚಾರವೆಲ್ಲ ತಲೆಕೆಳಗಾಗಿ, ಮೊದಲು ಬಹಳ ಸರಳವಾಗಿ ಕಂಡಿದ್ದೆಲ್ಲ ನೂರಾರು ಕ್ಲಿಷ್ಟ ಹೆಣಿಗೆಗಳು ಸೇರಿಕೊಂಡಂತೆ ಕಾಣತೊಡಗಿತು. ಪ್ರತಿ ತಂಡವೂ ತನ್ನದೇ ಆದ ತಂತ್ರ ರೂಪಿಸಿಕೊಂಡಿತ್ತು. ಟೆಂಡರು ತಮಗೆ ದಕ್ಕಿದೊಡನೆ ಆ ಗುಂಪಿನಲ್ಲಿ ಕೇಕೆ ಕೋಲಾಹಲ. ನಿಜಕ್ಕೂ ಅಲ್ಲೊಂದು ಭೀಕರವಾದ ಸ್ಪರ್ಧೆ ಏರ್ಪಟ್ಟಿತ್ತು. ಇನ್ನೆರಡು ತಿಂಗಳು ಕಳೆಯುವುದರಲ್ಲಿ ನಮ್ಮ ಪರಿಸ್ಥಿತಿ ಸ್ವಲ್ಪ ಸುಧಾರಿಸಿತ್ತು ಹೇಗೆ ಬೆಲೆಗಳನ್ನು ಇಳಿಸಬಹುದು ಎಂದು ಯೋಚಿಸುತ್ತ ಯಾವ ಕಾರ್ಖಾನೆಯಲ್ಲಿ ಎಷ್ಟು ಉತ್ಪಾದಿಸಬೇಕು. ಎಲ್ಲಿಂದ ಎಲ್ಲಿಗೆ ಸಾಗಿಸಿದರೆ ಲಾಭದಾಯಕ ಎಂದು ಕಂಡುಕೊಂಡಿದ್ದೆವು. ನಕಾಶೆಯ ಮೇಲೆ ಕೇವಲ ಗುರುತಾಗಿ ಕಾಣುವ ಕಾರ್ಖಾನೆಯ ವಿವರಗಳೆಲ್ಲ ನಮ್ಮ ನಾಲಿಗೆಯ ತುದಿಯಲ್ಲಿದ್ದವು – ಎಷ್ಟು, ಕಾರ್ಮಿಕರು, ಏನು ಸಂಬಳ, ಉತ್ಪಾದನಾ ಸಾಮರ್ಥ್ಯ ಮತ್ತು ನಿಜವಾಗಿ ಈಗ ಎಷ್ಟು ತಯಾರಾಗುತ್ತಿದೆ ಇತ್ಯಾದಿ ಇತ್ಯಾದಿ. ಹೊಸ ತಂತ್ರಜ್ಞಾನ ಉಪಯೋಗಿಸಿ ನಾವು ಹೊಸ ಕಾರ್ಖಾನೆಗಳನ್ನು ತೆರೆಯಬಹುದಿತ್ತು ಹಾಗೆ ಮಾಡಿದರೆ, ಆರಂಭದ ಖರ್ಚು ಬಿಟ್ಟರೆ ಅತಿ ಕಡಿಮೆ ಬೆಲೆಯಲ್ಲಿ ಉತ್ಪಾದಿಸಬಹುದಿತ್ತು ನಮ್ಮ ಈಗಿನ ಎರಡು ಕಾರ್ಖಾನೆಗಳಲ್ಲಿ ಹೆಚ್ಚು ಸಾಮರ್ಥ್ಯವಿದ್ದೂ ನಾವು ಅಷ್ಟು ಉತ್ಪಾದಿಸುತ್ತಿರಲಿಲ್ಲ. ಅದನ್ನೇ ಸರಿಮಾಡಬೇಕೆಂದು ನಿರ್ಧರಿಸಿ ನಿಯಮಗಳಿಗಾಗಿ ಪುಟಗಳನ್ನು ತಿರುವಿ ಹಾಕಿದೆವು. ಅಲ್ಲಿ ಕಾರ್ಮಿಕರ ಸಮಸ್ಯೆಯಂತೆ. ಎರಡು ಬೇಡಿಕೆಗಳು ಈಡೇರಿದರೆ ಈಗಿನದಕ್ಕಿಂತ ಶೇಕಡಾ ಹತ್ತರಷ್ಟು ಹೆಚ್ಚು ಉತ್ಪಾದಿಸಬಲ್ಲರು. ಅಲ್ಲಿದ್ದ ಯಂತ್ರವೊಂದು ಹಳೆಯದಾಗಿದ್ದು ವರ್ಷಕ್ಕೆ ನಾಲ್ಕೈದು ಬಾರಿಯಾದರೂ ಅಪಘಾತವಾಗಿ ಕಾರ್ಮಿಕರು ಗಾಯಗೊಳ್ಳುತ್ತಿದ್ದರು. ಆ ಯಂತ್ರವನ್ನು ಬದಲಾಯಿಸಬೇಕು ಅನ್ನುವುದು ಮೊದಲ ಬೇಡಿಕೆ. ಅದಕ್ಕೆ ತಗಲುವ ವೆಚ್ಚ ಒಂದು ಲಕ್ಷ. ಎರಡನೇ ಬೇಡಿಕೆ ಶೇಕಡಾ ಹತ್ತರಷ್ಟು ಹೆಚ್ಚು ಸಂಬಳ, ಜೆಫ್ ಮತ್ತೆ ಕೂಡಿಸಿ ಕಳೆದು ಗುಣಿಸಿ ಲಾಭವಿಲ್ಲ ಬೇಡ ಅಂದುಬಿಟ್ಟ.

ಅವನ ಪ್ರಕಾರ ಇಷ್ಟು ಖರ್ಚು ಮಾಡಿ ಹೆಚ್ಚು ಉತ್ಪಾದನೆ ಪಡೆಯತೊಡಗಿದರೆ ಅದರ ನಿಜವಾದ ಲಾಭ ಬರತೊಡಗುವುದು ನಾಲ್ಕನೇ ವರ್ಷದಿಂದ. ಈ ಆಟ ನಾವು ಆಡುವುದೇ ಮೂರು ವರ್ಷದವರೆಗಾದ್ದರಿಂದ ಈ ಖರ್ಚು ಅನಗತ್ಯ ಅಂದ. ಬದಲಿಗೆ ಹೊಸ ತಂತ್ರಜ್ಞಾನದ ಹೊಸ ಕಾರ್ಖಾನೆ ಆರಂಭಿಸೋಣ ಅಂದ. ನನ್ನ ಮತ್ತು ಉಚೆಯ ಅಭಿಪ್ರಾಯ ಬೇರೆಯಾಗಿತ್ತು ಈ ಕಾರ್ಖಾನೆಯ ಸಮಸ್ಯೆ ಬಗೆಹರಿಸುವುದು ಒಳ್ಳೆಯ ಆಡಳಿತದ ಲಕ್ಷಣ ಎಂದು ನಾವು ಅಂದೆವು. ಅದು ಯಾಕೆ ಸರಿಯಾದ ನಿರ್ಧಾರವಲ್ಲ ಎಂದು ನಮಗೆ ಮನವರಿಕೆ ಮಾಡಿಕೊಡಲು ಜೆಫ್ ತನ್ನ ಲೆಕ್ಕಾಚಾರವನ್ನು ಮೊದಲಿನಿಂದ ವಿವರಿಸತೊಡಗಿದ. "ಸರಿ ಹೋಗಲಿ ಬಿಡು" ಅಂದ, ಉಚೆ, ಹೊಸ ಕಾರ್ಖಾನೆಗೆ ಸಾಕಾಗುವಷ್ಟು ಹಣ ನಮ್ಮಲ್ಲಿರಲಿಲ್ಲ. ಬ್ಯಾಂಕ್ ಸಾಲ ತೆಗೆಯಬೇಕೆಂದು ಜೆಫ್ ಸೂಚಿಸಿದ. ಒಂದು ಕಾರ್ಖಾನೆ ಮುಚ್ಚಲು ಇಂತಿಷ್ಟು ದುಡ್ಡು ಅಲ್ಲಿಯ ಪ್ರತಿ ಕಾರ್ಮಿಕರಿಗೂ ಕೊಡಬೇಕು ಎಂಬ ನಿಯಮವಿತ್ತು ಅದರ ನಂತರ ಆ ಜಾಗ ಮಾರಬಹುದು. ಇದೆಲ್ಲ ಲೆಕ್ಕಹಾಕಿ ಒಂದು ಕಾರ್ಖಾನೆ ಮುಚ್ಚಿಬಿಡುವಾ ಅಂದ. ಅವಸರ ಮಾಡುವುದು ಬೇಡ. ಯೋಚಿಸೋಣ" ಎಂದು ನಾವಂದೆವು. ನಿಯಮಗಳ ಒಳಹೊಕ್ಕು ನೋಡುವ, ಪ್ರತಿಯೊಂದನ್ನೂ ರೂಪಾಯಿ ಪೈಸೆಗಳಲ್ಲಿ ಅಳೆದು, ಕೂಡಿ ಕಳೆದು ಜೋಡಿಸಿ ಚಕಚಕನೆ ಲೆಕ್ಕ ಹಾಕುವ, ಲಾಭನಷ್ಟದ ಮೊತ್ತವನ್ನು ಕರಾರುವಕ್ಕಾಗಿ ಹೇಳುವ ಅವನ ಶಕ್ತಿಯ ಎದುರು ನಮ್ಮ ಯಾವ ಮಾತೂ ನಡೆಯದ ಹಾಗಾಗತೊಡಗಿತ್ತು, ಜೆಫ್‌ನ ಲೆಕ್ಕದ ತರ್ಕದ ಖಡ್ಗ ಎಲ್ಲವನ್ನೂ ನಿರ್ದಯವಾಗಿ ತುಂಡರಿಸಬಲ್ಲದಾಗಿತ್ತು. ನಮ್ಮ ಪ್ರತಿ ಅನಿಸಿಕೆಗೂ ಅವನ ಹತ್ತಿರ ತರ್ಕಬದ್ಧವಾದ ಅಂಕಿಸಂಖ್ಯೆಗಳ ಬೆಂಬಲವಿರುವ ಉತ್ತರವಿರುತ್ತಿತ್ತು, ಜೆಫ್ ಟೀ ತರಲು ಎದ್ದು ಹೋದಾಗ ಈತ ಅಸಾಧ್ಯದ ಮನುಷ್ಯ... ಒಂದು ದಿನ ಇವನು ಕಂಪನಿಯ ಮುಖ್ಯಸ್ಥನಾಗಬಲ್ಲ...?" ಎಂದು ಉಚೆ ನಿಟ್ಟುಸಿರಿಟ್ಟ.

ಆ ಹೊತ್ತಿಗೆ ಪೀಟರ್ ಮಾರುಕಟ್ಟೆಗಳ ಸಂಶೋಧನಾ ವರದಿ ಲಭ್ಯವಿದೆ ಎಂದು ಪ್ರಕಟಿಸಿದ. ಅದರ ಬೆಲೆ ಐದು ಸಾವಿರ. ಅದು ಪ್ರತಿ ಮಾರುಕಟ್ಟೆಯ ವಿವರಗಳು, ಕಾಲಕಾಲಕ್ಕೆ ಅದರ ಏರಿಳಿತ, ಯಾವ ದೇಶಗಲ್ಲಿ ಇನ್ನು ಮುಂದೆ ಯಾವ ವಸ್ತುಗಳಿಗೆ ಬೇಡಿಕೆಯಿದೆ, ಅಲ್ಲಿ ಅದನ್ನು ಮಾರುವ ನಿಯಮಗಳೇನು ಎಂದೆಲ್ಲ ಸೂಚಿಸುವ ಹತ್ತು ಪುಟಗಳ ವರದಿ. ನಾವೂ ಅದನ್ನು ಕೊಂಡೆವು. ಜೆಫ್ ಆಮೂಲಾಗ್ರ ಅದನ್ನು ಓದಿ, ನಮಗೆ ಅದನ್ನು ಓದಲು ಕೊಟ್ಟು, ತಾನು ಏನೋ ಲೆಕ್ಕದಲ್ಲಿ ಮಗ್ನನಾದ. "ಆಫ್ರಿಕಾದಲ್ಲಿ ನಾವು ವ್ಯಾಪಾರ ವಿಸ್ತರಿಸಿದರೆ ಲಾಭ ಇದೆ" ಎಂದು ಏನೋ ಕಂಡುಹಿಡಿದವನಂತೆ ಉತ್ಸಾಹದಲ್ಲಿ ಹೇಳಿದ. "ಈಗ ಸದ್ಯಕ್ಕೆ ಬೇಡ. ಇನ್ನೆರಡು ತಿಂಗಳಾಗಲಿ" ಅಂದ.

ಆರು ತಿಂಗಳ ವ್ಯವಹಾರ ಮುಗಿದು ನಾವು ಊಟಕ್ಕೆ ಹೊರಟಾಗ ಇಡೀ ವಾತಾವರಣಕ್ಕೆ ಬೇರೆಯದೇ ರಂಗೇರಿತ್ತು. ಕಡಿಮೆ ಬೆಲೆಯಿಟ್ಟು ಟೆಂಡರ್ ಗಿಟ್ಟಿಸಿಕೊಂಡವರು ಅದು ಹೇಗೆ ಅಷ್ಟು ಕಡಿಮೆ ಬೆಲೆಗೆ ಮಾರಬಹುದೆಂದು ಅಸೂಯೆಯಲ್ಲಿ ಲೆಕ್ಕ ಹಾಕುವುದು ಇನ್ನೊಬ್ಬರ ತಂತ್ರ ಊಹಿಸುವುದು, ಪ್ರತಿಯೇಟು ಹಾಕುವುದು, ಕೋಪ, ಕೃತಕ ನಗೆ, ಪಿಸುಮಾತಿನ ಚರ್ಚೆಗಳು, ಪರಸ್ಪರ ಭಯಾನಕ ಸ್ಪರ್ಧೆ, ಗುಟ್ಟುಗಳು, ಚಕಚಕನೆ ಲಾಭನಷ್ಟ ಎಣಿಸುವುದು... ಹೀಗೆ ರಣರಂಗದ ಕಳೆಯೇರಿತ್ತು. ಊಟದ ಬಿಡುವಿನಲ್ಲಿ ಯಾರೂ ಪರಸ್ಪರ ಬೆರೆಯದೇ ತಮ್ಮ ತಮ್ಮದೇ ಗುಂಪುಗಳಲ್ಲಿ ಚರ್ಚಿಸುವುದರಲ್ಲಿ ಮಗ್ನರಾಗಿದ್ದರು. ಕಿಟಕಿಯಿಂದ ಹೊರಗಿನ ಸಮುದ್ರವನ್ನೇ ನೋಡುತ್ತ ನಿಂತ ಉಚೆ ಯಾಕೋ ಅನ್ಯ ಮನಸ್ಕನಾಗಿದ್ದಂತೆ ಅನಿಸಿತು. “ಏನು ಉಚೆ, ಹೇಗೇ ಹೆಚ್ಚು ಲಾಭ ಮಾಡುವುದು ಅಂತ ಯೋಚಿಸುತ್ತಿದ್ದೀಯಾ?” ಅಂದೆ. “ನಾವು ಆಫ್ರಿಕಾದಲ್ಲಿ ಹೊಸ ಕಾರ್ಖಾನೆ ಹಾಕಬಾರದು. ಅಲ್ಲಿಯ ಮಾರುಕಟ್ಟೆಗೆ ಹೋಗಬಾರದು” ಅಂದ. ಯಾಕೆ?” ಅಂದೆ. ಜೆಫ್‌ನ ಲೆಕ್ಕಾಚಾರದಲ್ಲಿ ಏನೋ ಊನ ಹುಡುಕಿದ್ದಾನೆ ಅಂದುಕೊಂಡು, ಯಾಕೆಂದರೆ ಅದು ಜನರನ್ನು ನಾಶ ಮಾಡುತ್ತದೆ” ಅಂದ. ನಾನು ಬೆಚ್ಚಿದೆ. ಇವನು ತನ್ನ ದೇಶದ ನಕಾಶೆ ನೋಡಿ ಭಾವುಕನಾಗಿದ್ದಾನೆ ಅನಿಸಿ ರಿಲ್ಯಾಕ್ಸ್ ಅಂದೆ. “ನೀನೂ ಯಾಕೆ ಹೀಗನ್ನುತ್ತೀ... ನೋಡು ಜೆಫ್‌ಗಿಂತ ನಿನಗೇ ಹೆಚ್ಚು ಇದು ಅರ್ಥವಾಗಬೇಕು. ನೂರಾರು ಜಾತಿ ಧರ್ಮ ದೇವರು ಇರುವ ನಿಮಗೂ ನಮಗೂ ಆಳದಲ್ಲಿ ಬಹಳ ಅಂತರವಿಲ್ಲ. ನಮ್ಮಲ್ಲಿ ಪ್ರತಿ ಊರಿಗೂ ಒಂದೊಂದು ಜೀವನ ವಿಧಾನವಿದೆ...” ಅಂದ. ನನಗಂತೂ ಅವನು ಏನನ್ನು ಉದ್ದೇಶಿಸಿ ಮಾತಾಡುತ್ತಿದ್ದಾನೆ ಅನ್ನುವುದು ಅರ್ಥವಾಗಲೇ ಇಲ್ಲ. ಊಟಕ್ಕೆ ಕೂತಾಗ ನಿನ್ನ ವಾದ ನನಗೆ ಅರ್ಥವಾಗುತ್ತಿಲ್ಲ’ ಅಂದೆ. ನಾನು ವಾದ ಮಾಡುತ್ತಿಲ್ಲ. ಇದ್ದ ಸಂಗತಿ ಹೇಳಿದೆ ಅಷ್ಟೆ? ಅಂದ. ಅಮೇಲಿನ ದೀರ್ಘ ಮೌನ ಮುರಿದು ತನ್ನ ಬಗ್ಗೆ ತನ್ನ ದೇಶದ ಬಗ್ಗೆ ಬಹಳಷ್ಟು ಹೇಳಿದ.

“ನಾವೆಲ್ಲ ಇನ್ನೂ ಗುಲಾಮರು. ಹೆಸರಿಗೆ ಮಾತ್ರ ನಮ್ಮಲ್ಲಿ ಪ್ರಜಾಪ್ರಭುತ್ವ ಇದೆ. ನನ್ನ ದೂರದ ಸಂಬಂಧಿಯೊಬ್ಬ ಅಧ್ಯಕ್ಷನಾಗಿದ್ದ, ಅವನನ್ನು ಕೊಂದು ಈಗಿರುವಾತ ಮಿಲಿಟರಿ ಆಡಳಿತ ತಂದ. ಚುನಾವಣೆಯ ನಾಟಕವಾಡಿ ಹದಿನೈದು ವರ್ಷಗಳಿಂದ ಇದ್ದಾನೆ. ನಮ್ಮಲ್ಲಿ ಪ್ರೆಸಿಡೆಂಟ್ ಅನ್ನುವ ಶಬ್ದವನ್ನು ಅವನಿಗೆ ಬಿಟ್ಟರೆ ಬೇರೆ ಯಾರಿಗೂ ಬಳಸಬಾರದು. ನಮ್ಮ ದೇಶದಲ್ಲಿ ನಮ್ಮ ಕಂಪನಿಗೆ ಚೇರಮನ್ ಇದ್ದಾನೆ. ನಿಮ್ಮಲ್ಲಿಯ ಹಾಗೆ ಪ್ರೆಸಿಡೆಂಟ್ ಇಲ್ಲ... ನಮ್ಮ ದೇಶ ಒಂದು ಕಾಲದಲ್ಲಿ ಬಹಳ ಕೋಕೋ ಬೆಳೆಯುತ್ತಿತ್ತು. ಹಿಂದಿನ ಆಡಳಿತ ಅದರ ರಫ್ತಿಗಾಗಿ ದೊಡ್ಡ ಸಂಗ್ರಹಾಲಯಗಳನ್ನು ನಿರ್ಮಿಸಿತ್ತು. ಅದು ಹಿಂದಿನ

ಸರ್ಕಾರದ ದೊಡ್ಡ ಸಾಧನೆಯಾಗಿ ಜನರಿಗೆ ಕಂಡಿದ್ದರಿಂದ ಅವುಗಳನ್ನೆಲ್ಲ ನಾಶ ಮಾಡಿದ. ಜನರನ್ನು ಬಡವರನ್ನಾಗಿ ಮಾಡಿದ. ಆದರೆ ಅವರ ಕೊಳ್ಳುವ ಆಸೆಗಳನ್ನು ಹೆಚ್ಚಿಸಿದ. ಈ ರಾಜಕೀಯ ಹುನ್ನಾರಿನಲ್ಲಿ ಬೇರೆ ದೇಶದ ದೊಡ್ಡ ಕಂಪನಿಗಳೆಲ್ಲ ಶಾಮೀಲಾಗಿದ್ದವು. ನಮ್ಮಲ್ಲಿ ಏನೂ ತಯಾರಾಗದಂತೆ ಮಾಡಿದ. ನಾನು ಹಾಕಿರುವ ಈ ಶರ್ಟು ಕೂಡ ಬೇರೆ ಯಾರೋ ಮಾಡಿ ನಮಗೆ ಕೊಡಬೇಕು. ಇದ್ದ ದೇಶೀ ಉದ್ಯಮಗಳೆಲ್ಲ ಈ ಹೊಸ ತಂತ್ರಜ್ಞಾನ ಇಲ್ಲದೇ, ಸರ್ಕಾರದ ಬೆಂಬಲವಿಲ್ಲದೇ ಸೊರಗಿ ಸಾಯುತ್ತಲಿವೆ. ನಮ್ಮ ನೆಲದಲ್ಲಿ ಒಂದಿಷ್ಟು ಪೆಟ್ರೋಲ್, ಎಣ್ಣೆ ಸಿಗುವುದರಿಂದ ಬದುಕಿದ್ದೇವೆ. ಅದೆಲ್ಲ ಸರ್ಕಾರಕ್ಕೆ ಸೇರಿದ್ದು, ಆಹಾರ ವಿತರಣೆಯ ಸೂತ್ರ ಇರುವುದು ಸರ್ಕಾರದ ಕೈಯಲ್ಲಿ ಅವರು ವಿತರಿಸುವುದು ದೊಡ್ಡ ಕಂಪನಿಗಳ ಉತ್ಪಾದನೆಗಳು, ನಮ್ಮ ರುಚಿ, ವಾಸನೆ, ಬಟ್ಟೆ, ಆಹಾರದ ಪ್ರಮಾಣ ಬದಲಾಗತೊಡಗಿದೆ. ಎಲ್ಲರ ಮನೆ ಊಟವೂ ಒಂದೇ ರೀತಿಯಾಗುತ್ತಲಿದೆ. ಯಾರಿಗೂ ವೈವಿಧ್ಯ ಬೇಕಿಲ್ಲ. ದೊಡ್ಡ ಪ್ರಮಾಣದಲ್ಲಿ ಉತ್ಪಾದಿಸಿ ಮಾರುವುದು ಬೇಕು. ಹೇರದೇ ಇದ್ದರೆ, ಆಯ್ಕೆ ಇದ್ದರೆ ಯಾರು ತಾನೆ ಕೊಳ್ಳುತ್ತಾರೆ? ನಾವು ಅವರಿಗಾಗಿ ದುಡಿಯುವುದು, ಅವರು ಮಾಡಿದ್ದನ್ನು ಕೊಳ್ಳುವುದು. ನಾವೆಲ್ಲ ಕಡಿಮೆ ಬೆಲೆಗೆ ಸಿಗುವ ಕೂಲಿಗಳಾಗುತ್ತಿದ್ದೇವೆ. ನನ್ನ ಮನೆಯಲ್ಲಿ ನನ್ನ ಇಬ್ಬರು ಚಿಕ್ಕಪ್ಪಂದಿರು ಕೆಲಸ ಕಳಕೊಂಡು ಕೂತಿದ್ದಾರೆ. ಕಾರ್ಖಾನೆ ಮುಚ್ಚಿ ಅವರಿಗೆ ಇಪ್ಪತ್ತು ಸಾವಿರ ಕೊಟ್ಟು ಮನೆಗೆ ಕಳಿಸಿದರು. ಒಬ್ಬನಂತೂ ಕೆಲಸ ಮಾಡುವಾಗ ತನ್ನ ಎಡಗೈಯ ನಾಲ್ಕು ಬೆರಳುಗಳನ್ನು ಕತ್ತರಿಸಿಕೊಂಡಿದ್ದಾನೆ..."

ಉಚೆಯ ಮಾತುಗಳನ್ನು ಕೇಳಿ ನಾನು ಬೆರಗಾದೆ. ಅವನೊಳಗೆ ಇಂಥ ದ್ದೆಲ್ಲ ಇದೆ ಅನ್ನುವುದು, ಅವನು ಹೀಗೆಲ್ಲ ಯೋಚಿಸುತ್ತಾನೆ ಅನ್ನುವುದು ನನ್ನ ಕಲ್ಪನೆಯ ಆಚೆಯದಾಗಿತ್ತು. ಅವನು ತನ್ನ ಮಾತಲ್ಲಿ ಏನೆಲ್ಲ ಮೂಡಿಸಿದ. ಮನೆಯ ಒಳಗಿನ ಕತ್ತಲು, ಊಟದ ತಟ್ಟೆಗಳು, ಕೆಲಸ ಕಳಕೊಂಡ ಚಿಕ್ಕಪ್ಪಂದಿರ ಖಾಲೀನೋಟ. ಹಾಡುಗಳು, ಹಾಡುವಾಗ ಕಂಪಿಸಿದ ದನಿಗಳು, ಮರೆತುಹೋದ ಸಾಲುಗಳು, ನಿದ್ದೆಗೆಟ್ಟ ಕಣ್ಣುಗಳು, ಜೊತೆಜೊತೆಗೇ ನಂಬಿಕೆಗಳು, ಕನಸುಗಳು, ಓಡಿಬಂದ ಮಕ್ಕಳನ್ನು ತೆಕ್ಕೆಗೆ ಸೇರಿಸಿಕೊಳ್ಳುವ ತೋಳುಗಳು, ಪ್ರೀತಿಯಲ್ಲಿ ಅರಳಿದ ನಗುವಿನಲ್ಲಿ ಹೊಳೆವ ಹಲ್ಲುಗಳು, ಹೆಂಡತಿಯನ್ನು ಪ್ರೀತಿಯಿಂದ ತಡವಲಾರದ ಹಾಗೆ ಮಾಡಿದ, ಥಡಕ್ಕನೆ ನಿಂತು ಹೋದ ಜೀವನ ಚಕ್ರಗಳು... ನಕಾಶೆಯ ಮೇಲಿನ ಅಚ್ಚಿನ ಬೊಂಬೆಗಳ ಸರಿದಾಟವನ್ನು ಬರೀ ಜೆಫ್‌ನ ಲೆಕ್ಕದಲ್ಲಿ ತೂಗಿ ನೋಡದೇ, ಅದಕ್ಕೆ ಅಂಟಿಕೊಂಡ ನೂರಾರು ಹೆಣಿಗೆಗಳನ್ನು ಬಿಚ್ಚತೊಡಗಿದ. ನಾನು ಸುಮ್ಮನೇ ಅವನ ಮಾತುಗಳನ್ನು ಕೇಳಿಸಿಕೊಳ್ಳುತ್ತ

ಕೂತೆ. "ತಡವಾಯಿತು ಬನ್ನಿ" ಎಂದು ಚೆಫ್ ಎದ್ದು ಹೋದ.

ಆಟ ಮತ್ತೆ ಆರಂಭವಾಗಿತ್ತು, ಆಟದ ಮತ್ತು ಎಲ್ಲರ ತಲೆಗೇರಿತ್ತು, ಉಚೆಗೆ ತಲೆಕೆಟ್ಟಿದೆ" ಎಂದು ಜೆಫ್ ನನ್ನ ಕಿವಿಯಲ್ಲಿ ಉಸುರಿದ. ಉಚೆಯ ಜೊತೆ ಹೆಚ್ಚು ವಾದ ಮಾಡದೇ ಸದ್ಯಕ್ಕೆ, ಆಫ್ರಿಕಾದಲ್ಲಿ ವಿಸ್ತರಣೆ ಬೇಡವೆಂದು ನಿರ್ಧರಿಸಿದೆವು. ಎಲ್ಲರೂ ತಮ್ಮ ಸರ್ವ ಶಕ್ತಿಯನ್ನೂ ಚಾಣಾಕ್ಷತೆಯನ್ನೂ ಪಣಕ್ಕೆ ಒಡ್ಡಿದಂತೆ ಆಡುತ್ತಿದ್ದರು. ಆಟ ಮುಂದುವರಿಯುತ್ತಿದ್ದ ಹಾಗೆ ಅದರ ನಿಯಮಗಳೆಲ್ಲ ನಮಗೆ ಎಂದಿನಿಂದಲೂ ಗೊತ್ತಿದ್ದವೇನೋ ಎಂಬಂತೆ ಕರಗತವಾಗಿದ್ದವು. ಒಮ್ಮೊಮ್ಮೆಯಂತೂ ಈ ಆಟದ ನಿಯಮಗಳೇ ನಮ್ಮನ್ನು ನಿಯಂತ್ರಿಸುತ್ತಿವೆ ಅನಿಸುತ್ತಿತ್ತು. ಎರಡು ಬಾರಿ ನಮ್ಮ ಲೆಕ್ಕಾಚಾರ ತಲೆಕೆಳಗಾಗಿ ಸಿದ್ಧವಸ್ತುಗಳು ಮಾರಾಟವಾಗದೇ ಪೇರತೊಡಗಿದ್ದವು. ವರ್ಷದ ಕೊನೆಗೆ ಎಲ್ಲರೂ ವಾರ್ಷಿಕ ವರದಿ ಪ್ರಕಟಿಸಿದಾಗ ನಾವು ನಷ್ಟದಲ್ಲಿಲ್ಲವಾದರೂ ಕೊನೆಯ ಸ್ಥಾನದಲ್ಲಿದ್ದೆವು. ಚೆಫ್‌ಗೆ ಯೋಚನೆಗಿಟ್ಟುಕೊಂಡಿತ್ತು ಯಾವಾಗಲೂ ಗೆಲ್ಲಬೇಕು ಅನ್ನುವ ಪೈಕಿ ಅವನು ರಾತ್ರಿ ಊಟಕ್ಕೆ ಕೂತಾಗ "ನಾಳೆ ನಾವೆಲ್ಲ ಸರಿಯಾಗಿ ಯೋಚಿಸಿಕೊಂಡು ಬರಬೇಕು. ಇವತ್ತಿನ ಹಾಗೆ ಮಾಡಿದರೆ ನಾವು ಕೊನೆಯವರೆಗೂ ಕೊನೆಯ ಸ್ಥಾನದಲ್ಲೇ ಇರುತ್ತೇವೆ" ಅಂದ. "ಬೇಗ ಮಲಗಿಕೊಳ್ಳಿ... ಚೆನ್ನಾಗಿ ನಿದ್ದೆ ಮಾಡಿ" ಎಂದು ಹೋದ.

ಅದಾದ ಮೇಲೆ ನಾನು ಮತ್ತು ಉಚೆ ಬಹಳ ಹೊತ್ತು ಮಾತಾಡುತ್ತ ಕೂತವು. ಅವನಿಗೆ ನನ್ನ ಬಗ್ಗೆ ನಮ್ಮ ದೇಶದ ಬಗ್ಗೆ ಏನೇನೆಲ್ಲ ಹೇಳಿದೆ. ನಮ್ಮ ಜೀವನದ ಆಚಾರಗಳನ್ನು, ನಂಬಿಕೆಗಳನ್ನು, ಮದುವೆಯ ಕಗ್ಗಂಟುಗಳನ್ನು, ಮಧ್ಯಮ ವರ್ಗದ ಕಾರ್ಮಿಕ ಕುಟುಂಬದ ನನ್ನ ತಂದೆತಾಯಿಯರ ಆಸೆಗಳನ್ನು, ನಾನು ಇಂಥ ಕೆಲಸದಲ್ಲಿರುವುದು ಕಾರ್ಮಿಕನಾದ ನನ್ನ ತಂದೆಗೆ ಕೊಟ್ಟ ಅಭಿಮಾನವನ್ನು ಹೇಳುತ್ತ ಹೇಳುತ್ತ ಹಳಿತಪ್ಪಿದೆ. ಗಾಂಧಿಯ ಬಗ್ಗೆ ಹೇಳಿದೆ, ನಲವತ್ತೇಳರ ಸ್ವಾತಂತ್ರ್ಯದ ಬಗ್ಗೆ ದೇಶದ ರಾಜಕೀಯದ ಬಗ್ಗೆ ಹೇಳಿದೆ, ನನ್ನ ನಿದ್ದೆಗೇಡಿಗೆ ಕಾರಣವಾಗುವ ತಲ್ಲಣಗಳನ್ನು ಹೇಳಿದೆ. ನನ್ನ ಬಾಲ್ಯದ ಬಗ್ಗೆ ಹೇಳಿದೆ, ಹೆಂಡತಿಯ ಬಗ್ಗೆ ಹೇಳಿದೆ, ಮೈಮೇಲೆ ಗಣ ಬರುವುದನ್ನು ರಂಗಾಗಿ ವಿವರಿಸಿದೆ. ಪತ್ರೋಡೆಯ ರುಚಿ ಹೇಳಿದೆ...

ತೀರಾ ಮಾತಾಡಿದೆ ಎಂದು ಕಸಿವಿಸಿ ಪಡುತ್ತ ರೂಮಿಗೆ ಹೋಗಿ ಮಲಗಿದ. ಸರಿಯಾಗಿ ನಿದ್ದೆ ಬರಲಿಲ್ಲ, ಮರುದಿನ ಬೆಳಿಗ್ಗೆಯೇ ಜೆಫ್ ನನ್ನ ರೂಮಿಗೆ ಬಂದು ತಾನು ಯೋಚಿಸಿದ ತಂತ್ರಗಳನ್ನು ಹೇಳಿದ. ಹಿಂದಿನ ದಿನ ಉಚೆ ಆಡಿದ ಮಾತುಗಳು ನನ್ನನ್ನು ಬಾಧಿಸಿದವು. ಈ ಆಟ ಹೇಗೆ ಕಾಡುತ್ತಿತ್ತೆಂದರೆ

ನಡುರಾತ್ರಿ ಎಚ್ಚರಾದಾಗ ಥಟ್ಟನೆ ಏನೋ ಹೊಳೆದಿತ್ತು. ಎದ್ದು ನೀರು ಕುಡಿದು ಮಲಗುವಾಗಲೂ ಅದೇ ಯೋಚನೆ. ನಮ್ಮ ಒಳಗಿನ ಕಾಮದಂಥ ಯಾವುದೋ ಪ್ರಕೃತಿಯನ್ನು ಹೊಡೆದೆಬ್ಬಿಸಿದ ಹಾಗಿತ್ತು. ಯಾವುದೂ ರುಚಿಸದ ಹಾಗೆ, ಯಾರ ಜೊತೆಯೂ ಬೆರೆಯದೇ ನಮ್ಮ ನಮ್ಮ ಗುಂಪುಗಳಲ್ಲಿ ನಮ್ಮನ್ನು ಕಟ್ಟಿಹಾಕಿದ ಇದರ ಹಿಡಿತಕ್ಕೆ ತಲ್ಲಣಿಸಿದೆ. ಎರಡು ದಿನಗಳಿಂದ ಅರ್ಧ ಓದಿಟ್ಟ ಪುಸ್ತಕ ಮುಂದುವರಿಸಲಾಗಿರಲಿಲ್ಲ. ಹಾಡು ಕುಣಿತ ಹರಟೆಗಳಿಲ್ಲ, ಸಮುದ್ರದಂಡೆಯ ಮೇಲೆ ವಾಕಿಂಗ್ ಇಲ್ಲ, ಬರೀ ಇದೇ.

ಬೆಳಗಿನ ತಿಂಡಿಯಾಗಿ, ಆಟ ಶುರುವಾಗಿದ್ದೇ ಜೆಫ್ ಆಫ್ರಿಕಾದ ಮಾತೆತ್ತಿದ. ಉಚೆ ಸಾಧ್ಯವೇ ಇಲ್ಲ ಅಂದ, ನಮಗೆ ಉಚೆಯದು ಅತಿಯಾಯಿತು ಅನಿಸತೊಡಗಿತು. ನಾವು ಆಫ್ರಿಕಾದಲ್ಲಿ ವ್ಯಾಪಾರ ವಿಸ್ತರಿಸದೇ ಬೇರೆ ಉಪಾಯವಿರಲಿಲ್ಲ. ಬೇರೆ ಯಾವ ತಂಡವೂ ಇನ್ನೂ ಇಲ್ಲಿ ಕಾಲಿಟ್ಟಿರಲಿಲ್ಲ. ಅವರಿಗಿಂತ ಮುಂಚೆಯೇ ನಾವು ಹೋಗದಿದ್ದರೆ ಲಾಭ ಹೆಚ್ಚಿಸುವುದು ಸಾಧ್ಯವೇ ಇರಲಿಲ್ಲ. ನಾನು ಅವನಿಗೆ ನಮಗೆ ಒದಗಿಸಿದ್ದ ಪುಟಗಳಿಂದ ವಿವರಗಳನ್ನು ಎತ್ತಿ ತೋರಿಸುತ್ತ, ಯಾಕೆ ನಾವು ಅಲ್ಲಿ ಹೋಗಬೇಕು ಎಂದು ಹೇಳಲು ಪ್ರಯತ್ನಿಸಿದೆ. ಏನನ್ನು ಹೇಳಿದರೂ ಅದೇ, ಅದೇ ಕಾರಣಕ್ಕೆ ನಾನು ಬೇಡ ಅನ್ನುವುದು' ಎನ್ನುತ್ತಿದ್ದ. ಜೆಫ್ ಅವನಿಗೆ ಇಷ್ಟೊಂದು ಭಾವುಕವಾಗಿ, ಮಳ್ಳನ ಹಾಗೆ ಆಡಬೇಡ. ನಿನ್ನ ದೇಶದಲ್ಲಿ ಏನಿದೆಯೋ ಇಲ್ಲವೋ ನಮಗೆ ಗೊತ್ತಿಲ್ಲ. ನಮಗೆ ಗೊತ್ತಿರುವುದು ಈ ಪುಟಗಳಲ್ಲಿ ಎಷ್ಟಿದೆಯೋ ಅಷ್ಟು, ಇದೊಂದು ಆಟ ಅನ್ನುವುದನ್ನು ತಿಳಕೋ" ಎಂದು ಉಚೆ ತನ್ನ ಪಟ್ಟು ಬಿಡಲಿಲ್ಲ. ಇದು ಆಟ. ಈಗ ಮಾತ್ರವಲ್ಲ ಯಾವಾಗಲೂ ಇದು ಹೀಗೇ, ಕಾಗದದ ಮೇಲಿನ ವಿವರಗಳು, ನಕಾಶೆಯ ಮೇಲಿನ ಹೆಸರುಗಳನ್ನು ನೋಡಿಕೊಂಡು ಅಧಿಕಾರ ಶಕ್ತಿಯ ತಂತಿಗಳನ್ನು ಎಳೆದಾಡಿಸುವುದು... ಜನರನ್ನು ಕೊಲ್ಲುವ ಆಟ ಆಡಿಸಿದರೆ ನೀನು ಆಡುತ್ತೀಯಾ? ಅದರಲ್ಲಿ ನಿನ್ನ ಬಳಗದವರೆಲ್ಲ ಇದ್ದು ಇಂತಿಂಥವರನ್ನು ಕೊಂದೆ ಎಂದು ಬೊಂಬೆಗಳನ್ನು ಬದಿಗೆ ಸರಿಸಿಡುವ ಆಡುತ್ತೀಯಾ?" ಅಂದ, ಉಚೆಯ ಮಾತುಗಳು ಹರಿತವಾಗಿದ್ದವು. ಜೆಫ್ ಅವನನ್ನು ಬಗೆಬಗೆಯಾಗಿ ನೋಡಿದ. "ನಾವೀಗ ನಷ್ಟದಲ್ಲಿಲ್ಲವಲ್ಲ ಹೆಚ್ಚು ಲಾಭ ಬೇಡ. ಹೀಗೇ ನಿಭಾಯಿಸೋಣ" ಅಂದ ಉಚೆಯ ಮಾತಿಗೆ ಜೆಫ್ ಅಂದರೆ ನಷ್ಟದಲ್ಲಿದ್ದರೆ ನೀನು ಒಪ್ಪಿಕೊಳ್ಳುತ್ತಿದೆ ಅಂತಾಯಿತು... ಹಣ ಇಟ್ಟುಕೊಳ್ಳುವುದರಲ್ಲಿ ಮಜವಿಲ್ಲ... ಹಣ ಮಾಡುವುದರಲ್ಲಿ ಮಜ..." ಅಂದ. ಮತ್ತೆ ಉಚೆಯ ಮೊಂಡುವಾದ ಮುಂದುವರಿಯಿತು. ಉಚೆ ತೀರಾ ಅತಿಗೆ ಎಳೆಯುತ್ತಿದ್ದಾನೆ ಅನಿಸಿತು. ಅವನು ಒಪ್ಪದೇ ನಾವು ಏನೂ ಮಾಡುವಂತಿರಲಿಲ್ಲ. ಆಟದ ನಿಯಮವೇ ಹಾಗಿತ್ತು. ಎಲ್ಲರೂ ಸೇರಿ ಮಾಡಿದ

ನಿರ್ಧಾರವಿರಬೇಕು. ಯಾರೊಬ್ಬ ವಿರೋಧಿಸಿದರೂ ಸರ್ಕಾರದ ಪಾತ್ರಧಾರಿ ಪೀಟರ್ ಅದನ್ನು ತಳ್ಳಿಹಾಕುತ್ತಿದ್ದ. ಉಚೆಯನ್ನು ಹೇಗಾದರೂ ಒಪ್ಪಿಸದೇ ಬೇರೆ ದಾರಿಯಿರಲಿಲ್ಲ.

"ನೀನಿಲ್ಲೇ ಇರು" ಎಂದು ನನಗೆ ಹೇಳಿ ಜೆಫ್, ಉಚೆಯನ್ನು ಆಚೆ ಕರೆದುಕೊಂಡು ಹೋದ. ಹತ್ತು ಹದಿನೈದು ನಿಮಿಷಗಳ ನಂತರ ಇಬ್ಬರೂ ಬಂದರು. "ಉಚೆ ಸಹಕರಿಸುತ್ತಾನೆ" ಎಂದು ಜೆಫ್ ಹೇಳಿದ. ಅವನೇನು ಹೇಳಿದನೋ, ಬೆದರಿಕೆ ಹಾಕಿದನೋ, ಇಬ್ಬರೂ ಜಗಳಾಡಿದರೋ, ಹೊಡೆದಾಡಿದರೋ ನನಗೆ ಗೊತ್ತಾಗಲಿಲ್ಲ. ಉಚೆಯ ಮೋರೆ ನೋಡಿ ಕೆಡುಕೆನಿಸಿತು. ನೀನು ಹೇಳಿದ್ದೆಲ್ಲ ಅರ್ಥವಾಗುತ್ತದೆ. ನಿನ್ನ ಹಾಗೆಯೇ ನಾನೂ ಎಂದು ಅವನಿಗೆ ತಿಳಿಸಲು ನಿನ್ನೆ ರಾತ್ರಿ ನನ್ನ ಬಗ್ಗೆ ಅಷ್ಟೆಲ್ಲ ಹೇಳಿಕೊಂಡೆನೇನೋ ಅನಿಸಿತು. ಹಾಗೆ ಅನಿಸುತ್ತಿದ್ದಂತೆಯೇ, ಅವನು ಹೇಳಿದ್ದನ್ನು ಅರ್ಥಮಾಡಿಕೊಂಡರೂ ಇದನ್ನು ಆಟವೆಂದು ಭಾವಿಸುವ ಪರಿವರ್ತನೆ ನನ್ನಲ್ಲಿ ಯಾವಾಗ, ನನ್ನ ಜೀವನದ ಯಾವ ಹಂತದಲ್ಲಿ ಹೇಗೆ ಆಯಿತು ಅಂತ ಅರಿವಾಗಲಿಲ್ಲ. ಉಚೆಯನ್ನು ಜೆಫ್ ಹೇಗೆ ಒಪ್ಪಿಸಿದ. ಅದು ಯಾವ ಶಕ್ತಿಯನ್ನು ಪ್ರಯೋಗಿಸಿದ, ಯಾವ ತಂತಿಯನ್ನು ಮೀಟಿದ ಎಂದು ಬಗೆಹರಿಯಲಿಲ್ಲ. ಉಚೆ ಎಲ್ಲದಕ್ಕೂ ಹೂಂ ಹೂಂ ಎಂದು ನಿರಾಸಕ್ತಿಯಲ್ಲಿ ತಲೆಯಾಡಿಸತೊಡಗಿದ. ಅಂತೂ ಮೂರನೇ ದಿನದ ಕೊನೆಗೆ ನಾವು ಎರಡನೇ ಸ್ಥಾನಕ್ಕೇರಿದ್ದೆವು.

* * *

***ಆಕರ :** 'ಸುವರ್ಣ ಕಥಾ ಸಂಕಲನ' ಸಂ: ಕೃಷ್ಣಮೂರ್ತಿ ಹನೂರು, ಬಾನು ಮುಷ್ತಾಕ್*

**ವಿವೇಕ ಶಾನಭಾಗ :**

ವಿವೇಕ ಶಾನಭಾಗ ಅವರು ಉತ್ತರ ಕನ್ನಡ ಜಿಲ್ಲೆಯವರು. ಕನ್ನಡದ ಪ್ರಮುಖ ಕತೆಗಾರರಲ್ಲಿ ಒಬ್ಬರಾದ ವಿವೇಕ ಅವರು 'ದೇಶಕಾಲ' ಎಂಬ ಸಾಹಿತ್ಯಕ ಪತ್ರಿಕೆಯನ್ನು ಏಳು ವರ್ಷಕಾಲ ನಡೆಸಿದರು. ಹೊಸ ಬಗೆಯ ಕಥೆಕಟ್ಟುವ ಅವರು ಸಣ್ಣಊರು ಅಥವಾ ವಿಶಾಲ ಜಗತ್ತುಗಳೆರಡರಲ್ಲಿಯೂ ಮನುಷ್ಯರ ಮನಸ್ಸಿನ ಆಯಾಮ ಗುರುತಿಸಬಲ್ಲರು. ಅವರ 'ಘಾಚರ್ ಘೋಚರ್' ನೀಳ್ಗತೆಯ ಇಂಗ್ಲಿಷ್ ಅನುವಾದ ಜಗತ್ತಿನ ಸಾಹಿತ್ಯ ವಲಯದ ಗಮನ ಸೆಳೆದಿದೆ. ಲಂಡನ್, ಅಮೆರಿಕಗಳಲ್ಲಿ ಪ್ರತ್ಯೇಕ ಆವೃತ್ತಿ ಕಂಡಿರುವ ಈ ಕೃತಿ ಜಗತ್ತಿನ 18 ಭಾಷೆಗಳಿಗೆ ಅನುವಾದಗೊಂಡು ಮಚ್ಚುಗೆ ಗಳಿಸಿದೆ.

ಅಂಕುರ, ಲಂಗರು, ಹುಲಿಸವಾರಿ, ಮತ್ತೊಬ್ಬನ ಸಂಸಾರ, ಫಾಚರ್ ಫೋಚರ್ (ಕಥಾ ಸಂಕಲನಗಳು), ಇನ್ನೂ ಒಂದು, ಒಂದು ಬದಿ ಕಡಲು, ಊರುಭಂಗ (ಕಾದಂಬರಿಗಳು), ಸಕ್ಕರೆ ಗೊಂಬೆ, ಬಹುಮುಖಿ (ನಾಟಕಗಳು), ಶ್ರೀಕೃಷ್ಣ ಆಲನಹಳ್ಳಿ ವಾಚಿಕೆ (ಸಂಪಾದನೆ), ಸಿರಿಗನ್ನಡ (ಸಂಪಾದಿತ ಇಂಗ್ಲಿಷ್ ಕೃತಿ) ಅವರ ಪ್ರಕಟಿತ ಕೃತಿಗಳು.

## 4.3 ಜಾಪಾನಿನ ಅಪೂರ್ವ ಕಲೆ ಜಾನೂಯು

**– ಜಿ.ಎಸ್. ಆಮೂರ**

ಪುರಾತನ ಸಂಸ್ಕೃತಿಗಳಾದ ಏಶಿಯಾದ ಸಂಸ್ಕೃತಿಗಳು ತಮ್ಮ ಸಮರ್ಥನೆಯನ್ನು ತಾವಾಗಿಯೇ ಮಾಡಿಕೊಳ್ಳಬೇಕಾಗಿ ಬಂದುದು ವಸಾಹತುಶಾಹಿಯ ವೈಪರೀತ್ಯಗಳಲ್ಲೊಂದು. ಈ ಕಾವ್ಯವನ್ನು ಯಶಸ್ವಿಯಾಗಿ ನೆರವೇರಿಸಲು ಏಶಿಯಾದ ಬರಹಗಾರರು ಪಶ್ಚಿಮದ ಪರಿಭಾಷೆ, ಪರಿಪ್ರೇಕ್ಷಗಳನ್ನು ಅನಿವಾರ್ಯವಾಗಿ ಬಳಸಬೇಕಾಯಿತು. ಆಶ್ಚರ್ಯದ ಸಂಗತಿಯೆಂದರೆ ಸ್ವಸಂಸ್ಕೃತಿಯನ್ನು ಹೆಚ್ಚು ಕಡಿಮೆ ಮರೆತುಬಿಟ್ಟ ಏಶಿಯಾದ ಸುಶಿಕ್ಷಿತ ವರ್ಗ ಕೂಡ ಇಂಥ ವ್ಯಾಖ್ಯಾನಕಾರರ ಮೂಲಕವಾಗಿಯೇ ತಮ್ಮ ಸಂಸ್ಕೃತಿಯತ್ತ ಹೊರಳುವಂತಾದದ್ದು. ತತ್ವಜ್ಞಾನದ ಕ್ಷೇತ್ರದಲ್ಲಿ ಎಸ್. ರಾಧಾಕೃಷ್ಣನ್, ಕಲೆಗಳ ಕ್ಷೇತ್ರದಲ್ಲಿ ಆನಂದ ಕುಮಾರಸ್ವಾಮಿ, ಸಾಹಿತ್ಯದ ಕ್ಷೇತ್ರದಲ್ಲಿ ರವೀಂದ್ರನಾಥ ಠಾಕೂರ, ಸಿನೆಮಾ ಕ್ಷೇತ್ರದಲ್ಲಿ ಸತ್ಯಜಿತ್ ರಾಯ್ ಇಂಥ ಮಹನೀಯರ ಕಾವ್ಯವನ್ನು ಈ ಸಂದರ್ಭದಲ್ಲಿ ನೆನೆಯಬಹುದು. ಇವರೆಲ್ಲರೂ ಪಶ್ಚಿಮದಿಂದ ಅಪೂರ್ವ ಮನ್ನಣೆ ದೊರಕಿಸಿದುದರ ಮುಖ್ಯ ಕಾರಣ ಅವರು ಪಶ್ಚಿಮದ ಮಾಧ್ಯಮಗಳ ಮೇಲೆ ದೊರಕಿಸಿದ ಪ್ರಭುತ್ವ, ಈ ಮಟ್ಟದಲ್ಲಲ್ಲದಿದ್ದರೂ ಇಂಥದೇ ಒಂದು ನಿದರ್ಶನ ಕಾಕುರ್ಝೋ ಒಕಕುರ ಅವರ The Book of Tea. 1906ರಲ್ಲಿ ಮೊದಲ ಬಾರಿಗೆ ಪ್ರಕಾಶಿತವಾದ ಈ ಗ್ರಂಥ ಸೋಶಿತ್ಸು ಸೆನ್ ಅವರ ಹಿನ್ನುಡಿ, ಮುನ್ನುಡಿಗಳೊಡನೆ 1989ರಲ್ಲಿ ಪುನರ್ಮುದ್ರಿತವಾಗಿದೆ. ಇದೊಂದು ಏಶಿಯಾದ ಸಂಸ್ಕೃತಿಯಲ್ಲಿ ಆಸಕ್ತಿ ಹೊಂದಿದವರೆಲ್ಲರೂ ಓದಲೇಬೇಕಾದ ಪುಸ್ತಕ.

ಒಕಕುರ ಅವರಿಗೆ ಈ ಪುಸ್ತಕ ಬರೆಯಲು ಪ್ರೇರಣೆ ದೊರಕಿದ್ದು 1877ರಲ್ಲಿ. ಅವರು ಟೋಕಿಯೋ ವಿಶ್ವವಿದ್ಯಾಲಯದಲ್ಲಿ ಓದುತ್ತಿದ್ದಾಗ ಅಲ್ಲಿ ಶಿಕ್ಷಕರಾಗಿದ್ದ, ಮೂಲತಃ ಅಮೇರಿಕನ್ನರಾದ, ಫೆನೊಲ್ಲೊಸಾ ಅವರ ಮೂಲಕ, ಫೆನೊಲ್ಲೊಸಾ ಚೀನ ಮತ್ತು ಜಾಪಾನುಗಳ ಸಂಸ್ಕೃತಿಗಳಲ್ಲಿ ಅಪಾರ ಆಸಕ್ತಿ ಹೊಂದಿದವರಾಗಿದ್ದರು. ಜಾಪಾನಿನ ಕಲೆಗಳನ್ನು ಮೊಟ್ಟಮೊದಲು ಪಾಶ್ಚಿಮಾತ್ಯರಿಗೆ ಪರಿಚಯಿಸಿದ ಶ್ರೇಯಸ್ಸು ಅವರದು. ಚೀನದ ಶಬ್ದಚಿತ್ರ (ideograms) ಗಳ ಬಗ್ಗೆ ಅವರು ನಡೆಯಿಸಿದ ಸಂಶೋಧನೆ ಎಜ್ರಾಪೌಂಡ್‌ನಂಥ ಹಲವಾರು ಕವಿಗಳ ಮೇಲೆ ಪ್ರಭಾವ ಬೀರಿತು. ಆದರೆ ವಿಶ್ವದ ಲಕ್ಷ, ಜಪಾನಿನತ್ತ ತಿರುಗಿದುದು ತನ್ನ ನೌಕಾಪಡೆಯ ಸಾಮರ್ಥ್ಯದಿಂದ ಅದು ರಶಿಯವನ್ನು ಸೋಲಿಸಿದಾಗ ಮಾತ್ರ. ಪಾಶ್ಚಿಮಾತ್ಯರು ತಮ್ಮ ದೇಶದ ಪುರಾತನ ಸಂಸ್ಕೃತಿಯನ್ನು ಗೌರವಿಸದೇ, ಅದರ

ಸೈನಿಕ ಬಲವನ್ನು ಮೆಚ್ಚಿಕೊಂಡುದುದು ಒಕಕುರಂಥವರಿಗೆ ವ್ಯಂಗ್ಯವೆನಿಸಿತು, The Book of Tea ಈ ವ್ಯಂಗ್ಯ ಸ್ಥಿತಿಯನ್ನು ಕೆಲಮಟ್ಟಿಗಾದರೂ ಸುಧಾರಿಸುವ ಪ್ರಯತ್ನ.

ಟೀ ಕಾಫಿಗಳೆಂದರೆ ಬೇಕಾದಾಗ, ಬೇಕಾದಲ್ಲಿ ಸವಿಯಬಹದಾದ ಪಾನೀಯಗಳು ಎಂದೆನಿಸಿದರೆ ಆಶ್ಚರ್ಯವಿಲ್ಲ. ಟೀ ಸಾಹಿತ್ಯವನ್ನು ಪ್ರವೇಶಿಸದ ಸನ್ನಿವೇಶಗಳು ಇಲ್ಲವೇ ಇಲ್ಲ ಎಂದರೂ ನಡೆದೀತು, ಪಂಪಾಯಾತ್ರೆಯಲ್ಲಿ ವಿಸೀಯವರು ಕಾಫಿಯನ್ನು ಅಮೃತಕ್ಕಿಂತ ಶ್ರೇಷ್ಠ ಎಂದು ಹೊಗಳಿದುದು ಕೂಡ ಅನೇಕರಿಗೆ ಅತಿಯಾಗಿ ಕಂಡಿರಬೇಕು. ಆದರೆ ಹದಿನಾರನೆಯ ಶತಮಾನದಲ್ಲಿಯೇ ಜಾಪಾನಿಗೆ ಬಂದ ಈ ಕಲೆ ಆ ದೇಶದ ಸಂಸ್ಕೃತಿಯ ಒಂದು ಸಾರ್ಥಕವಾದ ಪ್ರತೀಕ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಇಂಗ್ಲೆಂಡಿನ ಪಬ್ಬ (pub)ಗಳನ್ನಾಗಲಿ, ಉರ್ದೂ ಪರ್ಶಿಯನ್ ಕವಿಗಳ ಮೆಹಖಾನೆಗಳನ್ನಾಗಲಿ ಸುಕಿಯಾ (Tea Room) ಗಳಿಗೆ ಹೋಲಿಸಲಾಗದು. ಯಾಕೆಂದರೆ, ಚಾನೊಯು ಸಂಪೂರ್ಣವಾದ ಜೀವನಕಲೆ, ಸೊಶಿತ್ಸು ಸೆನ್ ತಮ್ಮ ಹಿನ್ನುಡಿಯಲ್ಲಿ ವಿವರಿಸುವಂತೆ ಚಾನೂಯು ಸಾಮಾಜಿಕ ಮತ್ತು ವೈಯಕ್ತಿಕ ಆದರ್ಶಗಳ ಉತ್ತಮ ಬೆಸುಗೆ. ಅದು ಪ್ರತಿಪಾದಿಸುವ ಮೌಲ್ಯಗಳಲ್ಲಿ 'ವಾ' (ಸಾಮರಸ್ಯ) ಹಾಗೂ 'ಕೈ' (ಗೌರವ) ಸಾಮಾಜಿಕ ಮೌಲ್ಯಗಳಾದರೆ, 'ಸೈ' (ಪಾವಿತ್ರ್ಯ) ಮತ್ತು 'ಜಾಕು' (ಶಾಂತಿ) ವೈಯಕ್ತಿಕ ಮೌಲ್ಯಗಳು. ಧರ್ಮ, ಕಲೆ, ನೀತಿ; ಇವೆಲ್ಲವುಗಳನ್ನೂ ಒಳಗೊಂಡ ಚಾನೊಯು ಒಂದು ಅದ್ವಿತೀಯ ಮಾನವಸೃಷ್ಟಿ.

ಟೀಯ ಜನ್ಮಸ್ಥಳ ಚೀನ, ಮೊದಮೊದಲು ಔಷಧವೆಂದೇ ಬಳಕೆಗೆ ಬಂದ ಟೀ ನಾಲ್ಕು ಮತ್ತು ಐದನೆಯ ಶತಮಾನಗಳಲ್ಲಿ ರಂಜನೆಯ ಸಾಧನವಾಗಿ ಬೆಳೆದುಬಂದಿತು. ಇದೇ ವೇಳೆಗೆ ಕಾವ್ಯದಲ್ಲಿಯೂ ಕೂಡ ಅದರ ಪ್ರವೇಶವಾಯಿತು. ಆದರೆ ಆಗ ಟೀ ತಯಾರಿಸುವ ವಿಧಾನ ಮಾತ್ರ ಒರಟಾಗಿತ್ತು. ಕುದಿಸಿದ ಎಲೆಗಳನ್ನು ಕುಟ್ಟಿ ಮುದ್ದೆ ಮಾಡಿ ಅಕ್ಕಿ, ಶುಂಠಿ, ಉಪ್ಪು, ಕಿತ್ತಳೆಹಣ್ಣಿನ ಸಿಪ್ಪೆ, ಹಾಲು, ಒಮ್ಮೊಮ್ಮೆ ನೀರುಳ್ಳೆ ಇವುಗಳೊಡನೆ ಸೇರಿಸಿ ಬೇಯಿಸಿ ರೊಟ್ಟಿಯ ರೂಪದಲ್ಲಿ ಟೀಯನ್ನು ತಿನ್ನಲಾಗುತ್ತಿತ್ತು. ಈ ಒರಟು ಪದ್ಧತಿಯನ್ನು ತಿದ್ದಿ ಅದಕ್ಕೆ ಶಾಸ್ತ್ರದ ರೂಪ ಕೊಟ್ಟವನು ಟ್ಯಾಂಗ್ ವಂಶದವರ ಆಳ್ವಿಕೆಯ ಕಾಲದಲ್ಲಿದ್ದ ಲೂವೂ ಎಂಬ ಸ್ಮೃತಿಕಾರ, ಅವನ ಚಾಕಿಂಗ್ (ಟೀಯ ಧರ್ಮಗ್ರಂಥ) ಮೂರು ಸಂಪುಟಗಳಲ್ಲಿದ್ದು ಹತ್ತು ಅಧ್ಯಾಯಗಳನ್ನು ಹೊಂದಿದೆ. ಲೂವೂನ ಸುಧಾರಿತ ವಿಧಾನದಲ್ಲಿ ಟೀಯೊಂದಿಗೆ ಉಪ್ಪನ್ನು

ಮಾತ್ರ ಸೇರಿಸಲಾಗುತ್ತಿತ್ತು. ಓಂಗ್ ವಂಶದವರ ಕಾಲದಲ್ಲಿ ಟೀ ಪುಡಿಯನ್ನು ಬಿಸಿ ನೀರಿನಲ್ಲಿ ಬೆರೆಸಿ ಟೀ ತಯಾರಿಸುವ ವಿಧಾನದ ಶೋಧವಾಯಿತು. ಎಲೆಗಳನ್ನು ಬಿಸಿ ನೀರಿನಲ್ಲಿ ಎದ್ದು ತೆಗೆದು ಟೀ ತಯಾರಿಸುವ ಪದ್ಧತಿ ಮಿಂಗ್ ಕಾಲದ್ದು, ಈ ಎಲ್ಲ ವಿಧಾನಗಳ ಹಿಂದೆಯೂ ಬೇರೆ ಬೇರೆ ತಾತ್ವಿಕ ದೃಷ್ಟಿಗಳಿದ್ದವು ಎಂದು ಒಕಕೂರ ಹೇಳುತ್ತಾರೆ. ಮೊದಲು ಕೇವಲ ರಂಜನೆಯ ವಿಷಯವಾಗಿದ್ದ ಟೀ ಲೂವೂನ ವೇಳೆಗೆ ತಾವೋ ತತ್ವಗಳ ಪ್ರಭಾವಕ್ಕೊಳಗಾಗಿ ಸಾಧನೆಯ ಮಾರ್ಗವಾಗಿ ಪರಿವರ್ತನೆ ಹೊಂದಿತು. ಅತಿಥಿಗಳನ್ನು ಟೀಯಿಂದ ಸ್ವಾಗತಿಸುವ ಪದ್ಧತಿ ಬಳಕೆಗೆ ಬಂದುದು ಲಾವೂತ್ಸೆಯ ಶಿಶ್ಯ ಕ್ವಾನ್ಸಿನ್‌ನಿಂದ, ಲಾವೋದ ಅನೇಕ ತತ್ವಗಳನ್ನೊಳಗೊಂಡ ಝೆನ್ ಪಂಥದ ಅನುಯಾಯಿಗಳು ಟೀ ಸೇವನೆಯನ್ನು ಒಂದು ವಿಧ್ಯುಕ್ತ ಆಚರಣೆಯನ್ನಾಗಿ ಪ್ರಸ್ಥಾಪಿಸಿದರು. ಈ ಆಚರಣೆಯೇ ಹದಿನಾರನೆಯ ಶತಮಾನದಲ್ಲಿ ಜಾಪಾನಿನಲ್ಲಿ ರೂಢವಾಗಿ ಜಾನೂಯು ಎಂಬ ಹೆಸರು ತಳೆಯಿತು.

'ತಾವೊ'ದ ಅರ್ಥ 'ಮಾರ್ಗ' ಅಥವಾ 'ಪ್ರಯಾಣ'ವೆಂದಾಗುತ್ತದೆ ಎಂದು ಒಕಕುರ ಹೇಳುತ್ತಾರೆ. 'ಈ ಲೋಕದಲ್ಲಿ ಬದುಕುವ ಕಲೆ' ಎಂದು ತಾವೊವನ್ನು ವರ್ಣಿಸಲಾಗುತ್ತದೆ. ತಾವೊ ತತ್ವಗಳನ್ನು ಆಚರಣೆಗೆ ತರಲೆಂದೇ ಹುಟ್ಟಿಕೊಂಡ ಝೆನ್ (ಸಂಸ್ಕೃತ ಮೂಲದಲ್ಲಿ 'ಧ್ಯಾನ') ಧ್ಯಾನದ ಮೂಲಕ ಆತ್ಮಸಾಕ್ಷಾತ್ಕಾರವನ್ನು ಪಡೆಯುವ ಬಗೆಯನ್ನು ವಿವರಿಸುತ್ತದೆ. ಝೆನ್‌ದ ಒಂದು ವೈಶಿಷ್ಟ್ಯವೆಂದರೆ ಭೌತಿಕ, ಆಧ್ಯಾತ್ಮಿಕಗಳೆರಡಕ್ಕೂ ಅದು ಕೊಡುವ ಸಮಾನ ಮಹತ್ವ, ಅಣು ಮತ್ತು ಮಹತ್‌ಗಳಲ್ಲಿ ಝೆನ್ ಭೇದವೆಣಿಸುವುದಿಲ್ಲ. ಅಣುವಿನಲ್ಲಿಯೂ ಕೂಡ ಅದು ವಿಶ್ವದ ಸಾಧ್ಯತೆಗಳನ್ನು ಕಾಣುತ್ತದೆ. (ಬೇಕ್ ಮತ್ತು ಎಮರ್ಸನ್‌ರ ಕಾವ್ಯದಲ್ಲಿಯೂ ಇಂಥ ವಿಚಾರಗಳಿವೆ). ಜಾನೊಯುವ ಸಂದೇಶ ಕೂಡ ಇದೇ ಆಗಿದೆ. ದೈನಂದಿನದ ಸಾಮಾನ್ಯ ಸಂಗತಿಗಳಲ್ಲಿಯೂ ಪೂರ್ಣತೆಯ ಆದರ್ಶಗಳನ್ನು ಕಂಡುಕೊಳ್ಳುವುದೇ ಅದರ ಉದ್ದೇಶ. ಜಾನೊಯು ಎಂದರೆ ಅಪೂರ್ಣತೆಯ ಆರಾಧನೆ' ಎಂದು ಒಕಕುರ ಹೇಳುತ್ತಾರೆ. ಅಪೂರ್ಣತೆಯನ್ನು ಒಪ್ಪಿಕೊಳ್ಳುವ ಹಾಸ್ಯದೃಷ್ಟಿ ಇಲ್ಲದವನನ್ನು 'ಟೀ ಇಲ್ಲದವನು' ಎಂದೂ ಪೂರ್ಣತೆಯ ಆದರ್ಶದ ಹುಚ್ಚು ಹಿಡಿದವನನ್ನು 'ಇವನಲ್ಲಿ ಟೀ ಹೆಚ್ಚಾಗಿದೆ'. ಎಂದು ಕರೆಯುವ ಪರಿಪಾಠ ಜಾಪಾನಿನಲ್ಲಿದೆಯಂತೆ.

ಹದಿನಾರನೆಯ ಶತಮಾನದಲ್ಲಿ ಜೀವಿಸಿದ್ದ ಸೆನ್ ರಿವ್ಯೂ (1522–91)ನನ್ನು ಜಾನೊಯುದ ಆದ್ಯ ಪ್ರವರ್ತಕನೆಂದು ಕರೆಯಲಾಗುತ್ತದೆ. (ಒಕಕುರರ ಪುಸ್ತಕಕ್ಕೆ ಮುನ್ನುಡಿ ಬರೆದ ಸೊರಿತ್ಸು ಸೇನ್ ಇವನಿಂದ ಹದಿನೈದನೆಯ ತಲೆಮಾ–

ರಿನವನು), ಸುಕಿಯಾ (Tea Room)ದ ರೂಪರೇಷೆಗಳನ್ನು ಸಿದ್ಧಪಡಿಸಿದವನು ರಿಕ್ಯೂ. ಸುಕಿಯಾದ ಪ್ರತಿಯೊಂದು ಅಂಗಕ್ಕೂ ಒಂದೊಂದು ಉದ್ದೇಶವಿರುತ್ತದೆ. ಇವುಗಳಲ್ಲಿ ಮೊದಲನೆಯದು 'ರೋಪಿ', ಎಂದರೆ ತೋಟದಲ್ಲಿ ಕೊರೆದ ಕಾಲುದಾರಿ. ಈ ಕಾಲುದಾರಿ ಸುಕಿಯಾವನ್ನು ಬಾಹ್ಯ ಜಗತ್ತಿನ ಜಂಜಡದಿಂದ ಬೇರ್ಪಡಿಸುತ್ತದೆ. ಕಾಲುದಾರಿಗುಂಟ ನಡೆದರೆ ಅತಿಥಿಗಳು 'ಮಚಿಯ್ಯೆ'ಯನ್ನು ತಲುಪುತ್ತಾರೆ. ಯಜಮಾನನ ಕರೆ ಬರುವವರೆಗೆ ಅವರು ಇಲ್ಲಿ ಕಾಯಬೇಕು. ನಂತರ ಅವರು ಚಿಕ್ಕ ಬಾಗಿಲಿನೊಳಗಿಂದ ಸುಕಿಯಾವನ್ನು ಪ್ರವೇಶಿಸಬೇಕು. ಆಯುಧಗಳಿದ್ದರೆ ಇವುಗಳನ್ನು ಬಾಗಿಲಿನ ಹೊರಗೆಯ ಬಿಡಬೇಕಾಗುತ್ತದೆ. ಇಲ್ಲಿ ಎಲ್ಲರೂ ಬಾಗಲೇಬೇಕಾಗಿರುವುದರಿಂದ ಒಂದು ರೀತಿಯ ಸಮಾನತೆಯ ಭಾವ ತನ್ನಷ್ಟಕ್ಕೆ ತಾನೇ ಹುಟ್ಟಿಕೊಳ್ಳುತ್ತದೆ. ಕೇವಲ ಐದು ಜನರಿಗೆ ಮಾತ್ರ ಸುಕಿಯಾದಲ್ಲಿ ಸ್ಥಳವಿರುತ್ತದೆ. ಇದೊಂದು ಚಿಕ್ಕ ಹುಲ್ಲಿನ ಗುಡಿಸಲು, ಅತಿಥಿಗಳೆಲ್ಲರೂ ಒಳಗೆ ಬಂದ ನಂತರ ಯಜಮಾನನ ಪ್ರವೇಶವಾಗುತ್ತದೆ. ಗೋಡೆಯ ಮಾಡವೊಂದರಲ್ಲಿ ಝೆನ್ ಗುರುವಿನ ವಚನಗಳುಳ್ಳ ಸ್ಕ್ರೋಲ್ ಇರಿಸಿರುತ್ತದೆ. ಗೌರವದ ಸ್ಥಾನದಲ್ಲಿ ಹೂಗಳ ಅಲಂಕಾರವಿರುತ್ತದೆ. ಜತನದಿಂದ ಕಾಯ್ದಿರಿಸಿದ ತನ್ನ ಅಮೂಲ್ಯ ಕಲಾವಸ್ತುಗಳನ್ನು ಯಜಮಾನ ಅತಿಥಿಗಳಿಗೆ ತೋರಿಸುತ್ತಾನೆ. ಅವರು ತಮ್ಮ ಮೆಚ್ಚುಗೆ ತಿಳಿಸುತ್ತಾರೆ. ಯಜಮಾನನ ಅಭಿರುಚಿಯನ್ನು ಸೂಚಿಸುವ ಟೀ ಉಪಕರಣಗಳಿಂದ ಟೀ ಸಿದ್ಧವಾಗುತ್ತದೆ. ಅತಿಥಿಗಳು ಸೇವಿಸಿದ ನಂತರ ಯಜಮಾನನೂ ಟೀ ಸೇವಿಸುತ್ತಾನೆ. ಚಾನೂಯು ಯಜಮಾನನ ವೈಯಕ್ತಿಕ ಅಭಿರುಚಿ ಮತ್ತು ಅತಿಥಿಗಳ ಸೌಹಾರ್ದಮಯ ಸಾಮಾಜಿಕತೆಗಳ ಸಂಗಮ.

ಹೂಗಳ ಅಲಂಕರಣ ಮತ್ತು ಕಲಾವಸ್ತುವಿನ ಮಹತ್ವವನ್ನು ಕುರಿತಂತೆ ಎರಡು ಮನೋಜ್ಞ ಕತೆಗಳು ಒಕಕುರ ಅವರ ಪುಸ್ತಕದಲ್ಲಿವೆ. ರಿಕ್ಯೂನ ತೋಟದಲ್ಲಿ ಬೆಳೆಸಿದ್ದ Morning Glory ಹೂಗಳು ಆ ಕಾಲದಲ್ಲಿ ಅತ್ಯಂತ ಪ್ರಸಿದ್ಧವಾಗಿದ್ದವು. ಅವುಗಳನ್ನು ನೋಡಬಯಸಿದ ಅತಿಥಿಯೊಬ್ಬನನ್ನು ರಿಕ್ಯೂ ಆದರದಿಂದಲೇ ಬರಮಾಡಿಕೊಂಡ. ಆದರೆ, ಆ ಅತಿಥಿಯ ಆಗಮನವಾದಾಗ ರಿಕ್ಯೂನ ತೋಟದಲ್ಲಿದ್ದ ಹೂಬಳ್ಳಿಗಳೆಲ್ಲ ಮಾಯವಾಗಿ ಅಲ್ಲೆಲ್ಲ ಜಿನುಗು ಮರಳನ್ನು ಹರಡಲಾಗಿತ್ತು. ಬೇಸರಗೊಂಡ ಅತಿಥಿ ಸುಕಿಯಾ ಪ್ರವೇಶಿಸಿದಾಗ ಮಾತ್ರ ಅವನಿಗಾಗಿ ಅದ್ಭುತ ದೃಶ್ಯವೊಂದು ಕಾಯ್ದಿತ್ತು. ಗೌರವಸ್ಥಾನದಲ್ಲಿರಿಸಿದ್ದ ಜಂಗ್ ಕಾಲದ ಕಂಚಿನ ಹೂ ಪಾತ್ರೆಯೊಂದರಲ್ಲಿ ಒಂದೇ ಒಂದು Morning Glory ಪುಷ್ಪ ಮೆರೆಯುತ್ತಿತ್ತು. ಅತಿಥಿಯ ಬೇಸರವೆಲ್ಲ ತಕ್ಷಣ ಮಾಯವಾಯಿತೆಂದು ಬೇರೆ ಹೇಳಬೇಕಾಗಿಲ್ಲ. ರಿಕ್ಯೂನ ಸೌಂದರ್ಯ ದೃಷ್ಟಿಯ ಬಗ್ಗೆ ಈ ಕತೆ ಶ್ರೇಷ್ಠ

ವ್ಯಾಖ್ಯಾನವಾಗಿದೆ. Morning Glory ಯನ್ನು ಅದರ ಏಕಾಂತಿಕ ವೈಭವದಲ್ಲಿ ತೋರಿಸುವುದು ರಿಕ್ಯೂನ ಉದ್ದೇಶವಾಗಿತ್ತು.

ಇನ್ನೊಂದು ಕತೆ ಕಲಾವಸ್ತುಗಳಿಗೆ ಜಪಾನಿನ ಸಂಸ್ಕೃತಿಯಲ್ಲಿ ದೊರೆಯುತ್ತಿದ್ದ ಗೌರವವನ್ನು ಕುರಿತದ್ದು, ಜಾಪಾನಿನ ಸಾಂಸ್ಕೃತಿಕ ಇತಿಹಾಸದಲ್ಲಿ ಕಲೆಗೆ ಎಂಥ ಸ್ಥಾನವಿತ್ತು ಎನ್ನುವುದರ ನಿದರ್ಶನ ಈ ಕತೆಯಲ್ಲಿದೆ. ಈ ಕತೆ ದೃಶ್ಯ ರೂಪದಲ್ಲಿದ್ದು ಅವರ ಸನ್ನಿವೇಶ ಕಲಾವಸ್ತುವೊಂದರ ರಕ್ಷಣೆಗೆ ಸಂಬಂಧಿಸಿದ್ದು. ಹೊಸೊಕಾವಾನ ಅರಮನೆಯ ಕೋಣೆಯೊಂದರಲ್ಲಿ ಸೆಸನ್‌ನ ಅಪೂರ್ವ ಚಿತ್ರ 'ದಾರುಮಾ'ವನ್ನು ಭದ್ರವಾಗಿ ಇಡಲಾಗಿತ್ತು, ಆದರೆ ರಕ್ಷಕನೊಬ್ಬನ ಅಜಾಗರೂಕತೆಯಿಂದಾಗಿ ಆ ಕೋಣೆಗೆ ಬೆಂಕಿ ಹತ್ತಿಕೊಂಡಿತು, ಚಿತ್ರವನ್ನು ಉಳಿಸಲೇಬೇಕೆಂದು ಹಟ ತೊಟ್ಟ ಆ ರಕ್ಷಕ ಕೋಣೆಯನ್ನು ಹೊಕ್ಕು ಚಿತ್ರವನ್ನಿಟ್ಟ ಕರಂಡಕವನ್ನು ತಲುಪಿದ, ಆದರೆ ಸುತ್ತಲೂ ಉರಿ ಇದ್ದುದರಿಂದ ಆ ಕೋಣೆಯಿಂದ ಹೊರಬರುವುದು ಅವನಿಗೆ ಸಾಧ್ಯವಿರಲಿಲ್ಲ. ಆಗ ಆತ ತನ್ನ ಹೊಟ್ಟೆಯನ್ನೇ ಸೀಳಿ ತಾನು ಹೊತ್ತಿದ್ದ ವಸ್ತ್ರದಲ್ಲಿ ಚಿತ್ರವನ್ನು ಸುತ್ತಿ ಅದರಲ್ಲಿ ಬಚ್ಚಿಟ್ಟುಕೊಂಡ, ಉರಿ ಆರಿಸಿ ಜನರು ಒಳಗೆ ಬಂದಾಗ ಅರೆ ಬೆಂದ ಅವನ ದೇಹ ಅವರಿಗೆ ದೊರಕಿತು, ಭಯಾನಕವಾದ ಈ ಘಟನೆ ರಕ್ಷಕನ ಕಾರ್ಯದ ನಿದರ್ಶನವಿದ್ದಂತೆ ಕಲೆಗೆ ಅವನ ಸಂಸ್ಕೃತಿಯಲ್ಲಿದ್ದ ಸ್ಥಾನವನ್ನೂ ಸೂಚಿಸುತ್ತದೆ.

ಜಾನೊಯು ಸಂಕೇತಿಸುವ ಮೌಲ್ಯಗಳನ್ನು ಜಾಪಾನ್' ಎಷ್ಟರಮಟ್ಟಿಗೆ ಆತ್ಮಸಾಕ್ಷಾತ್ಕಾರ ಮಾಡಿಕೊಂಡಿತ್ತು ಎನ್ನುವುದಕ್ಕೆ ರಿಕ್ಯೂನ ಜೀವನವೇ ಸಾಕ್ಷಿಯಾಗಿದೆ. ಸುಂದರವಾಗಿ ಬಾಳಿದವನು ಮಾತ್ರ ಸುಂದರವಾಗಿ ಸಾಯಬಲ್ಲನು ಎಂದು ಹೇಳುತ್ತಾರೆ. ರಿಕ್ಯೂನ ಬದುಕಿನಂತೆ ಅವನ ಮರಣವೂ ಸುಂದರವಾಗಿತ್ತು. ಅದರಲ್ಲಿ ಸಾಕ್ರೆಟೀಸನ ಸಾವಿನ ದುರಂತ ವೈಭವವನ್ನು ಪುನಃ ನೋಡುತ್ತೇವೆ. ಟೈಕೋ ಹಿಡಿಯೋಶಿ ಮತ್ತು ರಿಕ್ಯೂರ ನಡುವೆ ಗಾಢವಾದ ಸ್ನೇಹ ಸಂಬಂಧವಿತ್ತು. ಆದರೆ ರಿಕ್ಯೂ ತನ್ನ ಪ್ರಭುವಿನ ಎಲ್ಲ ಅಭಿಪ್ರಾಯಗಳನ್ನೂ ಕುರುಡುಗಣ್ಣಿನಿಂದ ಒಪ್ಪಿಕೊಳ್ಳುತ್ತಿರಲಿಲ್ಲ. ಇಂಥ ಒಂದು ಪ್ರಸಂಗದಲ್ಲಿ ಅವನ ಶತ್ರುಗಳು ಸಂಚು ಹೂಡಿ ಹಿಡಿಯೋಶಿಯ ಮನಸ್ಸಿನಲ್ಲಿ ಸಂಶಯ ಹುಟ್ಟುವಂತೆ ಸುಳ್ಳು ಸುದ್ದಿಗಳನ್ನು ಹಬ್ಬಿಸುತ್ತಾರೆ. ಹಿಡಿಯೋಶಿ ಈ ಸುದ್ದಿಗಳನ್ನು ನಂಬಿ ರಿಕ್ಯೂನಿಗೆ ದೇಹಾಂತ ಶಿಕ್ಷೆ ವಿಧಿಸುತ್ತಾನೆ. ಇಂಥ ಸನ್ನಿವೇಶಗಳಲ್ಲಿ ಅಪರಾಧಿಗೆ ಆತ್ಮಹತ್ಯೆಯ ಅವಕಾಶ ನೀಡುವುದು ಗೌರವವೆಂದು ಪರಿಗಣಿಸಲ್ಪಡುತ್ತಿತ್ತು. ಈ ಗೌರವವನ್ನು ರಿಕ್ಯೂನಿಗೂ ಕೊಡಲಾಗುತ್ತದೆ.

ತನ್ನ ಕೊನೆಯ ಟೀ ಸಮಾರಂಭಕ್ಕೆ ರಿಕ್ಯೂ ತನ್ನ ಪ್ರಮುಖ ಶಿಷ್ಯರನ್ನು

ಆಮಂತ್ರಿಸುತ್ತಾನೆ. ಸುಕಿಯಾದ ಮಾಡದಲ್ಲಿ ಜೀವನದ ನಶ್ವರತೆಯನ್ನು ಸಾರುವ ಗುರುವಿನ ವಚನವುಳ್ಳ ಸ್ಕ್ರೋಲ್ ತೂಗುತ್ತಿರುತ್ತದೆ. ಅತಿಥಿಗಳೆಲ್ಲ ಯಜಮಾನ ನೀಡಿದ ಟೀ ಸೇವಿಸುತ್ತಾರೆ, ಟೀ ಉಪಕರಣಗಳ ಸೌಂದರ್ಯವನ್ನು ಕೊಂಡಾಡುತ್ತಾರೆ. ಟೀ ಬೌಲ್ ಒಂದನ್ನು ಮಾತ್ರ ಉಳಿಸಿಕೊಂಡು ಉಳಿದ ಎಲ್ಲ ಉಪಕರಣಗಳನ್ನೂ ರಿಕ್ಯೂ ಅತಿಥಿಗಳಲ್ಲಿ ಹಂಚಿ ಬಿಡುತ್ತಾನೆ. 'ದುರ್ದೈವಿಯ ತುಟಿ ತಗುಲಿದ ಈ ಪಾತ್ರೆಯನ್ನು ಬೇರೆ ಯಾರೂ ಮುಟ್ಟುವುದು ಬೇಡ' ಎಂದು ಬೌಲ್‌ನ್ನು ಒಡೆದು ಬಿಡುತ್ತಾನೆ. ಅತ್ಯಂತ ಪ್ರೀತಿಯ ಶಿಷ್ಯನೊಬ್ಬನನ್ನು ಬಿಟ್ಟು ಉಳಿದ ಎಲ್ಲರೂ ಕಣ್ಣೀರಿಡುತ್ತ ರಿಕ್ಯೂನನ್ನು ಬೀಳ್ಕೊಡುತ್ತಾರೆ. ತನ್ನ ಟೀ ಗೌನ್‌ನ್ನು ಬಿಚ್ಚಿ ಅಚ್ಚುಕಟ್ಟಾಗಿ ಮಡಿಚಿ ಅದನ್ನು ಚಾಪೆಯ ಮೇಲೆ ರಿಕ್ಯೂ ಇಡುತ್ತಾನೆ. ಒಳಗೆ ಇದುವರೆಗೂ ಮರೆಯಾಗಿದ್ದ ಶ್ವೇತ-ಮರಣ ವಸ್ತ್ರ ಕಾಣತೊಡಗುತ್ತದೆ. ತನ್ನ ಕತ್ತಿಯನ್ನೆತ್ತಿಕೊಂಡು ಅದರ ಮೊನೆಯನ್ನೇ ದಿಟ್ಟಿಸುತ್ತ ರಿಕ್ಯೂ

ಚಿರಂತನದ ಅಸ್ತ್ರವೇ
ನಿನ್ನನ್ನು ಸ್ವಾಗತಿಸುತ್ತೇನೆ
ಬುದ್ಧನನ್ನು ದಾಟಿ
ಧರ್ಮವನ್ನು ದಾಟಿ
ನಿನ್ನ ಹಾದಿಯನ್ನು
ಕಂಡುಕೊಂಡವ ನೀನು

ಎಂದು ಅದನ್ನು ಸ್ತುತಿಸುತ್ತಾನೆ. ಚಿರಂತನದಲ್ಲಿ ಸೇರುವಾಗಲೂ ಕೂಡ ರಿಕ್ಯೂನ ಮುಖದ ಮೇಲಿನ ಪ್ರಸನ್ನ ನಗೆ ಬಾಡಿರುವುದಿಲ್ಲ. ಚಾನೊಯುದಲ್ಲಿ ಗತಕಾಲದ ಬಗ್ಗೆ ಹಳಹಳಿಯಿರುವುದಿಲ್ಲ. ಯಾವ ಕಾಲಕ್ಕೂ ಪ್ರಸ್ತುತವಾದ ಬದುಕಿನ ದಾರಿ ಎಂದೇ ಅದರ ಮಹತ್ವ, ಪಶ್ಚಿಮದ ಕಣ್ಣುಗಳಿಂದಲೇ ಸಂಸ್ಕೃತಿಯನ್ನು ನೋಡುವ ಅಭ್ಯಾಸ ಬೆಳೆಸಿಕೊಂಡ ನಮ್ಮಂಥ ಸ್ಮೃತಿ ಭ್ರಷ್ಟರಿಗೆ ಒಕಕುರ ಅವರ ಪುಸ್ತಕ ಮಾಯಾಕನ್ನಡಿಯಂತಿದೆ.

* * *

*ಆಕರ : ಸೀಮೋಲ್ಲಂಘನ: ಜಿ.ಎಸ್. ಆಮೂರ*

**ಜಿ.ಎಸ್. ಆಮೂರ :**

ಗುರುರಾಜ ಶಾಮಾಚಾರ್ಯ ಆಮೂರರು ಹುಟ್ಟಿದ್ದು ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನ ಬೊಮ್ಮನಹಳ್ಳಿಯಲ್ಲಿ. ತಂದೆ ಶಾಮಾಚಾರ್ಯರು,

ತಾಯಿ ಗಂಗಾದೇವಿ. ತಂದೆಗೆ ಸಂಗೀತ, ಸಾಹಿತ್ಯದಲ್ಲಿ ಆಸಕ್ತಿ. ಪ್ರಾರಂಭಿಕ ಶಿಕ್ಷಣ ಸೂರಣಗಿಯಲ್ಲಿ (ಈಗ ಶಿರಹಟ್ಟಿ ತಾಲ್ಲೂಕು, ಗದಗ ಜಿಲ್ಲಾ) ಹೈಸ್ಕೂಲು ವಿದ್ಯಾಭ್ಯಾಸ ಹಾವೇರಿಯಲ್ಲಿ.

ಧಾರವಾಡದ ಕರ್ನಾಟಕ ಕಾಲೇಜಿನಿಂದ ಪಡೆದ ಬಿ.ಎ. ಆನರ್ಸ್ ಪದವಿ, ಮತ್ತು ಮುಂಬಯಿ ವಿಶ್ವವಿದ್ಯಾಲಯದಿಂದ ಇಂಗ್ಲಿಷ್ ಎಂ.ಎ. ಪದವಿ, ಪ್ರತಿ ವರ್ಷವೂ ರ್‍ಯಾಂಕ್ ಪಡೆದ ವಿದ್ಯಾರ್ಥಿ. 1961ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ‘ಖಿಊಇ ಅಔಓಅಇಕಖಿ ಔಈ ಅಔಒಇಆಜ’ ಮಹಾ ಪ್ರಬಂಧ ಮಂಡಿಸಿ ಪಿಹೆಚ್.ಡಿ. ಪದವಿ ಗಳಿಸಿದರು. ಗದುಗಿನ ತೋಂಟದಾರ್ಯ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿ ಸೇರಿ ನಂತರ ಔರಂಗಾಬಾದ್‌ನ ಮರಾಠವಾಡ ವಿದ್ಯಾಪೀಠದಲ್ಲಿ ಇಂಗ್ಲಿಷ್ ವಿಭಾಗದ ಪ್ರಾಧ್ಯಾಪಕ ಹಾಗೂ ಮುಖ್ಯಸ್ಥರಾಗಿ ನಿವೃತ್ತರಾಗುವವರೆವಿಗೂ ಕಾರ್ಯ ನಿರ್ವಹಿಸಿದರು.

ಕನ್ನಡದ ಮೊದಲ ಕೃತಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಪ್ರಕಟವಾದುದು ಮಿಲ್ಟನ್ ಕವಿಯ ಮೇಲೆ ಬರೆದ ‘ಮಹಾಕವಿ ಮಿಲ್ಟನ್’ (1966). ನಂತರ ಮೊದಲ ವಿಮರ್ಶಾ ಪ್ರಬಂದಗಳ ಕೃತಿ ‘ಕೃತಿ ಪರೀಕ್ಷೆ’. ಸಮಕಾಲೀನ ಕಥೆ–ಕಾದಂಬರಿ, ಕನ್ನಡ ಕಾದಂಬರಿಯ ಬೆಳವಣಿಗೆ, ಅ.ನ. ಕೃಷ್ಣರಾಯ, ಅಥ–ರ್ಲೋಕ ಮುಂತಾದ ಕೃತಿಗಳಲ್ಲದೆ ಬೇಂದ್ರೆಯವರ ಗಂಗಾವತರಣವನ್ನೂ ಮಧ್ಯಬಿಂದುವಾಗಿಟ್ಟುಕೊಂಡು ಕಾವ್ಯ ಹಾಗೂ ಕಾವ್ಯೇತರ ಬರಹಗಳನ್ನೂ ವಿವೇಚಿಸುವ ‘ಭುವನದ ಭಾಗ್ಯ’ ಕೃತಿ, ವ್ಯವಸಾಯ, ಕನ್ನಡ ಕಥನ ಸಾಹಿತ್ಯ: ಕಾದಂಬರಿ, ವಿರಾಟಪುರುಷ, ಸಾತ್ವಿಕ ಪಥ, ಕಾದಂಬರಿ ಸ್ವರೂಪ, ದತ್ತಾತ್ರೇಯ ರಾಮಚಂದ್ರಬೇಂದ್ರೆ, ಕೃತಿಗಳಲ್ಲದೆ ಚಿತ್ತಾಲರ ಆಯ್ದು ಕಥೆಗಳು, ಕೆ ಸದಾಶಿವ ಅವರ ಕಥಾ ಸಾಹಿತ್ಯ, ಅವಳ ಕಥೆಗಳು, ಬೇಂದ್ರೆ ಕಾವ್ಯ, ಕನ್ನಡ ಕಥಾಲೋಕ, ಶ್ರೀರಂಗ ಸಾರಸ್ವತ, ಹುಯಿಲಗೋಳ ನಾರಾಯಣರಾಯರ ಸಮಗ್ರ ಸಾಹಿತ್ಯ ಮುಂತಾದವುಗಳನ್ನು ಸಂಪಾದಿಸಿದ್ದಾರೆ.

ಕ.ಸ.ಪಾದಿಂದ 2020ನೇ ಸಾಲಿನ ನೃಪತುಂಗ ಸಾಹಿತ್ಯ ಪ್ರಶಸ್ತಿ ಪಡೆದಿರುವ ಇವರು 2020 ಸೆಪ್ಟಂಬರ್ 28ರಂದು ನಿಧನರಾದರು.

## 4.4 ಓದು ಪಠ್ಯ : ಬುರ್ಖಾ

**–ಫಕೀರ್ ಮಹಮ್ಮದ್ ಕಟ್ಪಾಡಿ**

ಮಗಳ ಮನೆಗೆ ಬಂದು ಆಗಲೇ ನಾಲ್ಕು ದಿನಗಳು ಕಳೆದಿದ್ದವು. ಮಾಡಲಿಕ್ಕೆ ಕೆಲಸವೇನೂ ಇಲ್ಲದೆ ಕೈಗಳು ಮರಕಟ್ಟಿವೆ ಎಂದನಿಸುತ್ತಿತ್ತು. ಊರಲ್ಲಾದರೆ ತೆಂಗಿನ ಮರದ ಸೋಗೆಗಳನ್ನು ಕಡಿದು ಹಾಕಿ ಮಡ್ಲು ಹೆಣೆಯಬಹುದಾಗಿತ್ತು. ಕೊತ್ತಲಿಗೆ ಸಿಗಿದು ಒಣ ಹಾಕಬಹುದಾಗಿತ್ತು. ದನದ ಹಟ್ಟಿಯ ಕೆಲಸಗಳು, ಆಡುಗಳಿಗೆ ಸೊಪ್ಪು ಹಾಕುವ ಕೆಲಸ, ಒಂದೇ ಎರಡೇ? ಎಷ್ಟು ಮಾಡಿದರೂ ಮುಗಿಯಿತು ಎನ್ನಲಾಗದಷ್ಟು ಕೆಲಸಗಳು. ಆದರೆ ಇಲ್ಲಿ ಯಾವ ಕೆಲಸ ಮಾಡಹೋದರೂ ಮಗಳು ಸಲ್ಮಾ ಬಿಡುವುದಿಲ್ಲ. “ಬೇಡ ಬಿಡಮ್ಮಾ ಊರಲ್ಲಿ ಅದೂ ಇದೂಂತ ಮಾಡ್ತಾ ಇದ್ದೀಯಾ. ಇಲ್ಲಾದ್ರೂ ಸ್ವಲ್ಪ ದಿನ ಆರಾಮವಾಗಿ ಕಾಲು ನೀಡಿ ಕೂತ್ಕ ನೋಡುವಾ .... ಎನ್ನುವಳು. ಅಡುಗೆ ಮನೆಯಲ್ಲಾದರೂ ನೆರವಾಗೋಣವೆಂದರೆ ಇಲ್ಲಿ ಒಲೆಯೇ ಇಲ್ಲ. ಎಲ್ಲಕ್ಕೂ ಸ್ಟೌವೇ ಗತಿ. ಊರಲ್ಲಿ ಅಪ್ಪಿ ಹೇಳಿದ್ದಳು. “ಈ ಸೊವು ಉಂಟಲ್ಲ ಮರಾಯ್ಕೆ, ಅದು ಸಿಡಿದು ಮೊನ್ನೆ ಎರಡು ಮಂದಿ ಕಲಾಸ್ ಅಂತೆ. ಹೊಟ್ಟು ಭಟ್ರು ಹೇಳಿದ್ರು, ಪೇಪರ್‌ನಲ್ಲಿ ಬಂದ ನ್ಯೂಸು”. ಆಗೆಲ್ಲ ಪಟ್ಟಣದಲ್ಲಿರುವ ಮಗಳನ್ನು ನೆನೆದು ಭಯಗೊಂಡಿದ್ದಳು. ಮಗ ಮನೆಗೆ ಸೀಮೆಎಣ್ಣೆ ಸ್ಟವ್ ತರೇನೆ ಎಂದಾಗಲೆಲ್ಲ ಬೇಡ್ವಬೇಡ ನಮ್ಮ ಒಲೇನೇ ಸಾಕು ಎಂದಿದ್ದಳು. ಇಷ್ಟಕ್ಕೂ ಈ ಚಿಕ್ಕ ಬೆಂಕಿಯಲ್ಲಿ ಅದೆಂತಾ ಅಡುಗೆ ಮಾಡ್ತೀಯೋ ಅಂತ ಮಗಳನ್ನು ಕೇಳಿದ್ದಳು. ಅವಳು ನಕ್ಕುಬಿಟ್ಟು “ಉಮ್ಮನಿಗೆ ಊರಲ್ಲಿ ಒಲೆ ತುಂಬಾ ಸೋಗೆ ಕೊತ್ತಲಿಗೆ, ಒಲೆ ತುಂಬಿ ಧಗಧಗ ಬೆಂಕಿ ಉರಿಸಿ ಅಡುಗ ಮಾಡಿಯೇ ಗೊತ್ತು, ಆ ಬೆಂಕಿಗಿಂತ ಈ ಬೆಂ ಚೂಟಿ. ಗ್ಯಾಸ್ ಸ್ಟೌವ್‌ನಲ್ಲೀಗ ಹತ್ತು ನಿಮಿಷದಲ್ಲಿ ಅನ್ನ ಬೇಯ್ತದೆ ....” ಎಂದಿದ್ದಳು. “ಅದೇನೇ ಹೇಳು, ನಂಗಂತೂ ಈ ಸ್ಟೌವ್ವಂದ್ರೆ ಭಯ” ಎಂದು ಉತ್ತರಿಸಿದ್ದಳು.

ಊರಿನಲ್ಲಿ ಬೂದಿ ಹಾಕಿ ದಿನವಿಡೀ ತಿಕ್ಕಿದರೂ ಹೋಗದಂತಹ ಮಸಿ ತುಂಬಿದ ಪಾತ್ರೆಗಳ ರಾಶಿ ಹಾಕಿಕೊಂಡು ಬೆಳಗ್ಗಿನಿಂದ ತಿಕ್ಕುವ ಕೆಲಸದಿಂದ ಮಗಳು ಪಾರಾಗಿದ್ದಾಳೆನ್ನುವುದು ಜೈನಾಬಿಗೆ ಸಂತಸದ ಸಂಗತಿ. ಪಾತ್ರೆಗಳಿಗೆ ಒಂಚೂರೂ ಮಸಿಯಾಗದಂತೆ ಮಗಳು ಅಡುಗೆ ಮಾಡುವುದನ್ನು ಕಲಿತಿದ್ದಾಳೆನ್ನುವುದನ್ನು ಊರಲ್ಲಿ ಅಪ್ಪಿ, ಅಕ್ಕಮ್ಮ ಮುಂತಾದ ಗೆಳತಿಯರಿಗೆ ಹೇಳಬೇಕೆನಿಸಿತು. ಮಗಳು ಪಟ್ಟಣದ ವಾತಾವರಣಕ್ಕೆ ಅದೆಷ್ಟು ಬೇಗ ಹೊಂದಿಕೊಂಡಳು ಎನ್ನುವಾಗ ಹೆಮ್ಮೆ ಎನಿಸಿತು. ಆದರೆ ಪಟ್ಟಣದಲ್ಲಿ ಅದಷ್ಟೇ ನಯ ನಾಜೂಕಿದ್ದರೂ ಹಳ್ಳಿಯ ನೆಮ್ಮದಿ ಇಲ್ಲವೆಂದು ಇಲ್ಲಿಗೆ ಬಂದ ಮರುದಿನವೇ ತೀರ್ಮಾನಿಸಿಬಿಟ್ಟಿದ್ದಳು. ಅವಳು

ಬಂದ ಮಾರನೇ ದಿನವೇ ಅಲ್ಲಿ ಹೊಡೆದಾಡಿಕೊಂಡರು. ಅಲ್ಲಿ ಬಡಿದರು, ಅಲ್ಲಿ ಬೆಂಕಿಬಿತ್ತು. ಇಲ್ಲಿ ಮನೆ ಅಂಗಡಿ ಲೂಟಿ ಮಾಡಿದರು ಎಂದು ಕೇಳುವವರ ಎದೆ ನಡುಗಿಸುವ ವರ್ತಮಾನಗಳು ಬಂದಿದ್ದವು. ಮಗಳು, ಅಳಿಯನಿಗೆ ಹೇಳಿ ಊರಿಗೆ ಹಿಂತಿರುಗೋಣವೆಂದರೆ, "ಪಡ್ಡ ಈಗ ಹೋಗೂದಾ? ಪಟ್ಟಣದಲ್ಲಿ ಎಲ್ಲಾ ಕಡೆ ಗಲಭೆ ಶುರವಾಗಿದೆ. ಒಂದ್ದತ್ತು ದಿನ ನೀವಿಲ್ಲೇ ನಿಲ್ಲಿ. ಗಲಭೆ ನಿಂತ ನಂತರ ಹೋಗಬಹುದು" ಎಂದು ಅಳಿಯ ಹೇಳಿದ್ದ.

ಅಂತೂ ಮಗಳನ್ನು ನೋಡಲೆಂದು ಒಂದೆರಡು ದಿನಗಳ ಮಟ್ಟಿಗೆ ಮಂಗಳೂರಿಗೆ ಬಂದ ಜೈನಾಬಿ ಊರಿಗೆ ಹಿಂತಿರುಗಲಾಗಲಿಲ್ಲ. "ಈ ಒಟ್ಟಾರೆ ಪಂಚಾತ್ಗೆಯಲ್ಲಿ ನಂಗಂತೂ ಊರಿಗೆ ಹೋಗಿಕ್ಕಾಗಿಲ್ಲ" ಎಂದು ಆಗಾಗ ಗೊಣಗಿಕೊಳ್ಳುತ್ತಿದ್ದಳು. ಊರಲ್ಲಿ ಆಡುಗಳಿಗೆ ವಯ್ಯಾರಿ ಸೊಸೆ ಸರಿಯಾಗಿ ಸೊಪ್ಪುತಂದು ಹಾಕಿದಳೋ ಇಲ್ಲೋ? ಗಬ್ಬದ ಅಡಿಗೆ ಆಕ್ಕಚ್ಚು ತೆಳಿ ಸಮಯಕ್ಕೆ ಸರಿಯಾಗಿ ಇಡ್ತಿದಾಳೋ, ಹೇಂಟೆಗಳ ಹಿಂದೆ ಸುತ್ತಾಡುವ ದೊಡ್ಡ ಹುಂಜ ಗೂಡಿಗೆ ಮರಳಿದೆಯೋ ಇಲ್ಲೋ! ಮೊಟ್ಟೆಗಳ ಕಾವಿಗೆ ಕೂತ ಹೇಂಟೆಗೆ ಸರಿಯಾಗಿ ನೀರು ಕಾಳು ಕೊಡುತ್ತಿದ್ದಾಳೋ? ಇನ್ನೆರಡು ದಿನಗಳಲ್ಲಿ ಮರಿಗಳು ಹೊರಬರುತ್ತವೆ. ಅವುಗಳಿಗಾಗಿ ಅಕ್ಕಿ ಪುಡಿ ಕಟ್ಟಿಟ್ಟಿದ್ದಳು. ಸೊಸೆ ಅದ್ನೆಲ್ಲಾ ಹಾಕಿ ಮರಿಗಳನ್ನು ನೋಡಿಕೊಳ್ತಾಳೋ, ಇಲ್ಲ. ಹದ್ದುಗಳು ಎಗರಿಕೊಂಡು ಹೋಗುವ ಹಾಗೆ ಮಾಡ್ತಾಳೋ ನೆರೆಮನೆಯ ಹೆಂಗೆಳೆಯರೊಂದಿಗೆ ಹರಟೆ ಕೊಚ್ಚುತ್ತಾ ಕೂತಳೆಂದರೆ ಅಡುಗೆ ಕೋಣೆಯೊಳಗೆ ನಾಯಿ ಹೊಕ್ಕದ್ದು ಕೂಡಾ ತಿಳಿಯದಂತಹ ಬೇಖಬರಿನವಳು. ಇಂಥಾ ಗೋಸುಬಾರಿ ಸೊಸೆಗೆ ತನ್ನ ಮನೆಯ ಜವಾಬ್ದಾರಿ ವಹಿಸಿಕೊಟ್ಟು ಬಂದು ಇಲ್ಲಿ ಸಿಕ್ಕಿಬಿದ್ನಲ್ಲಾ! ಮಗನಾದ್ರೂ ಸಂಜೆ ಮನೆಗೆ ಬಂದವನು ಇದನ್ನೆಲ್ಲಾ ವಿಚಾರಿಸುತ್ತಾನೋ ಇಲ್ಲೊ ಎಂದೆಲ್ಲಾ ಯೋಚಿಸುತ್ತಾ ಕೂತವಳು, "ಏನೇ ಆಗ್ಲಿ, ನಾಳೆ ನಾನು ಊರಿಗೆ ಹೋಗೇಬೇಕು" ಎಂದಿದ್ದಳು. ಯಾ ಅಲ್ಲಾರಬ್ಬೇ! ನೀವ್ಹೀಗೆ ಹಟ ಹಿಡಿದ್ರೆ ಹೇಗೆ? ಇಲ್ಲಿ ಮುಸ್ಲಿಮರ ಕೇರಿಯಾದ್ದರಿಂದ ನಿಮ್ಗೇನೂ ಆಗ್ಲಿಕ್ಕಿಲ್ಲ. ಮುಂದೆ ಇದನ್ನು ದಾಟಿದ್ರೆ ಸಿಗೂದು ಅವ್ರಕೇರಿಯಲ್ವಾ? ಬುರ್ಖಾ ಹಾಕಿದ ನೀವು ಅವ್ರ ಕೇರಿ ದಾಟಿ ಬಸ್‌ಸ್ಟೇಂಡಿಗೆ ಹೋಗ್ಲಿಕ್ಕುಂಟಾ? ಎಷ್ಟು ಇಸ್ಲಾಮು ಮಂದಿಯನ್ನು ಅವ್ರು ಕೊಂದಿದ್ದಾರೆ ಗೊತ್ತುಂಟಾ ನಿಂಗೆ?" ಎಂದು ಮಗಳು ಗಾಬರಿಗೊಂಡು ಹೇಳಿದ್ದಳು.

ನನ್ನಂತಹ ಮುದುಕಿಯನ್ನು ಕೊಂದರೆ ಅವರಿಗೇನು ಲಾಭವಿದೆ ಎಂದು ಯೋಚಿಸುತ್ತಿದ್ದಂತೆ "ನಿನ್ನೆ ಕೊಳೆತು ನಾರುವ ಎರಡು ಹೆಣಗಳನ್ನು ತೋಡಿನಿಂದ ತೆಗ್ಸಿದ್ರಂತೆ ಪೋಲೀಸ್ರು, ಅದೂ ಬಸ್‌ಸ್ಟೇಂಡಿನ ಪಕ್ಕದಲ್ಲಿ. ಯಾರೋ? ಎಲ್ಲಿಗೆ

ಹೋಗಲು ಹೊರಟವ್ರೋ?" ಎಂದು ಸಲ್ಮಾಳ ನಾದಿನಿ ಖದೀಜಾ ಒಂದು ಭಯಂಕರ ಸುದ್ದಿಯನ್ನು ತಂದಿದ್ದಳು. ಅವಳಂತೂ ಕಾಲೇಜಿಗೆ ಹೋಗದೆ ಮೂರು ದಿನಗಳಾದವು. ಮನೆಯೊಳಗಿದ್ದರೂ ಪಟ್ಟಣದಲ್ಲಿ ನಡೆಯುವ ಸಂಗತಿಗಳೆಲ್ಲವೂ ಅದೇಗೋ ಅವಳಿಗೆ ತಿಳಿದುಬಿಡುತ್ತಿತ್ತು. ಒಂದೊಂದೇ ಸಂಗತಿಯನ್ನು ಹೇಳುತ್ತಾ ಇದ್ದಂತೆ ಅವಳ ಕಣ್ಣುಗಳು ತುಂಬಿಬರುತ್ತವೆ.

ಈ ಗಲಭೆಗೆ ಮೂಲಕಾರಣ, ಸಂಜೆ ಐಸ್‌ಕ್ರೀಂ ತಿನ್ನುತ್ತಾ ರಸ್ತೆ ಬದಿಯಲ್ಲಿ ನಿಂತ ಮುಸ್ಲಿಮ್ ಹುಡುಗನೊಬ್ಬನ ತಲೆಯ ಟೊಪ್ಪಿಯನ್ನು ಹಾರಿಸಿ ಕುಡುಕನೊಬ್ಬ ಗೇಲಿ ಮಾಡಿದ್ದು, ಇದು ಮುಸ್ಲಿಮರಿಗೆ ಹಿಂದುವೊಬ್ಬ ಮಾಡಿದ ಅವಮಾನವೆಂದು ಅವನಿಗೆ ನಾಲ್ಕು ಮುಸ್ಲಿಮರು ಸೇರಿ ಹೊಡೆದರಂತೆ .... ಸುದ್ದಿ ಹಿಂದುಗಳ ಕೇರಿಯಲ್ಲಿ ಬೆಂಕಿಯಂತೆ ಹರಡಲು ಗಲಭೆ ಸ್ಫೋಟಗೊಂಡು ನಾಲ್ಕಾರು ಮಂದಿಯನ್ನು ಆಗಲೇ ಬಲಿ ತೆಗೆದುಕೊಂಡಿದೆ.

ಸುದ್ದಿಗಳನ್ನು ಕೇಳಿಕೊಂಡು, ಮನೆಯೊಳಗೆ ಕೂತುಕೊಳ್ಳುವುದರಲ್ಲಿ ನೆಮ್ಮದಿ ಇರಲಿಲ್ಲ. ಜೈನಾಬಿಗೆ ಮಾಡಲಿಕ್ಕೆ ಕೆಲಸವೇನೂ ಕಾಣದೆ ತನ್ನ ಹಳೆಯ ಕರಿ ಸಿಲ್ಕಿನ ಬುರ್ಖಾವನ್ನು ಹೊಲಿಯುವ ನಿರ್ಧಾರಕ್ಕೆ ಬಂದಿದ್ದಳು. ಟ್ರಂಕಿನಲ್ಲಿ ಅದನ್ನು ಮಡಚಿಟ್ಟು ಹಲವು ವರ್ಷಗಳು ಕಳೆದದ್ದರಿಂದ ಜಿರಳೆಗಳು ಮೂಸಿ ಅಲ್ಲಲ್ಲಿ ತೂತುಗಳುಂಟಾಗಿದ್ದವು. ಅವಳು ತನ್ನ ಮನೆಯಿಂದ ಹೊರಬಂದದ್ದೇ ಕಮ್ಮಿ. ಹಾಗೆಲ್ಲಾದರೂ ಹೊರಗೆ ಹೋಗುವುದೆಂದರೆ ಮೊದಲನೆಯ ಮಗಳ ಮನೆಗೆ ಮಾತ್ರ ಅವಳ ಮನೆ ಇರುವುದು ಪಕ್ಕದಲ್ಲೆ. ಅಲ್ಲಿಗೆ ಹೋಗಲು ಬುರ್ಖಾದ ಅಗತ್ಯ ಬೀಳುತ್ತಿರಲಿಲ್ಲ. ಎಲ್ಲಾದರೂ ಸಂಬಂಧಿಕರಲ್ಲಿ ಮದುವೆ, ಮೌಲೂದು ಕಾರ್ಯಕ್ರಮಗಳಾದರೆ ಮಗ, ಸೊಸೆಯನ್ನೇ ಕಳುಹಿಸಿ ತಾನು ಅದೂ ಇದೂ ಕೆಲಸಗಳ ನೆವ ಹೇಳಿ ತಪ್ಪಿಸಿಕೊಳ್ಳುವಳು. ಹಾಗಾಗಿ ಹಲವು ವರ್ಷಗಳಿಂದ ಬುರ್ಖಾದ ಉಪಯೋಗವೇ ಆಗಲಿಲ್ಲ. ಎರಡನೇ ಮಗಳ ಮನೆಗೆ ಅಳಿಯನ ಒತ್ತಾಯಕ್ಕೆ ಕಟ್ಟುಬಿದ್ದು ಹೊರಟುನಿಂತಾಗಲೇ ಬುರ್ಖಾದಲ್ಲಿನ ತೂತುಗಳು ಗಮನಕ್ಕೆ ಬಂದದ್ದು, ಇದನ್ನು ತೊಟ್ಟುಕೊಂಡು ಹೋದರೆ ಅಲ್ಲೆಲ್ಲರೂ ನಕ್ಕಾರೆನಿಸಿ ಒಮ್ಮೆ ಪೆಚ್ಚಾದವಳು ಮರುಕ್ಷಣವೇ ನಕ್ಕರೇನಂತೆ ಎಂದು ಧೈರ್ಯ ತೆಗೆದುಕೊಂಡಿದ್ದಳು. ನಗುವುದಕ್ಕೆ ಮಗಳ ಮನೆಯಲ್ಲಿ ಅತ್ತೆ ಮಾವರೆನಿಸಿದ ಹಿರಿಯರು ಯಾರೂ ಇಲ್ಲ. ತನ್ನ ಮಗಳು, ಅಳಿಯ, ಪುಟ್ಟ ಮೊಮ್ಮಗ, ಮಗಳ ನಾದಿನಿ ಇಷ್ಟೇ ಮಂದಿ ಮನೆಯಲ್ಲಿರುವವರು. ಇವರ ಮುಂದೆ ಮರ್ಯಾದೆ ಹೋಗುವ ಪ್ರಶ್ನೆಯೇನು ಬಂತು? ಇನ್ನು ಮಗಳು ಎಲ್ಲಾದರೂ ತಮಾಷೆ ಮಾಡಿ ನಕ್ಕರೆ ಎದುರಿಸಲು ಅವಳು ತಯಾರಾಗಿಯೇ ಬಂದಿದ್ದಳು. ಮದುವೆಯ

ದಿನ ನಿನ್ನಪ್ಪ ನಂಗೆ ತಂದುಕೊಟ್ಟಿದ್ದು ಕಣೇ ಈ ಬುರ್ಖಾ ಎಂದು ಪರಿಚಯ ಮಾಡಿದರೆ ಅವಳು ಖಂಡಿತವಾಗಿಯೂ ತಮಾಷೆ ಬಿಟ್ಟು ಗಂಭೀರಳಾಗಿ ಈ ಬಗ್ಗೆ ಮತ್ತಷ್ಟು ವಿಚಾರಿಸತೊಡಗುತ್ತಾಳೆ.

ಹೊರಗೆ ಬೀದಿಯೆಲ್ಲಾ ಬಿಕೋ ಎನ್ನಿಸುವಷ್ಟು ಬರಿದಾಗಿತ್ತು. ಜನರೆಲ್ಲರೂ ಭಯದಿಂದ ತಮ್ಮ ಮನೆಯ ಕಿಟಕಿ ಬಾಗಿಲುಗಳನ್ನು ಭದ್ರವಾಗಿ ಮುಚ್ಚಿಕೊಂಡು ಬಂದಿಯಾಗಿದ್ದರು. ಗಾಳಿಯಿಂದ ತೇಲಿಬಂತೇನೋ ಎಂಬಂತೆ ಅಲ್ಲಿ ಬೆಂಕಿ ಕೊಟ್ಟರಂತೆ, ಮತ್ತೊಂದೆಡೆ ಇರಿದು ಕೊಂದರಂತೆ ಎಂಬ ಸುದ್ದಿಗಳು ಹೇಗೆ ಹೇಗೋ ಬಂದು ತಲುಪುತ್ತಿದ್ದವು. ಇದು ಬಿಟ್ಟರೆ ಉಸಿರು ಕಟ್ಟುವ ಮೌನ. ಈ ಕೇರಿಯಲ್ಲಿ ಮುಸ್ಲಿಮರ ಸಂಖ್ಯೆ ಹೆಚ್ಚಿರುವುದರಿಂದ ಮಗಳು, ಅಳಿಯ ಭಯಪಡಬೇಕಾಗಿಲ್ಲವೆಂದು ಸಮಾಧಾನ ಪಡಿಸಿದ್ದರು. "ಹಿಂದುಗಳ ಒಂದು ನರಪಿಳ್ಳೆಯೂ ಈ ಕೇರಿಯೊಳಗೆ ಬಂದರೆ ಸಾಬೀತಿನಿಂದ ಹೊರಗೆ ಹೋಗಲು ಬಿಡದಷ್ಟು ಬಂದೋಬಸ್ತಿದೆ" ಎಂದು ಅಳಿಯ ಹೇಳಿದ್ದ. ಕೇರಿಯೊಳಗೆ ಹಿಂದುಗಳು ಯಾರಾದರೂ ಇದ್ದರೆ ಬದುಕುಳಿಯುವುದು ಸಾಧ್ಯವಿಲ್ಲವೆಂದು ಇದರ ಅರ್ಥವಲ್ಲವೇ? ಹಾಗಿದ್ರೆ ಹಿಂದುಗಳು ಹೆಚ್ಚಿನ ಸಂಖ್ಯೆಯಲ್ಲಿರುವ ಕೇರಿಯಲ್ಲಿರುವ ಮುಸ್ಲಿಮರ ಗತಿಯೇನು ಎನ್ನುವುದನ್ನು ಜೈನಾಬಿ ವಿಚಾರಿಸಿದಳು. "ಅಲ್ಲಿ ಎಷ್ಟೋ ಮಂದಿಯನ್ನು ಆಗ್ಲೆ ಕೊಚ್ಚಿಹಾಕಿದ್ದರಂತೆ. ಅಲ್ಲಿ ಮುಸ್ಲಿಮರನ್ನು ಕೊಂದು ಹಾಕಿದ್ದಕ್ಕೆ ಇಲ್ಲೂ ಪ್ರತೀಕಾರ ನಡೆಸಿದ್ದಾರೆ ಎಂದು ಅಳಿಯ, ಜೈನಾಬಿ ಈ ಸಂಗತಿಗಳನ್ನು ಕೇಳಿದಾಗ ಭಯದಿಂದ ನಡುಗಿದಳು. ತನ್ನ ಮಗ, ಸೊಸೆ, ಮಕ್ಕಳು, ಮಗಳು ಹೇಗಿದ್ದಾರೋ? ಮನೆಯ ಕಿಟಕಿ ಬಾಗಿಲನ್ನು ಸ್ವಲ್ಪವೇ ತೆರೆದು ರಸ್ತೆ ಕಡೆ ಇಣುಕಿ ನೋಡಿದಳು. ಬಸ್ಸು ಕಾರುಗಳ ಓಡಾಟವಾದರೂ ಶುರುವಾಗಿದೆಯೇ? ಶುರುವಾಗಿದ್ದರೆ ಮೊದಲು ಸೈದಾನಿ ಬೀಬಿಯ ದರ್ಗಾಕ್ಕೆ ಭೇಟಿಕೊಟ್ಟು ಊರಿಗೆ ಹೊರಡಬಹುದಾಗಿತ್ತು. ರಸ್ತೆಯಲ್ಲ ಬರಿದಾಗಿತ್ತು. ನಿಜ ಹೇಳಬೇಕೆಂದರೆ ಜೈನಾಬಿ ಮಂಗಳೂರಿಗೆ ಬರುವುದಕ್ಕೆ ಮಗಳನ್ನು ಕಾಣುವ ಆಸೆಗಿಂತಲೂ, ಸೈದಾನಿಬೀಬಿಯ ದರ್ಗಾಕ್ಕೆ ಹೋಗಿ ಗೋರಿಯ ಮೇಲೆ ನಾಲ್ಕು ಮಲ್ಲಿಗೆಯ ಮಾಲೆಗಳನ್ನು ಹರಡಿ, ಊದುಬತ್ತಿ ಹೊತ್ತಿಸಿ, ಎರಡು ಚಿಟಿಕಿ ಲೋಬಾನ ಹಾಕಿ ದುವಾ ಮಾಡಬೇಕೆಂಬ ಬಹುದಿನದ ಆಸೆಯೇ ಮುಖ್ಯ ಕಾರಣವಾಗಿತ್ತು.

"ಮಂಗಳೂರಿನ ಬಸ್‌ಸ್ಟೇಂಡಿನಲ್ಲಿ ನಿಮ್ಮನ್ನು ಕಾಯುತ್ತಿರುತ್ತೇನೆ. ಧೈರ್ಯವಾಗಿ ಬನ್ನಿ. ನಾನೊಂದು ವೇಳೆ ಕಾಣಸಿಗದಿದ್ರೂ ಭಯಪಡಬೇಕಾಗಿಲ್ಲ. ಅಲ್ಲೇ ಶಿವಣ್ಣನ ಆಟೋರಿಕ್ಷಾ ಇರುತ್ತದೆ. ಅವನು ನಿಮ್ಮನ್ನು ನಮ್ಮ ಮನೆಗೆ ಸೀದಾ ಕರೆದುಕೊಂಡು ಬರುತ್ತಾನೆ" ಎಂದು ಅಳಿಯ ಪತ್ರ ಬರೆದಿದ್ದ. ಹಿಂದೊಮ್ಮೆ

ತವರಿಗೆ ಬಂದಾಗ ಮಗಳು ಕೂಡಾ ಕೇರಿಯ ಹೆಂಗಸರಿಗೆ ಪೇಟೆ ಕಡೆ ಹೋಗಬೇಕಿದ್ರೆ ಶಿವಣ್ಣನ ರಿಕ್ಷಾದಲ್ಲಿ ಹೋಗುವುದೆಂದರೆ ಮನೆಯ ಗಂಡಸರ ಜೊತೆಗೆ ಹೋದಷ್ಟೇ ಧೈರ್ಯ ಎಂದದ್ದು ನೆನಪಿಗೆ ಬಂದಿತ್ತು.

ಮಂಗಳೂರಿನ ಬಸ್‌ಸ್ಟೇಂಡ್ ತಲುಪಿದಾಗ ಮಧ್ಯಾಹ್ನವಾಗಿತ್ತು. ಅಳಿಯ ಅಲ್ಲೆಲ್ಲೂ ಕಾಣಸಿಗದಾಗ ಜೈನಾಬಿ ಗಲಿಬಿಲಿಗೊಂಡಿದ್ದಳು. ನೆರೆಮನೆಯ ಅಮ್ಮಾಬಿಯ ಮಗ ಸುಕೂರನ್ನಾದ್ರೂ ಕರೆದುಕೊಂಡು ಬರುತ್ತಿದೆ ಚೆನ್ನಾಗಿರುತ್ತಿತ್ತು ಎಂದುಕೊಂಡಿದ್ದಳು. ಅಳಿಯನಾದ್ರೂ ಎಂಥಾ ಬೇಜವಾಬ್ದಾರಿ ಮನುಷ್ಯ ಬಸ್‌ಸ್ಟೇಂಡಿನಲ್ಲಿ ನಿಲ್ಲುತ್ತೇನೆಂದು ಧೈರ್ಯ ಹೇಳಿದವನು ಹೀಗೆ ಮಾಡಬಹುದೇ? ಶಿವಣ್ಣನ ನೆನಪಾಗಿ ಅಲ್ಲೇ ಒಂದು ಬದಿಯಲ್ಲಿ ಸಾಲಾಗಿ ನಿಂತಿದ್ದ ಆಟೋರಿಕ್ಷಾಗಳ ಬಳಿಗೆ ನಡೆದು ಬಂದಿದ್ದಳು. ಅಲ್ಲಿ ನಿಂತವನೊಬ್ಬನನ್ನು "ಶಿವಣ್ಣನ ರಿಕ್ಷಾ ಯಾವುದಪ್ಪಾ?" ಎಂದು ಕೇಳಿದ್ದಳು. "ಅದೇ, ಆ ಕಡೆಯಲ್ಲಿ ಮೂರ್ನೇದ್ದು ....' ಎಂದು ಅವನು ತೋರಿಸಿದ್ದ.

ಅವಳನ್ನು ಕಂಡಕೂಡಲೇ ಶಿವಣ್ಣ "ಖಾದರ್ ಸಾಹೇಬ್ರ ಅತ್ತೆಯೇನು?" ಎಂದು ಕೇಳಿದ್ದ. ಜೈನಾಬಿಗೆ ಧೈರ್ಯ ಬಂತು. ಹೌದೆಂದಳು. "ಅಯ್ಯೋ, ಅಮ್ಮಾ ...! ನಿಮ್ಮನ್ನು ಆಗಿನಿಂದ ಬಂದ ಗಿರಾಕಿಗಳನ್ನೆಲ್ಲಾ ಬಿಟ್ಟು ಕಾಯುತ್ತಿದ್ದೇನೆ. ಹನ್ನೆರಡು ಗಂಟೆತನಕ ನಿಮ್ಮ ಅಳಿಯ ಕಾಯುತ್ತಿದ್ರು, ಮತ್ತಿನ್ನೇನೋ ಅರ್ಜೆಂಟು ಕೆಲ್ಸವಿದೆ ಕೂಡ್ಲೆ ಮುಗ್ಸಿಬರ್ತೇನೆ. ಈ ಮಧ್ಯೆ ಅವ್ರೆಲ್ಲಾದ್ರು ಬಂದ್ರೆ ಮನೆಗೆ ಸೀದಾ ಕರ್ಕೊಂಡ್ಹೋಗು ಅಂತ ಹೇಳಿಹೋದ್ರು" ಎಂದ ಶಿವಣ್ಣ. ಅವನ ಮಾತುಗಳನ್ನು ಕೇಳುತ್ತಲೇ ಹೆಚ್ಚು ಕಮ್ಮಿ ಮಾತು, ರೂಪ ಎಲ್ಲ ತನ್ನ ಮಗನಂತೆಯೇ ಎಂದನ್ನಿಸಿತ್ತು. ಶಿವಣ್ಣನ ರಿಕ್ಷಾದಲ್ಲಿ ಕೂತು ಮಗಳ ಮನೆಗೆ ತಲುಪಿದ್ದಳು. ಮಗಳೊಂದಿಗೆ ಶಿವಣ್ಣನ ವಿನಯ, ಸೌಜನ್ಯತೆಯನ್ನು ಹೊಗಳಿದ್ದೇ ಹೊಗಳಿದ್ದು, ಈ ಕೇರಿಯ ಎಲ್ಲ ಹೆಂಗಸರೂ ಪೇಟೆಗೆ ಹೋಗೋಕಾದ್ರೆ ಮಕ್ಕಳನ್ನು ಹುಷಾರಿಲ್ಲದಾಗ ಡಾಕ್ಟರರ ಬಳಿಗೆ ಕರ್ಕೊಂಡು ಹೋಗಬೇಕಾದ್ರೆ "ಶಿವಣ್ಣನ ರಿಕ್ಷಾ ಇದ್ರೆ ಗಂಡಸರನ್ನು ಕಾದು ಕೂರಬೇಕಾಗಿಲ್ಲ" ಎಂದು ಮಗಳೂ ದನಿಗೂಡಿಸಿದ್ದಳು.

ಇಂತಹ ಶಿವಣ್ಣನಿಗೆ ಅವಳು ಬಂದ ಮರುದಿನವೇ ಈ ಕೇರಿಯ ಹುಡುಗರು ಹಾಗೆ ಮಾಡುತ್ತಾರೆಂದು ಜೈನಾಬಿ ಕನಸಿನಲ್ಲೂ ಎಣಿಸಿರಲಿಲ್ಲ. ಅಂದು ಖದೀಜಾ ಎಂದಿನಂತೆ ಕಾಲೇಜಿಗೆ ಹೋಗಿದ್ದಳು. ಮಧ್ಯಾಹ್ನದ ಹೊತ್ತಿಗೆ ಪಟ್ಟಣದ ಕೆಲವೆಡೆ ಗಲಭೆ ಶುರುವಾಗಿದೆ ಎಂಬ ವರ್ತಮಾನ ಬಂದು ಸಲ್ಮಾ ಚಡಪಡಿಸತೊಡಗಿದ್ದಳು. ಕಾಲೇಜಿಗೆ ಹೋದ ಖದೀಜಾ ನಡೆದೇ

ಮನೆಗೆ ಬರುವವಳು. ಅವಳು ಬರುವಾಗ ದಾರಿಯಲ್ಲಿ ಏನಾದರೂ ನಡೆದರೆ ಗತಿಯೇನು, ರಬ್ಬೇ, ಎಂದು ಗೊಣಗಿಕೊಳ್ಳುತ್ತಿದ್ದಳು. 'ಗಂಡ ಬೇಗ ಅಂಗಡಿಗೆ ಬಾಗಿಲುಹಾಕಿ ಮನೆಗೆ ಬರಬಾರದೇ' ಎಂದು ಆತಂಕಪಟ್ಟುಕೊಂಡಿದ್ದಳು. ಇದ್ದಕ್ಕಿದ್ದಂತೆ ರಸ್ತೆಯಲ್ಲಿ ಗಲಾಟೆ ಕೇಳಿ ಸಲ್ಮಾ ಮತ್ತು ಜೈನಾಬಿ ಕಿಟಕಿಯ ಮೂಲಕ ಇಣಕಿದರು. "ಬಾಭಿ ಬಾಗಿಲು ತೆಗೆಯಿರಿ" ಎಂಬ ಖದೀಜಾಳ ಧ್ವನಿಕೇಳಿ ಸಲ್ಮಾ ಬಾಗಿಲು ತೆರೆದಳು. ಅಳುತ್ತಾ ಒಳಗೆ ನುಗ್ಗಿದ ಖದೀಜಾ "ಬಾಭಿ ನಾವು ನಡೆದುಬರುತ್ತಿರುವುದು ಕಂಡು ಶಿವಣ್ಣ ಗಲಭೆ ಜೋರಾಗುತ್ತಿದೆಯೆಂದು ನಮ್ಮನ್ನು ಇಲ್ಲಿಗೆ ರಿಕ್ಷಾದಲ್ಲಿ ತಂದುಬಿಟ್ಟ, ಅವಿಗೆ ಈ ಕೇರಿಯ ಹುಡುಗರೆಲ್ಲಾ ಸೇರಿ ಹೊಡೆಯುತ್ತಿದ್ದಾರೆ. ಅವ್ನನ್ನು ಬಿಡ್ಸಿ ಬಾಭೀ ...." ಎನ್ನುತ್ತಾ ಕುಸಿದು ಕೂತಳು.

ಸಲ್ಮಾ ರಸ್ತೆಯ ಕಡೆ ಓಡುತ್ತಿರುವುದು ಕಂಡು ಜೈನಾಬಿ ಕೂಡಾ ಮಗಳನ್ನು ಹಿಂಬಾಲಿಸಿದ್ದಳು. ನೆರೆಮನೆಯ ನಾಲ್ಕಾರು ಹೆಂಗಸರು ಮನೆಯಿಂದ ಆಗಲೇ ಹೊರಬಂದು ಶಿವಣ್ಣನ ರಿಕ್ಷಾದ ಮೇಲೆ ಎರಗಿದ್ದ ಹುಡುಗರಿಗೆ ಬಯ್ಯುತ್ತಿದ್ದರು. "ಅಯ್ಯೋ.... ಬೇವಾರ್ಸಿಗಳೇ ಅವ್ನಿಗ್ಯಾಕೆ ಹೊಡಿತೀರೋ, ಅವನ್ನು ಬಿಡಿರೋ ... ...' ಎಂದು ಸಲ್ಮಾ ಆ ಕಡೆ ನುಗ್ಗಿದ್ದು ಕಂಡು ಉಳಿದ ಹೆಂಗಸರೂ ಆ ಕಡೆ ನುಗ್ಗಿದ್ದರು. ಹುಡುಗರು ಹೆದರಿ ಕಂಬಿಕಿತ್ತರು. ಆದರೆ ಶಿವಣ್ಣನ ಆಟೋ ರಿಕ್ಷಾದ ಗಾಜು ಆಗಲೇ ಪುಡಿಯಾಗಿತ್ತು, ಅವನ ಮೂಗಿನಿಂದ ರಕ್ತ ಸುರಿಯುತ್ತಿತ್ತು. ಶರ್ಟು ಹರಿದಿತ್ತು. ಅವನು ಬೆಪ್ಪನಂತೆ ರಿಕ್ಷಾದೊಳಗೆ ನಡೆದು ಸೀಟಿನ ಮೇಲೆ ಕುಸಿದಂತೆ ಕೂತ. ನೋಡುತ್ತಾ ನಿಂತಿದ್ದ ಎಲ್ಲರೂ ನಾಚಿ ತಲೆ ತಗ್ಗಿಸುತ್ತಿದ್ದಂತೆ ಅವನು ಆಟೋರಿಕ್ಷಾ ಬಿಟ್ಟುಕೊಂಡು ಹೋಗಿಬಿಟ್ಟ

ಮನೆಯೊಳಗೆ ಖದೀಜಾ ಬಿಕ್ಕಿ ಬಿಕ್ಕಿ ಅಳುತ್ತಾ ಹೇಳುತ್ತಿದ್ದಳು. ಇನ್ನು ಶಿವಣ್ಣ ಈ ಕೇರಿ ಕಡೆ ಬರೋದಿಲ್ಲ. ನಮ್ಮನ್ನು ಅವ್ನು ಇನ್ನು ಎಲ್ಲಿಗೂ ಕರಕ್ಕೊಂಡು ಹೋಗೋದಿಲ್ಲ ....?

ಜೈನಾಬಿಗೆ ಊರಲ್ಲಿರುವ ತನ್ನ ಮಗ, ಸೊಸೆ, ಮಕ್ಕಳು, ಮಗಳು ಎಲ್ಲರ ನೆನಪ ಕಾಡತೊಡಗಿತು. ಅಲ್ಲಿನ ನೂರಾರು ಮನೆಗಳಲ್ಲಿ ಮೂರು ಮನೆ ಮಾತ್ರ ಮುಸ್ಲಿಮರದ್ದು, ಉಳಿದದ್ದು ಹಿಂದುಗಳದ್ದು, ತನ್ನ ಮಗನನ್ನು ಹಿಡಿದು ಹೀಗೆ ಬಡಿದು ಕೊಂದುಬಿಟ್ಟರೆ ಕೇಳುವವರು ಯಾರಿದ್ದಾರೆ? ನೆರೆಮನೆಯ ಸಂಜೀವ, ಕೊರಗಪ್ಪ, ಲಕ್ಕಮ್ಮ, ಅಪ್ಪಿ, ನಾಗಣ್ಣರನ್ನು ನೆನೆದಳು. ಅವರೆಲ್ಲ ಅಂಥವರಲ್ಲ ಎಂದುಕೊಳ್ಳುತ್ತಲೇ ಧೈರ್ಯ ತಂದುಕೊಂಡಳು. ಆದಷ್ಟು ಬೇಗನೆ ಊರು

ಸೇರಬೇಕು. ಅದಕ್ಕಿಂತ ಮೊದಲು ಸೈದಾನಿ ಬೀಬಿಯ ದರ್ಗಾಕ್ಕೆ ಭೇಟಿ ಕೊಟ್ಟು ಎಲ್ಲರನ್ನೂ ಕಾಪಾಡು ಎಂದು ದುವಾ ಮಾಡಬೇಕು.

ಮನೆಯಲ್ಲಿ ಈ ಘಟನೆಯಿಂದಾಗಿ ಎಲ್ಲರು ಮೌನವಾಗಿದ್ದರು. ಅಳಿಯ ಬಂದಾಗಲಷ್ಟೇ ಮೌನ ಮುರಿದದ್ದು, ಖದೀಜಾ ಅಣ್ಣನಿಗೆ ನಡೆದ ಘಟನೆಯನ್ನು ವಿವರವಾಗಿ ತಿಳಿಸಿದಳು. ಅವನು ನಿಟ್ಟುಸಿರುಬಿಟ್ಟು ಅಂಗಡಿಗೆ ಬೀಗ ಹಾಕಿ ಬಂದಿದ್ದೇನೆ. ಈ ಗಲಭೆಯಿಂದಾಗಿ ಅದೆಷ್ಟು ದಿನ ವ್ಯಾಪಾರ ನಿಲ್ಲುತ್ತೋ ...' ಎಂದ. ಶಿವಣ್ಣನ ಬಗ್ಗೆ ಅಣ್ಣ ಏನೂ ಹೇಳದಿರುವುದು ಕಂಡು ಖದೀಜಾ ದಂಗಾದಳು.

ಊರಲ್ಲಿ ಎಲ್ಲರೂ ಹೇಗಿರಬಹುದು? ಬರುವಾಗ ದಾರಿಯಲ್ಲಿ ಸಿಕ್ಕಿದ ಸಂಜೀವನಿಗೆ "ಮನೆ ಕಡೆ ಸ್ವಲ್ಪ ನೋಡ್ಕೋ ನಾನು ಮಗಳ ಮನೆಗೆ ಹೋಗಿಬರ್ತೇನೆ ..." ಎಂದದ್ದು ನೆನಪಿಗೆ ಬಂತು. ಅಲ್ಲಿ ಸಂಜೀವ, ಅಪ್ಪಿ, ಕೊರಗಪ್ಪ, ಅಕ್ಕಮ್ಮ, ನಾಗಣ್ಣ, ಅಮ್ಮಾಬಿ ಎಲ್ಲರೂ ನಮ್ಮವರೇ ಅಲ್ಲವೇ? ಅಲ್ಲಿ ಇಂತಹ ಗಲಭೆ ನಡೆಯುವುದು ಅಸಾಧ್ಯ. ಆದ್ದರಿಂದ ಭಯಪಡಬೇಕಾಗಿಲ್ಲವೆಂದು ಜೈನಾಬಿ ಅದೆಷ್ಟೇ ಸಮಾಧಾನಪಟ್ಟುಕೊಂಡರೂ ಶಿವಣ್ಣನೂ ನಮ್ಮವನೇ ಆಗಿದ್ದವನಲ್ಲವೇ? ಎನ್ನುವ ಪ್ರಶ್ನೆ ಮುಂದೆ ನಿಲ್ಲುತ್ತಿತ್ತು. ಕನ್ನಡಿ ಪುಡಿಯಾದ ಅವನ ರಿಕ್ಷಾ, ಮೂಗಿನಿಂದ ಒಸರುವ ರಕ್ತ, ಹರಿದ ಅಂಗಿ ನೆನಪಿಗೆ ಬಂದಾಗಲೆಲ್ಲ ಎದೆ ಡವಗುಟ್ಟತೊಡಗಿತ್ತು. ಖದೀಜಾ ಆ ಘಟನೆಯ ಬಗ್ಗೆ ಹೇಳಿದಾಗ ಅಳಿಯನ ಪ್ರತಿಕ್ರಿಯೆ ಹಾಗೇಕಿತ್ತು?

* * *

ಪಟ್ಟಣದಲ್ಲಿ ನಡೆದ ನಾಲ್ಕು ದಿನಗಳ ಗಲಾಟೆ, ಮುಗಿದು ಹೋಯಿತೇನೋ ಎಂಬಂತೆ ಮೌನ ಕವಿದಿತ್ತು. ಈ ಮೌನ ಬೂದಿಮುಚ್ಚಿದ ಕೆಂಡದಂತೆ ಯಾವಾಗ ಹೊತ್ತಿ ಉರಿಯಲಿದೆಯೋ ಹೇಳಲಿಕ್ಕಾಗದು ಎಂದು ಖದೀಜಾ ಹೇಳುತ್ತಿದ್ದಳು. ಆಗಾಗ ಬರುತ್ತಿರುವ, ಕೊಲೆ, ಲೂಟಿ, ದೊಂಬಿಗಳ ಸುದ್ದಿ ಕೇಳಿ ತಲೆಚಿಟ್ಟು ಹಿಡಿದಂತಾಗಿತ್ತು. ಸೈದಾನಿ ಬೀಬಿಯ ದರ್ಗಾಕ್ಕೆ ಇಲ್ಲಿಂದ ಹೆಚ್ಚೇನೂ ದೂರವಿಲ್ಲವೆಂದು ಜೈನಾಬಿಗೆ ಆಗಲೇ ತಿಳಿದಿತ್ತು. ಈ ಕೇರಿಯ ಕೊನೆಯಲ್ಲಿ ಬಲಕ್ಕೆ ತಿರುಗಿದರೆ ಸಿಗುವ ಓಣಿಯಲ್ಲಿ ನಾಲ್ಕು ಮಾರು ನಡೆದಾಗ ದರ್ಗಾದ ಮೀನಾರು ಕಾಣುತ್ತದೆ. ಎಂದು ಸಲ್ಮಾ ಹೇಳಿದಳು. ಮಂಜಮ್ಮಳ ಮನೆ ಈ ಕೇರಿಯ ಕೊನೆಯಲ್ಲಿ ಬಲಗಡೆ ತಿರುವಿನಲ್ಲೇ, ಎಂದು ಹೇಳಿದ್ದು

ನೆನಪಾಗಿ ಅಲ್ಲಿಗೆ ಹೋಗುವ ಧೈರ್ಯ ಹೆಚ್ಚುತ್ತಿತ್ತು. "ಆದ್ರೂ ನೀನೀಗ ಅಲ್ಲಿಗೆ ಹೋಗೋದು ಬೇಡ, ಗಲಭೆ ಒಮ್ಮೆ ಶಾಂತವಾಗ್ಲಿ ...." ಎಂದು ಅವಳು ಹೊರಟಾಗಲೆಲ್ಲ ಸಲ್ಮಾ ತಡೆದಿದ್ದಳು. ಹೊರಗೆಲ್ಲೂ ಹೋಗಲಾಗದೆ ಕೈಕಾಲುಗಳಿಗೆ ಜೋಮು ಹಿಡಿದಂತಾಗಿತ್ತು. ಸಲ್ಮಾ ಮನೆ ಖರ್ಚು ವಿಪರೀತ ಹೆಚ್ಚುತ್ತಿದೆ ಎಂದು ಲೆಕ್ಕಾಚಾರ ಮಾಡುತ್ತಿದ್ದಳು. ಎಲ್ಲಾ ರೀತಿಯ ತರಕಾರಿ ಗಳಿಗೂ ಕೇಜಿಗೆ ಹದಿನಾಲ್ಕು ರೂಪಾಯಿಗಳಿವೆ. ಮೀನು ಮಾರುವ ಹೆಂಗಸರು ಈ ಕೇರಿಗೆ ಈಗ ಬರುವುದೇ ಇಲ್ಲ. ಅಂಗಡಿಗಳ ಬಾಗಿಲು ತೆರೆದೇಇಲ್ಲವೆಂದು ಗೊಣಗಿಕೊಳ್ಳುತ್ತಿದ್ದಳು. ಜೈನಾಬಿ ಸೈದಾನಿ ಬೀಬಿಯ ದರ್ಗಾಕ್ಕೆ ಹೋಗುವ ಅವಕಾಶಕ್ಕಾಗಿ ಕಾದು ಕೂತಿದ್ದಳು. ದರ್ಗಾಕ್ಕೆ ಹೋದ ಮರುದಿನವೇ ಊರಿಗೆ ಹೊರಡಬೇಕೆಂಬ ಲೆಕ್ಕ ಹಾಕಿಕೊಂಡಿದ್ದಳು.

ಮನೆಯಲ್ಲಿ ಆಡುಗಳನ್ನು ಸೊಸೆ ಚೆನ್ನಾಗಿ ನೋಡಿಕೊಂಡಿದ್ದಾಳೋ ಇಲ್ಲವೋ! ದೊಡ್ಡ ಹುಂಜ ಗೂಡಿಗೆ ಮರಳಿದೆಯೋ? ದೊಡ್ಡ ಹೋತಕ್ಕೆ ಗಿರಾಕಿ ಇದೆ ಎಂದು ಮಗ ಹೇಳಿದ್ದ. ಮಗಳ ಮನೆಗೆ ಹೊರಟುನಿಂತಾಗ ಅವಳು ತೊಟ್ಟ ಹಳೇ ಬುರ್ಖಾ ನೋಡಿ ಮಗ ಹೇಳಿದ್ದ. "ಆಡು ಮಾರಿದ ಹಣದಲ್ಲಿ ಹೊಸದೊಂದು ಬುರ್ಖಾ ತಂದುಕೊಡುತ್ತೇನಮ್ಮಾ ನಿನಗೆ ..." ನಂಗಿನ್ನೇನಾಗ್ಬೇಕಾಗಿದೆ! ಹೊಸ ಬುರ್ಖಾ ತೊಟ್ಟು ತಿರುಗಾಡಲು ನಾನೇನು ಇನ್ನೂ ಯುವತಿಯಾಗಿ ಉಳಿದಿದ್ದೇನೆಯೇ? ಮುದುಕಿಯಾಗಿದ್ದೇನೆ. ಇನ್ನು ಮೂಲೆ ಸೇರುವ ವಯಸ್ಸು, ಎಷ್ಟೋ ವರ್ಷಗಳ ನಂತರ ಮನೆಬಿಟ್ಟು ಹೊರಡುತ್ತಿದ್ದಾಳೆ. ಮನೆಯಲ್ಲಿ ರಾಶಿ ಬಿದ್ದ ಕೆಲಸಗಳನ್ನು ಬಿಟ್ಟು ಹೊರಡಲಿಕ್ಕಾದರೂ ಹೇಗೆ ಸಾಧ್ಯ? "ನಂಗ್ಯಾಕೆ ಮಗಾ ಅದೆಲ್ಲಾ ...?" ಎಂದು ಹೇಳಿ ಸುಮ್ಮನಾಗಿದ್ದಳು.

ಬುರ್ಖಾದಲ್ಲಿನ ತೂತುಗಳ ನೆನಪಾಗುತ್ತಲೇ "ಸಲ್ಮಾ ಕಪ್ಪು ನೂಲು ಇದೆಯೇನೇ? ಸುಮ್ಮನೆ ಕೂತು ಬೇಜಾರು, ಬುರ್ಖಾ ಸ್ವಲ್ಪ ಹರಿದಿದೆ ಹೊಲೀತೇನೆ, ಸೂಜಿ ನೂಲು ಕೊಡೇ ..." ಎಂದಿದ್ದಳು. ಬುರ್ಖಾವನ್ನು ತೊಡೆಯ ಮೇಲೆ ಹರಡಿಕೊಂಡು ಮಗಳು ಕೊಟ್ಟ ಸೂಜಿ ನೂಲಿನಿಂದ ಹೊಲಿಯತೊಡಗಿದಳು. 'ಕರಿಸಿಲ್ಕಿನ ಬುರ್ಖಾದ ಮೈ ಸೋಕುತ್ತಲೇ ನಯವಾದ ಮಧುರ ನೆನಪುಗಳು ಅವಳನ್ನು ಮುತ್ತಿಕೊಂಡವು. ತನ್ನ ಮದುವೆಯ ದಿನ ಮದುಮಗ ತಂದ ಬುರ್ಖಾ ಆಗಿನ ಕಾಲದಲ್ಲಿ ಕರೀಬಣ್ಣದ ಸಿಲ್ಕಿನ ಬುರ್ಖಾ ತೊಟ್ಟುಕೊಂಡು ತಿರುಗಾಡುವುದು ಅದೆಂತಹ ಪ್ರತಿಷ್ಠೆಯ ಸಂಗತಿ! ಆಗ ಒಲ್ಲಿ ಅನ್ನೋ ದೊಡ್ಡ ಹೊದೆ ವಸ್ತ್ರವನ್ನು ತಲೆಯಿಂದ ಕಾಲುತನಕ ಹೊದ್ದು ಹೆಂಗಸರು ತಿರುಗಾಡಬೇಕಾಗಿತ್ತು. ಒಮ್ಮೊಮ್ಮೆ ಒಂದು ಹೊದೆವಸ್ತ್ರದೊಳಗೆ

ಇಬ್ಬರು, ಒಬ್ಬರೊಬ್ಬರಿಗೆ ಢಿಕ್ಕಿ ಹೊಡೆದಂತ ನಡೆದು ಹೋಗಬೇಕಾದಂತಹ ಪರಿಸ್ಥಿತಿಯನ್ನು ಜೈನಾಬಿಗೆ ನೆನೆದಾಗಲೆಲ್ಲ ಬುರ್ಖಾ ತಂದುಕೊಟ್ಟ ಗಂಡನ ಬಗ್ಗೆ ಹೆಮ್ಮೆ ಎನಿಸುತ್ತಿತ್ತು. ಹೊದೆ ವಸ್ತ್ರವನ್ನು ಹೊದ್ದು ಪ್ರಯಾಣ ಹೊರಡುವುದೆಂದರೆ ಶಿಕ್ಷೆಯಾಗಿದ್ದ ಕಾಲದಲ್ಲಿ ತನ್ನ ಗಂಡ ತಂದದ್ದು ಕರಿಬಣ್ಣದ ಮಿರಿ ಮಿರಿ ಮಿಂಚುವ ಸಿಲ್ಕಿನ ಬುರ್ಖಾ. ಅಂದು ಓರಗೆಯ ಹೆಣ್ಮಕ್ಕಳಲ್ಲಿ ತನ್ನ ಬಗ್ಗೆ ಅಸೂಯೆಪಟ್ಟು ಕೊಂಡವರೆಷ್ಟೋ ಮಂದಿ, ಮೊತ್ತಮೊದಲಿಗೆ ಅದನ್ನು ಧರಿಸಿದಾಗ ಮೈತುಂಬಾ ಮೂಡಿದ ಮಧುರ ರೋಮಾಂಚನ ತುಂಬಿದ ತನ್ನ ಪ್ರೀತಿಯ ಬುರ್ಖಾವನ್ನು ಜೋಪಾನ ಮಡಚಿಟ್ಟು ಹಲವು ವರ್ಷಗಳೇ ಕಳೆದವು. ಗಂಡ ಬದುಕಿದ್ದಾಗ ಗಮ್ಮನೆ ಅತ್ತರು ಹಚ್ಚಿಕೊಂಡು ಗಂಡ ತಂದ ಕಿಂಕಾಫಿನ ಸೀರೆ 'ಬುಟ್ಟೆ'ಯ ಕುಪ್ಪಸ ತೊಟ್ಟುಕೊಂಡು ಮದುವೆ, ಮುಂಜಿ, ಮೌಲೂದು, ಉರೂಸ್ ಒಂದನ್ನು ಬಿಡದೆ ಓಡಾಡಿದ್ದೇ ಓಡಾಡಿದ್ದು, ಆದರೆ ಅವರು ತೀರಿಕೊಂಡ ನಂತರ ಎಲ್ಲೂ ಹೋಗಲು ಅವಳಿಗೆ ಇಷ್ಟವಾಗಲಿಲ್ಲ. ತೆಂಗಿನ ತೋಟದ ಕೆಲಸದಲ್ಲಿ ದನ, ಆಡು, ಕೋಳಿಗಳ ಆರೈಕೆಯಲ್ಲಿ ಕೊಡಗಿಸಿಕೊಂಡು ಎಲ್ಲಾ ಸಂಭ್ರಮಗಳಿಂದಲೂ ದೂರವಿರುತ್ತಿದ್ದಳು. ನೀವು ನಮ್ಮ ಮನೆಗೆ ಬರಲೇಬೇಕು' ಎಂದು ಅಪರೂಪಕ್ಕೆ ಅಳಿಯ ಒತ್ತಾಯ ಮಾಡಿದಾಗ "ಒಂದೆರಡು ದಿನ ಅಲ್ಲಿ ಹೋಗಿದ್ದು ಬಾ ಉಮ್ಮಾ ಇಲ್ಲವಾದ್ರೆ ಭಾವ ಸಿಟ್ಟಾದಾರು. ನೀನು ಸೈದಾನಿ ಬೀಬಿಯ ದರ್ಗಾಕ್ಕೆ ಒಮ್ಮೆ ಹೋಗಿ ಬರ್ಬೇಕಂತಿದ್ದೀಯಲ್ಲಾ ಅದು ಅಲ್ಲಿಗೆ ಹತ್ತಿರ... ಎಂದು ಮಗನೂ ಒತ್ತಾಯ ಮಾಡಿದ್ದ.

ಬುರ್ಖಾವೆಂದರೆ ಜೈನಾಬಿಗೆ ಮೈಮೇಲಿನ ಮಾನವಿದ್ದಂತೆ. ಅದನ್ನು ತೊಡದೆ ಬೀದಿಯಲ್ಲಿ ನಡೆದಾಡುವುದೆಂದರೆ ಅವಳ ಮಟ್ಟಿಗೆ ಬೆತ್ತಲೆ ತಿರುಗಾಡಿದಂತೆಯೇ, ಹಾಗೆ ಈಗಿನ ಕಾಲದ ಹೆಣ್ಣುಮಕ್ಕಳು ಅಂದುಕೊಳ್ಳುವುದೇ ಇಲ್ಲ. ನಡುರಸ್ತೆಯಲ್ಲೇ ಬುರ್ಖಾ ಕಳಚಿಕೊಂಡು ನಡೆದಾಡುತ್ತಾರೆ. ಹೀಗೆ ಹೇಳಿದರೆ ಸಾಲ್ಮಾಳ ನಾದಿನಿ ಖದೀಜಾ ಒಪ್ಪುವುದೇ ಇಲ್ಲ. ಅವಳು ಮೈನೆರೆದ ಹುಡುಗಿ. ಕಾಲೇಜಿಗೆ ಬುರ್ಖಾ ಇಲ್ಲದೇನೇ ಹೋಗಿಬರುತ್ತಾಳೆ. "ನಮ್ಮ ಹಾಗೆ ಇತರ ಹುಡುಗಿಯರೂ ಕಾಲೇಜಿಗೆ ಬಾರ್ತಾರಲ್ಲಾತ್ತೆ. ಅವರೆಲ್ಲಾ ನೀವು ಹೇಳಿದಂತೆಯೇ ಎಂದು ತಿಳಿದ್ರೇನು? ಇಷ್ಟಕ್ಕೂ ನಾನೇನೂ ಮೈತೋರುವಂತೆ ಬಟ್ಟೆ ತೊಡೂದಿಲ್ಲ. ಸಲ್ವಾರ್ ಕಮೀಜ್ ತೊಡೂದು, ಇದ್ರ ಮೇಲೆ ಬುರ್ಖಾ ಯಾಕೆ?" ಎಂದಿದ್ದಳು. ಇದೂ ಒಂದು ರೀತಿಯಲ್ಲಿ ಸರಿಯೆನಿಸಿದರೂ ಜೈನಾಬಿ ಒಪ್ಪಲಾರಳು.

ಸಲ್ಮಾ ಅಮ್ಮನಿಗೆ ಒಂದು ಲೋಟ ಚಾ ಮಾಡಿ ಬಳಿಗೆ ಬಂದಳು. ಬುರ್ಖಾಕ್ಕೆಲ್ಲಾದ್ರೂ ನೋಯುತ್ತೋ ಏನೋ ಎಂಬಂತೆ ಮೆತ್ತಗೆ ನಯವಾಗಿ

ಅಮ್ಮ ಹೊಲಿಯುತ್ತಿರುವುದು ಕಂಡು ಮುಖದಲ್ಲಿ ನಗೆ ಮೂಡಿತು. "ಉಮ್ಮಾ ನೀನು ಹೊಲಿದರೆ ತೇಪೆ ಅಂತ ತಿಳಿಯುವುದೇಇಲ್ಲ. ಅಷ್ಟು ನಾಜೂಕು." ಎಂದಳು. ಹೊಲಿಗೆಯಲ್ಲೇ ತಲ್ಲೀನಳಾದ ಜೈನಾಬಿ ಎಚ್ಚರಗೊಂಡಳು. "ಇಲ್ಲ ಮೋಳೇ, ಈಗ ಸರಿಯಾಗಿ ಕಣ್ಣೂ ಕಾಣಿಸ್ತಾ ಇಲ್ಲ ...." ಎನ್ನುತ್ತಾ ತನ್ನ ಕೆಲಸವನ್ನು ಮುಂದುವರಿಸಿದಳು. ಸಲ್ಮಾ ಬುರ್ಖಾದ ಅಂಚನ್ನು ನೋಡುತ್ತಾ "ಅದೆಷ್ಟು ಕಾಲವಾದ್ರೂ ಈ ಬುರ್ಖಾದ ಬಣ್ಣ ಎಷ್ಟು ತಾಜಾ ಆಗಿದೆ ನೋಡು. ಅದೇ ನಮ್ಮ ಈಗಿನ ಬುರ್ಖಾ ಒಂದೆರಡು ವರ್ಷಗಳಲ್ಲೇ ಬಣ್ಣ ಮಾಸಿಹೋಗಿಬಿಡ್ತದೆ." ಎಂದು ಮಗಳು ಹೊಗಳುವಾಗ ಜೈನಾಬಿಯ ಕಣ್ಣುಗಳಲ್ಲಿ ಹೊಸ ಮಿಂಚು ಮೂಡಿತು. "ನಿನ್ನಪ್ಪ ಅದೇನು ತಂದ್ರೂ ಊಂಚಿ ಮಾಲೇ ಆಗ್ಬೇಕು. ಪಡಸೋಸಿ ಮಾಲನ್ನು ಖರೀದಿಸುವವರೇ ಅಲ್ಲ ಅವ್ರು" ಎಂದಳು ಹೆಮ್ಮೆಯಿಂದ.

ಸಲ್ಮಾಳಿಗೆ ಅಪ್ಪನ ನೆನಪು ಮಸುಕು ಮಸುಕು, ಅವಳು ಹುಡುಗಿಯಾಗಿದ್ದಾಗ, ಅವರು ತೀರಿಕೊಂಡದ್ದು, "ಈಗ ಸೊಲ್ಪ ಗಲಾಟೆ ಕಮ್ಮಿ ಆಗಿರಬಹುದಲ್ವೇ ಮೋಳೇ..." ಎಂದು ಜೈನಾಬಿ ಕೇಳಿದಳು. "ಅದೇನೂ ಹೇಳೋಕಾಗುವುದಿಲ್ಲ. ಪೊಲೀಸ್ ವ್ಯಾನಿನ ತಿರುಗಾಟ ಮಾತ್ರ ಇದೆ" ಎಂದಳು ಸಲ್ಮಾ.

"ಮಂಜಮ್ಮಳ ಮನೆ ಈ ಕೇರಿಯ ಕೊನೆಯಲ್ಲಿ ಅಲ್ವೇ? ಅಲ್ಲಿಂದ ತಿರುಗಿದರೆ ಬೀಬಿ ದರ್ಗಾದ ಮೀನಾರು ಕಾಣುತ್ತದೆ ಅಲ್ವೇ ಮೋಳೇ..." ಎಂದು ಜೈನಾಬಿ ಕುತೂಹಲದಿಂದ ಕೇಳಿದಾಗ ಮಗಳಿಗೆ ಆತಂಕ,

"ಉಮ್ಮಾ ಈಗ ನೀನು ಹೋಗೂದು ಬೇಡ. ಎರಡು ದಿನ ಕಳೆದರೆ ಗಲಾಟೆ ನಿಲ್ಲಬಹುದು. ಮತ್ತೆ ನಾವೆಲ್ರೂ ಒಟ್ಟಿಗೆ ಹೋಗೋಣ ..." ಎಂದಳು ಸಲ್ಮಾ.

"ಮೋಳೇ... ನಂಗೆ ಈವತ್ತೇ ದರ್ಗಾಕ್ಕೆ ಹೋಗಿಬರೋಣ ಅಂತ ಅನ್ನಿಸ್ತಾ ಇದೆ. ದರ್ಗಾಕ್ಕೆ ಹೋಗುವವರನ್ನೂ ತಡೀತಾರೇನು?" ಎಂದು ಜೈನಾಬಿಯ ಹಟ ಕಂಡು ಮಗಳು ಗಾಬರಿಗೊಂಡಳು.

"ಇಲ್ಲ ಉಮ್ಮಾ, ಈ ಜನಗಳ ಬಗ್ಗೆ ಯಾವ ಗ್ಯಾರಂಟಿ ಹೇಳಿ? ಈ ಕೇರಿ ದಾಟುವವರೆಗೆ ಮುಸ್ಲಿಮರೇ ಜಾಸ್ತಿ ಇರೂದು. ಏನೂ ಆಗ್ಲಿಕ್ಕಿಲ್ಲ.... ನಂತರ ಆ ದರ್ಗಾದ ಹತ್ತಿರ ಹೋಗುವಾಗ ದಾರಿಯಲ್ಲಿ ಏನಾದ್ರೂ ಆದ್ರೆ? ಖದೀಜಾ ತಲೆನೋವಂತ ಮಲಗಿದ್ದಾಳೆ. ಅವ್ರೂ ಮನೇಲಿಲ್ಲ ... ಎಂದಳು ಸಲ್ಮಾ.

"ನೀನೇನೂ ಭಯಪಡೇಕಾಗಿಲ್ಲ. ನಾನು ಮಂಜಮ್ಮನ ಮನೆಗೆ ಹೋಗಿ ಅವಳನ್ನು ಕರ್ಕೊಂಡೇ ಹೋಗ್ತೇನೆ. ನಾಳೆ ಹ್ಯಾಗಾದ್ರೂ ಊರಿಗೆ ಹೋಗ್ಲೇಬೇಕು. ಅಲ್ಲೆಲ್ಲಾ ಹ್ಯಾಗಿದ್ದಾರೋ!" ಎನ್ನುತ್ತಾ ಜೈನಾಬಿ ಹೊಲಿದಿಟ್ಟ ಬುರ್ಖಾವನ್ನು

ತೊಟ್ಟುಕೊಂಡು ಹೊರಟೇಬಿಟ್ಟಳು. ರಸ್ತೆಯಲ್ಲಿ ಯಾರ ಸುಳಿವೂ ಇಲ್ಲ, ಅಲ್ಲಲ್ಲಿ ಬಿದ್ದಿದ್ದ ತರಗೆಲೆ, ಕಾಗದದ ಚೂರುಗಳು ಗಾಳಿಗೆ ಹಾರಾಡುವ ಪರ ಪರ ಸದ್ದು ಬಿಟ್ಟರೆ ಇನ್ನಾವ ಸದ್ದೂ ಇರಲಿಲ್ಲ. ಜನರ ಸಂಚಾರವಿಲ್ಲದೆ ಬಿಕೊ ಎನ್ನುವ ರಸ್ತೆಯಲ್ಲಿ ಜೈನಾಬಿ ಒಬ್ಬಳೇ ನಡೆಯುತ್ತಿದ್ದಳು. ನಡೆಯುತ್ತಾ ಹೋದಂತೆ ಅವ್ಯಕ್ತಭಯ ಅವಳನ್ನು ಆವರಿಸಿಕೊಂಡಿತು. ನಾಲ್ಕು ದಿಕ್ಕಿನಲ್ಲೂ ಮೌನ. ಬಾಗಿಲು ಮುಚ್ಚಿದ ಮನೆಗಳು. ಅಲ್ಲಲ್ಲಿ ಅದೇನನ್ನೋ ಕೆದಕುತ್ತಾ ಕಚ್ಚಾಡುವ ನಾಯಿ, ಬೆಕ್ಕು, ಕಾಗೆಗಳು. ಅದು ಮನುಷ್ಯನ ಹೆಣವಿರಬಹುದೇ? ತಾನು ನಡೆಯುತ್ತಿರುವ ರಸ್ತೆಯಲ್ಲಿ ಹರಿದ ರಕ್ತ ತನ್ನ ಕಾಲಿಗೆ ಮೆತ್ತಿಕೊಂಡಿರಬಹುದೇ? ನೋಡಲು ಕೂಡ ಭಯ, ದೊಡ್ಡ ಅರಳೀ ಮರದ ಎಲೆಗಳು ಎಂದಿನಂತೆ ತಣ್ಣಗೆ ಗಾಳಿಯೊಂದಿಗೆ ಸರಸವಾಡುತ್ತಿದ್ದವು. "ಮಂಜುಮ್ಮಳ ಮನೆಗೊಮ್ಮೆ ಸೇರಿಕೊಂಡುಬಿಟ್ಟರೆ ದರ್ಗಾಕ್ಕೆ ಹೋಗಿ ಬಂದ ಹಾಗೆಯೇ" ಎನ್ನುವ ಧೈರ್ಯ ಅವಳನ್ನು ಹುರಿದುಂಬಿಸಿತ್ತು.

ಅರಳಿ ಮರ ದಾಟಿ ಹೋಗುತ್ತಿರುವಂತೆ "ತಂಗೀ...." ಎಂದು ಯಾರೋ ಕ್ಷೀಣ ಸ್ವರದಲ್ಲಿ ಕರೆಯುತ್ತಿರುವುದು ಕೇಳಿ ಜೈನಾಬಿ ಬೆಚ್ಚಿಬಿದ್ದಳು. ಎಲ್ಲೋ ಜಿನ್ನ್ ಅಥವಾ ಸೈತಾನ ಇರಬಹುದೇ? ಪಕ್ಕಕ್ಕೆ ತಿರುಗಿ ಬುರ್ಖಾದ ಮುಖ ವಸ್ತ್ರವನ್ನು ಸರಿಸಿ ನೋಡುವಾಗ ಒಬ್ಬ ಗಂಡಸು ಮರದ ಮರೆಯಿಂದ ಹೊರಬಂದ. ಅವನ ಪಕ್ಕದಲ್ಲಿ ಹೆಂಗಸೊಬ್ಬಳು ನಿಂತಿದ್ದಳು. ಅವಳು ಭಯದಿಂದ ನಡುಗುತ್ತಿರುವಂತೆ ಜೈನಾಬಿಗೆ ಕಂಡುಬಂತು. ಅವಳ ಮುಖ ಬೆವೆತು ನೀರಿಳಿಯುತ್ತಿತ್ತು. ಹಣೆಯಲ್ಲಿನ ಕುಂಕುಮ ಬೆವರಲ್ಲಿ ಕರಗಿ ಓರೆಕೋರೆಯಾಗಿತ್ತು. ಗಂಡಸು ನಡುಗುವ ದನಿಯಲ್ಲಿ "ತಪ್ಪು ತಿಳ್ಕೊಬೇಡ ತಂಗಿ... ಇಲ್ಲಿ ನಾವು ಸಿಕ್ಕಿಬಿದ್ದಿದ್ದೇವೆ. ನಾವು ಇಲ್ಲಿಂದ ಹೋಗಬೇಕು. ನಿನ್ನ ಬುರ್ಖಾವನ್ನು ಇವ್ಳಿಗೆ ತೊಡಿಸ್ತೀಯಾ ...?" ಎಂದ.

ನಡುರಸ್ತೆಯಲ್ಲಿ ಬುರ್ಖಾ ಕಳಚುವುದೇ? ಹಾಂ! ಎನ್ನುವ ಉದ್ಗಾರದ ಜೊತೆಗೆ ಜೈನಾಬಿ ಬೆಚ್ಚಿಬಿದ್ದಳು. "ಇದು ಮುಸ್ಲಿಮ್ ಮೆಜಾರ್ಟಿ ಇರುವ ಕೇರಿ. ಇಲ್ಲಿ ನಾವು ಹೆದರೇಕಾಗಿಲ್ಲ. ಒಬ್ಬ ಹಿಂದೂ ನರಪಿಳ್ಳೆ ಬಂದ್ರೂ ಈ ಕೇರಿಯಲ್ಲಿ ತಪ್ಪಿಸ್ಕೊಳ್ಳಲಾರದಂತಹ ವ್ಯವಸ್ಥೆ ಮಾಡಿದ್ದಾರೆ. ಅವ್ರ ಕೇರಿಯಲ್ಲಿ ನಮ್ಮವರನ್ನು ಎಷ್ಟು ಮಂದಿಯನ್ನು ಕಡಿದುಹಾಕಿದ್ದಾರೆ ಗೊತ್ತೇ? ಅದ್ಕೆ ...." ಎಂದ ಅಳಿಯನ ಮಾತುಗಳು ನೆನಪಿಗೆ ಬಂದವು. ಕ್ಷಣ ತನ್ನ ಊರಿನಲ್ಲಿರುವ ಮಗ, ಸೊಸೆ, ಮಕ್ಕಳು, ಮಗಳು, ಪರಿವಾರ ಕಣ್ಣಮುಂದೆ ನಿಂತಂತಾಯಿತು. ಧೈರ್ಯ ಮೂಡಿದಂತೆ ಕಂಡುಬಂದಾಗ ಜೈನಾಬಿಗೆ ತೃಪ್ತಿಯಾಯಿತು, ಕೈ

ಮುಗಿದು ಮುಂದೆ ನಿಂತ ಅವನ ಕಣ್ಣುಗಳು ತುಂಬಿ ಬಂದವು. ಇಬ್ಬರೂ ಮಾತು ಬಾರದವರಂತೆ ಮೂಕರಾಗಿ ಜೈನಾಬಿಯ ಮುಂದೆ ನಿಂತರು. "ಬೇಗ ಹೊರಡಿ ಇಲ್ಲಿಂದ." ಎಂದು ಜೈನಾಬಿ ಎಚ್ಚರಿಸಬೇಕಾಯಿತು. ಅವರಿಬ್ಬರೂ ಚಕ್ಕನೆ ವಾಸ್ತವಕ್ಕೆ ಬಂದು ಬೇಗಬೇಗನೆ ನಡೆದರು.

ಅವರು ಮರೆಯಾಗುವ ತನಕ ನೋಡುತ್ತಾ ನಿಂತ ಜೈನಾಬಿಗೆ ತನ್ನ ಗಂಡನಿತ್ತ ಪ್ರೀತಿಯ ಬುರ್ಖಾ ಇನ್ನು ತನಗೆ ಸಿಗಲಾರದು ಎಂಬವ್ಯಥೆ ಇರಲಿಲ್ಲ. ಬೀಬಿ ದರ್ಗಾಕ್ಕೆ ಹೋಗುವ ಬಗೆಹೇಗೆ ಎನ್ನುವ ಚಿಂತೆ ಮಾತ್ರ ಮೂಡಿತು.

"ಇನ್ನೊಮ್ಮೆ ಎಂದಾದರೂ ಹೋದರಾಯ್ತು......" ಎಂದುಕೊಳ್ಳುತ್ತಾ ಹಿಂತಿರುಗಿ ಮಗಳ ಮನೆಕಡೆ ನಡೆಯತೊಡಗಿದಳು.

* * *

**ಫಕೀರ್ ಮಹಮ್ಮದ್ ಕಟ್ಪಾಡಿ :**

ಕತೆಗಾರ ಫಕೀರ್ ಮುಹಮ್ಮದ್ ಕಟ್ಪಾಡಿ ಅವರು ಮೂಲತಃ ಉಡುಪಿ ಜಿಲ್ಲೆಯ ಬಾರಕೂರಿನವರು. 1949 ಜೂನ್ 25ರಂದು ಜನಿಸಿದರು. ಬಿ.ಕಾಂ. ಪದವೀಧರರಾಗಿದ್ದ ಅವರು ಬ್ಯಾಂಕ್ ಅಧಿಕಾರಿಯಾಗಿ ಕಾರ್ಯ ನಿರ್ವಹಿಸಿ ನಿವೃತ್ತರಾಗಿದ್ದಾರೆ. 'ಗೋರಿ ಕಟ್ಟಿಕೊಂಡವರು', 'ನೋಂಬು', 'ದಜ್ಜಾಲ', 'ಅತ್ತರ್ ಹಾಜಿಕ್ ಮತ್ತು ಇತರ ಕತೆಗಳು', 'ಪಚ್ಚ ಕುದುರೆ' ಕಥಾಸಂಕಲನಗಳು. ನೀಳ್ಗತೆಗಳ ಸಂಕಲನ 'ಕಡವು ಮನೆ' ಹಾಗೂ 'ಸರಕುಗಳು' ಮತ್ತು 'ಕಚ್ಚಾದ' ಎಂಬ ಕಾದಂಬರಿಗಳನ್ನು ಪ್ರಕಟಿಸಿದ್ದಾರೆ.

'ಬೇರೂತಿನಿಂದ ಜರುಸಲೇಮಿಗೆ (2010) ಮತ್ತು ಮಂಟೋ ಬರೆದ ದೇಶ ವಿಭಜನೆಯ ಕತೆಗಳು' ಅನುವಾದ ಕೃತಿಗಳು. 'ಕಯ್ಯೂರಿನ ರೈತವೀರರು', 'ರಾಷ್ಟ್ರೀಯತೆ ಮತ್ತು ಮುಸ್ಲಿಮರು', 'ಸೂಫಿ ಸಂತರು' 'ಸೂಫಿ ಮಹಿಳೆಯರು', 'ಉತ್ತರ ಕರ್ನಾಟಕದ ಸೂಫಿಸಂತರು' ಕೃತಿಗಳನ್ನು ಪ್ರಕಟಿಸಿದ್ದಾರೆ.

ಕಟ್ಪಾಡಿ ಅವರು ಕರ್ನಾಟಕ ಸರ್ಕಾರ ನೀಡುವ ರಾಜ್ಯೋತ್ಸವ ಪ್ರಶಸ್ತಿ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸಾಹಿತ್ಯಶ್ರೀ ಪ್ರಶಸ್ತಿಗಳು ದೊರೆತಿವೆ.

# ಮಾದರಿ ಪ್ರಶ್ನೆ ಪತ್ರಿಕೆ

**ಅವಧಿ : 2 ಗಂಟೆ 30ನಿಮಿಷ** **ಅಂಕಗಳು : 60**

I. ಐದು ಪ್ರಶ್ನೆಗಳಿಗೆ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ. **5*2=10**

1.
2.
3.
4.
5.
6.
7.
8.

II. ನಾಲ್ಕು ಪ್ರಶ್ನೆಗಳಿಗೆ ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ. **5*4=20**

1
2
3
4
5
6

III. ಎರಡು ಪ್ರಶ್ನೆಗಳಿಗೆ ಇಪ್ಪತ್ತು ವಾಕ್ಯಗಳಲ್ಲಿ ಉತ್ತರಿಸಿರಿ. **10*2=20**

1.
2.
3.
4.

IV. ಎರಡು ಪ್ರಶ್ನೆಗಳಿಗೆ ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ. **5*2=10**

1.
2.
3.
4.

* * *